single transferable vote as required under Rule 267 A of the Rules of Procedure and Conduct of Business.''

Mr. SPEAKER.—The question is :

"That this Assembly do proceed to elect 10 Members to the Committee on Private Members' Bills and Resolutions according to principle of proportional representation by means of the single transferable vote as required under Rule 267 A of the Rules of Procedure and Conduct of Business."

The motion was adopted.

The calendar of events for election is being circulated separately.

Sri S. S. SHETTAR.—Sir, I had submitted a substantive motion under Rule 279, and it has already been approved, I may be allowed to move it today.

Mr. SPEAKER.- I shall consider all the other aspects about it and make up my mind and inform the Hon'ble Member after Tea interval.

MOTION *re*: SCARCITY CONDITIONS PREVAILING IN CERTAIN AREAS OF THE STATE

(*Debate continued*)

† Sri R. DAYANANDA SAGAR (Chamarajpet).—Mr. Speaker, Sir, I rise to support wholeheartedly the motion moved by the Hon'ble Chief Minister on the scarcity conditions prevailing in the State. It is a very serious situation. The situation is rather alarming. Crops everywhere in the State have failed. 100 out of 174 Taluks in the State are experiencing total failure of crops and famine has set in. There is no food to eat, there is no fodder for our cattle and there is scarcity of drinking water. The purchasing power among the common poople in the villages has gone to the minimum. This is really a state of emergency. It is at a time like this the mettle of the Government is to be tested. It is at a time like this that the Government have to come to the rescue of the people and help them. Our dynamic Chief Minister has come forward with a dynamic statement. In the last para of his statement he has said :

"I should like to assure the House that the entire Governmental machinery is pledged to devote itself heart and soul to tackle this problem in a mood of dedication and service, so that we may be able, at least to a moderate extent, to alleviate the suffering of a large section of our rural population which is in travail as a result of unprecedented adverse seasononal conditions."

(SRI R. DAYANANDA SAGAR)

Sir, I heartily congratulate the Chief Minister who has come forward with a dynamic statement and who has come forward to put the entire governmental machinery to solve this famine situation that is staring us in the State. Sir, the Government, in the early months of this year, anticipated a serious drought and prepared a memorandum and submitted to the Central Government and asked for 8.7 crores for relief measures. At that time, perhaps, the Government did not know that the situation would go so bad, and therefore they asked for only Rs 8.3 crores. Now we require not less than Rs. 50 crores to relieve the sufferings of the people who are facing a great famine situation in the State. The Government of India have so far given only Rs. 2. 3 crores. It is very unfortunate that the Government of India has givien us this treatment. Their Statement is also not encouraging. It has always been giving State Government a step-motherly treatment all along ever since Independence. The Government of India has not been favourably disposed towards us either in the agricultural or industrial advancement in the State. Therefore, I urge upon the Chief Minister to take this House into confidence so that the entire House will follow him to Delhi and squat in front of the Prime Minister's residence and ask for immediate help for the State.

Sir, this Government is trying to tackle the scarcity problem in many ways by means of sinking irrigation wells, by taking minor irrigation works, by procuring fodder and by having feeding programme in every part of the scarcity-stricken area. Sir, the Chief Minister has forgotten about the City of Bangalore. We in Bangalore are facing water famine. The water that is available at the Reservoirs will hardly suffice for 30 days from now on. I forecast, the City will have to face a serious famine for water in the very near future. The Government should take emergency measures and find out ways and means to procure more water by way of digging new wells and renovating the old ones in the City. Secondly, this City consists of mostly labour class people and non-gazetted officers. They form 90 per cent of the population of this great City. whose population is 15 lakhs. The Government should take steps for proper distribution of food in the City. Unless this is done on a proper and systematic way, this 90 per cent of the people will have to suffer and they are already suffering. Therefore, I suggest to the Government that they should have proper arrangements for procuring enough food and proper distribution in the City of Bangalore. The Chief Minister has rightly pointed out that the Government machinery which is obliged to serve this State in the hour of need is rather not co-operating as it is expected to. It is a very unfortunate thing to hear.

About 20 years ago we won independence of this Conntry. We established democracy—a rule of the people by the people and for the people. But Sir, what has happened now ? It has become the Government of the Officers by the officers and for the officers. Some of the

Officers are good. But most of them are not having the national spirit even at the hour of need and trouble. They want to make hay while the sun shines. I remember here an illustration which aptly applies to these people, *i. e.*, Nero was fiddling when Rome was burning. So our officers are not doing their duty when our people are suffering without food and water. The Government of Mysore have allotted about 2 crores of rupees for alleviating the sufferings of the people and to spend for relief works. Has the machinery of the Government spent that amount ? No. They have spent only about one crore of rupees. One question arise before us *i. e.*, will the governmental machinery rise to the occasion and solve the problem that is in front of us ? This machinery which has been handed over to the Government by the Britishers is rotten, rusted and unworkable. We have got to deal with it in a different manner and rectify the defect. Thh Chief Minister will kindly make up his mind to rectify this defect so far as this machinery is concerned.

The rural problem is shortage of food production. Are we really producing enough food in this country ? According to the theory, in a progressive state, food increases arithmeically whereas the population grows geometrically. Of course the population in our country has been growing geometrically. But unfortunately the production of food has not at all progressed even arithmetically. Here I have got some figures. In 1960-61, our country produced 82 million tons of food; in 1961-62 the country produced 82.7 million tons of food; in 62-63 it produced 70.8 million tons; in 1963-64 the country produced 80.2 million tons and in 1964-65 the food production rose to 89 million tons. Therefore Sir, in production we are not growing even arithmetically. What is wrong ? There is something wrong in our planning. The source of food production as is known to everybody, is land, seeds, manure and water. Land and water go hand in hand. Without water no land can ever produce any food. All land in our Country and in our State is capable of producing food. But we have not concentrated on producing maximum food materials though the facilities of land and water are available, Seeds and manure come next. I had occasion to visit Japan, where I was able to see in the entire land there, the volcanic soil. If such a soil were to obtain in our Country, we would not have produced anything. We would have died of hunger and famine. But in Japan, they were growing rice ten times more than what we grow here; and vegetables six times more than what we grow in our land. I asked one of the engineers there as to what is the secret of growth of such abundant food articles. The Engineer looked at me and replied, "it is the fertility of the soil." I was also able to visit the fertilizer factories and see how they produce manure using technical know-how and distribute it to the agriculturists there. They have been able to produce good quantity of food. In our country Sir, we have a mistaken idea. By food we mean only rice and rice products. But everywhere in the world, rice is not the only food material. There is fish, meat, chicken, eggs and dairy products which all constitute food.

(SRI R. DAYANANDA SAGAR)

The Development of Fisheries in our State and in the country is deplorable. Food is available in the vast seas. We have not geared up our strength and had plans to procure enough fish from the sea. In the Third Plan, the Government of Mysore spent about 175 lakhs of rupees only for the development of fisheries. The 150 mechanised boats are like a drop in the ocean. Our seas contain lot of food material in the form of fish. We have got to exploit this fish for our food and we have to advise our people to change their food habits of eating only rice and eat fish, eggs, poultry, piggery, fruits and the like also.

Sir, this is a state of emergency as I said and we have got to face this scarcity, *i.e.*, famine as we are facing the war. We say, this is a stae of emergency, we speak of jawans and kisans. Our plans have to be concentrated to build up the jawans and kisans. What we have done to the Kisan is almost nil. It is only a platform speech. Now we have got to gear up our strength and concentrate our resources and spend all our resources for agricultural development. The difficulty is, we go on spending enormous sums of money on secondary matters. We forget that production of food is the most important thing and that we have to give great importance for that. Only three hundred crores of rupees we are spending by way of buying food from foreign countries. In the year 1963 we imported 4.6 million tons of food articles from outside, In 1965 the import of food articles was 17.05 million tons. In 1966 our imports went up to 11 million tons of food. Sir, we ordinarily produce in this country, 86 million tons of food per year. The shortage is about 11 million tons, *i.e.*, nearly 1/8th of our food production. We are importing more from outside. So, if we are to solve this problem we will have to improve our food producing capacity. This can only be done, if we divert our resources for agricultural development. If only he had diverted this 300 crores of rupees which we are spending for importing food materials and another three hundred crores of rupees more, perhaps we would have solved this problem long back. Our Finance Department does not come forward with the required resources where are we to find money ? Supposing the State and the country is facing war, we find money some how and defend ourselves. Similarly, we have got to defend against this greatest enemy, *i.e.*, food scarcity. This is possible if we can divert our resources first towards food production. Now the Hon'ble Chief Minister has suggested that he is going to constitute a committee for suggesting measures for alleviating the difficulties facing us today and also I would suggest, in this connection, let this committee consist of eminent persons from this House and the other House. Let them think of having a short term policy and long term policy to help the agriculturists. Perhaps a five-year plan will bring out revolutionary measures to build the kisan. We have got to find the resources. Perhaps we have to dispossess many of the industrial concerns and particularly those industrial concerns which are not earning any profit. We have got to sell away the M.S.R.T.C., which could very well be run by the

private sector. The money we are spending on developments like co-operation, housing, public health and other things, may just wait. We may have at least a five-year plan drawn up to face the scarcity conditions and also to push up the agricultural production. I thank you, Sir.

† SRI H. SIDDAVEERAPPA (Harihar).—Mr. Speaker Sir, many things have been said on this subject and I would like to say that, so far as my observation on the handling of this subject is concerned, Government seems to be very eager to take up some measures which will try to alleviate the sufferings of the people in this country. I only wish that, as mentioned by my learned friend who has just spoken this dynamic Chief Minister will not stop only by making statements, but will translate them into action. As can be seen, there are one or two things in his speech which I would like to highlight. He has said :

> "There are certain problems which will have to be dealt with on war footing."

2-00 P.M.

Unless we do it, I am afraid, we are not going to solve this problem at all, because it is unprecedented in the history of Mysore. As we have read, such a situation arose about 80 years ago. The difference between the present distress condition which I would emphatically call 'famine condition' and the one that occurred 80 years ago, is that then there used to be pockets. This time, you have not got pockets, where people could sustain themselves. Therefore it is an alarming situation. Unless and until the Government takes into confidence both sides of the House, unless and until they are prepared to sink or sail along with both sections of the House, I am afraid the Government is not going to solve the problem. I know for certain in Bihar, they could not have solved the problem if the Government was not strong enough to declare famine, although they incurred the odium of the Central Government. Here what has happened ? For two or three years continuously, these conditions were prevailing. Our Government was sleeping literally and in January 1968 they opened their eyes and then they wrote a letter to the Government of India and what usually happens on such occasions ? The Government of India—the mighty Government of India has sent an interim reply and until the month of June 1968, they could not send what is called a study team. That study team came here and they collected statistics and by the time they left the State there were one or two showers. They began to say that distress had already disappeared. I would like to warn the Treasury Benches, unless and until they take the entire State in its proper perspective, they will be wiped out of existence. I am not making any bombastic statements. I know for certain that already food riots have started. One in Raichur and another in Bangalore-Salem Road, have been eported. I am sure these things are bound to continue, becaus

(SRI H. SIDDAVEERAPPA)

hungry stomach knows no law. It is said that the French Revolution started because there were hungry stomachs. If only the rulers of France at that time had taken care about the hungry stomachs that revolution would not have come up. Therefore I say if the Government want to take any tips from me, I say these Ministers should go to district. Each Minister should go and stay in a district and make it his headquarter and after studying the situation, take remedial measures. They need not stay at Bangalore. Let the Chief Minister stay at Bangalore. They must distribute themselves among the several districts instead of squatting here and depending upon paper reports. I know as my friend Sri Dayanand Sagar pointed out, the machinery is completely out of gear. We must understand that out of 200 crores of revenue we collect, we are spending nearly 100 crores on one per cent of the population who are termed as Government servants. Now is the time to measure their sincerity and bonafides in the matter. I want every gazetted officer in the State including the Ministers and MLAs, to forgo one month's salary and credit it to the treasury. It means very little, but it will go a long wav to tell the people: 'here we are with you'. We did it in the year 1953 when we had similar famine conditions. We Ministers did it. I remember distinctly, we wrote to Pandit Nehru and Pandit Nehru was good enough to come here. Now the Deputy Prime Minister is coming here for a different purpose. You prevail upon him to go and see some of the villages. He need not go long distances of 100 or 200 miles. Even if he goes 20 or 15 miles he can see for himself the conditions. Let him go to Ramanagaram. Let him go to Kanakapura. He will see what are the terrible conditions under which people are suffering. I feel that even rains come in the month of September or October, that will at the most alleviate the water problem. The food problem will still be there. Therefore I am asking the Government to collect sufficient quantity of foodgrains. In the past, we used to have local rains here and there, but today the granary of South India, that is, Andhra is said to have exhausted all its stock. You cannot expect any grain from Andhra. You cannot expect any grains from Madras, Andhra and Maharashtra. All these states have been suffering from the same kind of difficulty. Therefore, it is very essential for me to make very sincere appeals to the Government that they must tell the Central Government that the situation in the State is very grave and get adequate quantity of foodgrains. We do not need rice if it is not available. At least milo must be secured. I think many of the aid-giving countries will not be able to come to our rescue, because they have their own difficulties. I therefore feel Sir, I am one with the Chief Minister and I am sure likewise, every member of the House will be one with the Chief Minister provided he succeeds in translating these words into action. I know how sincerely he said about the deficiencies of the bureaucracy. Unless you whip, the bureaucracy will never move. I am

glad he has realised at the beginning of his career as Chief Minister, whereas his predecessor took six years to realise this and he only made that statement when he was about to lay down his office. I therefore say, wherever these officers are lax, the Ministers must act and every Minister must change his headquarters to the district and he will have to guide the activities there.

Then I must say there are other things. You may provide money. It is the middle man who will thrive. I would have been very happy if the Chief Minister had used the expression 'middle man', meaning Congressman, because no middle man can go there, I know for certain, except a Congressman. So far as this problem is concerned, my friend Sri Agnihotri is laughing—I know he agrees with me. I feel that the Chief Minister has hit at the right place. There are some people unfortunately in this country who try to thrive on the suffering of the people. They thrive when people are suffering. We are prepared to agree with the Chief Minister and even help him if he wants to introduce the Whipping Act. Let there be public whipping in a market place of whoever indulges in such tactics, so that it will teach a lesson to others. We assure him that if he wants to bring a measure for this purpose, we are prepared to give him our support.

I therefore feel Sir, this is a human problem. This is a problem where the psychology will have to be created where our people must feel that here are the people who can deliver the goods and who can be with us. I know Sir, you must be knowing in Chitradurga District, during the non-Independence days, in the year 1940—I do not know whether some of you were children when we had similar conditions, the entire Government machinery, including his Highness, the Dewan and the various officers acted in such a manner as to alleviate the suffering of the people of the area. My own feeling is that the problem is so big. so grave, that unless and until every one of us moves in the matter, and unless and until every one of us puts our shoulders to the wheel, we will not be able to solve the problem.

(MR. DEPUTY SPEAKER in the Chair)

I do not want to take much time. I can only say that the sum of Rs. 10 crores asked for is grossly inadequate; the assessment of the immediate need is not properly done. As has been stated elsewhere, money is no consideration. Do not put any limit whatsoever, whatever may be the quantum of money that is required. The Government have cleverly stated that the Planning Commission and the Centre should come to the aid of the State to tackle the grave situation and to push through many of their schemes. Does it take away the responsibility of the State to provide food for the distressed people? The problem is not so easy and simple. In the last year's Budget, Government have provided nearly Rs. 17 crores for scarcity relief. I would ask the Chief Minister how much he has spent out of it. This is not a problem that

(SRI H. SIDDAVEERAPPA)

has started this year. It has started right from the year 1965-66. All the Ministers were sleeping so far. Better late than never—today at least they have opened their eyes. Let the Chief Minister move in the matter vigorously; let him take the whole thing under his control. His first and foremost duty is to provide employment to the unemployed people and see that adequate quantities of foodgrains are kept ready. Let him not bother about the Budget. Whatever may be the amount that is required to face the situation, let him spend and save our people. I know the suffering of the people. He must specially go to some places and see it for himself. In some places due to the privation they have undergone for the last three to four years, if the people are asked to lift one maund of stone they cannot do it. People who were carrying one gunny bag full of grains, cannot lift it now. That is the hopeless plight of the people. Unless prompt measures are taken to provide foodgrains to the people, I am afraid the Bengal famine conditions may be revived in this country. I am not making any alarmist statement but the situation looks like that. Sri Gopala Gowda, myself and several others went and saw how things are in Kanakapura Taluk. I would request the Government to devote much time on this problem. They must give first priority to this problem only and not to any other problem. This is a very big problem. This is a human problem where we should cut across party lines. I appeal to the Government not to make any discrimination because we have already been hearing examples of it.

I do not wish to enter into any more details. I will say a word or two about these co-operatives and conclude. My firiend, the Minister for Co-operation is not here. He has given Rs. 50 lakhs as subsidy. The Government should not try to bring in these co-operatives here. They are an anathema; they have been the despair of the people. Let them not try to encourage them, especially under this scheme. Co-operatives have failed us. I have to say it although this is not the forum where we can say it. Let the Chief Minister see that every pie is well-spent and not mis-spent. I hope and trust that God will give the Government strength to tide over this crisis.

† ಶ್ರೀ ಎಂ. ಮಂಚೇಗೌಡ (ಮದ್ದೂರು).—ಮಾನ್ಯ ಸಭಾಪತಿಗಳೇ, ರಾಜ್ಯದ ಮುಖ್ಯ ಮಂತ್ರಿಗಳು ದೇಶದಲ್ಲಿ ಜನಗಳು ಅನುಭವಿಸುತ್ತಿರುವ ಅಭಾವ ಪರಿಸ್ಥಿತಿಯ ಬಗ್ಗೆ ಮಂಡಿಸಿರತಕ್ಕ ನಿರ್ಣಯವನ್ನು ಅನುಮೋದಿಸುತ್ತ ಈ ಸಂಬಂಧವಾಗಿ ಕೆಲವು ವಿಷಯಗಳನ್ನು ಸಭೆಯ ಮೂಲಕ ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಾದಿಯಾಗಿ ಈ ಸಭೆಯಲ್ಲಿ ಇರತಕ್ಕಂಥ ಎಲ್ಲರಿಗೂ ಅತಿ ಕಠಿಣವಾದ ದುಸ್ಥಿತಿಯ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಆದರೆ ಏನು ಉದ್ದೇಶ ಸರ್ಕಾರಕ್ಕೂ ಜನತೆಗೂ ಇದೆ ಆ ಉದ್ದೇಶ ಇದುವರೆಗೂ ಫಲಿಸಿಲ್ಲ. ಇದಕ್ಕೆ ಸಂಬಂಧ ಪಟ್ಟಂತೆ ರೆವಿನ್ಯೂ ಮಂತ್ರಿಗಳು, ಅವರ ವ್ಯಕ್ತಿತ್ವದ ಹಾಗೆ ಬಹಳ ಸಹೃದಯರು, ಕಷ್ಟವನ್ನು ನೋಡಿ ಏನಾದರೂ ಮಾಡಿ ಆ ಕಷ್ಟವನ್ನು ಹೋಗಲಾಡಿಸಬೇಕು ಎನ್ನುವ ಅಭಿಪ್ರಾಯವುಳ್ಳವರು. ಅದಕ್ಕೋಸ್ಕರವಾಗಿ ಬಹಳ ಶ್ರಮಿಸುತ್ತಿದ್ದಾರೆ. ಆದರೆ ಇನ್ನೂ ಈ ಸಮಸ್ಯೆ ಬಗೆಹರಿದಿಲ್ಲ.

ಅನೇಕ ಮಾನ್ಯ ಸದಸ್ಯರು ಕ್ಷಾಮ ಪರಿಹಾರ ಕಾರ್ಯವನ್ನು ತಾಲ್ಲೂಕು ಅಭಿವೃದ್ಧಿ ಸಮಿತಿಗಳಿಗೆ ವಹಿಸಿ ಆ ಮೂಲಕ ಏನು ಕೆಲಸ ನಡೆಸುತ್ತಿದ್ದಾರೆ ಅದರ ಬಗ್ಗೆ ತಮ್ಮ ಅನುಮಾನವನ್ನು ವ್ಯಕ್ತ

ಪಡಿಸಿದ್ದಾರೆ ಮತ್ತು ಇದುವರೆಗೂ ಏನು ಹಣ ಖರ್ಚಾಗದೆ ಇದೆ ಅದಕ್ಕೆ ತಾಲ್ಲೂಕು ಅಭಿವೃದ್ಧಿ ಸಮಿತಿಗಳ ಆರ್ಥಿಕ ಪರಿಸ್ಥಿತಿಯೇ ಕಾರಣ ಎನ್ನುವ ರೀತಿಯಲ್ಲಿ ಹೇಳಿದ್ದಾರೆ. ಮತ್ತೆ ಮುಂದೆ ಹೋಗಿ ಅಭಿವೃದ್ಧಿ ಸಮಿತಿಗಳು ಮಾಡತಕ್ಕ ಕೆಲಸವನ್ನು ತಪ್ಪಿಸಿ ಬೇರೆ ಯಾವುದಾದರೂ ಒಂದು ಏಜೆನ್ಸಿ ಮೂಲಕ ಮಾಡಿಸಬೇಕು ಎಂದು ಹೇಳಿದ್ದಾರೆ. ಕ್ಷಾಮ ಪರಿಹಾರ ಕೆಲಸ ಮಾಡುತ್ತ ಇರುವುದು ಒಂದೇಸಮನಾಗಿ ಇದು ನಾಲ್ಕನೆಯ ವರ್ಷ. ಕಳೆದ ಮೂರು ವರ್ಷಗಳಲ್ಲಿ ತಹಸೀಲ್ದಾರರ ನೇತೃತ್ವದಲ್ಲಿ ಪರಿಹಾರ ಕಾಮಗಾರಿಗಳನ್ನು ಮಾಡಿಸಿಕೊಂಡು ಬಂದಿದ್ದಾರೆ. ಎಷ್ಟೆಷ್ಟರಮಟ್ಟಿಗೆ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟು ಚೆನ್ನಾಗಿ ಸಾಧನೆ ಮಾಡಿದ್ದಾರೆಂದು ಯೋಚನೆ ಮಾಡಿ ಹೇಳುವುದಾದರೆ ಪೂರ್ಣವಾಗಿ ಅವರು ಜಯಪ್ರದರಾಗಿಲ್ಲ. ಸೇಕಡ ಒಂದು ಭಾಗವಾದರೂ ಕೂಡ ಸರ್ಕಾರದ ಉದ್ದೇಶವೇನಿದೆ ಅಷ್ಟರಮಟ್ಟಿಗೆ ಸೌಲಭ್ಯವನ್ನು ಕಲ್ಪಿಸಿ ಕೊಡುವುದು ರೆವೆನ್ಯೂ ಅಧಿಕಾರಿಗಳಿಂದ ಸಾಧ್ಯವಾಗಲಿಲ್ಲ. ಇದೆಲ್ಲವನ್ನೂ ಕೂಡ ಸರ್ಕಾರದ ಗಮನಕ್ಕೆ ಪದೇ ಪದೇ ತಾಲ್ಲೂಕು ಬೋರ್ಡುಗಳು ಮತ್ತು ಶಾಸಕರೂ ಸರ್ಕಾರದ ಗಮನಕ್ಕೆ ತಂದಮೇಲೆ ಹಿಂದೆ ಇದ್ದ ಏಜೆನ್ಸಿಯನ್ನು ಬದಲಾಯಿಸಿ ತಾಲ್ಲೂಕು ಅಭಿವೃದ್ಧಿ ಸಮಿತಿಗಳ ಮೂಲಕ ಕೆಲಸ ಮಾಡಿಸುತ್ತಿದ್ದಾರೆ. ಅದಕ್ಕೆ ಅಡ್ಡಿ ಇರಬೇಕೇ ? ತಾಲ್ಲೂಕು ಬೋರ್ಡಿನಲ್ಲಿರತಕ್ಕ ಕಿತ್ತಾಟದ ಬಗ್ಗೆ ಕೆಲವರು ಹೇಳಿದ್ದಾರೆ. ತಾಲ್ಲೂಕು ಬೋರ್ಡ್ ಸದಸ್ಯರಿಗೂ ಈಗ ಮಾಡಿರತಕ್ಕ ಕೆಲಸದ ವ್ಯವಸ್ಥೆಗೂ ಏನೂ ಸಂಬಂಧವೇ ಇರುವುದಿಲ್ಲ. ತಾಲ್ಲೂಕು ಮಟ್ಟದಲ್ಲಿ ಒಂದು ಕಮಿಟಿ ಇದೆ. ಅಸಿಸ್ಟೆಂಟ್ ಕಮಿಷನರು ಅದಕ್ಕೆ ಅಧ್ಯಕ್ಷರಾಗಿದ್ದಾರೆ ಮತ್ತು ಅಸಿಸ್ಟೆಂಟ್ ಇಂಜಿನಿಯರು, ಬ್ಲಾಕ್ ಡೆವಲಪ್‌ಮೆಂಟ್ ಆಫೀಸರು, ತಾಲ್ಲೂಕಿನಲ್ಲಿರುವ ವಿಧಾನಸಭೆಯ ಮತ್ತು ಪರಿಷತ್ತಿನ ಸದಸ್ಯರು ಮತ್ತು ತಾಲ್ಲೂಕು ಬೋರ್ಡ್ ಅಧ್ಯಕ್ಷರು ಅದರಲ್ಲಿ ಸದಸ್ಯರಾಗಿದ್ದಾರೆ. ಎಲ್ಲರೂ ಕೂಡ ಸೇರಿ ಇಂಥಿಂಥ ಕೆಲಸವಾಗಬೇಕು ಎಂದು ವೋಟು ಹಾಕಿ ನಿರ್ಧರಿಸುತ್ತಿಲ್ಲ. ಒಮ್ಮತವಾಗಿ ಇಂಥಿಂಥ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡುತ್ತಾರೆ. ಆ ರೀತಿ ತೀರ್ಮಾನ ಮಾಡಿದ ಮೇಲೆ ದುಡ್ಡು ಏನಿದೆ ಅದನ್ನು ನೋಡಿಕೊಂಡು ಅಸಿಸ್ಟೆಂಟ್ ಕಮಿಷನರು ಅಥವಾ ಜಿಲ್ಲಾಧಿಕಾರಿಗಳು ಅವುಗಳಿಗೆ ಮಂಜೂರಾತಿಯನ್ನು ಕೊಡುತ್ತಾರೆ. ಹಾಗೆ ಮಂಜೂರಾತಿ ಕೊಟ್ಟ ಕೆಲಸಗಳನ್ನು ತಾಲ್ಲೂಕು ಬೋರ್ಡಿನಲ್ಲಿ ಕೆಲಸಮಾಡುವ ಸಿಬ್ಬಂದಿ ವರ್ಗವೇನಿದೆ ಅದರ ಮೂಲಕ ಮಾಡಿಸಲಾಗುತ್ತದೆ. ತಾಲ್ಲೂಕಿನಲ್ಲಿರುವ ಪಂಚಾಯಿತಿಗಳ ನೆರವನ್ನೂ ಪಡೆದು ಈ ಕೆಲಸಗಳು ನಡೆಯುತ್ತಿವೆ.

ಮದ್ದೂರು ತಾಲ್ಲೂಕಿನಲ್ಲಿ ನಾನು ಅಧ್ಯಕ್ಷನಾಗಿದ್ದೇನೆ. ಇದುವರೆಗೂ 2,20,000 ರೂಪಾಯಿಗಳಿಗೆ ಮೀರಿ ಖರ್ಚಾಗಿದೆ. ಇಷ್ಟು ಖರ್ಚು ಮಾಡಬೇಕಾದರೆ ಕಾರಣವೇನು ? ಅದೇ ಪಕ್ಕದ ತಾಲ್ಲೂಕಿನಲ್ಲಿ 300 ಚಿಲ್ಲರೆ ರೂಪಾಯಿ ಖರ್ಚಾಗಿದೆ. ಇದಕ್ಕೂ ಕಾರಣವೇನು ಎಂದು ನೋಡಬೇಕಾಗಿದೆ. ಸರ್ಕಾರದವರು ಏನು ದುಡ್ಡು ಕೊಡುತ್ತಾರೆ, 9ನೇ ಪುಟದಲ್ಲಿ ಮುಖ್ಯಮಂತ್ರಿಗಳು ಅದನ್ನು ಉದಹರಿಸಿದ್ದಾರೆ; ಅಷ್ಟೇ ಹಣಕ್ಕೆ ಸಂಬಂಧಪಟ್ಟಂತೆ ಅಂದಾಜುಗಳನ್ನು ಮಂಜೂರು ಮಾಡಿಕೊಂಡರೆ ಏನೇನೂ ಕೆಲಸಗಳನ್ನು ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅವರು 20 ಸಾವಿರ ರೂಪಾಯಿ ಕೊಟ್ಟರೆ ನಾವು ಒಂದು ಲಕ್ಷ ರೂಪಾಯಿ ಅಂದಾಜು ಮಂಜೂರು ಮಾಡಿ ಕೆಲಸ ಪ್ರಾರಂಭ ಮಾಡಿದರೆ ನಾವು ಎಷ್ಟು ಉದ್ದೇಶಪಟ್ಟಿದ್ದೇವೆ ಅಷ್ಟಾದರೂ ಪ್ರಗತಿ ಬರಲಿಕ್ಕೆ ಸಾಧ್ಯವಾಗುತ್ತದೆ.

ಎರಡನೆಯದಾಗಿ ಒಂದು ತೊಂದರೆ ಏನೆಂದರೆ ಒಂದು ತಿಂಗಳು 20 ಸಾವಿರ ರೂಪಾಯಿ ಕೊಟ್ಟು ಇನ್ನೊಂದು ತಿಂಗಳು ಹಣ ಕೊಡದೇಹೋದರೆ ಕೆಲಸ ಮಾಡುವ ಕೂಲಿಗಾರರಿಗೆ ದುಡ್ಡು ಕೊಡುವ ಬಗೆ ಹೇಗೆ ? ತಾಲ್ಲೂಕು ಅಭಿವೃದ್ಧಿ ಸಮಿತಿಗೆ ಸಂಬಂಧಪಟ್ಟಂತೆ ಸೋಷಿಯಲ್ ವೆಲ್‌ಫೇರ್ ಸೆಂಟರ್ ಇದೆ, ಹರಿಜನರ ಹಾಸ್ಟಲ್ ಇದೆ, ಎನ್.ಇ.ಎಸ್.ಗೆ ಸಂಬಂಧಪಟ್ಟಂತೆ ನ್ಯೂಟ್ರಿಷನ್ ಪ್ರೋಗ್ರಾಂ ಇದೆ. ಇದಕ್ಕೆಲ್ಲಾ ಹಣ ಬೇಕಾದರೆ ತಾಲ್ಲೂಕು ಅಭಿವೃದ್ಧಿ ಸಮಿತಿಯವರು ಮುಂಗಡವಾಗಿ ಕೊಡುವುದಕ್ಕೆ ಅವಕಾಶ ಇದೆ. ಅದೇ ರೀತಿ ರಿಲೀಫ್ ವರ್ಕ್‌ಸ್‌ಗೂ ಮುಂಗಡವಾಗಿ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇದರಿಂದ ಜನಗಳಿಗೆ ಹೆಚ್ಚಿನ ಸೌಲಭ್ಯವನ್ನು ಒದಗಿಸಿಕೊಡಲು ಸಾಧ್ಯವಾಗುತ್ತದೆ.

ಇನ್ನು 64ನೇ, ಫ್ಯಾಮಿನ್ ರಿಲೀಫ್ ಪ್ರಕಾರ ಕೂಲಿ ಕೊಡಬೇಕಾದರೆ ನಾಮಿನಲ್ ರೋಲ್ ತಯಾರು ಮಾಡಬೇಕಾಗಿದೆ. ಇದರಲ್ಲಿ ಕೂಲಿ ಕೊಡಬೇಕಾದರೆ ಒಂದು ದಿವಸಕ್ಕೆ ಗಂಡಸರಿಗೆ ಕೂಲಿ 1-50, ಹೆಂಗಸರಿಗೆ ಕೂಲಿ 1.25. ಇದರಲ್ಲಿಯೂ ವ್ಯತ್ಯಾಸ ಇದೆ. ಇದರ ಜೊತೆಗೆ ಅರ್ತ್ ವರ್ಕ್ ಮಾಡಿದರೆ ಒಂದು ಕ್ಯೂಬಿಕ್ ಮೀಟರಿಗೆ 1-[illegible] ಪೈಸೆ ಕೊಡಬೇಕೆಂದು ಮಾಡಿದ್ದಾರೆ. ಅದರಲ್ಲಿ ಚಕಾರಿ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಈಗ 4 ವರ್ಷದಿಂದಲೂ ಒಂದೇ

(ಶ್ರೀ ಎಂ. ಮಂಚೇಗೌಡ)

ಸಮಾನೆ ಹಳ್ಳಿಗಾಡುಗಳಲ್ಲಿ ಕ್ಷಾಮದಿಂದ ಅನುಭವಿಸುತ್ತಿದ್ದಾರೆ. ಹಳ್ಳಿಗಾಡುಗಳಲ್ಲಿ ಒಂದು ಕ್ಯೂಬಿಕ್ ಮೀಟರ್ ಅಷ್ಟು ಮಣ್ಣನ್ನು ತೆಗೆಯುವುದಕ್ಕೂ ಕೆಲಸ ಮಾಡುವವರು ಸಿಕ್ಕುವುದಿಲ್ಲ. ನಾಮಿನಲ್ ರೋಲ್‌ನಲ್ಲಿ ಕೆಲಸ ಎಷ್ಟಾಗಿದೆ ಎಂದು ನೋಡಿಕೊಂಡು ಅವರಿಗೆ ವೇಜಸ್ ಕೊಡಬೇಕಾಗುತ್ತದೆ. ಇದು ಸಾಧ್ಯವಾಗುವುದಿಲ್ಲ. ಬಿಲ್ ಪ್ರಿಪೇರ್ ಆಗುವಾಗ ಕ್ವಾಂಟಮ್ ಆಫ್ ವರ್ಕ್ಸ್ ತೋರಿಸುವುದಕ್ಕಾಗುವುದಿಲ್ಲ. ಇದಕ್ಕೆ ಸ್ವಲ್ಪ ಕಾಲಾವಕಾಶ ಬೇಕು. ಅನೇಕ ಸದಸ್ಯರು ನಾಮಿನಲ್ ರೋಲ್‌ನಲ್ಲಿ ಬಿಲ್ ತಯಾರು ಮಾಡಬೇಕಾದರೆ ನಿಧಾನವಾಗುತ್ತದೆ ಎಂದು ಹೇಳಿದರು. ಇದು ನಿಧಾನವಾಗುವುದಕ್ಕೆ ಕಾರಣ ಜಲ್ಲಿ ಕೆಲಸ, ಬ್ಲಾಸ್ಟಿಂಗ್ ಕೆಲಸ ಇವುಗಳನ್ನೆಲ್ಲಾ ಮಾಡಿಸಲು ತಡವಾಗುತ್ತದೆ. ಜಲ್ಲಿ ಬೇರೆ ಕಡೆಯಿಂದ ತರಬೇಕಾಗುತ್ತದೆ, ಬ್ಲಾಸ್ಟಿಂಗ್ ಮ್ಯಾಟೀರಿಯಲ್ಸ್ ಬೇರೆ ಕಡೆಯಿಂದ ತರಬೇಕಾಗುತ್ತದೆ, ಇದು ಕಂಟ್ರೋಲ್ ರೇಟಿಗೆ ಸಿಕ್ಕುವುದಿಲ್ಲ. ಇದಕ್ಕೆ ಲೈಸೆನ್ಸ್ ಹೋಲ್ಡರ್ ಆಗಿರಬೇಕು. ಇದನ್ನೆಲ್ಲಾ ಹೇಗೆ ಬೇಗ ತರುವುದಕ್ಕೆ ಸಾಧ್ಯವಾಗುತ್ತದೆ! ಅವನು ಎಲ್ಲಿಂದ ತರುತ್ತಾನೆ! ಈ ತರಹ ಸಮಸ್ಯೆ ಪ್ರತಿಯೊಂದು ತಾಲ್ಲೂಕಿನಲ್ಲೂ ಇದೆ. ಅವರು ಷೆಡ್ಯೂಲ್ ಆಫ್ ರೇಟ್ಸ್‌ನಂತೆ ಲೆಕ್ಕದಲ್ಲಿ ಕೊಡುತ್ತೇವೆ ಎಂದು ಹೇಳುತ್ತಾರೆ. ಇದು ಹೇಗೆ ಸಾಧ್ಯ! ಆದುದರಿಂದ ಈ ನಿರ್ಬಂಧವನ್ನು ಹೊಡೆದುಹಾಕಿದರೆ ಮಾತ್ರ ಕೆಲಸ ಮಾಡಿಸುವುದಕ್ಕೆ ಸಾಧ್ಯವಾಗುತ್ತದೆ. ಇಷ್ಟೆಲ್ಲಾ ತೊಂದರೆ ಇರುವುದರಿಂದ ಕೆಲಸ ಮಾಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ತಾಲ್ಲೂಕು ಅಭಿವೃದ್ಧಿ ಸಮಿತಿಯವರನ್ನು ಸುಮ್ಮನೆ ಏತಕ್ಕೆ ದೂಷಿಸುತ್ತೀರಿ? ರೆಡ್ ಟೇಪಿಸಮ್ ಬಹಳ ಕಡಿಮೆಯಾಗಿದೆ. ತಾಲ್ಲೂಕು ಅಭಿವೃದ್ಧಿ ಸಮಿತಿಯವರು ರಿಲೀಫ್ ವರ್ಕ್ಸ್ ಮಾಡುತ್ತಾ ಇರುವುದರಿಂದ ವಿರೋಧ ಪಕ್ಷದವರು ಈ ಬಗ್ಗೆ ಟೀಕೆ ಮಾಡುತ್ತಾ ಇದ್ದಾರೆ. ಪ್ರತಿಯೊಂದು ಕೆಲಸವನ್ನೂ ಎಕ್ಸಿಕ್ಯೂಟೀವ್ ಇಂಜನೀಯರ್ ಆಗಲಿ, ಮಂತ್ರಿಗಳಾಗಲಿ ಬಂದು ಪರಿಶೀಲನೆ ಮಾಡುವುದಕ್ಕಾಗುವದಿಲ್ಲ. ಸಾರ್ವಜನಿಕ ಕ್ಷೇತ್ರದಲ್ಲಿ ಏನಾದರೂ ದೋಷ ಬಂದರೆ ಆಗ ವಿಚಾರಣೆ ಮಾಡಬಹುದು. ಈ ರಿಲೀಫ್ ವರ್ಕ್ಸ್ ಮಾಡಿಸುವುದನ್ನು ಅಧಿಕಾರಿಗಳ ಕೈಗೆ ಕೊಟ್ಟರೆ ನಾವೇನೂ ಕೇಳುವುದಕ್ಕಾಗುವುದಿಲ್ಲ. ಈ ಪ್ರಜಾಪ್ರಭುತ್ವದಲ್ಲಿ ಅಧಿಕಾರಿಗಳ ಕೈಗೆ ಕೊಡಬಾರದು, ತಾಲ್ಲೂಕು ಬೋರ್ಡ್‌ನವರಿಗೆ ವಹಿಸಬೇಕು ಏತಕ್ಕೆಂದರೆ ಪ್ರಜಾಪ್ರಭುತ್ವದಲ್ಲಿ ಮಂತ್ರಿಗಳನ್ನೂ ತಾಲ್ಲೂಕು ಬೋರ್ಡ್‌ನವರನ್ನೂ ಕೇಳಬಹುದು. ಯಾವುದೋ ಒಂದು ತಾಲ್ಲೂಕು ಬೋರ್ಡನ್ನು ಉದಾಹರಣೆಯಾಗಿ ತೆಗೆದುಕೊಂಡು ಟೀಕೆ ಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ತಾಲ್ಲೂಕು ಬೋರ್ಡ್‌ನವರು ಅಧಿಕಾರಿಗಳ ವರ್ಗಕ್ಕಿಂತ ಹೆಚ್ಚು ಜವಾಬ್ದಾರಿಯುಳ್ಳಂಥಾವರು ಆಗಿರುತ್ತಾರೆ. ಶ್ರೀಮಾನ್ ಸಿದ್ಧವೀರಪ್ಪನವರು ಪ್ರತಿಯೊಂದು ಜಿಲ್ಲೆಯನ್ನೂ ಒಬ್ಬೊಬ್ಬ ಮಂತ್ರಿಗಳು ವಹಿಸಿಕೊಳ್ಳಿ ಎಂದು ಸೂಚಿಸಿದರು. ಅದೇ ಸರಿಯಾದ ಮಾರ್ಗ. ಇದನ್ನು ರಿಲೀಫ್ ವರ್ಕ್ಸ್ ಕಮೀಷನರಿಗಾಗಲಿ, ಜಿಲ್ಲಾಧಿಕಾರಿಗಳಿಗಾಗಲಿ, ಅಸಿಸ್ಟೆಂಟ್ ಕಮೀಷನರಿಗಾಗಲಿ, ಅಧಿಕಾರಿಗಳ ಕೈಗೆ ಆಗಲೀ ವಹಿಸಿದರೆ ಈ ಕೆಲಸ ನಿಧಾನವಾಗುತ್ತದೆ, ಆದುದರಿಂದ ಇದನ್ನು ಮಾಡದೇ ಇರಲಿ ಎಂದು ಬೇಡಿಕೊಳ್ಳುತ್ತೇನೆ. ಅಧಿಕಾರಿಗಳಿಗೆ ಎಷ್ಟು ಮಟ್ಟಿಗೆ ಜವಾಬ್ದಾರಿ ಇರುತ್ತದೋ ಅವಕ್ಕಿಂತ ಹೆಚ್ಚುಮಟ್ಟಿಗೆ ತಾಲ್ಲೂಕು ಬೋರ್ಡಿನವರಿಗೆ ಇದೆ. ಜನತೆಗೆ ನಾವು ಭಿಕ್ಷೆ ಮಾಡಿಕೊಡುವುದು ಸಾಧುವಾದುದಲ್ಲ. ಕೊಟ್ಟಂಥ ದುಡ್ಡಿನಲ್ಲಿ ನಾವು ಕೆಲಸ ಮಾಡಿಸಿಕೊಳ್ಳಬೇಕು. ಹಾಗೆ ಕೆಲಸ ಮಾಡಿಸಿಕೊಳ್ಳದೇ ಹೋದರೆ ಈ ಪ್ರಯತ್ನದಲ್ಲಿ ಉಳಿದಿರುವುದು ಒಂದೇ ಮಾರ್ಗ, ಅದು ಕ್ರಾಂತಿ.

ಇನ್ನು ಆಹಾರ ಧಾನ್ಯ ಹಂಚಿಕೆ ವಿಚಾರ. ಈಗ ನೀವು ಪರಿಹಾರ ಏನು ಕೊಡುತ್ತೀರೋ ಅದು ಜನರಿಗೆ ಸಕಾಲದಲ್ಲಿ ದೊರಕಬೇಕು. ಅವರಿಗೆ ಲೋನ್ಸ್ ಸರಿಯಾಗಿ ಕೊಡಬೇಕು. ಕೂಲಿ ಮಾಡತಕ್ಕಂಥಹವರು ಎಷ್ಟೋ ಜನರು ಇದ್ದಾರೆ. ಅವರಿಗೆ ಕೂಲಿ ಹಂಚುವುದಕ್ಕೆ ಅಧಿಕಾರಿಗಳ ಕೈಯಲ್ಲಿ ಕೊಡಬೇಡಿ. ಇದಕ್ಕೆ ಸರ್ಕಾರದವರು ಒಂದು ಕಮಿಟಿ ಮಾಡಿ ಇಷ್ಟು ಕೊಡಬೇಕು ಎಂದು ಅಧಿಕಾರಿಗಳಿಗೆ ಸ್ಪೆಸಿಫೈ ಮಾಡಿ ಸರಿಯಾಗಿ ಹಂಚಲು ವ್ಯವಸ್ಥೆ ಮಾಡಬೇಕೆಂದು ಸೂಚನೆ ಮಾಡುತ್ತೇನೆ. ಈ ವಿಚಾರವಾಗಿ 4 ವರ್ಷಗಳಿಂದಲೂ ಕೂಡ ಸರ್ಕಾರಕ್ಕೆ ಹೇಳುತ್ತಾ ಬಂದಿದ್ದೇನೆ. ಪದೇ ಪದೇ ಕ್ಷಾಮ ಬರುತ್ತಾ ಇದೆ. ಇದಕ್ಕಾಗಿ ಪ್ರತಿಯೊಂದು ತಾಲ್ಲೂಕಿಗೂ 1 ಲಕ್ಷ, 2 ಲಕ್ಷ ರೂಪಾಯಿಯನ್ನು ಹಂಚುತ್ತಾ ಇದ್ದಾರೆ. ಇದರ ಬದಲು ಶಾಶ್ವತವಾದ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೇ ವಿನಃ ತಾತ್ಕಾಲಿಕವಾಗಿ ಈ ತರಹ ಕೆಲಸಗಳನ್ನು ಮಾಡುವುದು ಸರಿಯಲ್ಲ.

ಇನ್ನೊಂದು ಸಂಗತಿ ಏನೆಂದರೆ ರೈತರುಗಳಿಗೆ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನವರು ಲ್ಯಾಂಡ್ ಇಂಪ್ರೂವ್‌ಮೆಂಟ್‌ಗೋಸ್ಕರ ಸಾಲ ಕೊಡುವುದು ಸಾಕಾಗುವುದಿಲ್ಲ. ಅವನು ಇಂಪ್ರೂವ್ ಮೆಂಟ್‌ಗೆ ಲೋನ್ ತೆಗೆದುಕೊಂಡರೆ ಅವನ ಎಲ್ಲಾ ಜಮೀನುಗಳೂ ಗೌರ್ನಮೆಂಟ್‌ಗೆ ಅಡಮಾನ ಆಗಿಬಿಡುವುದರಿಂದ ಅವನು ಅವುಗಳ ಮೇಲೆ ಹೆಚ್ಚು ಹಣ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಇದರಿಂದ ಅವನು ಬಹಳ ತೊಂದರೆಗೆ ಸಿಕ್ಕಿಹಾಕಿಕೊಳ್ಳಬೇಕಾಗುತ್ತದೆ. ಇದಕ್ಕೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ. ಇದಕ್ಕೆ ಜನರ ಸಹಕಾರವೂ ಬೇಕು ಎಂದು ಹೇಳುತ್ತೇನೆ. ಇಲ್ಲದೆ ಇದ್ದರೆ ನಮ್ಮ ಉದ್ದೇಶ ಸಫಲವಾಗುವುದಿಲ್ಲ. ಯಾರು ನೀರಿಗಾಗಿ ಮಳೆಯನ್ನು ಅವಲಂಬಿಸಿದ್ದಾರೋ ಅಂತಹ ಜನ ತಮ್ಮ ಕಾಲಮೇಲೆ ನಿಂತು ಜೀವನ ಮಾಡುವ ಹಾಗೆ ಆಗಬೇಕು. ಆಯಾಯ ತಾಲ್ಲೂಕಿನಲ್ಲಿ ಸ್ವಲ್ಪಮಟ್ಟಿಗಾದರೂ ಜೀವನ ಕಲ್ಪಿಸಿಕೊಡಬೇಕು ಎನ್ನುವುದು ಸರ್ಕಾರದ ಉದ್ದೇಶವಾದರೂ ಈಗ ಅದಕ್ಕೆ ತದ್ವಿರುದ್ಧವಾಗಿದೆ. ಈಗ ಸರ್ಕಾರದವರು ಬಾವಿ ತೆಗೆಸಲು ಸಾಲ ಕೊಡುತ್ತಿದ್ದಾರೆ. ಬಾವಿ ಕೆಲಸ ಮುಗಿದ ಕೂಡಲೇ ಪಂಪ್ ಹೌಸ್‌ಗೆ, ಕರೆಂಟ್‌ಗೆ, ಪಂಪ್‌ಸೆಟ್ಸ್, ವೈರಿಂಗ್ ಇವಕ್ಕೆ ಅವನ ಹತ್ತಿರ ದುಡ್ಡು ಇರುವುದಿಲ್ಲ. ಬಾವಿಗೆ 2–3 ಸಾವಿರ ರೂಪಾಯಿ ಮಾತ್ರ ಸಾಲ ಕೊಡುತ್ತಾರೆ. ಇದು ರೈತನಿಗೆ ಸಾಲುವುದಿಲ್ಲ. ಆದುದರಿಂದ ಅವನು ಬಹಳ ತೊಂದರೆಗೆ ಈಡಾಗುತ್ತಾನೆ. ಇವೊತ್ತಿನ ದಿವಸ ಇಂಡಸ್ಟ್ರಿಯಲಿಸ್ಟ್‌ಗೆ ಕೈಗಾರಿಕೆ ಸ್ಥಾಪನೆ ಮಾಡಬೇಕಾದರೆ ಗ್ಯಾರಂಟಿ ಕೊಡುತ್ತೀರಿ, ಎಲ್ಲಾ ಸೌಕರ್ಯಗಳನ್ನೂ ಮಾಡಿಕೊಡುತ್ತೀರಿ. ಆದರೆ ರೈತನ ಬಗ್ಗೆ ನೀವೇನೂ ಅನುಕಂಪ ತೋರಿಸುತ್ತಾ ಇಲ್ಲ. ದೇಶದಲ್ಲಿ ಅವನ ಆದಾಯ ಎಷ್ಟು ಮತ್ತು ಅವನು ಹೇಗೆ ಜೀವನ ಮಾಡುತ್ತಾನೆ ಎಂದು ಯಾವುದನ್ನೂ ಯೋಚನೆ ಮಾಡುತ್ತಾ ಇಲ್ಲ. ಆದುದರಿಂದ ರೈತನಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕು. ರೈತರಿಗೆ ವಿದ್ಯುಚ್ಛಕ್ತಿ ಕೊಡುವ ಬಗ್ಗೆ ಹೇಳಬೇಕಾದರೆ, ಅವರು ಅದಕ್ಕಾಗಿ ಮುಂಗಡವಾಗಿ ಹಣವನ್ನು ವಿದ್ಯುಚ್ಛಕ್ತಿ ಇಲಾಖೆಗೆ ಕಟ್ಟಬೇಕೆಂದು ಸರ್ಕಾರದವರು ಒಂದು ಆಜ್ಞೆ ಹೊರಡಿಸಿದ್ದರು. ಅದರಿಂದ ರೈತರಿಗೆ ಹೆಚ್ಚು ಅನಾನುಕೂಲತೆ ಕಂಡುಬಂದುದರಿಂದ ಆ ರೀತಿ ಮುಂಗಡ ಹಣ ಕೊಡಬೇಕಾಗಿಲ್ಲವೆಂದು ಕ್ಯಾಬಿನೆಟ್ ಡಿಸಿಶನ್ ಆಯ್ತು, ಎಂದು ಪತ್ರಿಕೆಗಳಲ್ಲಿ ಬಂತು.

2–30 P.M.

ಅದಕ್ಕೆ ವಿರುದ್ಧವಾಗಿ ಇಲೆಕ್ಟ್ರಿಸಿಟಿ ಬೋರ್ಡಿನ ಸರ್ಕುಲರ್ ಹೊರಟಿದೆ. ಎರಡನೆಯದು ಪರ್ ಹಾರ್ಸ್ ಪವರ್ 600 ರೂಪಾಯಿಯೊಳಗೆ ಬರತಕ್ಕಂತವುಗಳನ್ನು ಮಂಜೂರಾತಿ ಮಾಡಬೇಕು ಎಂದು ಸರ್ಕಾರದವರು ಇಚ್ಛಿಸಿದ್ದರೆ, ಎಲೆಕ್ಟ್ರಿಸಿಟಿ ಬೋರ್ಡು ತದ್ವಿರುದ್ಧವಾಗಿ ವರ್ತಿಸಿತು. ಆದುದರಿಂದ ಈಗ ಎಲ್ಲೆಲ್ಲಿ ಬಾವಿಗಳು ಆಗಿವೆ ಅದನ್ನು ಉಪಯೋಗ ಮಾಡುವಹಾಗೆ ದಯವಿಟ್ಟು ಅವುಗಳಿಗೆ ವಿದ್ಯುಚ್ಛಕ್ತಿಯನ್ನು ತ್ವರಿತವಾಗಿ ಒದಗಿಸಬೇಕು. ಇಲ್ಲದಿದ್ದರೆ ಕ್ಷಾಮ ಇನ್ನೂ ಹೆಚ್ಚು ತಲೆದೋರುವಂತೆ ಮಾಡಿದ ಹಾಗೆ ಆಗುತ್ತದೆ. ಇದರಿಂದ ಹಳ್ಳಿಯ ಜನರಿಗೂ ಒಂದು ಉಪಕಾರ ಮಾಡಿದ ಹಾಗೆ ಆಗುತ್ತದೆ. ಎಲೆಕ್ಟ್ರಿಸಿಟಿ ಬೋರ್ಡು ಅಂದರೆ ಏನು, ವಿದ್ಯುಚ್ಛಕ್ತಿ ಸರ್ಕಾರದವರ ಹತೋಟಿಯಲ್ಲಿಲ್ಲವೇನು? ಅವರನ್ನು ಸರಿಯಾದ ಹತೋಟಿಯಲ್ಲಿ ಇಟ್ಟುಕೊಂಡರೆ ರೈತರಿಗೆ ಉಪಯೋಗಕರವಾಗುತ್ತದೆ. ಆ ರೀತಿಯಲ್ಲಿ ಮಾಡಬೇಕು. ಎರಡನೆಯದು ಮೈನರ್ ಇರಿಗೇಷನ್. ಶಾಶ್ವತವಾಗಿ ಏನು ಖರ್ಚು ಮಾಡುತ್ತಿದ್ದಾರೆ, ಅದನ್ನು ಮೈನರ್ ಇರಿಗೇಷನ್‌ಗೆ ಮಾಡುತ್ತಾರೆ. ಅಲ್ಲೂ ಕೂಡ ಒಂದು ಸಾವಿರದ ಮೇಲೆ ಫೀಸಿಬಲ್ ಇಲ್ಲವೆಂದು ಮಾಡಿದ್ದಾರೆ. ಮಿಡಿಯಂ ಮತ್ತು ಮೇಜರ್ ಇರಿಗೇಷನ್ನಿಗೆ ಪರ್‌ಸೆಂಟೇಜ್ ಇಲ್ಲವೆಂದು ಹೇಳುತ್ತಾರೆ. ಎಲ್ಲಾ ಮೈನರ್ ಇರಿಗೇಷನ್ನನ್ನು ಅವಲಂಬಿಸಿಕೊಂಡಿರುತ್ತಾರೆ. ಅಲ್ಲಿ ಪರ್‌ಸೆಂಟೇಜ್ ಇದೆ. ಅದು ಪಕ್ಷಪಾತವಲ್ಲವೇ? ಇವತ್ತು ಜನರು ನಮ್ಮನ್ನು ಕೇಳುತ್ತಿದ್ದಾರೆ, ನಿಮ್ಮನ್ನು ನಾವು ಕೇಳುತ್ತಿದ್ದೇವೆ. ಇದರಿಂದ ಮುಂದೆ ಏನು ಸಮಸ್ಯೆ ಬರುತ್ತದೆಂಬುದನ್ನು ಚೆನ್ನಾಗಿ ಯೋಚನೆ ಮಾಡಿ ಆಗಾಗ್ಯೆ ಮಾಡುತ್ತಾ ಇದ್ದರೆ, ಯಾವ ದೂರಿಗೂ ಅವಕಾಶವಿಲ್ಲ. ನಮಗೆ ಕ್ಷಾಮವನ್ನು ತಡೆಗಟ್ಟಲಿಕ್ಕೆ ಸಾಧ್ಯವಿಲ್ಲವೇ? ಇವತ್ತು ಎಷ್ಟೋ ನೀರು ಕಾವೇರಿ ಬೇಸಿನ್‌ನಲ್ಲಿ ಹೊರಗಡೆ ಹೋಗುತ್ತಿದೆ. ಅದನ್ನು ಏಕೆ ತಡೆಗಟ್ಟಿಲ್ಲ. ನಮಗೆ ಸ್ವಾತಂತ್ರ್ಯ ಬಂದು 20 ವರ್ಷವಾಯ್ತು. ಕಾವೇರಿ ನೀರಿನ ಬಗ್ಗೆ ಏನು ಮಾಡಿದ್ದಾರೆ? ಇವತ್ತು ಕ್ಷಾಮ ಕ್ಷಾಮ ಎಂದು ನಮ್ಮ ಜನರು ಒಣ ರೊಟ್ಟಿ ಕೂಡ ತಿನ್ನದೆ ಇದ್ದಾರೆ. ಅದನ್ನೆಲ್ಲಾ ನಿವಾರಣೆ ಮಾಡುವುದು ನಮ್ಮ ಸರ್ಕಾರದ ಕರ್ತವ್ಯ. ಅದಕ್ಕಾಗಿ ನಮಗೆ ಬಾವಿಗಳು, ಮೈನರ್ ಇರಿಗೇಷನ್ ಮೇಜರ್ ಇರಿಗೇಷನ್ ಬೇಕು. ಇನ್ನು ಈ ಕಾಮಗಾರಿ ರಿಲೀಫ್ ಕೆಲಸಗಳು ಏನು ಇವೆ, ಇವುಗಳು ತಾಲ್ಲೂಕು ಬೋರ್ಡು ಸಮಿತಿಗಳ ಮೂಲಕ ಆಗಬೇಕು. ಅಸಿಸ್ಟೆಂಟ್ ಕಮಿಷನರ್, ಡೆಪ್ಯೂಟಿ ಕಮಿಷನರ್ ಪ್ರತಿಯೊಂದು ತಾಲ್ಲೂಕುಗಳಲ್ಲಿ ಆಗತಕ್ಕಂತಹ ಕೆಲಸಗಳನ್ನು

(ಶ್ರೀ ಎಂ. ಮಂಚೇಗೌಡ)

ಸೂಪರ್‌ವೈಸ್ ಮಾಡಲಿ. ಏನಾದರೂ ತಪ್ಪು ಇದ್ದರೆ ಅಪರಾಧಿಗಳನ್ನು ಶಿಕ್ಷೆ ಮಾಡಲಿ. ಸರ್ಕಾರದವರು ತಡೆಗಟ್ಟುತ್ತೇವೆಂದು ಹೇಳಿದರೆ ಸಾಲುವುದಿಲ್ಲ. ಇನ್ನೂ ಒಂದೂವರೆ ವರ್ಷ ಕಾಲ ಇದೇ ರೀತಿ ಜನರಿಗೆ ಕೂಲಿ ಕೊಟ್ಟು, ಅನ್ನ ಕೊಟ್ಟು ಕಾಪಾಡತಕ್ಕದ್ದು ನಮ್ಮ ಕರ್ತವ್ಯವಾಗಿದೆ. ಮುಂದೆ ಕೂಡ ಶಾಶ್ವತವಾದ ಪರಿಹಾರವನ್ನು ಕೈಕೊಳ್ಳುವುದಕ್ಕೆ ಯೋಚನೆ ಮಾಡಿ ತೆಗೆದುಕೊಳ್ಳಬೇಕು. ಕಳೆದ ವರ್ಷದ ರೀತಿಯಲ್ಲಿ ಬಜೆಟ್ ಮಾಡಿದರೆ, ಈ ಕ್ಷಾಮವನ್ನು ತಡೆಗಟ್ಟಲು ಸಾಧ್ಯವಿಲ್ಲ. ಇಲ್ಲಿ ಪೇಟೆಯಲ್ಲಿ ಇದ್ದರೆ, ಅಥವಾ ದಿಲ್ಲಿಯಲ್ಲಿ ಇದ್ದರೆ, ಹಳ್ಳಿಗಳ ಕಷ್ಟ ಏನು ಎಂದು ಗೊತ್ತಾಗುವುದಿಲ್ಲ. ಆದ್ದರಿಂದ ಅಂಥ ಕಷ್ಟಗಳನ್ನು ನಿವಾರಣೆ ಮಾಡುವುದಕ್ಕೆ ಮತ್ತು ಅದು ಮತ್ತೊಮ್ಮೆ ತಲೆದೋರದಂತೆ ಸರ್ಕಾರದವರು ತಕ್ಕ ಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳಿ, ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ. ಎಲ್. ಶಿವಪ್ಪ (ತಿಪಟೂರು).—ಸ್ವಾಮಿ ಅಧ್ಯಕ್ಷರೇ, ಈ ಸಂಬಂಧವಾಗಿ ಆಡಳಿತ ಪಕ್ಷದ ನಾಯಕರಾದ ಮುಖ್ಯಮಂತ್ರಿಯವರು ದೇಶದ ಪರಿಸ್ಥಿತಿಯ ಬಗ್ಗೆ ತಂದಿರುವ ಠರಾವಿನ ಬಗ್ಗೆ ಇನ್ನೂ ವಿವರಿಸಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಯವರು ಏನು ಅಭಾವ ಪರಿಸ್ಥಿತಿಯ ಬಗ್ಗೆ ಇಲ್ಲಿ ತಂದಿದ್ದಾರೆ, ಅದರಿಂದ ಅವರಿಗೆ ನಿಜ ಪರಿಸ್ಥಿತಿ ಪರಿಚಯವಾದಂತೆ ಕಾಣುತ್ತಿಲ್ಲ. ಮೊನ್ನೆಯ ದಿನ ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಿದರು, ''ಏನು ಸ್ವಾಮಿ, ಹೊಸ ಮಂತ್ರಿ ಮಂಡಲ ರಚನೆಯಾದ ನಂತರ ನಿಮ್ಮ ಧ್ಯೇಯ ಧೋರಣೆಗಳನ್ನು ಸ್ವಲ್ಪ ವಿವರಿಸಬೇಕು'' ಎಂದು. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ''ಮಂತ್ರಿಮಂಡಲ ಹೊಸತಾದರೂ ಕಾಂಗ್ರೆಸ್ ಪಕ್ಷ ಹೊಸತೇನಲ್ಲ'' ಎಂದು ಹೇಳಿದರು. ವಿರೋಧಪಕ್ಷದ ನಾಯಕರು ಏನು ಪ್ರಶ್ನೆ ಹಾಕಿದ್ದಾರೆ, ಅದು ಸ್ವಾಭಾವಿಕವಾದುದು. ಈಗ ಇರತಕ್ಕ ಮಂತ್ರಿಮಂಡಲ ಒಂದು ಮೋಜಿನಿಂದ ಕೂಡಿದೆಯಲ್ಲದೆ, ದೇಶವನ್ನು ಕಾಪಾಡತಕ್ಕ ಮನಸ್ಸಿನಲ್ಲಿಲ್ಲ. ಉದಾಹರಣೆಗೆ ಹೇಳುವುದಾದರೆ, ಗುಬ್ಬಿ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿ ಕಟ್ಟಡ ಓಪನ್ ಮಾಡುವುದಕ್ಕೋಸ್ಕರ ಸುಮಾರು ನಾಲ್ಕು ಜನ ಮಂತ್ರಿಯವರು ಅಲ್ಲಿಗೆ ಹೋಗಿದ್ದಾರೆ. ತಿಪಟೂರಿನಲ್ಲಿ ಒಂದು ಹೈಸ್ಕೂಲಿಃ ಹೆಸರನ್ನು ಬದಲಾಯಿಸುವುದಕ್ಕಾಗಿ, ಒಬ್ಬರು ಡೆಪ್ಯೂಟಿ ಮಿನಿಸ್ಟರು ಹೋಗಿ ಎರಡು ಹಗಲು ಒಂದು ರಾತ್ರಿ ಉಳಿದಿದ್ದಾರೆ. ಅವರಿಗೆಲ್ಲ ಅಲ್ಲಿನ ಕ್ಷಾಮದ ಪರಿಸ್ಥಿತಿ ಬೇಕಾಗಿರಲಿಲ್ಲ. ಇದರಿಂದ ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಮಂತ್ರಿಮಂಡಲದ ಧ್ಯೇಯಧೋರಣೆಗಳನ್ನು ತಿಳಿಸಿ ಎಂದು ಮನವಿ ಮಾಡಿಕೊಂಡದ್ದು ಬಹಳ ಉಚಿತವಾದುದೆಂದು ಕಾಣುತ್ತದೆ. ಆದ್ದರಿಂದ ಅವರು ಪರಿಸ್ಥಿತಿಯನ್ನು ವಿಮರ್ಶೆ ಮಾಡಿಲ್ಲ, ಮತ್ತು ಅಂಥ ಸ್ಥಳಗಳಿಗೆ ಹೋಗಿಲ್ಲ. ತುಮಕೂರಲ್ಲಿ 22 ಅಂಗುಲಕ್ಕಿಂತ ಜಾಸ್ತಿ ಮಳೆಯಾಗುತ್ತಾ ಇಲ್ಲ. ಮೂರು ವರ್ಷದಿಂದ ಅಲ್ಲಿ 11 ಅಂಗುಲಕ್ಕಿಂತ ಮೇಲೆ ಮಳೆ ಆಗಿಲ್ಲ. ಈ ವರ್ಷ ಒಂದೂವರೆ ಅಂಗುಲ ಮಾತ್ರ ಮಳೆ ಬಿದ್ದಿದೆ. ಅಲ್ಲಿ ಕುಡಿಯುವುದಕ್ಕೆ ಸಹ ನೀರಿಲ್ಲ. ಜನರು ಸುಮಾರು ನಾಲ್ಕೈದು ಮೈಲು ದೂರದಿಂದ ನೀರು ತಂದು ಕುಡಿಯುತ್ತಿದ್ದಾರೆ. ಮತ್ತು ಅಲ್ಲಿಯ ಆಹಾರ ಪರಿಸ್ಥಿತಿ ಹೇಗೆ ಇದೆ, ಜನರ ಸ್ಥಿತಿ ಹೇಗೆ ಇದೆ, ಎಷ್ಟು ಅಲ್ಲಿಗೆ ಒದಗಿಸಬೇಕು ಎಂಬುದರ ಅಂದಾಜಿನ ಮೇಲೆ ಒದಗಿಸುತ್ತಾ ಇಲ್ಲ. 1965-66ರಲ್ಲಿ ತುಮಕೂರು ಜಿಲ್ಲೆಗೆ 80,000-90,000 ಚೀಲ ಧಾನ್ಯವನ್ನು ಒದಗಿಸುತ್ತಿದ್ದರು. ಈಗ ನೋಡಿದರೆ, 8-9 ಸಾವಿರ ಚೀಲವನ್ನು ಒದಗಿಸುತ್ತಿದ್ದಾರೆ. ತಾಲ್ಲೂಕಿಗೆ 700-800 ಒದಗಿಸುತ್ತಿದ್ದಾರೆ. 1968ರಲ್ಲಿ ಇದುವರೆಗೂ ಮಳೆಯಾಗಿಲ್ಲ. ಮೂರು ವರ್ಷಗಳಿಂದ ಎಷ್ಟೋ ಕ್ಷಾಮ ಬಂದಿದೆ. ಇವಕ್ಕೆಲ್ಲಾ ದವಸಧಾನ್ಯಗಳನ್ನು ಎಷ್ಟು ಒದಗಿಸಬೇಕು, ಇದಕ್ಕೆ ನ್ಯಾಯನೀತಿ ಏನು ಎಂಬುದು ಈ ಸರ್ಕಾರದಲ್ಲಿ ಇಲ್ಲ. ಇದನ್ನೆಲ್ಲಾ ಇವರು ಯೋಚನೆ ಮಾಡುತ್ತಾ ಇಲ್ಲ. ಆದ್ದರಿಂದ ದೇಶದಲ್ಲಿ ಎಂಥ ಪರಿಸ್ಥಿತಿ ಬಂದಿದೆ, ಎಂದರೆ ನಾವು ಅಲ್ಲಿ ಹೋದರೆ ತಿಳಿಯುತ್ತದೆ. ನಾನು ಕೆಲವು ಕಡೆ ಹೋದಾಗ ರೈತರು ನಿರ್ಗತಿಕರಾಗಿ, ಅವರಲ್ಲಿ ಒಂದು ಹೊತ್ತು ಊಟ ಮಾಡುವ ಶಕ್ತಿಯೂ ಇಲ್ಲ. ಈಗ ಒದಗಿಸಿರತಕ್ಕ ಪರಿಹಾರ ಕಾರ್ಯಗಳ ಪ್ರಕಾರ, ಏನಯ್ಯಾ ನಿಮಗೆ ಆ ಪರಿಹಾರ ಕಾಮಗಾರಿಗಳನ್ನು ಮಾಡುವುದಕ್ಕಾಗುವುದಿಲ್ಲವೇ ಎಂದು ಕೇಳಿದರೆ, ಇಲ್ಲ ಸ್ವಾಮಿ ನಮಗೆ ಅಲ್ಲಿ ಹೋಗಿ ಕೆಲಸ ಮಾಡುವುದಕ್ಕೆ ಶಕ್ತಿ ಕೂಡ ಇಲ್ಲ, ಅಲ್ಲಿ ಮಣ್ಣಿನ ಕೆಲಸ ಮಾಡಿದರೆ ಒಂದು ದಿವಸಕ್ಕೆ ಎಂಟು ಆಣೆ ಕೂಡ ಗಿಟ್ಟುವುದಿಲ್ಲವೆಂದು ಹೇಳುತ್ತಿದ್ದಾರೆ. ಈ ದೃಷ್ಟಿಯಿಂದ ನಾವು ಕೆಲಸ ಮಾಡದೆ, ನಿಜವಾಗಿಯೂ ನಾವು ಯಾವ ರೀತಿ ಜನರಿಗೆ ಸಹಾಯ ಮಾಡಬೇಕೆಂಬುದನ್ನು ವಿಮರ್ಶೆ ಮಾಡಬೇಕು. ಅದನ್ನು ಸರ್ಕಾರ ಮಾಡುತ್ತಿಲ್ಲ. ಆದ್ದರಿಂದ ಸರ್ಕಾರದ ಆಲೋಚನೆ ಏನಿದೆಯೋ ನಮಗೆ ಅರ್ಥವಾಗುವುದಿಲ್ಲ. ಇವರ ನಿಜವಾದ ಧ್ಯೇಯ ಧೋರಣೆಗಳೇನು ಎಂದು ಅರ್ಥವಾಗುವುದಿಲ್ಲ. ದೇಶದಲ್ಲಿರತಕ್ಕ ಪರಿಸ್ಥಿತಿಯನ್ನು ನಿಜವಾಗಿಯೂ ಪರಿಹಾರ ಮಾಡಬೇಕೆಂದು ಇವರ ಮನಸ್ಸಿನಲ್ಲಿಲ್ಲ. ಉದಾಹರಣೆಗೆ

ನಾನು ಒಂದು ಊರಿಗೆ ಹೋದಾಗ, ಅಲ್ಲಿ ಒಬ್ಬ ಮುದುಕ ಕೂತಿದ್ದ, ಅವನನ್ನು ಏಕಪ್ಪಾ ಇಲ್ಲಿ ಕೂತಿದ್ದಿ ಎಂದು ವಿಚಾರಿಸಿದಾಗ, 'ಏನು ಮಾಡುವುದು ಸ್ವಾಮಿ, ಊಟ ಮಾಡದೆ ಮೂರು ನಾಲ್ಕು ದಿವಸವಾಯ್ತು. ಒಂದು ಚೂರು ರೊಟ್ಟಿ ತಿಂದು ನೀರು ಕುಡಿಯಲು ಇಲ್ಲ. ಬರಿ ಹೊಟ್ಟೆಗೆ ನೀರು ಕುಡಿಯಲು ಹೋದರೆ ವಾಂತಿ ಬರುತ್ತದೆ, ಅದನ್ನು ಕೂಡ ತಡಕೊಳ್ಳುವ ಶಕ್ತಿ ಇಲ್ಲದಂತಾಗಿದೆ' ಎಂದು ಹೇಳಿದ. ಇಂಥ ಪರಿಸ್ಥಿತಿಯಲ್ಲಿ ಜನರಿರುವಾಗ ಇದನ್ನು ಬಗೆಹರಿಸುವುದಕ್ಕೆ ಸರ್ಕಾರಕ್ಕೆ ಇದೆಯೇ, ಎಂದು ಕೇಳಿದರೆ, ಇವರಿಗೆ ಖಂಡಿತವಾಗಿಯೂ ಇಲ್ಲ. ಏಕೆಂದರೆ ಇವರಿಗೆ ಬಡವರ ಕಷ್ಟ ಏನು ಎಂಬುದು ಗೊತ್ತಿಲ್ಲ. ಇವರು ಅಲ್ಲಿ ಇಲ್ಲಿ ಹೋದರೆ, ಹೋಗುವುದು ಶ್ರೀಮಂತರ ಮನೆಗಳಿಗೆ, ಸರಿಯಾದ ಪರಿಸ್ಥಿತಿಯನ್ನು ವಿಮರ್ಶೆ ಮಾಡುವುದಿಲ್ಲ. ಇವರನ್ನು ತಂದಿರುವುದು ಕೂಡ ಶ್ರೀಮಂತ ವರ್ಗ. ಆ ವರ್ಗದವರ ಪಾಲನೆಯನ್ನು ಮಾಡುವುದು, ಅವರಿಗೆ ರಕ್ಷಣೆ ಕೊಡುವುದು ಇವರ ಕೆಲಸವಾಗಿರುವಾಗ, ದೇಶದಲ್ಲಿ ನಿಜವಾಗಿ ಏನು ಪರಿಸ್ಥಿತಿ ಇದೆ, ಬಡವನು ಯಾವ ಸಮಸ್ಯೆಗಳನ್ನು ಎದುರಿಸುತ್ತಾನೆಂಬುದು ಇವರಿಗೆ ಗೊತ್ತಾಗುವುದಿಲ್ಲ. ದೇಶದಲ್ಲಿ ಬಂದಿರತಕ್ಕ ಪರಿಸ್ಥಿತಿ ತುಂಬಾ ಕಷ್ಟದಿಂದ ಕೂಡಿದೆ. ಇನ್ನೂ ಸ್ವಲ್ಪ ದಿವಸಗಳೊಳಗೆ ಹೀಗೆ ಕಾಲ ಕಳೆಯುತ್ತಾ ಇದ್ದರೆ, ನೀರಿನ ವ್ಯವಸ್ಥೆಯನ್ನು ಯೋಗ್ಯರೀತಿಯಲ್ಲಿ ಮಾಡದೇ ಇದ್ದರೆ ಮತ್ತು ಯೋಗ್ಯ ಕೂಲಿ ದೊರಕಿಸಿ ಆಹಾರ ಒದಗಿಸದೆ ಇದ್ದರೆ ಬಹಳ ಆಂದೋಳನವಾಗಿ ರಕ್ತಕ್ರಾಂತಿಯಾಗುತ್ತದೆಂಬ ಭಯಂಕರ ಪರಿಸ್ಥಿತಿ ಇದೆ. ಅದರಲ್ಲಿ ಈಗ ಯೋಚಿಸಲಾರದಂಥ ಪರಿಸ್ಥಿತಿ ಇದೆ. ಅಂದಮೇಲೆ ಈಗ ಒಂದು ಸಬ್ ಕಮಿಟಿ ಮಾಡುತ್ತೇವೆಂದು ಹೇಳುವುದು ಸರಿಯಲ್ಲ. ಆದ್ದರಿಂದ ಯಾವ ಕೆಲಸ ಕಾರ್ಯಗಳೂ ವ್ಯವಸ್ಥಿತವಾಗಿ ನಡೆಯುತ್ತಾ ಇಲ್ಲ. ನಮ್ಮಲ್ಲಿ ಒಂದು ಸಾವಿರ ನೀರಾವರಿ ಬಾವಿಗಳಿವೆ. ವಿದ್ಯುಚ್ಛಕ್ತಿಯನ್ನು ಸುಮಾರು 270 ಬಾವಿಗಳಿಗೆ ಮಾತ್ರ ಒದಗಿಸಿದ್ದಾರೆ. ಇದುವರೆಗೂ ವಿದ್ಯುಚ್ಛಕ್ತಿ ಬಂದ ಮೇಲೆ ಮೈನರ್ ಇರ್ರಿಗೇಷನ್ ವರ್ಕ್ಸ್ ನಮ್ಮಲ್ಲಿ ಆಗಿರತಕ್ಕದ್ದು ಬಹಳ ಸ್ವಲ್ಪ. ದೇಶದ ಪರಿಸ್ಥಿತಿಯನ್ನು ವಿಮರ್ಶೆ ಮಾಡಿದರೆ, ಈ ಸರ್ಕಾರದಲ್ಲಿ ಒಂದು ಕಾಗದವೂ ಮುಂದಕ್ಕೆ ಹೋಗುತ್ತಾ ಇಲ್ಲವೆಂದು ಕಾಣುತ್ತದೆ. ಮಾನ್ಯ ಮುಖ್ಯ ಮಂತ್ರಿಗಳಿಗೆ ತೆಂಗಿನ ಅಣೆಕಟ್ಟು ಗಳನ್ನು ಕಟ್ಟಿಸಲು ಒಂದು ಕಾಗದ ಬರೆದಿದ್ದೇನೆ. ಆ ಕಾಗದ ಆ ಜಾಗದಲ್ಲಿಯೇ ನಿಂತಿದೆ ಎಂದಿದ್ದೆ. ಅದರ ಉತ್ತರ ಏನು ಬಂತು ಅಂದರೆ, ಅವರು ಆ ಕಾಗದವನ್ನು ಕೈಗಾರಿಕೆಯ ಮಂತ್ರಿಗಳಿಗೆ ಕಳುಹಿಸಿದ್ದೇನೆಂದು ಹೇಳಿದ್ದಾರೆ. ತೆಂಗಿನ ಅಣೆಕಟ್ಟೆಗಳ ಬಗ್ಗೆ ನಾನು ಪ್ರಶ್ನೆ ಕೇಳಿರುವುದು. ನಾನೇನಾದರೂ ಪೆಪ್ಪರ್‌ಮೆಂಟ್ ಯಾವ ಫ್ಯಾಕ್ಟರಿಯಲ್ಲಿ ತಯಾರು ಮಾಡಿಸಬೇಕೆಂದು ಕೇಳಿದನೇ ! ಇದರಿಂದೇನು ಗೊತ್ತಾಗುತ್ತದೆ ಅಂದರೆ, ಈ ಸರ್ಕಾರಕ್ಕೆ ಯಾವ ಒಂದು ವಿಷಯವನ್ನೂ ಕೂಲಂಕಷವಾಗಿ ತಿಳಿದುಕೊಳ್ಳಬೇಕೆಂಬ ಮನಸ್ಸು ಇಲ್ಲವೆಂದು ಚೆನ್ನಾಗಿ ಅರ್ಥವಾಗುತ್ತದೆ. ಆದ್ದರಿಂದ ಈ ದೇಶದ ಪರಿಸ್ಥಿತಿಯನ್ನು ಸುಧಾರಿಸುವ ಶಕ್ತಿ ಇವರಿಗೆ ಇಲ್ಲವೆಂದು ಹೇಳ ಬೇಕಾಗಿದೆ.

ಇನ್ನು ಕಂದಾಯ ವಸೂಲು ಮಾಡುವ ವಿಷಯ. ಖುಷ್ಕಿ ಕಂದಾಯ ವಸೂಲು ಮಾಡುವುದನ್ನು ಸಸ್‌ಪೆಂಡ್ ಮಾಡಿದ್ದೇವೆ, ಬಾಗಾಯಿತು ಕಂದಾಯವನ್ನು ಮಾತ್ರ ವಸೂಲು ಮಾಡುತ್ತೇವೆಂದು ಹೇಳುತ್ತಾರೆ. ಇನ್ನೂ ಸರಿಯಾಗಿ ನೀರಾವರಿ ವ್ಯವಸ್ಥೆಯನ್ನು ಮಾಡಿಕೊಟ್ಟಿಲ್ಲ. ಸುಮಾರು 3-4 ವರ್ಷಗಳಿಂದ ತೆಂಗಿನ ಫಲ ಇಲ್ಲ. ಈ ವರ್ಷ ಕಂದಾಯ ವಸೂಲು ಮಾಡುತ್ತೇವೆಂದು ಹೇಳುತ್ತಾರೆ. ಈ ವಿಚಾರವನ್ನು ಸರ್ಕಾರದವರು ಯೋಜನಾಬದ್ಧವಾಗಿ, ನ್ಯಾಯವಾಗಿ ವಿಮರ್ಶೆಮಾಡಿಲ್ಲ. ನೀವು ಒಂದು ಕಡೆ ಕಂದಾಯವನ್ನು ಸಸ್ಪೆಂಡ್ ಮಾಡುತ್ತೇವೆಂದು ಹೇಳು ತ್ತೀರಿ. ಇನ್ನೊಂದು ಕಡೆ ಕಂದಾಯ ವಸೂಲು ಮಾಡುತ್ತೇವೆಂದು ಹೇಳುತ್ತೀರಿ. ಮೂರು ವರ್ಷಗಳವರೆಗೆ ಇರತಕ್ಕ ಬಾಕಿ ಕಂದಾಯವನ್ನು ವಸೂಲು ಮಾಡಬೇಕೆಂದರೆ ಅಂತಹ ಯೋಗ್ಯ ಕಾಲ ಬಂದಿಲ್ಲ. ಮುಂದೆ ಬರುವುದಿಲ್ಲ. 10—15 ವರ್ಷಗಳಲ್ಲಿ ಆ ಬಾಕಿ ತೀರಿಸುವ ಹಾಗೆ ಅದನ್ನು ಸುಲಭ ಕಂತುಗಳಲ್ಲಿ ಕೊಡುವ ಹಾಗೆ ಮಾಡಿ. ಐದು ವರ್ಷಗಳ ಕಂದಾಯವನ್ನು ಒಂದೇ ಸಾರಿ ಕೊಡಬೇಕೆಂದರೆ ಬಹಳ ಕಷ್ಟ. ಅದಲ್ಲದೆ ಈಗ ರಿ-ಕ್ಲಾಸಿಫಿಕೇಷನ್ನಿನಲ್ಲಿ ಆಗಿರುವ ಕಂದಾಯವು ಬಹಳ ಜಾಸ್ತಿಯಾಗುತ್ತಿರುವುದರಿಂದ ರೈತನ ಮನೆಯಲ್ಲಿರತಕ್ಕ ಬೆಳ್ಳಿ, ಬಂಗಾರ, ಲೋಹದ ಸಾಮಾನುಗಳು, ತಾನು ಉಳತಕ್ಕ ಎತ್ತುಗಳು ಮತ್ತು ಉಳುವ ಸಾಮಾನುಗಳನ್ನು ಮಾರಿ ಕೊಂಡು, ಇಂತಹ ಒಂದು ಅಭಾವ ಪರಿಸ್ಥಿತಿಯಲ್ಲಿ ಹೇಗಾದರೂ ಮಾಡಿ ತನ್ನ ಜೀವವನ್ನು ಉಳಿಸಿ ಕೊಳ್ಳುವ ಸ್ಥಿತಿಯಲ್ಲಿದ್ದಾನೆ. ಆಖೈರಾಗಿ ತಾನು ವಾಸ ಮಾಡತಕ್ಕ ಮನೆಯನ್ನೂ ಸಹ ಪರ ಭಾರೆಮಾಡಿ ಜೀವನ ಮಾಡುತ್ತಿದ್ದಾನೆ. ಇವತ್ತಿನ ದಿವಸ ನಮ್ಮ ನಡವಳಿಕೆ ಹಾಗೂ ಆಡಳಿತ ದೃಷ್ಟಿಯಿಂದ ಮತ್ತು ಸಮಾಜವಾದ ದೃಷ್ಟಿಯಿಂದ ಸಾಮ್ರಾಜ್ಯಷಾಹಿಗಳೆಂದು ಅನ್ನಿಸಿಕೊಂಡಿರುವ ಈ ಸರ್ಕಾರ ಈ ದೇಶದ ಪರಿಸ್ಥಿತಿಯನ್ನು ಸರಿಪಡಿಸಬೇಕು. ಇವರು ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುತ್ತೇವೆ, ನಾವು ಸಮಾಜವಾದಿಗಳು ಎಂಬುದಾಗಿ ಹೇಳಿದ್ದರೂ ಅದು ಸಾಧ್ಯವಿಲ್ಲ. ಇನ್ನು 100 ವರ್ಷಗಳಾದರೂ ಇದನ್ನು ಸರಿಪಡಿಸುವುದಕ್ಕೆ ಇವರಿಗೆ ಸಾಧ್ಯವಿಲ್ಲ.

(ಶ್ರೀ ಪಿ. ಎಲ್. ಶಿವಪ್ಪ)

ಇನ್ನು 70 ವರ್ಷಗಳ ವಯಸ್ಸಾದವರಿಗೆ, ಅದರಲ್ಲಿಯೂ ಯಾರೂ ದಿಕ್ಕಿಲ್ಲದೆ ಇರುವವರಿಗೆ, ಯಾರಿಗೆ ಯಾವ ಉದ್ಯಮವನ್ನೂ ಮಾಡುವುದಕ್ಕೆ ಶಕ್ತಿ ಇರುವುದಿಲ್ಲವೋ ಅಂತಹವರಿಗೆ ಉಚಿತವಾಗಿ ಆಹಾರ ಸಾಮಗ್ರಿಗಳನ್ನು ಒದಗಿಸಿ ಸರ್ಕಾರದವರು ಸಹಾಯ ಮಾಡುವ ಬಗ್ಗೆ ತಹಸೀಲ್ದಾರ್ ಅದವರು ಒಂದು ಪಟ್ಟಿ ಮಾಡಬೇಕು ಎಂಬುದಾಗಿ ಹೇಳಿದ್ದಾರೆ. ಅದಕ್ಕಾಗಿ ಯಾರೇ ಆಗಲೀ ಕೆಲಸ ಮಾಡಲು ಶಕ್ತಿ ಇಲ್ಲದಂತವರಿಗೆಲ್ಲಾ ಕೊಡಲು ರೆವಿನ್ಯೂ ಮಂತ್ರಿಗಳು ಸಹಾಯ ಮಾಡಬೇಕು. ಆಹಾರ ಮಂತ್ರಿಗಳು ಮತ್ತು ಹಣಕಾಸಿನ ಮಂತ್ರಿಗಳು ಸಾಕಷ್ಟು ಹಣವನ್ನು ಒದಗಿಸಬೇಕು. ಈ ಹಣ ಸಹಾಯವನ್ನು ತಹಸೀಲ್ದಾರರಿಗೆ ಕೊಟ್ಟು ಅವರ ಮೂಲಕ ಅಂತಹ ಜನರಿಗೆ ಸಹಾಯವಾಗುವಂತೆ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಈ ದೇಶದಲ್ಲಿ ಅನೇಕ ಜನರು ಸತ್ತು ಹೋಗುತ್ತಾರೆ. ನಿಮ್ಮವರೆಗೂ ಆ ವರ್ತಮಾನ ಬರುತ್ತದೆ. ಒಂದು ವೇಳೆ ಆ ರೀತಿ ವರ್ತಮಾನ ಬಂದರೆ, ಅದನ್ನು ಸರ್ಕಾರದವರು ಯಾವ ರೀತಿ ಒಪ್ಪಿಕೊಳ್ಳುತ್ತಾರೆಂಬುದೂ ಸಹ ನನಗೆ ಗೊತ್ತಿದೆ. ಇದರಿಂದ ಬಹಳವಾಗಿ ಅನಾಹುತವುಂಟಾಗುತ್ತದೆ.

ಇನ್ನು ತಿಪಟೂರು ತಾಲ್ಲೂಕಿನಲ್ಲಿ ಕುಡಿಯುವ ನೀರಿಲ್ಲದೇ ಇರುವ ಅನೇಕ ಊರುಗಳು ಇವೆ. ಆದ್ದರಿಂದ ಸರ್ಕಾರದವರು ಬೋರ್‌ವೆಲ್ ಮುಖಾಂತರ ಮತ್ತು ಇರತಕ್ಕ ಬಾವಿಗಳನ್ನು ಸರಿಪಡಿಸಿ, ನೀರಿಲ್ಲದೆ ಇರುವ ಕಡೆಗಳಲ್ಲಿರತಕ್ಕ ಜನರಿಗೆ ಹೆಚ್ಚಿಗೆ ನೀರನ್ನು ಒದಗಿಸಬೇಕು. ನೀರಿಗಾಗಿ ಜನ ವಲಸೆ ಹೋಗುವ ಕಡೆಗಳಲ್ಲಿ ಜಲವನ್ನು ಶೇಖರಣೆಮಾಡಿ ಅಲ್ಲಿರತಕ್ಕ ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸಬೇಕು. ಇಂತಹ ಒಂದು ಸನ್ನಿವೇಶದಲ್ಲಿ ಯಾವ್ಯಾವ ಪ್ರದೇಶಗಳಲ್ಲಿ ಅಭಾವವಿದೆ, ಆಯಾ ಪ್ರದೇಶದ ಜನರು ಚೆನ್ನಾಗಿ ಬೆಳೆ ಬೆಳೆದು ಸಂಮೃದ್ಧಿಯಾಗುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಸುಖಕರವಾಗಿ ಜನರು ಬದುಕುವ ಹಾಗಿಲ್ಲ. ದೊಡ್ಡ ಒಂದು ಆಂದೋಳನವೇ ಇದರಿಂದಾಗುತ್ತದೆ. ಯುದ್ಧಕಾಲದ ಪರಿಸ್ಥಿತಿಯಲ್ಲಿ ತ್ವರಿತವಾದ ಕ್ರಮಗಳನ್ನು ತೆಗೆದುಕೊಳ್ಳುವ ಹಾಗೆ ಕ್ಷಾಮ ಬಂದಿರುವ ಸಂದರ್ಭಗಳಲ್ಲಿಯೂ ತೆಗೆದುಕೊಳ್ಳಬೇಕು. ಎಲ್ಲಿ ಸಂವೃದ್ಧಿ ಸ್ಥಳವಿದೆಯೋ ಅಲ್ಲಿಂದ ತಕ್ಕ ಸಹಾಯ ಅಭಾವ ಪ್ರದೇಶಗಳಿಗೆ ಉಂಟಾಗಬೇಕು. ನಮ್ಮಲ್ಲಿ ಮೈನರ್ ಇರ್ರಿಗೇಷನ್ನಿಗಾಗಿ ಕೇವಲ 30 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಒಂದು ತಿಂಗಳಿಗೆ ಸಂಬಳಕ್ಕಾಗಿ ಎಷ್ಟು ಖರ್ಚಾಗುತ್ತದೋ ಗೊತ್ತಿಲ್ಲ. ಕೇವಲ 30 ಸಾವಿರ ರೂಪಾಯಿಗಳನ್ನು ಮಾತ್ರ ಈ ಕೆಲಸಗಳಿಗಾಗಿ ಒದಗಿಸಿದ್ದಾರೆ. ಅಂದಮೇಲೆ ಇಂತಹ ಸಬ್ ಡಿವಿಜನ್ ಏತಕ್ಕೆ ಇರಬೇಕು ? ಇದರಿಂದೇನು ಅನುಕೂಲವಾಗುತ್ತದೆ ? ಕೆರೆಯ ಕೆಲಸಗಳು ಎಷ್ಟು ಆಗಬೇಕಾಗಿತ್ತೋ ಅಷ್ಟು ಆಗಿಲ್ಲ. ಆದ್ದರಿಂದ ಸರ್ಕಾರದವರು ಶಾಶ್ವತವಾದ ಪರಿಹಾರ ಕಾಮಗಾರಿಗಳನ್ನು ಈ ದೇಶದಲ್ಲಿ ಸುಭಿಕ್ಷ ಬರುವವರೆಗೂ ಕೈಗೊಳ್ಳಬೇಕು. ನಿರುದ್ಯೋಗ ರೈತರಿಗೆ ಇದರಿಂದ ಕೂಲಿ ಒದಗಿಸುವ ವ್ಯವಸ್ಥೆಯನ್ನು ಎಲ್ಲಾ ಕಾಲದಲ್ಲಿಯೂ ಮಾಡಬೇಕು.

ಇನ್ನು ತಕಾವಿ ಸಾಲ ಮತ್ತು ಭೂ ಅಭಿವೃದ್ಧಿ ಸಾಲ ಕೊಡುವುದಕ್ಕೆ ಸರ್ಕಾರದಲ್ಲಿ ಹಣವಿಲ್ಲ, ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಬೇಕೆಂದು ಹೇಳುತ್ತಾರೆ. ಸರ್ಕಾರದವರು ಒಂದೂವರೆ ರೂಪಾಯಿನಂತೆ ಬಡ್ಡಿ ನಿಗದಿ ಮಾಡಿದ್ದಾರೆ. ರೈತನಾದವನು ಆ ರೀತಿ ಬಡ್ಡಿಕೊಡಲು ಶಕ್ತಿ ಇಲ್ಲ. ಬಡ್ಡಿ 6 ರೂಪಾಯಿ, 12 ರೂಪಾಯಿಗಳಿಗೆ ಮೇಲ್ಪಟ್ಟು ಹಿಂದೆ ಯಾವಾಗಲೂ ಇರಲಿಲ್ಲ. ಈಗ ಸರ್ಕಾರವೇ ಒಂದೂವರೆ ರೂಪಾಯಿ ಬಡ್ಡಿ ಮಾಡಿದೆ. ಸಾಹುಕಾರರು ಒಂದೂವರೆ ರೂಪಾಯಿನಿಂದ ನಾಲ್ಕು ರೂಪಾಯಿಗಳವರೆಗೆ ಬಡ್ಡಿಯನ್ನು ತೆಗೆದುಕೊಳ್ಳುತ್ತಾರೆ. ಇದರಿಂದ ರೈತನಾದವನಿಗೆ ಬಹಳ ಕಷ್ಟವುಂಟಾಗುತ್ತದೆ. ರೈತ ಹೆಚ್ಚಿಗೆ ಬಡ್ಡಿ ಕೊಡದೇ ಇರುವ ಹಾಗೆ ಅವನು ತನಗೆ ಬೇಕಾದ ಸಾಮಾನುಗಳನ್ನು ಕೊಳ್ಳಲು ಬೇಕಾದ ತಕಾವಿ ಸಾಲ ಮತ್ತು ಭೂ ಅಭಿವೃದ್ಧಿ ಸಾಲಗಳ ಸೌಕರ್ಯವನ್ನು ಒದಗಿಸಿಕೊಡಬೇಕೆಂದು ನಾನು ಸರ್ಕಾರದವರನ್ನು ಪ್ರಾರ್ಥನೆ ಮಾಡುತ್ತೇನೆ.

ಇನ್ನು ಸಾಯಿಲ್ ಕನ್‌ಸರ್‌ವೇಷನ್ ವರ್ಕ್ಸ್ ಬಗ್ಗೆ ಹೇಳುವುದಾದರೆ, ಸಿರಾ ತಾಲ್ಲೂಕಿನಲ್ಲಿ ಮೂರು ಚಾರ್ಜಸ್ ಮಾಡಿದ್ದಾರೆ. ವಿರೋಧ ಪಕ್ಷದ ಅಭ್ಯರ್ಥಿಗಳು ಬಂದಿರುವ ಕಡೆ ಈ ರೀತಿ ಮಾಡಿ ಜನರಲ್ಲಿ ಅವರನ್ನು ಮುಟ್ಠಾಳರು ಎಂದು ಅನ್ನಿಸಬೇಕೆಂದು ಈ ಕೆಲಸ ಮಾಡಿದ್ದಾರೆಯೋ ಏನೋ ಗೊತ್ತಿಲ್ಲ. ತಿಪಟೂರು ತಾಲ್ಲೂಕಿನಲ್ಲಿ ಒಂದು ಚಾರ್ಜು ಇನ್ನೂ ಆಗಿಲ್ಲ. ಸಿರಾದಲ್ಲಿ ಮೂರು ಚಾರ್ಜಸ್ ಈಗ ಇವೆ. ಒಂದು ಸಬ್ ಡಿವಿಜನ್ನಿಗೆ ಒಂದು ಚಾರ್ಜ್ ಕೂಡ ಇಲ್ಲ. ಸಿರಾದಲ್ಲಿ ಮಾತ್ರ ಇದೆ. ನಮ್ಮಲ್ಲಿಯೂ ಅವಕಾಶ ಮಾಡಿಕೊಡುತ್ತೇವೆಂದು ಹೇಳುತ್ತಾರೆ. ತಿಪಟೂರು ತಾಲ್ಲೂಕಿನಲ್ಲಿ ಅದು ಇನ್ನೂ ಬಂದಿಲ್ಲ. ಸಿರಾ ತಾಲ್ಲೂಕಿನಲ್ಲಿ ಮಾಡಿದಂತೆ ತುರುವೇಕೆರೆ,

ಚಿಕ್ಕನಾಯಕನಹಳ್ಳಿ ತಿಪಟೂರು ತಾಲ್ಲೂಕುಗಳಲ್ಲಿ ಒಂದೊಂದು ಚಾರ್ಜನ್ನು ಕೊಟ್ಟು ನಿರುದ್ಯೋಗಿ ಜನರಿಗೆ ಕೂಲಿ ಸಿಗುವ ಹಾಗೆ ವ್ಯವಸ್ಥೆ ಮಾಡಬೇಕು. ಆ ರೀತಿಯಲ್ಲಿ ಜನಗಳನ್ನು ಬದುಕಿಸ ಬೇಕು. ಈ ಆಧುನಿಕ ಸ್ವಾಯಿಲ್ ಕನ್‌ಸರ್‌ವೇಷನ್ನಿನಲ್ಲಿ ಒಂದೊಂದು ತಾಲ್ಲೂಕಿಗೆ ಒಂದೊಂದು ಚಾರ್ಜ್ ಜರೂರಾಗಿ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ನಾಗಪ್ಪ (ಮಂಡ್ಯ).—ಅಧ್ಯಕ್ಷರೇ, ನಮ್ಮ ದೇಶದ ಕೆಲವು ಭಾಗಗಳಲ್ಲಿ ಉಂಟಾಗಿರ ತಕ್ಕ ಅಭಾವ ಪರಿಸ್ಥಿತಿ ಬಗ್ಗೆ ಈ ಸದನದ ಅನೇಕ ಸದಸ್ಯರು ತಂತಮ್ಮ ಅಮೂಲ್ಯವಾದ ಸಲಹೆ ಗಳನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ನಾನು ಹೆಚ್ಚು ಪ್ರಸ್ತಾಪ ಮಾಡದೆ ಒಂದೆರಡು ವಿಷಯಗಳನ್ನು ಮಾತ್ರ ಈ ಸದನದ ಮುಂದೆ ನಿವೇದಿಸುತ್ತೇನೆ.

ಮೊಟ್ಟಮೊದಲನೆಯದಾಗಿ, ಮೈನರ್ ಇರಿಗೇಷನ್ ಕೆಲಸ ಕಾರ್ಯಗಳನ್ನು ಕೈಗೊಳ್ಳುವಾಗ ಒಂದು ಎಕರೆಗೆ ಬೆರೆ ಸಾವಿರ ರೂಪಾಯಿಗಳೆಂದು ಇಂತಹ ಅಭಾವ ಕಾಲದಲ್ಲಿ ಸರ್ಕಾರದವರು ಅನುಸರಿಸುವುದು ಸರಿಯಲ್ಲ. ಇದರಿಂದ ಬಡ ರೈತರಿಗೆ ತುಂಬಾ ಕಷ್ಟವಾಗುತ್ತದೆ. ಮೈನರ್ ಇರಿಗೇಷನ್ ಕೆಲಸ ಕಾರ್ಯಗಳನ್ನು ಆದಷ್ಟು ಜಾಗ್ರತೆಯಾಗಿ ಮಾಡಬೇಕೆಂದು ನಾನು ಸರ್ಕಾರಕ್ಕೆ ಸೂಕ್ತ ಸಲಹೆ ಕೊಡುತ್ತೇನೆ.

ಚರಿತ್ರೆಯನ್ನು ತಿರುವಿ ಹಾಕಿದರೆ ಬಹುಶಃ 60 ವರ್ಷಕ್ಕೆ ಒಂದು ಸಾರಿ ಕ್ಷಾಮ ತಲೆದೋರು ತ್ತದೆ. 1904ನೇ ಇಸವಿಯಲ್ಲಿ ಪ್ರಾರಂಭವಾದ ಕ್ಷಾಮ 1909ರವರೆಗೂ ಇತ್ತು ಎಂದು ನಾನು ಕೇಳಿದ್ದೇನೆ. 19 9ರಲ್ಲಿ ಏನು ಕ್ಷಾಮ ದೇಶದಲ್ಲಿ ಇತ್ತೋ, ಅಭಾವ ಪರಿಸ್ಥಿತಿ ಇತ್ತೋ ಅದಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿ ಇವೊತ್ತು ಅಭಾವ ಇದೆಯೆಂದು ಈಗ ಜೀವಂತರಾಗಿ ಬದುಕಿರತಕ್ಕ ಹಿರಿಯರು ಹೇಳುತ್ತಿದ್ದಾರೆ. ಇತ್ತೀಚೆಗೆ ನಾವು ನೋಡಿದ್ದರಲ್ಲಿ ಈ ಕ್ಷಾಮ ಎನ್ನತಕ್ಕದ್ದು ದೇಶದಲ್ಲಿ ಆಗಿಂದಾಗ್ಗೆ ತಲೆದೋರುತ್ತಿದೆ. ಇದರ ಬಗ್ಗೆ ಶಾಶ್ವತವಾದ ಒಂದು ಕ್ರಮವನ್ನು ತೆಗೆದುಕೊಳ್ಳ ತಕ್ಕ ಯೋಜನೆಯನ್ನು ತಯಾರು ಮಾಡಿ ಅಭಾವವನ್ನು ಹೋಗಲಾಡಿಸುವುದಕ್ಕೆ ಸರ್ಕಾರದವರು ಗಮನಕೊಡಬೇಕು. ಪಾಶ್ಚಿಮಾತ್ಯ ದೇಶದಲ್ಲಿ ಎಲ್ಲೆಲ್ಲಿ ಮಳೆ ಕಡಿಮೆ ಬರುತ್ತದೆಯೋ ಅಂಥಾ ಕಡೆಗಳಲ್ಲಿ ಸರ್ವೆಮಾಡಿ ಬೇರೆ ಬೇರೆ ಯೋಜನೆಗಳನ್ನು ಹಾಕಿಕೊಂಡು ಆ ಪ್ರಾಂತ್ಯದ ಅಭಾವ ಪರಿ ಸ್ಥಿತಿಯನ್ನು ನೀಗುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅದೇ ರೀತಿ ನಮ್ಮ ದೇಶದಲ್ಲಿಯೂ ಕೂಡ ಎಲ್ಲೆಲ್ಲಿ ಮಳೆ ಕಡಿಮೆ ಬೀಳುತ್ತದೆಯೋ ಅಂಥಾ ಪ್ರದೇಶಗಳಿಗೆ ಅಭಾವ ಪರಿಸ್ಥಿತಿಯನ್ನು ನೀಗು ವುದಕ್ಕೆ ಒಂದು ಶಾಶ್ವತ ಪರಿಹಾರವನ್ನು ಒದಗಿಸತಕ್ಕ ಯೋಜನೆಯನ್ನು ಹಾಕಿಕೊಳ್ಳಬೇಕು. ಮತ್ತು ಆ ಪ್ರದೇಶಗಳಲ್ಲಿ ಕೋಳಿ ಸಾಕಾಣಿಕೆ, ಹಂದಿ ಸಾಕಾಣಿಕೆ, ಹಸುಗಳನ್ನು ಸಾಕುವುದು, ಕುರಿ ಗಳನ್ನು ಸಾಕುವುದು ಇಂಥಾ ಯೋಜನೆಗಳನ್ನು ಹಾಕಿಕೊಂಡು ಆ ಪ್ರದೇಶದ ಜನಗಳಿಗೆ ಉದ್ಯೋಗ ವನ್ನು ಕಲ್ಪಿಸಿಕೊಡಬೇಕು.

ಶ್ರೀ ಕೆ. ಎಂ. ತಮ್ಮಯ್ಯ (ಕಡೂರು).—ಪಾಶ್ಚಿಮಾತ್ಯ ದೇಶದಲ್ಲಿ ಎಲ್ಲಿ ಆ ರೀತಿ ಮಾಡಿದ್ದಾರೆ ಎಂಬುದನ್ನು ಸ್ವಲ್ಪ ಹೇಳುತ್ತೀರಾ ?

ಶ್ರೀ ನಾಗಪ್ಪ.—ನಾನು ಅಲ್ಲಿಗೆ ಹೋಗಿ ನೋಡಿಲ್ಲ. ಪಾಶ್ಚಿಮಾತ್ಯ ದೇಶಕ್ಕೆ ನಮ್ಮ ದೇಶ ದಿಂದ ಹೋಗಿ ನೋಡಿಕೊಂಡು ಬಂದಿರುವವರು ಹೇಳತಕ್ಕದ್ದು ಮತ್ತು ಪತ್ರಿಕೆಗಳಲ್ಲಿ ಕೊಡತಕ್ಕ ವಿಷಯಗಳನ್ನು ಓದುವುದರಿಂದ ಈ ವಿಚಾರಗಳು ಗೊತ್ತಾಗುತ್ತದೆ. ಶ್ರೀಮಾನ್ ತಮ್ಮಯ್ಯನವರು ಅಡಿಕೆ ಬೆಳೆಯತಕ್ಕವರು. ಅವರ ಹತ್ತಿರ ದುಡ್ಡು ಬೇಕಾದಷ್ಟು ಇದೆ ಅವರು ಬೇಕಾದರೆ ಪಾಶ್ಚಿ ಮಾತ್ಯ ದೇಶಕ್ಕೆ ಹೋಗಿ ನೋಡಿಕೊಂಡು ಬರಬಹುದು. ಬೋರ್‌ವೆಲ್ ತೆಗೆಯತಕ್ಕ ಮೆಷಿನ್ ಗಳನ್ನು ತರಿಸಿ ಬಾವಿಗಳನ್ನು ತೋಡಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಕುಡಿಯುವ ನೀರಿನ ಬಾವಿಗಳ ಬಗ್ಗೆ ಹೇಳುವುದಾದರೆ ಆ ಬಾವಿಗಳನ್ನು ತೋಡಿಸುವ ಬಗ್ಗೆ ಹಣವನ್ನು ಸರ್ಕಾರದವರೇ ಮಂಜೂರು ಮಾಡಲೀ ತಾಲ್ಲೂಕು ಬೋರ್ಡಿನವರೇ ಮಂಜೂರು ಮಾಡಲೀ ಷೆಡ್ಯೂಲ್ ರೇಟ್ಸ್ ಏನಿದೆ ಅದನ್ನು ರಿವೈಜ್ ಮಾಡುವುದಕ್ಕೆ ಸ್ವಲ್ಪ ಪರಿಶೀಲನೆ ಮಾಡಬೇಕು.

ಈ ಅಭಾವ ಪರಿಸ್ಥಿತಿಯ ಬಗ್ಗೆ ನಮ್ಮ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಮಂಡ್ಯ ಜಿಲ್ಲೆ ಮೈಸೂರು-ಬೆಂಗಳೂರಿಗೆ ಹೋಗತಕ್ಕ ರಸ್ತೆಯ ಮಧ್ಯದಲ್ಲಿದ್ದು ರಸ್ತೆಯ ಪಕ್ಕದಲ್ಲಿ ನೀರಾವರಿ ಪ್ರದೇಶ ಇರುವುದರಿಂದ ಮಂಡ್ಯಾ ಜಿಲ್ಲೆಯಲ್ಲಿ ಅಭಾವ ಇಲ್ಲ ಎನ್ನುವ ಭಾವನೆ ಅನೇಕ ಜನಗಳಲ್ಲಿ ಇದೆ. ಅದಕ್ಕಾಗಿ ಮಾನ್ಯ ಮಂತ್ರಿಗಳು ನಮ್ಮ ಜಿಲ್ಲೆಯಲ್ಲಿ ಪ್ರವಾಸ ಮಾಡಿ ನಮ್ಮ ಜಿಲ್ಲೆಯಲ್ಲಿ ಸ್ಥಿತಿ ಏನಿದೆ ಎಂಬುದನ್ನು ಅರಿತುಕೊಳ್ಳಬೇಕು. ನಮ್ಮ ಮಾನ್ಯ ರೆವಿನ್ಯೂ ಮಂತ್ರಿಗಳು ಮೊನ್ನೆ 3-4 ದಿವಸ ನಮ್ಮ ಜಿಲ್ಲೆಯಲ್ಲಿ ಪ್ರವಾಸ ಮಾಡಿದರು. ಅಲ್ಲಿನ ಪರಿಸ್ಥಿತಿಯನ್ನೆಲ್ಲಾ ಕಣ್ಣಾರೆ ನೋಡಿದರು. ಮೈಸೂರು ಜಿಲ್ಲೆಯಲ್ಲಿ ಜೋಳದ ಮೆದೆಗಳನ್ನಾದರೂ ನೋಡಬಹುದು. ಮಂಡ್ಯಾ

(ಶ್ರೀ ನಾಗಪ್ಪ)

ಜಿಲ್ಲೆಯಲ್ಲಿ ಅದೂ ಕೂಡ ಇಲ್ಲ ಎಂದು ಹೇಳಿದರು. ಎರಡು ಸಾವಿರ ಚಿಲ್ಲರೆ ಹಳ್ಳಿಗಳು ಇರತಕ್ಕ ಮಂಡ್ಯಾ ಜಿಲ್ಲೆಯಲ್ಲಿ ಸುಮಾರು ಒಂದು ಸಾವಿರ ಹಳ್ಳಿಗಳಲ್ಲಿ ಇವೊತ್ತು ಅಭಾವ ಪರಿಸ್ಥಿತಿ ತೀರಾ ಉತ್ಕಟ ಸ್ಥಿತಿಯಲ್ಲಿದೆ. ಅದನ್ನು ಸರ್ಕಾರದವರು ಮನಗಂಡು ನಮ್ಮ ಜಿಲ್ಲೆಯ ಕಷ್ಟದ ಬಗ್ಗೆ ಹೆಚ್ಚಿನ ಹಣ ಸಹಾಯವನ್ನು ಮಾಡಬೇಕು. ಈಗಿನ ಮುಖ್ಯ ಮಂತ್ರಿಗಳು ಹಿಂದೆ ಮರಾಮತ್ ಶಾಖಾ ಸಚಿವರಾಗಿದ್ದರು. ಅವರು ಕೇವಲ 3-4 ತಿಂಗಳಲ್ಲಿ 17 ಲಕ್ಷ ರೂಪಾಯಿಗಳ ಮೈನರ್ ಇರಿಗೇಷನ್ ಕೆಲಸಗಳನ್ನು ಮಂಜೂರು ಮಾಡಿದ್ದಾರೆ. ಸೂಪರಿನ್‌ಟೆಂಡಿಂಗ್ ಇಂಜಿನಿಯರ್, ಚೀಫ್ ಇಂಜಿನಿಯರ್ ಮತ್ತು ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಆ ಕೆಲಸಗಳು ಯಾವಹಂತದಲ್ಲಿದೆ ಎಂದು ಕೇಳಿದರೆ ಅವನ್ನು ಹೇಳುತ್ತಿಲ್ಲ. ಅದಕ್ಕೆ ಟೆಕ್ನಿಕಲ್ ಸ್ಯಾಂಕ್ಷನ್ ಆಗಿಲ್ಲ ಎಂದು ಹೇಳುತ್ತಾರೆ, ಸರ್ವೆ ಮಾಡಬೇಕು ಎಂದು ಹೇಳುತ್ತಾರೆ ಎಸ್ಟಿಮೇಟ್ ಸ್ಯಾಂಕ್ಷನ್ ಆಗಿಲ್ಲ ಎಂದು ಹೇಳುತ್ತಾರೆ ಆ 17 ಲಕ್ಷ ರೂಪಾಯಿಗಳ ಕೆಲಸ ಕಾರ್ಯಗಳನ್ನು ಜಾಗ್ರತೆ ತೆಗೆದುಕೊಳ್ಳಬೇಕು. ಆ ಕೆಲಸಗಳಿಗೆ ಸರ್ಕಾರದವರು ಮಂಜೂರಾತಿ ಕೊಟ್ಟಿದ್ದರೂ ಕೂಡ ಏತಕ್ಕೆ ಆ ಕೆಲಸಗಳನ್ನು ನಿಧಾನ ಮಾಡುತ್ತಿದ್ದಾರೋ ಗೊತ್ತಾಗುವುದಿಲ್ಲ. ಅವುಗಳನ್ನು ತ್ವರಿತವಾಗಿ ತೆಗೆದುಕೊಳ್ಳಬೇಕು. ಇದರ ಜೊತೆಗೆ ಅಭಾವ ಪೀಡಿತ ಪ್ರದೇಶಗಳಲ್ಲಿ ರಿಲೀಫ್ ಕಾಮಗಾರಿಗಳನ್ನು ತೆಗೆದುಕೊಂಡು ಆ ಪ್ರದೇಶದ ಜನಗಳಿಗೆ ಕೂಲಿ ಸಿಕ್ಕುವ ಹಾಗೆ ಸರ್ಕಾರದವರು ವ್ಯವಸ್ಥೆ ಮಾಡಬೇಕು. ಆದ್ದರಿಂದ ಇದರ ಕಡೆ ಸರ್ಕಾರದವರು ಹೆಚ್ಚು ಗಮನ ಹೊಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಕೆ.ಆರ್.ಎಸ್. ಅಚ್‌ಕಟ್ ಪ್ರದೇಶದಲ್ಲಿ ಕೆರೆಗಳು ಏನಿವೆ ಅವುಗಳಿಗೆ ಫೀಡರ್ ಚಾನಲ್ ಮಾಡಬೇಕು. ಹಿಂದೆ ಆ ಪ್ರದೇಶಕ್ಕೆ ಸಂಬಂಧಪಟ್ಟಂತೆ ಒಂದೂವರೆ ಕೋಟಿ ರೂಪಾಯಿಗಳ ಒಂದು ಯೋಜನೆ ತಯಾರಾಗಿತ್ತು. ಅದನ್ನು ಈಗ ಕೈಬಿಟ್ಟಿದ್ದಾರೆ. ಅದರ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡಿಸಿ ಕ್ರಮ ತೆಗೆದುಕೊಳ್ಳಬೇಕು. ಈಬಗ್ಗೆ ಸರ್ಕಾರದವರು ಹಿಂದೆ ಭರವಸೆಯನ್ನು ಕೊಟ್ಟಿದ್ದಾರೆ ಇದನ್ನು ಈಡೇರಿಸಿ ಕೊಡಬೇಕು. ನಮ್ಮ ಜಿಲ್ಲೆಯಲ್ಲಿ ಅನೇಕ ವರ್ಷಗಳಿಂದ ಲ್ಯಾಂಡ್ ರೆವಿನ್ಯೂ ರೆಮಿಷನ್ ಆಗಿಲ್ಲ. ಈಗ ಸುಮಾರು ನಾಲ್ಕು-ಐದು ವರ್ಷಗಳಿಂದ ನಮ್ಮ ಜಿಲ್ಲೆಯಲ್ಲಿ ಅಭಾವ ಪರಿಸ್ಥಿತಿ ಇದೆ. ಬೆಳೆ ಆಗದೆ ಇರುವ ಪ್ರದೇಶಗಳಲ್ಲಿ ಕಂದಾಯವನ್ನು ರಿಮಿಷನ್ ಮಾಡಬೇಕೆಂದು ಕೇಳಿಕೊಂಡರೂ ಇದುವರೆಗೂ ಆ ಪ್ರದೇಶದಲ್ಲಿ ಕಂದಾಯವನ್ನು ರಿಮಿಷನ್ ಮಾಡಿಲ್ಲ. ಆದ್ದರಿಂದ ಸರ್ಕಾರದವರು ಅಭಾವ ಪೀಡಿತ ಪ್ರದೇಶಗಳಿಗೆ ಕಂದಾಯವನ್ನು ವಿನಾಯ್ತಿ ಕೊಡಬೇಕು. ಈಗ ಸರ್ಕಾರದವರು ಹೇಮಾವತಿ ಯೋಜನೆಯ ಅಣೆಕಟ್ಟಿನ ಕೆಲಸವನ್ನು ಕೈಗೊಂಡಿದ್ದಾರೆ. ಅದನ್ನು ತೀವ್ರವಾಗಿ ಮುಗಿಸಿ ಆ ಪ್ರದೇಶದ ಜನಗಳಿಗೆ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡಬೇಕು. ಮತ್ತು ನಾಗಮಂಗಲ, ಕೃಷ್ಣರಾಜಪೇಟೆ, ಮಂಡ್ಯ, ಬಸರಾಳು, ಮದ್ದೂರು ಈ ಪ್ರದೇಶಕ್ಕೆ ಹೇಮಾವತಿ ಅಣೆಕಟ್ಟಿನಿಂದ ನೀರನ್ನು ಪೂರೈಸುವುದಕ್ಕೆ ಸರ್ವೆ ಮಾಡಿದ್ದಾರೆ. ಆದ್ದರಿಂದ ಆ ಅಣೆಕಟ್ಟಿನಿಂದ ಆ ಪ್ರದೇಶಕ್ಕೆ ನೀರನ್ನು ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಈ ಕಾರ್ಯಗಳನ್ನೆಲ್ಲಾ ಸರ್ಕಾರದವರು ಮಾಡಿಕೊಡಬೇಕೆಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಪಿ. ನಾಡಗೌಡ (ಮುಧೋಳ್).—ಮಾನ್ಯ ಸಭಾಧ್ಯಕ್ಷರೇ ಮಾನ್ಯ ಮುಖ್ಯ ಮಂತ್ರಿಗಳು ಈ ಅಭಾವ ಪರಿಸ್ಥಿತಿಯ ಬಗ್ಗೆ ಕೊಟ್ಟ ಹೇಳಿಕೆಯ ಮೇಲೆ ನಾನು ಕೆಲವು ಸಲಹೆ, ಸೂಚನೆಗಳನ್ನು ಮಾಡಲು ಅಪೇಕ್ಷಿಸುತ್ತೇನೆ. ಈ ಮಂತ್ರಿಮಂಡಲ ಹೊಸದಾಗಿ ರಚಿತವಾದ ಕೂಡಲೇ ಬರಗಾಲ ಅವರನ್ನು ಬೆನ್ನಟ್ಟಿಕೊಂಡು ಬಂದಿದೆ. ಹೊಸ ರ್‍ಯಾಂಕಿನ ಮಂತ್ರಿಗಳನ್ನು ಮಂತ್ರಿಮಂಡಲವಲ್ಲಿ ಸೇರ್ಪಡೆ ಮಾಡಿದ್ದಾರೆಂದು ಒಳ್ಳೆಯ ಅಭಿನಂದನೆಯನ್ನು ಮುಖ್ಯ ಮಂತ್ರಿಗಳಿಗೆ ಹೇಳುವಾಗ ಹೊಸ ಮಂತ್ರಿಗಳು ನೀರಿನ ಅಭಾವ ಮತ್ತು ಆಹಾರದ ಅಭಾವವನ್ನು ಎದುರಿಸಬೇಕಾಯಿತು. ಅಭಾವ ಪರಿಸ್ಥಿತಿ ನಮ್ಮ ದೇಶಕ್ಕೆ ಬರತಕ್ಕದ್ದು ಹೊಸದೇನೂ ಅಲ್ಲ. ಪದೇ ಪದೇ ಬರುತ್ತಿದೆ. ಆದರೆ ಮಂತ್ರಿಮಂಡಲಕ್ಕೆ ವಿಚಾರದ ಅಭಾವ ಕಂಡುಬರುತ್ತದೆ. ಷೇಕ್‌ಸ್ಪಿಯರ್ ಹೇಳಿದ ಹಾಗೆ ಮಂತ್ರಿಗಳು ಮಾತನಾಡುವಾಗ ಸ್ವಲ್ಪ ಬಿಗಿಯಾಗಿ ಮಾತನಾಡಬೇಕು. ನುಡಿದರೆ ಮುತ್ತಿನ ಹಾರದಂತಿರಬೇಕು ಎನ್ನುವ ಹಾಗೆ ನಾಲ್ಕು ಮಾತುಗಳನ್ನು ಆಡಬೇಕೇ ಹೊರತು ತಾಸುಗಟ್ಟಲೆ ಮಾತನಾಡಬಾರದು. ಮಂತ್ರಿಗಳು ತಾಸು ಗಟ್ಟಲೆ ಮಾತನಾಡಿದರೆ ಆ ಮಾತನ್ನು ಆದರದಿಂದ ಯಾರೂ ಆಲಿಸುವುದಿಲ್ಲ. ಈ ಅಭಾವ ಪರಿಸ್ಥಿತಿಯ ಕಾಲದಲ್ಲಿ ಮಂತ್ರಿಗಳು ಪ್ರವಾಸ ಮಾಡುವುದನ್ನು ನೋಡಿದರೆ ಇವರ ಸಂಚಾರದಿಂದ ರಾಜ್ಯದ ಬೊಕ್ಕಸವನ್ನೇ ಬರಿದು ಮಾಡುತ್ತಾರೋ ಏನೋ ಅನಿಸುತ್ತದೆ. ಇವೊತ್ತಿನ ಅಭಾವ ಪರಿಸ್ಥಿತಿಯಲ್ಲಿ ಮಂತ್ರಿಗಳು ಸಂಚಾರ ಮಾಡುವಾಗ

ಜನಗಳು ಅವರಿಗೆ ಹಾರ ತುರಾಯಿಗಳನ್ನು ಕೊರಳಿಗೆ ಹಾಕಿ ಆಲಿಂಗನ ಮಾಡುವಾಗ ಮಾನವೀಯತೆ ಇರುವ ಯಾವ ಮಂತ್ರಿಗಳೂ ಅವರ ಕೊರಳಿಗೆ ಹಾರವನ್ನು ಹಾಕಿಸಿಕೊಳ್ಳುವುದಿಲ್ಲ. ಮಂತ್ರಿಗಳು ಗ್ರಾಮಾಂತರ ಪ್ರದೇಶಗಳಲ್ಲಿ ಸಂಚಾರ ಮಾಡುವಾಗ ತಹಶೀಲ್ದಾರರು, ಡೆಪ್ಯುಟಿ ಕಮೀಷನರುಗಳು ಕೊಟ್ಟಂತ ಕಾಗದ ಪತ್ರಗಳನ್ನು ನೋಡಿಕೊಂಡು ಅಲ್ಲಿನ ಪರಿಸ್ಥಿತಿಯನ್ನು ಅಂದಾಜು ಮಾಡುತ್ತಾರೆಯೇ ಹೊರತು ಪ್ರತ್ಯಕ್ಷವಾಗಿ ಅಭಾವಪರಿಸ್ಥಿತಿಯನ್ನು ಅಭ್ಯಾಸ ಮಾಡುವ ದೃಷ್ಟಿ ಅವರಿಗೆ ಇರುವುದಿಲ್ಲ. ಅವರು ಬೆಂಗಳೂರು ಬಿಟ್ಟು ಹೊರಗಡೆ ಹೋಗುವುದು ಶುದ್ಧ ಅನ್ಯಾಯ. ಇವರುಗಳು ಪ್ರವಾಸ ಮಾಡಿಕೊಂಡು ಬರುವುದು ಯಾವ ಹಳ್ಳಿಗಳನ್ನೂ ನೋಡಿಕೊಂಡು ಬರುವುದಕ್ಕಲ್ಲ.

ಉಪಾಧ್ಯಕ್ಷರು.—ಸಭೆ ಈಗ ಉಪಹಾರಕ್ಕಾಗಿ ಅರ್ಧಗಂಟೆ ಕಾಲ ಮುಂದುವರಿಯುತ್ತದೆ.

The House rose at Three of the Clock and re-assembled at Thirty-Four Minutes past Three of the Clock

[MR. DEPUTY SPEAKER in the Chair]

ಶ್ರೀ ಕೆ. ಪಿ. ನಾಡಗೌಡ.—ಈ ರಾಜ್ಯದಲ್ಲಿ ಅಭಾವದ ಪರಿಸ್ಥಿತಿ ಎಲ್ಲಿಯವರೆಗೆ ಇರುತ್ತದೋ ಅಲ್ಲಿಯವರೆಗೆ ಶಕ್ಯವಿದ್ದಷ್ಟು ರಾಜ್ಯದ ಮಂತ್ರಿಗಳು ಅವರ ಸಂಚಾರ ಕಾರ್ಯಕ್ರಮವನ್ನು ರದ್ದು ಪಡಿಸಬೇಕು ಎನ್ನುವುದು ನನ್ನ ಮೊದಲನೇ ಸಲಹೆ. ಏಕೆಂದರೆ ಇವರು ಸಂಚಾರ ಕಾರ್ಯಕ್ರಮಗಳಲ್ಲಿ ಸಾರ್ವಜನಿಕ ಸಭೆಗಳನ್ನು ಏರ್ಪಡು ಮಾಡಿಕೊಂಡು ಇರುವಾಗ ಅಲ್ಲಿಗೆ ಅಸಂಖ್ಯಾತ ಸರಕಾರಿ ಅಧಿಕಾರಿಗಳು ಧಾವಿಸುತ್ತಾರೆ. ಸಣ್ಣ ಊರುಗಳಲ್ಲಿ, ಅಭಾವದಿಂದ ಪೀಡಿತವಾಗಿರುವ ಇಂತಹ ಗ್ರಾಮಗಳಲ್ಲಿ, ಅಲ್ಲಿ ಉಳಿದಿರುವ ಅಲ್ಪ ಸ್ವಲ್ಪ ಆಹಾರಧಾನ್ಯವನ್ನು ಕೂಡ ಇವರುಗಳು ತಿಂದು ಹೋಗಿರುವ ಅನೇಕ ಉದಾಹಣರಣೆಗಳು ನಮ್ಮ ಮುಂದೆ ಬಂದಿರುತ್ತವೆ. ಚೀಲದ ತಳದಲ್ಲಿ ಉಳಿದು ಹೋಗಿರುವ ಕಾಳನ್ನು ಇಲಿಯು ತಿಂದು ಹೋಗುತ್ತಿತ್ತು. ಇಂದು ಹೀಗೆ ಉಳಿದಿರುವ ಕಾಳನ್ನು ಮಂತ್ರಿಗಳೇ ಪ್ರವಾಸ ಬಂದಾಗ ತಿಂದು ಅಲ್ಲಿಯ ಜನತೆಗೆ ಆಹಾರ ಪದಾರ್ಥಗಳು ಸಿಗದಂತೆ ಮಾಡಿರುತ್ತಾರೆ. ಇದರ ಕಡೆಗೆ ಗಮನ ಇಟ್ಟುಕೊಳ್ಳಬೇಕು. ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ಧವೀರಪ್ಪನವರು ಇಲ್ಲಿ ಮಾತನಾಡುತ್ತಾ ಒಂದೊಂದು ಜಿಲ್ಲೆಗೆ ಒಬ್ಬೊಬ್ಬ ಮಂತ್ರಿಗಳೇ ಅಲ್ಲಿನ ಅಧಿಕಾರವನ್ನು ವಹಿಸಿಕೊಳ್ಳಬೇಕು ಹಾಗೂ ಪರಿಹಾರದ ಕಾಮಗಾರಿಗಳನ್ನು ಮಾಡಬೇಕು ಎನ್ನುವ ಸಲಹೆಯನ್ನೂ ಕೊಟ್ಟಿದ್ದಾರೆ. ಆದರೆ ಮಂತ್ರಿಗಳಲ್ಲಿ ಎಂತಹವರಿಗೇ ಕಳುಹಿಸಿ ಅವರಿಗೆ ಪೂರ್ಣ ಅಧಿಕಾರ ಕೊಟ್ಟು ಕಳುಹಿಸಬೇಕು. ಕಳುಹಿಸಬೇಕಾದರೂ ನಮ್ಮ ಸಹಕಾರದ ಮಂತ್ರಿಗಳನ್ನು ಬಿಜಾಪುರಕ್ಕೆ ಮಾತ್ರ ಕಳುಹಿಸಬೇಡಿ. ಏನಾದರೂ ಅಭಾವ ಕಡಿಮೆಯಾಗಬೇಕಾದರೆ ಇಲ್ಲಿ ಸಹಕಾರದ ಮಂತ್ರಿಗಳು ಪ್ರವಾಸ ಬರುವುದರಿಂದ ಅಭಾವ ಹೆಚ್ಚಾಗುತ್ತದೆಯೇ ವಿನಾ ಅದು ಕಡಿಮೆಯಾಗುವುದಿಲ್ಲ. ಇದನ್ನು ನನ್ನ ಪ್ರತ್ಯಕ್ಷ ಅನುಭವದಿಂದ ನಾನು ಇಲ್ಲಿ ಹೇಳುತ್ತಿದ್ದೇನೆ. ಇವರಿಗೆ ಅನೇಕ ಕಾರ್ಯಕ್ರಮಗಳಿರುತ್ತವೆ. ಸೆನೆಟ್ಟು ಮೀಟಿಂಗು, ಕಾಲೇಜು ಕಮಿಟಿ ಮೀಟಿಂಗು ಹೀಗೆ ಅನೇಕ ಕೆಲಸಗಳಿಗೆ ಸರಕಾರದ ಬೊಕ್ಕಸದಿಂದ ಖರ್ಚು ಮಾಡಿ ಖಾಸಗೀ ಸಂಸ್ಥೆಗಳ ಉದ್ಧಾರಕ್ಕಾಗಿ ಪ್ರವಾಸ ಮಾಡುವುದರಿಂದೇನೂ ಪ್ರಯೋಜನವಾಗುವುದಿಲ್ಲ. ಇದನ್ನು ನೋಡಿದರೆ ಈ ಸರಕಾರದಲ್ಲಿ ಸ್ವಾರ್ಥಿಗಳ ಕೈವಾಡ ಮಿತಿಮೀರಿ ಹೆಚ್ಚಾಗಿರುವುದು ಕಂಡುಬರುತ್ತದೆ. ಇನ್ನು ಮೇಲೆ ಪರಿಹಾರದ ಕಾಮಗಾರಿಗಳನ್ನು ಮಾಡುವಾಗ ಎಂತೆಂತಹ ಕಾರ್ಯಗಳಿಗಾಗಿ ಸರಕಾರದ ದುಡ್ಡನ್ನು ಹೇಗೆ ವಿನಿಯೋಗಮಾಡಬೇಕು ಎನ್ನುವುದನ್ನು ಯೋಗ್ಯವಾದ ರೀತಿಯಿಂದ ಇಲ್ಲಿ ನಾವು ವಿಚಾರ ಮಾಡಬೇಕಾಗಿದೆ. ಏಕೆಂದರೆ ಪ್ರಸ್ತುತ ದೇಶಕ್ಕೆ ಬಂದಿರುವ ಈ ಕ್ಷಾಮದ ಪರಿಸ್ಥಿತಿಯನ್ನು ಎದುರಿಸಲು ರಾಜ್ಯದ ಬೊಕ್ಕಸದಲ್ಲಿರುವ ಹಣವನ್ನು ಕೇಂದ್ರದವರ ನೆರವಿನಿಂದ ಬರುವ ಹಣವನ್ನು ಪೋಲು ಮಾಡುವುದರಲ್ಲಿ ಅರ್ಥವಿಲ್ಲ. ಇನ್ನೂ ಹೆಚ್ಚಾಗಿ ಈ ಜನರಿಗೆ ಕೆಲಸವನ್ನು ಒದಗಿಸಿ ಕೊಡಬೇಕಾಗಿದೆ. ಕೆಲಸಗಳನ್ನು ಒದಗಿಸಿಕೊಡುವಂತಹ ದೊಡ್ಡ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕು. ಈ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಭಾರಿ ಕಾಮಗಾರಿಗಳನ್ನು ಆರಂಭ ಮಾಡಬೇಕು. ನಮ್ಮ ರಾಜ್ಯದಲ್ಲಿ ಮಲಪ್ರಭ ಘಟಪ್ರಭ ಮತ್ತೆ ಕೃಷ್ಣಾ, ತುಂಗಭದ್ರಾ ವಗೈರೆ ನದಿಗಳು ಹರಿಯುತ್ತಿವೆ. ಪ್ರತಿವರ್ಷವೂ ಬರುತ್ತಿರುವ ಬರಗಾಲದ ಪರಿಸ್ಥಿತಿಯನ್ನು ನಿವಾರಣೆ ಮಾಡಬೇಕಾದರೆ ಈ ನದಿಗಳಲ್ಲಿ ಹರಿದು ಹೋಗುತ್ತಿರುವ ಹಾಗೂ ವ್ಯರ್ಥವಾಗಿ ಹೋಗುತ್ತಿರುವ ನೀರನ್ನು ಉಪಯೋಗ ಮಾಡಿಕೊಳ್ಳುವ ಒಂದು ವಿಧಾನವನ್ನು ಯೋಚನೆ ಮಾಡಬೇಕು. ಎಲ್ಲ

(ಶ್ರೀ ಕೆ. ಪಿ. ನಾಡಗೌಡ)

ನದಿಗಳ ದಂಡೆಗೂ ಕರೆಂಟು ಸಪ್ಲೈ ಮಾಡಿ ಅಲ್ಲಿ ಆಗುವಂತಹ ಯೋಜನೆಗಳನ್ನು ಆರಂಭ ಮಾಡಬೇಕು. ನೀರಾವರಿ ಬಾವಿಗಳನ್ನು ತೆಗೆಯಲು ಅನುಕೂಲ ಮಾಡಿ ಅದಕ್ಕೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡಬೇಕು. ಇನ್ನು ಯಾವ ಯಾವ ಹಳ್ಳಿಗಳಲ್ಲಿ ಜನರಿಗೆ ಉದ್ಯೋಗ ಸಿಗುತ್ತಿಲ್ಲವೋ ಅಂತಹ ಹಳ್ಳಿಗಳಲ್ಲಿ ಬರಗಾಲದ ಕಾಮಗಾರಿಗಳನ್ನು ಮಾಡುವುದರ ದೆಸೆಯಿಂದ ಏನೂ ಲಾಭವಾಗುವುದಿಲ್ಲ. ಶಾಶ್ವತವಾದ ಕೆಲಸಗಳನ್ನು ಮಾಡುವುದು ಸಾಕಷ್ಟು ಇರುವಾಗ ಅವುಗಳಿಗೆ ಈ ದುಡ್ಡನ್ನು ವಿನಿಯೋಗ ಮಾಡದೇ ಇದ್ದರೆ ಮುಂದೆ ಬರುವ ಬರಗಾಲವನ್ನು ಸುಧಾರಿಸಲಿಕ್ಕೆ ಸಾಧ್ಯವಾಗುತ್ತದೆಯೆ? ಯೋಜನೆಗಳನ್ನೇನೋ ಮಾಡಿದ್ದಾರೆ. ಈ ಯೋಜನೆಗಳ ಬಲೆಯಲ್ಲಿ ಸುಮಾರು ಇಪ್ಪತ್ತು ವರ್ಷಗಳಿಂದಲೂ ಅಭಾವದ ಪರಿಸ್ಥಿತಿಯನ್ನು ನಿವಾರಣೆ ಮಾಡುವುದಕ್ಕೆ ಆಗುತ್ತಿಲ್ಲ. ಜೇಡರ ಹುಳು ಬಲೆ ಮಾಡಿಕೊಂಡು ಅದರೊಳಗೆ ಹೇಗೆ ಸಿಕ್ಕಿಕೊಂಡು ನರಳಾಡುತ್ತಿದೆಯೋ ಅದೇ ರೀತಿ ಯೋಜನೆಗಳ ಬಲೆಯಲ್ಲಿ ನಮ್ಮ ಸರಕಾರ ಸಿಕ್ಕಿಕೊಂಡು ತೊಳಲಾಡುತ್ತಿದೆ. ನೀರಾವರಿ ಯೋಜನೆಗಳೆಂದು ಮಾಡಬೇಕಾದರೆ ಅದಕ್ಕೆ ಎಷ್ಟೋ ವರ್ಷಗಳ ಕಾಲ ಬೇಕಾಗುತ್ತದೆ. ಮೈನರು ಹಾಗೂ ಮೀಡಿಯಂ ಇರಿಗೇಷನ್ ಸ್ಕೀಂಗಳನ್ನು ಖಾಯಂ ಆಗಿ ಮಾಡಬೇಕೆಂದು ಇರುವುದನ್ನು ಮೊದಲಿಗೆ ಆರಂಭ ಮಾಡಬೇಕು, ಎಂದು ನಮ್ಮ ಸ್ವತಂತ್ರ ಪಕ್ಷದ ನಾಯಕರು ಎಷ್ಟೋ ಸಲ ಹೇಳಿದ್ದಾರೆ. ಸಣ್ಣ ಪುಟ್ಟ ಹಾಗೂ ಮಧ್ಯಮ ವರ್ಗದ ಯೋಜನೆಗಳನ್ನು ಎಲ್ಲಿ ಮಾಡಿದರೆ ಅದು ಸಾಧ್ಯವಾಗುತ್ತದೆ ಮತ್ತು ಅಧರಿಂದ ಎಷ್ಟು ಲಾಭವಾಗುತ್ತದೆ ಎನ್ನುವುದನ್ನು ವಿಚಾರ ಮಾಡಿ ಅದನ್ನು ಬೇಗನೆ ಮಾಡುವುದು ಸರಕಾರದ ಮುಖ್ಯ ಕರ್ತವ್ಯ. ಹಾಗಿದ್ದರೂ ಇಷ್ಟು ದಿವಸಗಳಾದರೂ ಯೋಜನೆಯಂತೆ ಯಾವ ಕೆಲಸಗಳೂ ಶೀಘ್ರ ಗತಿಯಿಂದ ನಡೆಯುತ್ತಿಲ್ಲ.

ಈಗ ಘಟಪ್ರಭಾ ಯೋಜನೆಯ ಎಡದಂಡೆಯ ಕಾಲುವೆ ಆಗಿದೆ. ಅದೇ ರೀತಿ ಇನ್ನು ಬಲ ದಂಡೆಯ ಕಾಲುವೆಯನ್ನು ಪ್ರಾರಂಭಮಾಡಿ ಅದರಲ್ಲಿ ನೀರನ್ನು ಕೊಡತಕ್ಕ ಕಾಲಬರಲು ಇನ್ನೂ 3–4 ವರ್ಷಗಳು ಹಿಡಿಯಬಹುದು. ಅಲ್ಲಿ ಸುಮಾರು 30–40 ಮೈಲಿಯುದ್ದ ಕಾಲುವೆಯನ್ನು ಮಾಡಬೇಕಾಗಿದೆ. ಆದುದರಿಂದ ಅಲ್ಲಿ ಆ ಕಾಲುವೆಯನ್ನು ತೋಡಲು ಈಗಲೇ ಈ ಬರಗಾಲದ ಕಾಮಗಾರಿಯಲ್ಲಿ ಕೆಲಸವನ್ನು ಪ್ರಾರಂಭಿಸಿದರೆ ಆ ಕಾಲುವೆಯ ಅಕ್ಕ ಪಕ್ಕದಲ್ಲಿ ಹಾಗೂ ಆ ಪ್ರದೇಶದ ಸುತ್ತಮುತ್ತ ಇರತಕ್ಕ ಜನರಿಗೆ ಒಂದು ಉದ್ಯೋಗವನ್ನು ಒದಗಿಸಿದಹಾಗೆ ಆಗುವುದರ ಜೊತೆಗೆ ಅಲ್ಲಿ ಒಂದು ಶಾಶ್ವತವಾದ ಕಾಮಗಾರಿಯನ್ನು ನಡೆಸಿದಂತಾಗುತ್ತದೆ. ಆದರೆ ಈಗಾಗಲೇ ಗೋಕಾಕದ ಒಬ್ಬ ಕಾಂಗ್ರೆಸ್ ಎಂ.ಎಲ್.ಎ. ಗಳವರು ಬಲದಂಡೆಯ ಕಾಲುವೆಯ ಕೆಲಸವನ್ನು ಈಗಾಗಲೆ ಪ್ರಾರಂಭ ಮಾಡಿದ್ದಾರೆಂದೂ, ಅದನ್ನು ಬಂದ್‌ಮಾಡತಕ್ಕ ವಿಚಾರ ನಡೆಯುತ್ತಿದೆಯೆಂದೂ, ಕಾರಣ ಆ ಪ್ರದೇಶ ಎಡದಂಡೆಯ ಕಕ್ಷೆಯಲ್ಲೇ ಬರುತ್ತದೆಂದೂ ಏನೋ ಒಂದು ವಿಚಾರ ತಿಳಿಸಿದ್ದಾರೆ. ಸರ್ಕಾರದವರು ಬಹುಶಃ ಈ ಒಂದು ಕಾರಣದಿಂದ ಅಲ್ಲಿ ಮೀಡಿಯಂ ಸ್ಕೈಜ್ ಇರಿಗೇಷನ್ ಕೆಲಸ ಕಾರ್ಯಗಳನ್ನು ಕೈಬಿಟ್ಟಿದ್ದಾರೆಂದು ಕಾಣುತ್ತಿದೆ. ಈ ಪ್ರದೇಶ ಬಲದಂಡೆಯ ಕಕ್ಷೆಯಲ್ಲಿ ಬರತಕ್ಕ ಸಂದರ್ಭ ಇರುವುದರಿಂದ ಇಲ್ಲಿ ಆ ಕೆಲಸಗಳನ್ನು ಕೈಗೊಳ್ಳುವುದು ಅನಾವಶ್ಯಕ ಎಂದು ಭಾವಿಸಿದ್ದರೆ ಅದು ಸರಿಯಲ್ಲ. ಅದು ಏತಕ್ಕೆ ಸರಿಯಲ್ಲ ಎಂಬುದನ್ನು ನಾನು ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಆ ಪ್ರದೇಶ ಬಲ ದಂಡೆಯ ಕಕ್ಷೆಯಲ್ಲಿ ಬಂದರೂ ಅಲ್ಲಿ ಮೀಡಿಯಂ ಸ್ಕೈಜ್ ಇರಿಗೇಷನ್ ಕೆಲಸಗಳನ್ನು ನಡೆಸಿದರೆ ಅವು ನಿರುಪಯೋಗವಾಗಲಿಕ್ಕಿಲ್ಲ. ಹಿಡುಕಲ್ ಬಳಿ ಒಂದು ಡ್ಯಾಮನ್ನು ಕಟ್ಟುವುದಕ್ಕೆ ಅವಕಾಶವಿದೆ. ಅದನ್ನು ಕಟ್ಟಿದರೆ ಅಲ್ಲಿ 8 ತಿಂಗಳಿನ ನೀರು ಸರಬರಾಯಿ ಆಗುತ್ತದೆ. ಆ ಪ್ರದೇಶದಲ್ಲಿ ಏನೇ ಆಗಲಿ ಬೇಸಿಗೆಯಲ್ಲಿ 4 ತಿಂಗಳು ಕಾಲ ಮಾತ್ರ ನೀರಿಗೆ ಬಹಳ ದುರ್ಭರ ಪರಿಸ್ಥಿತಿ ಬರುತ್ತದೆಂಬ ಅಂಶವನ್ನು ಎಲ್ಲರೂ ಒಪ್ಪಿದ್ದಾರೆ, ಅದು ಸ್ಪಷ್ಟವಾಗಿ ಎಲ್ಲರಿಗೂ ಗೊತ್ತಿದೆ. ಆದ್ದರಿಂದ ಆ ಕಾಲದಲ್ಲಾದರೂ ಅಲ್ಲಿ ಈ ಒಂದು ನೀರಾವರಿ ಯೋಜನೆಯ ಅನುಕೂಲವಿದ್ದರೆ ಆ ನಾಲ್ಕು ತಿಂಗಳ ಅವಧಿಯಲ್ಲಾದರೂ ನೀರನ್ನು ಬಳಸಿಕೊಂಡು ಗೋಕಾಕದ ಪೂರ್ವಭಾಗದಲ್ಲೂ, ಮುಧೋಳದ ದಕ್ಷಿಣಭಾಗದಲ್ಲೂ ಬೆಳೆಯನ್ನು ತೆಗೆಯಲೂ ಇದರಿಂದ ಅನುಕೂಲವಾಗುತ್ತದೆ. ಹಾಗೇ ಅಲ್ಲಿ ಹರಿಯತಕ್ಕ ಯರವಾಡ ಹಳ್ಳಕ್ಕೆ ಒಂದು ಮೀಡಿಯಂ ಇರಿಗೇಷನ್ ಪ್ರಾಜೆಕ್ಟನ್ನು ಕಟ್ಟಿದರೆ, ಹಿಂದೆ ಅಲ್ಲಿ ಆ ಯೋಜನೆ ಇತ್ತು, ಅಲ್ಲಿ ಬರಗಾಲದ ಕಾಮಗಾರಿಗಳನ್ನೂ ಕೈಗೊಂಡಂತೆ ಆಗುವುದಲ್ಲದೆ ಅಲ್ಲಿ ಒಂದು ಶಾಶ್ವತವಾದ ಕಾಮಗಾರಿಯನ್ನು ಮಾಡಿದಂತಾಗುವುದು. ಆದುದರಿಂದ ಆ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಸಲಹೆಮಾಡುತ್ತೇವೆ. ಇನ್ನು ಲೋಕಾಪುರದ

ಬಳಿಯಲ್ಲಿ ಬಾವಿಗಳನ್ನು ತೋಡಿಸುವುದಕ್ಕೆ ಹೆಚ್ಚಿನ ಅವಕಾಶವಿದೆ. ಅಲ್ಲಿ ಬಾವಿಗಳಲ್ಲಿ ಹೇರಳವಾಗಿ ನೀರಿನ ವರಮಾನವಿದೆ. ಆ ಪ್ರದೇಶಕ್ಕೆ ನೀರಾವರಿ ಯೋಜನೆಗಳು ಯಾವುವೂ ಇಲ್ಲದಿರುವುದರಿಂದ ಇದನ್ನು ಕೈಗೊಳ್ಳಲೇಬೇಕು.

ಇನ್ನು ಬಾವಿಗಳ ವಿಚಾರಕ್ಕೆ ಬಂದರೆ—ಮುಧೋಳ, ಚಿತಕಂಡಿ, ಚಿತ್ರಭಾನುಕಾ, ಭರಿಗಿ ಇತ್ಯಾದಿ ಗ್ರಾಮಗಳಲ್ಲಿ ಕೆಲವು ಕಡೆ ಜನರು ಬಾವಿಗಳನ್ನು ತೆಗೆಯುತ್ತಿದ್ದಂತೆಯೇ ಬುಗ್ಗೆ ಎದ್ದು ಒಂದು ರಂಧ್ರ ದಿಂದ ನೀರು ಧಾರಾಕಾರವಾಗಿ ಹೊರಚಿಮ್ಮುತ್ತಿದೆಯೆಂದೂ ಎರಡು ಯಂತ್ರಗಳಿಂದ ನೀರನ್ನು ಎತ್ತಿ ದರೂ ನೀರು ತಗ್ಗುತ್ತಿಲ್ಲವೆಂದೂ ಜನರು ಹೇಳುತ್ತಿದ್ದಾರೆ. ಅಲ್ಲಿ ಅಕ್ಷಯ ಪಾತ್ರೆಯಂತೆ ನೀರು ಉಕ್ಕಿ ಬರುತ್ತಿದೆಯಂತೆ. ಆದ್ದರಿಂದ ಸರ್ಕಾರದವರು ಅಲ್ಲಿಗೆ ಯಾರನ್ನಾದರೂ ತಜ್ಞರನ್ನು ಕಳುಹಿಸಿ ಆ ಪ್ರವಾಹ ಯಾವ ಕಡೆಯಿಂದ ಬರುತ್ತಿದೆ ಎಂಬುದನ್ನು ವಿಮರ್ಶೆ ಮಾಡಿ ಆ ದಿಕ್ಕಿನಲ್ಲಿ ಇನ್ನೂ ಹಲವಾರು ಬಾವಿಗಳನ್ನು ತೋಡುವುದಕ್ಕೆ ಅವಕಾಶ ಇದೆಯೆ ಎಂಬುದನ್ನು ಪರಿಶೀಲನೆ ಮಾಡಿಸ ಬೇಕು ಎಂದು ಕೇಳಿಕೊಳ್ಳುತ್ತೇನೆ. ಅಲ್ಲಿ ಸರ್ಕಾರದವರು ಸ್ವಲ್ಪ ಆಸಕ್ತಿ ವಹಿಸಿ ಕೆಲಸ ಮಾಡಿದ್ದೇ ಆದರೆ ಮುಂದೆ ಅಲ್ಲಿ ಬರಬೀಳದಂತೆ ಶಾಶ್ವತವಾದ ಪರಿಹಾರಮಾರ್ಗವನ್ನು ಆ ಪ್ರದೇಶಕ್ಕೆ ಒದಗಿಸಿದಂತೆ ಆಗುತ್ತದೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮಂತ್ರಿಗಳು ತಮ್ಮ ಪ್ರವಾಸವನ್ನು ರದ್ದುಗೊಳಿಸಿ ಪ್ರತಿಯೊಂದು ಜಿಲ್ಲೆಯ ಜಿಲ್ಲಾ ಧಿಕಾರಿಗಳಿಗೂ ಆದೇಶ ಕೊಟ್ಟು ಪ್ರತಿಯೊಂದು ಗ್ರಾಮದಲ್ಲಿರತಕ್ಕ ಜನರೂ ನಿರುದ್ಯೋಗಿಗ ಳಾಗಿರುವುದಕ್ಕೆ ಅವಕಾಶಕೊಡದೆ ಅವರಿಗೆ ಉದ್ಯೋಗಗಳನ್ನು ಒದಗಿಸಬೇಕೆಂದೂ ಹಾಗೆ ನಿರುದ್ಯೋಗಿಗಳಾಗಿ ಕಾಲ ಕಳೆಯತಕ್ಕವರ ಬಗ್ಗೆ ಕ್ರಮ ಕೈಕೊಳ್ಳಬೇಕೆಂದೂ ಕೂಡಲೆ ಒಂದು ಆಜ್ಞೆಯನ್ನು ಹೊರಡಿಸಿ ಅವರಿಗೆ ತಾಕೀತ್ ಮಾಡಿದರೆ ಮಂತ್ರಿಗಳು ಯಾವ ಕಡೆಯಲ್ಲೂ ಪ್ರವಾಸ ಮಾಡತಕ್ಕ ಅವಕಾಶವೇ ಇರುವುದಿಲ್ಲ ಎಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಸ್. ವೀರಪ್ಪಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ದೇಶದಲ್ಲಿ ಕ್ಷಾಮಪರಿಸ್ಥಿತಿ ಬಹಳ ಹೆಚ್ಚಾಗಿದೆ ಎಂಬುದಾಗಿ ಇದುವರೆಗೂ ಮಾತನಾಡಿರತಕ್ಕ ಅನೇಕ ಸದಸ್ಯರು ಹೇಳಿದ್ದಾರೆ. ಅವರೆಲ್ಲರೂ ಹೀಗೆ ಮಾತನಾಡಿರತಕ್ಕ ಸಂದರ್ಭದಲ್ಲಿ ಮಲೆನಾಡಿ ನಲ್ಲಿ ವರ್ಷಕ್ಕೆ 150 ಇಂಚುಗಳ ಮಳೆ ಬೀಳತಕ್ಕ ಪ್ರದೇಶದಿಂದ ಬಂದಿರತಕ್ಕ ಸದಸ್ಯನೂ ಕೂಡ ಮಾತನಾಡಬೇಕೇ ಅನ್ನುವಂಥ ಒಂದು ಸಂದೇಹ ಉಂಟಾಗಬಹುದು. ಆದರೆ ಈ ವರ್ಷ ಮಲೆ ನಾಡಿನಲ್ಲಿರತಕ್ಕ ಜನತೆಗೂ ಎಷ್ಟರಮಟ್ಟಿಗೆ ತೊಂದರೆ ಅನಾನುಕೂಲಗಳುಂಟಾಗಿವೆ ಎಂಬುದನ್ನು ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ವರದಿಯಲ್ಲಿ ವಿಶದವಾಗಿ ತಿಳಿಸಿದ್ದಾರೆ. ಅಲ್ಲಿ 150 ಇಂಚ್ ಮಳೆ ಬೀಳತಕ್ಕದ್ದೇನೋ ಸರಿಯೇ. ಆದರೆ ಅದು ಯಾವ ಕಾಲಕ್ಕೆ ಸರಿಯಾಗಿ ಬರಬೇಕೋ ಆ ಕಾಲಕ್ಕೆ ಬಾರದೆ ಯಾವ ಕಾಲಕ್ಕೆ ಅದು ಬರಬಾರದೋ ಆ ಕಾಲಕ್ಕೆ ಬಂದರೇನು ಸಾರ್ಥಕ! ಇದನ್ನು ಅನೇಕರು ಮನಗಾಣದೆ ಮಲೆನಾಡನ್ನು ಪ್ರಶಂಸೆ ಮಾಡಿದ್ದಾರೆ. ಆದಕಾರಣ ನಾನ ಈಗ ಮಲೆನಾಡಿನಲ್ಲಿ ಉಂಟಾಗಿರತಕ್ಕ ಮುಖ್ಯ ತೊಂದರೆಗಳೇನು ಎಂಬುದನ್ನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಸಾಮಾನ್ಯವಾಗಿ ಮಲೆನಾಡಿನಲ್ಲಿ ವರ್ಷದಲ್ಲಿ ಎಷ್ಟು ಮಳೆ ಬೀಳಬೇಕೋ ಅಷ್ಟು ಮಳೆ ಆಗೇ ಆಗುತ್ತದೆ, ಆದುದರಿಂದ ಮಲೆನಾಡು ಯಾವತ್ತೂ ಸುಭಿಕ್ಷವಾಗಿರುತ್ತೆ ಎಂಬ ಒಂದು ಭಾವನೆ ಜನರಲ್ಲಿ ಬರತಕ್ಕದ್ದು ಸ್ವಾಭಾವಿಕ. ಆದರೆ ಅಲ್ಲಿಯ ವಾಸ್ತವಾಂಶ ಬೇರೆ ಆಗಿದೆ. ಯಾವ ಕಾಲಕ್ಕೆ ಮಳೆ ಬರಬೇಕೋ ಆ ಕಾಲಕ್ಕೆ ಬಾರದೆ, ಬೇಡವಾದ ಕಾಲದಲ್ಲಿ ಮಳೆ ಬಿದ್ದುದರಿಂದ ಅಲ್ಲಿಯ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಅದನ್ನು ಸರ್ಕಾರದವರು ಅರಿತು ಕೊಂಡು ಅಲ್ಲಿಗೂ ನೆರವನ್ನು ನೀಡಿ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮಲ್ಲಿ ಬರತಕ್ಕ ಈ ಕ್ಷಾಮವನ್ನು ಶಾಶ್ವತವಾದ ರೀತಿಯಲ್ಲಿ ಪರಿಹಾರಮಾಡುವುದಕ್ಕೆ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಕೈಗೊಳ್ಳಬೇಕಾಗಿದೆ. ಅದಕ್ಕಾಗಿ ನಮ್ಮ ಕೂಗು ಕೇಂದ್ರ ಸರ್ಕಾರಕ್ಕೆ ಸರಿಯಾಗಿ ಮುಟ್ಟುವಂತೆ ಆಗಲೆಂದು ಇಲ್ಲಿ ಒಂದು ನಿರ್ಣಯವನ್ನು ಮಾಡತಕ್ಕ ಬಗ್ಗೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಈ ಒಂದು ಚರ್ಚೆಯನ್ನು ಇಲ್ಲಿ ಇಟ್ಟುಕೊಂಡಿದ್ದಾರೆಂದು ನಾನು ಭಾವಿಸಿ ದ್ದೇನೆ. ನಾವು ಇಲ್ಲಿ ನಿರ್ಮಾಣ ಮಾಡತಕ್ಕ ಅಣೆಕಟ್ಟುಗಳಿಗೆ ಹಾಗೂ ಇಲ್ಲಿ ಕೈಗೊಳ್ಳಬೇಕಾದ ಲಿಫ್ಟ್ ಇರಿಗೇಷನ್ ಯೋಜನೆಗಳ ಬಗ್ಗೆ ಸಾಕಷ್ಟು ಹಣವನ್ನು ಕೇಂದ್ರ ಸರ್ಕಾರದವರಿಂದ ಪಡೆದು ಕೊಳ್ಳಲು ಸರ್ವ ಪ್ರಯತ್ನಗಳನ್ನೂ ಮಾಡಲೇಬೇಕು. ಆದರೆ ಈ ವಿಚಾರದಲ್ಲಿ ಕೇಂದ್ರ ಸರ್ಕಾರದವರು ಸಾಕಷ್ಟು ಗಮನ ಕೊಡುತ್ತಿಲ್ಲ. ಅವರು ಕೇವಲ ಒಂದು ತಾತ್ಕಾಲಿಕ ಪರಿಹಾರಕ್ಕಾಗಿ ಈ ರಾಜ್ಯಕ್ಕೆ ಒಂದೆರಡು ಕೋಟಿ ರೂಪಾಯಿಗಳನ್ನು ಕೊಟ್ಟರೆ ಸಾಕೆಂಬ ಭಾವನೆ ಇಟ್ಟುಕೊಂಡು ಸಹಾಯ ಮಾಡುತ್ತ ಬಂದುದರಿಂದಲೇ ಇಲ್ಲಿ ಕ್ಷಾಮ ಪದೇ ಪದೇ ಬರುವುದಕ್ಕೆ

(ಶ್ರೀ ಕೆ. ಎಸ್. ವೀರಪ್ಪಗೌಡ)

ಅವಕಾಶವಾಯಿತು. ಇದುವರೆಗೂ ಇಲ್ಲಿ ಯಾವ ಒಂದು ಶಾಶ್ವತವಾದ ಪರಿಹಾರಕಾರ್ಯಗಳನ್ನೂ ಕೈಗೊಳ್ಳುವುದಕ್ಕಾಗಲಿಲ್ಲ. ಮೇಲಾಗಿ ನಮ್ಮ ಸರ್ಕಾರದವರೂ ಕೂಡ ಮಲೆನಾಡನ್ನು ಇಲ್ಲಿಯವರೆಗೂ ಅಲಕ್ಷ್ಯಮಾಡಿದ್ದರಿಂದ ಅಲ್ಲಿ ಸಣ್ಣನೀರಾವರಿ ಕಾಮಗಾರಿಗಳನ್ನೂ ಕೂಡ ಮಾಡಲಿಲ್ಲ. ಇಲ್ಲಿಯವರೆಗೆ ಅಲ್ಲಿ ಸಣ್ಣಪುಟ್ಟ ಕೆರೆಕಟ್ಟೆಗಳನ್ನಾದರೂ ಮಾಡಿಸಿದ್ದರೆ ಈ ದಿವಸ ಅಲ್ಲಿರತಕ್ಕ ಜನರು ತಮಗೆ ಆಗುವಷ್ಟು ದವಸ ಧಾನ್ಯಗಳನ್ನು ಬೆಳೆದುಕೊಂಡು ರಾಜ್ಯದ ಇತರ ಭಾಗಗಳಿಗೂ ಸಹಾಯ ಮಾಡಬಹುದಾಗಿತ್ತು. ಆದುದರಿಂದ ಸರ್ಕಾರದವರು ಇನ್ನಾದರೂ ದುಡ್ಡನ್ನು ರಾಜ್ಯದ ಯಾವ ಭಾಗದಲ್ಲಿ ವಿಶೇಷ ಮಳೆ ಬೀಳುವುದಿಲ್ಲವೋ ಅಲ್ಲಿ ಖರ್ಚುಮಾಡದೆ, ಆ ಹಣವನ್ನು ವಿಶೇಷವಾಗಿ ಮಳೆ ಬೀಳತಕ್ಕ ಮಲೆನಾಡಿನಲ್ಲಿ ಖರ್ಚುಮಾಡುವುದು ಒಳ್ಳೆಯದೆಂದು ಸಲಹೆ ಮಾಡುತ್ತೇನೆ. ಏನೋ ಕ್ಷಾಮ ಪರಿಹಾರ ಕಾರ್ಯಗಳನ್ನು ನಡೆಸಬೇಕು ಎಂಬ ಒಂದೇ ಒಂದು ಉದ್ದೇಶ ಇಟ್ಟುಕೊಂಡು ದುಡ್ಡನ್ನೆಲ್ಲಾ ಮಳೆಬಾರದ ಕಡೆ ವೆಚ್ಚಮಾಡುವುದಕ್ಕಿಂತ ಮಳೆ ಬೀಳತಕ್ಕ ಕಡೆ ಖರ್ಚುಮಾಡಿದರೆ ಇಂಥ ಕ್ಷಾಮಕಾಲದಲ್ಲಿ ಆ ಮಲೆನಾಡಿನಿಂದಲಾದರೂ ಒಂದು ಹೆಚ್ಚಿನ ನೆರವನ್ನು ರಾಜ್ಯ ಪಡೆಯುವುದಕ್ಕೆ ಅವಕಾಶವಿರುತ್ತದೆಂಬುದನ್ನು ಸರ್ಕಾರದವರು ಮನಗಾಣಬೇಕು. ಮೈದಾನ ಭಾಗದಲ್ಲೆಲ್ಲ ಹಣವನ್ನು ಖರ್ಚುಮಾಡಿದ್ದಾಗ್ಯೂ ಅದು ಒಂದು ಖಾಯಂ ಪರಿಹಾರಮಾರ್ಗ ಎಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ರಾಜ್ಯದಲ್ಲಿ ಎಲ್ಲಿ ಯಾವ ಕಾರ್ಯ ಮಾಡಿದರೆ ಅದರಿಂದ ರಾಜ್ಯಕ್ಕೆ ಒಂದು ಖಾಯಂ ಅನುಕೂಲ ಉಂಟಾಗುತ್ತದೆಂದು ಭರವಸೆ ಇದೆಯೋ ಅಲ್ಲಿ ಹೆಚ್ಚು ಹಣವನ್ನು ಖರ್ಚುಮಾಡಬೇಕು. ಉದಾಹರಣೆಗೆ ಹೇಳುವುದಾದರೆ ಲಿಫ್ಟ್ ಇರಿಗೇಷನ್ ಸ್ಕೀಂ ಏನಿದೆ ಇದನ್ನು ಕಾರ್ಯಗತಗೊಳಿಸುವುದಕ್ಕೆ ಮಲೆನಾಡಿನಲ್ಲಿ ಇರುವಷ್ಟು ಅನುಕೂಲಗಳು ಇನ್ನೆಲ್ಲೂ ಇರುವುದಿಲ್ಲ. ಆದುದರಿಂದ ಅಲ್ಲಿ ಈ ಯೋಜನೆಗೆ ಆದ್ಯತೆ ಕೊಟ್ಟು ಬಾವಿಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡಿದರೆ ಅಲ್ಲಿ ಸಾಕಷ್ಟು ಆಹಾರ ಧಾನ್ಯಗಳನ್ನು ಬೆಳೆಸುವುದ ಕ್ಕೆ ಅವಕಾಶವಾಗುವುದು. ಕ್ಷಾಮ ಬಂದಾಗ್ಯೂ ಅದನ್ನು ತಡೆಗಟ್ಟುವುದಕ್ಕೆ ಇದೊಂದು ಶಾಶ್ವತವಾದ ಮಾರ್ಗ. ಆದುದರಿಂದ ಸರ್ಕಾರದವರು ಅಲ್ಲಿ ಈ ಸೌಕರ್ಯಗಳನ್ನು ಒದಗಿಸುವುದಕ್ಕೆ ಕೂಡಲೆ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು.

ಇನ್ನು ನಮ್ಮ ಮಲೆನಾಡಿನಲ್ಲಿ ಕಾಡನ್ನು ಕಡಿಯತಕ್ಕ ಯೋಜನೆ ಇದೆಯೇ ವಿನಾ ಕಾಡನ್ನು ಬೆಳೆಸತಕ್ಕ ಯೋಜನೆ ಇಲ್ಲ. ಆದ್ದರಿಂದಲೇ ಅಲ್ಲಿ ಕಾಡನ್ನು ವಿಶೇಷವಾಗಿ ಕಡಿದುಹಾಕಿದ್ದರಿಂದ ಅಲ್ಲಿ ಮಳೆ ಬಾರದಂತಾಯಿತು.

ಇವತ್ತು ನಮ್ಮಲ್ಲಿ ಸಾಕಾದಷ್ಟು ಕಾಡು ಪ್ರದೇಶ ಇರುವುದರಿಂದ 150 ಇಂಚು ಮಳೆ ಆಗಬೇಕಿತ್ತು, ಒಂದು ಕಡೆ ಮಳೆ ಆಗದೇ ಅಭಾವವಾಗಿದೆ, ಮತ್ತೊಂದು ಕಡೆ ಯಾವ ಜಮೀನೂ ಕೂಡ ಕಾಡಿಗಾಗಿ ಬಿಡುವುದಕ್ಕೆ ಅವಕಾಶವಿಲ್ಲದಂತಾಗಿ ಅದನ್ನೆಲ್ಲಾ ಜನರಿಗೆ ಸಾಗುವಳಿಗೆ ಕೊಡತಕ್ಕ ಕ್ರಮ ಬಂದಿದೆ, ಅದನ್ನು ತಪ್ಪಿಸಬೇಕು. ಇವತ್ತು ಭದ್ರಾ ಪ್ರಾಜೆಕ್ಟು ಆಗಿರುವುದು ತಮಗೆ ಗೊತ್ತಿದೆ. ಭದ್ರಾ ಪ್ರಾಜೆಕ್ಟ್‌ನಲ್ಲಿ ನಾಲೆಗಳನ್ನು ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ತಯಾರು ಮಾಡಿದ್ದಾರೆ. ಅಲ್ಲಿರತಕ್ಕ ಎಲ್ಲ ಪ್ರದೇಶವೂ ಕೂಡ ಸಾಗುವಳಿಗೆ ಇನ್ನೂ ಬಂದಿಲ್ಲ. ಅಲ್ಲಿಗೆ ಹೋಗುವುದಕ್ಕೆ ಜನಗಳು ತಯಾರಾಗಿಲ್ಲ, ಹೀಗಾಗಿ ಕಾಡನ್ನು ಬೆಳೆಸತಕ್ಕ ನೀತಿ ಸಂಪೂರ್ಣವಾಗಿ ಹೊರಟು ಹೋಗುತ್ತಾ ಇದೆ, 171 ಚದುರ ಮೈಲಿ ಇರತಕ್ಕ ನಮ್ಮ ತಾಲ್ಲೂಕಿನಲ್ಲಿ ಒಂದು ಲಕ್ಷ 9367 ಎಕರೆ ಪ್ರದೇಶ ಸಾಗುವಳಿಗೆ ಇದೆ, ಅದರಲ್ಲಿ 11,164 ಎಕರೆ ಸಾಗುವಳಿಯಾಗಿದೆ ಸುಮಾರು 90 ಪರ್ಸೆಂಟಿಗಿಂತಲೂ ಹೆಚ್ಚು ಸಾಗುವಳಿಯಾಗದೇ ಇರತಕ್ಕ ಜಮೀನು ಇದೆ. ಅಂತಹ ಕಡೆ ಸಾಗುವಳಿಗೆ ಜಮೀನು ಬೇಕೆಂದು ದರಖಾಸ್ತು ಕೊಟ್ಟರೆ ದರಖಾಸ್ತನ್ನು ಮಂಜೂರು ಮಾಡಿ ಹೆಚ್ಚು ಆಹಾರ ಧಾನ್ಯ ಬೆಳೆಯಲು ಅವಕಾಶ ಮಾಡಿಕೊಡಬೇಕು. ಸೊಪ್ಪಿನ ಬೆಟ್ಟದ ನೆಪದಲ್ಲಿ ಸಾವಿರಾರು ದರಖಾಸ್ತುಗಳು ಮಂಜೂರಾಗದೇ ನಿಂತುಹೋಗಿದೆ. ಸುಸೂತ್ರವಾಗಿ ದರಖಾಸ್ತು ಮಂಜೂರಾಗುವುದಿಲ್ಲ. ಮಲೆನಾಡಿನಲ್ಲಿ ಈ ಒಂದು ಹೊಸ ಸಂದರ್ಭ ವುಂಟಾಗಿ ತೊಂದರೆಯಾಗುತ್ತಾ ಇದೆ, ಇದನ್ನು ಪರಿಹಾರ ಮಾಡಬೇಕು. ನಮ್ಮ ದೇಶದಲ್ಲಿ ಶಾಶ್ವತವಾದ ಕ್ಷಾಮ ನಿವಾರಣಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಎಲ್ಲಿ ನೀರಿನ ವ್ಯವಸ್ಥೆಯಿದೆ. ನಾಲೆಗಳ ವ್ಯವಸ್ಥೆ ಇದೆ ಅಲ್ಲಿರತಕ್ಕ ಜಮೀನುಗಳೆಲ್ಲಾ ಸಾಗುವಳಿಗೆ ಬರಲೇಬೇಕು ಅಲ್ಲಿ ಆಹಾರವನ್ನು ಬೆಳೆದು ಜನರಿಗೆ ಒದಗಿಸುವುದಕ್ಕೆ ಅವಕಾಶವಿರಬೇಕು. ಕ್ಷಾಮ ಪರಿಹಾರದ ನಿಟ್ಟಿನೊಳಗೆ ಮಲೆನಾಡಿನ ಡಿಸ್ಟ್ರಿಕ್ಟ್‌ಗಳಿಗೆ ಯಾವ ಅವಕಾಶವೂ ದೊರಕುತ್ತಿಲ್ಲ ಎಂಬುವಂತಹ ಸಂದರ್ಭದಲ್ಲಿ ಶಾಶ್ವತವಾದ ಯೋಜನೆಗಳನ್ನು ಹಾಕಿಕೊಂಡು ಕೇಂದ್ರಸರ್ಕಾರದ ಗಮನವನ್ನು

ಸಾಕಾದಷ್ಟು ಸೆಳೆಯಬೇಕು. ಈಗಾಗಲೆ ಹೇಳಿದಹಾಗೆ 3—4 ವರ್ಷಗಳಿಂದಲೂ ನಾವು ನಮ್ಮ ದೇಶದಲ್ಲಿ ಈ ಒಂದು ಅಭಾವ ಪರಿಸ್ಥಿತಿಯನ್ನು ಎದುರಿಸುತ್ತಾ ಇದ್ದೇವೆ, ತಾತ್ಕಾಲಿಕವಾದ ಪರಿಹಾರವನ್ನು ನೀಡುತ್ತೇವೆ, ಕೆರೆ ಮಾಡಿ, ರಸ್ತೆ ಮಾಡಿ ಕೂಲಿ ಸಿಕ್ಕರೆ ಆಯಿತು ಎಂದು ಹೇಳಿ ಆ ಮಟ್ಟದಲ್ಲಿ ಒಂದೆರಡು ಕೋಟಿ ರೂಪಾಯಿ ಕೇಂದ್ರದವರು ಕೊಡುತ್ತಾರೆ ಅದನ್ನು ನೀವು ಖರ್ಚು ಮಾಡುತ್ತೀರಿ. ಅಲ್ಲಿಗೆ ಮುಗಿಯಿತು. ಮುಂದಕ್ಕೆ ಯಾವ ವಿಧವಾದ ಸಹಾಯವನ್ನೂ ಪಡೆಯುತ್ತಾ ಇಲ್ಲ. ಆದ್ದರಿಂದ ಕೇಂದ್ರ ಸರ್ಕಾರದವರಿಗೆ ಮೈಸೂರು ಸರ್ಕಾರದವರು ಇಲ್ಲಿನ ಪರಿಸ್ಥಿತಿಯನ್ನು ಅರಿವು ಮಾಡಿಕೊಟ್ಟು ಈ ಅಭಾವ ಪರಿಸ್ಥಿತಿಗೆ ಖಾಯಂ ಆಗಿರತಕ್ಕ ಪರಿಹಾರ ಕಾರ್ಯಗಳನ್ನು ಕೈ ಕೊಳ್ಳಬೇಕೆಂದು ಹೇಳುತ್ತೇನೆ. ಸರ್ಕಾರದವರು ಇವತ್ತು ನಮ್ಮ ಮುಂದೆ ಇಟ್ಟಿರುವ ನಿರ್ಣಯ ಅತಿ ಮುಖ್ಯವಾದದ್ದು. ಕೇಂದ್ರ ಸರ್ಕಾರದವರಿಗೆ ಒತ್ತಾಯಪಡಿಸಬೇಕು, ನಮಗೆ ಎಲ್ಲಿ ಅಣೆಕಟ್ಟು ಆಗಬೇಕೆಂದು ಅವಶ್ಯಕತೆ ಇದೆಯೋ ಅದಕಾಗಿ ಹಣವನ್ನು ಜಾಗ್ರತೆಯಾಗಿ ಒದಗಿಸಿಕೊಡಬೇಕೆಂದು ಕೇಳುವುದು ಸ್ವಾಭಾವಿಕವಾಗಿದೆ. ಆ ರೀತಿ ಕೇಳಬೇಕೆಂದು ಪ್ರಾರ್ಥಿಸುತ್ತೇನೆ.

ಅಧಿಕಾರಿಗಳ ವಿಷಯದಲ್ಲಿ ಇದೇ ಸಭೆಯಲ್ಲಿ ಅನೇಕರು ಮಾತನಾಡಿದ್ದಾರೆ. ಕೇಂದ್ರ ಸರ್ಕಾರದವರ ಗಮನವನ್ನು ಇದರ ಬಗ್ಗೆ ಎಳೆಯಬೇಕೆಂಬುದು ಇದರ ಉದ್ದೇಶವೇ ಹೊರತು ಇಲ್ಲಿರತಕ್ಕ ವ್ಯವಹಾರಗಳನ್ನು ಸರಿಪಡಿಸುವುದಕ್ಕೆ ಬೇರೆ ಅವಕಾಶವಿದೆ. ಮಂತ್ರಿಗಳಾಗಲಿ ಅಥವಾ ಅಧಿಕಾರಿಗಳಾಗಲಿ ಅವರ ವಿಷಯದಲ್ಲಿ ಇಷ್ಟೊಂದು ತೀವ್ರವಾಗಿ ಮಾತನಾಡುವುದು ಸರಿಯಾಗುವುದಿಲ್ಲ. ಸ್ವಾಮಿ ನಾನೂ ಕೂಡ ತಾಲ್ಲೂಕು ಬೋರ್ಡಿನ ಪ್ರೆಸಿಡೆಂಟಾಗಿದ್ದೇನೆ. ಯಾರು ತಪ್ಪು ಮಾಡಿದ್ದಾರೆ ಅವರನ್ನೇ ಕರೆದು ಅಂತಹ ಕೆಲಸಕ್ಕೆ ಹೋಗಬೇಡಿ ಎಂದು ಒಳ್ಳೆಯ ಮಾತಿನಿಂದ ಹೇಳಿದರೆ ಸರಿಪಡಿಸಿಕೊಳ್ಳುತ್ತಾರೆ. ಆ ರೀತಿ ಒಳ್ಳೆಯ ಮಾತನ್ನು ಆಡತಕ್ಕ ಶಕ್ತಿಯೇ ನಮ್ಮಲ್ಲಿ ಇಲ್ಲವೇನೋ ಎಂದು ನನಗೆ ಅನಿಸುತ್ತದೆ. ಆ ರೀತಿಯ ಮನೊಭಾವ ನಮ್ಮಲ್ಲಿ ಕಮ್ಮಿಯಾಗಿದೆ. ಯಾರಾದರೂ ಅಧಿಕಾರಿಗಳು ಕೆಟ್ಟವರು ಇದ್ದರೆ ಅವರನ್ನು ಒಳ್ಳೆಯ ದಾರಿಗೆ ತರುವುದಕ್ಕೆ ಪ್ರಯತ್ನ ಪಡಬೇಕು, ಅದನ್ನು ಬಿಟ್ಟು ಅಧಿಕಾರಿಗಳಿಗೆ ಶಿಕ್ಷೆ ಮಾಡಬೇಕು, ಫೈನ್ ಹಾಕಬೇಕು ಹಾಗೆ ಹೀಗೆ ಅಂತ ಅವರನ್ನು ಬಯ್ಯುವುದು ಸರಿಯಲ್ಲ, ನಮ್ಮ ಕ್ಷೇತ್ರದಲ್ಲ ಕೆಲಸ ಮಾಡುತ್ತಾ ಇರುವಾಗ ದಿನಚರಿಯಲ್ಲಿ ನಮ್ಮ ರೈತರ ವಿಷಯದಲ್ಲಿ ಈ ತರಹ ತೊಂದರೆ ಮಾಡುತ್ತಾರೆ ಅಂದಾಗ ನೇರವಾಗಿ ಅವರ ಹತ್ತಿರ ಹೋಗಿ ಮಾತನಾಡಿ, ಒಂದುವೇಳೆ ಅವರನ್ನು ಸರಿಪಡಿಸುವುದಕ್ಕೆ ಸಾಧ್ಯವಾಗದಿದ್ದರೆ, ಸರ್ಕಾರದವರಿಗೆ ಬರೆದು ಇಂತಹ ಅಧಿಕಾರಿ ಇಂತಹ ಉತ್ತರ ಕೊಟ್ಟಿದ್ದಾರೆ ಅದು ಸರಿಯೇ ಎಂದು ಕೇಳಬಹುದು. ಅದನ್ನು ಬಿಟ್ಟು ಯಾವಾಗಲೂ ಟೀಕೆ ಮಾಡುವುದು ಸರಿಯಲ್ಲ. ಸರ್ಕಾರದವರನ್ನು ಟೀಕೆ ಮಾಡಬೇಕು ಅನ್ನುವ ಉದ್ದೇಶಕ್ಕಾಗಿಯೇ ಟೀಕೆ ಮಾಡುವುದು ಕೆಲವರ ಸ್ವಭಾವ, ನಾವೆಲ್ಲರೂ ಕೂಡ ಅಧಿಕ್ಕಾರಿಗಳನ್ನು ಧರ್ಮಿಷ್ಟರು, ಸತ್ಯವಂತರನ್ನಾಗಿ ಮಾಡುವುದಕ್ಕೆ ಪ್ರಯತ್ನ ಪಟ್ಟರೆ ಅವರೂ ನಮ್ಮ ಜೊತೆಗೆ ಬೆರೆತು ನಮ್ಮ ದೇಶಕ್ಕೆ ಒಳ್ಳೆಯದಾಗುತ್ತದೆ, ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಉಪಾಧ್ಯಕ್ಷರೇ, ಮುಖ್ಯ ಮಂತ್ರಿಗಳು ಈ ರಾಜ್ಯದಲ್ಲಿ ಉಂಟಾಗಿರುವ ಅಭಾವ ಪರಿಸ್ಥಿತಿಯ ಬಗ್ಗೆ ಈ ಸಭೆಯಲ್ಲಿ ಚರ್ಚೆ ಮಾಡಬೇಕೆಂದು ಇಲ್ಲಿ ತಂದಿರತಕ್ಕ ನಿರ್ಣಯದ ಮೇಲೆ ವಿಪುಲವಾಗಿ ಚರ್ಚೆಯಾಗಿದೆ. ವಿರೋಧ ಪಕ್ಷದ ಮಾನ್ಯ ಸದಸ್ಯರು, ಆಳುವ ಪಕ್ಷದ ಸದಸ್ಯರು ಈ ಅಭಾವ ಪರಿಸ್ಥಿತಿಯ ಕಳವಳವನ್ನು ಗಮನಿಸಿ ಅನೇಕ ಸೂಚನೆ, ಸಲಹೆಗಳನ್ನು ಕೊಟ್ಟಿದ್ದಾರೆ, ಅತಿವೃಷ್ಟಿ ಅನಾವೃಷ್ಟಿ ಇಂತಹ ಸಮಸ್ಯೆಗಳು ಮನುಷ್ಯ ಕೃತ ಅಲ್ಲ ಅನ್ನುವ ಕಾರಣದಿಂದಲೂ ಈ ಸಮಸ್ಯೆಯನ್ನು ಪಕ್ಷಾತೀತವಾಗಿ ನೋಡಬೇಕು, ರಚನಾತ್ಮಕವಾದ ಸಲಹೆಗಳನ್ನು ನೀಡಬೇಕು ಎಂದು ಹೇಳಿ ಅಭಿಪ್ರಾಯಪಡಲಾಗಿದೆ. ಈಗ 1965-66, 66-67 ರಿಂದ ಒಂದೇ ಸಮನೆ ಈ ರಾಜ್ಯದಲ್ಲಿ ಒಂದಲ್ಲಾ ಒಂದು ಪ್ರಕಾರ ಅನಾವೃಷ್ಟಿ ಒಂದು ಅಭಾವ ಪರಿಸ್ಥಿತಿ ಇದೆ ಅನ್ನುವುದು ಸರ್ಕಾರದವರಿಗೆ ಗೊತ್ತು ಅದನ್ನು ಒಪ್ಪಿಕೊಂಡಿದ್ದಾರೆ ಮತ್ತು ಈ ವರ್ಷ ಸ್ವಲ್ಪ ಮುಂಚಿತವಾಗಿಯೇ ಶ್ರೀಮಾನ್ ನಿಜಲಿಂಗಪ್ಪನವರು ಕೇಂದ್ರದವರಿಗೆ ಪತ್ರ ಬರೆದು ಈ ವಿಷಯದಲ್ಲಿ ಹಣ ಕೇಳಿದ್ದಾರೆ. ನಂತರದಲ್ಲಿ ಕೇಂದ್ರದವರು ನೇಮಕ ಮಾಡಿರತಕ್ಕ ಯೋಜನಾ ಆಯೋಗದ ಅಡ್ವೈಸರ್ ಆಗಿರತಕ್ಕ ಶ್ರೀಮಾನ್ ಸಾಠೆಯವರು ಈ ರಾಜ್ಯಕ್ಕೆ ಬಂದು, ವಿಚಾರಗಳನ್ನು ನೋಡಿದ್ದಾರೆ, ಸರ್ಕಾರದವರು ಅವರಿಗೆ ಒಂದು ಮನವಿಯನ್ನೂ ಕೂಡ ಸಲ್ಲಿಸಿ ಕೆಲವು ವಿಷಯಗಳನ್ನು ಅವರ ಗಮನಕ್ಕೆ ತಂದಿದ್ದಾರೆ. ಆ ದೃಷ್ಟಿಯಿಂದ ಸರ್ಕಾರದವರಿಗೆ ಈ ವರ್ಷವೂ ಮಳೆ ಬೀಳತಕ್ಕ ಪರಿಸ್ಥಿತಿ ಉತ್ತಮವಾಗಲಾರದು ಎನ್ನತಕ್ಕ ಭಯ ಮೊದಲೇ ಇತ್ತು ಎನ್ನುವುದು

(ಶ್ರೀ ಎಸ್. ಗೋಪಾಲಗೌಡ)

ಗೊತ್ತಾಗುತ್ತದೆ. ಈ ಮೆಮೋರ್ಯಾಂಡಂನ 35ನೇ ಪುಟದಲ್ಲಿ ಹೇಳಿರುವ ಪ್ರಕಾರ ಯಾವ್ಯಾವ ತಿಂಗಳು ಎಷ್ಟೆಷ್ಟು ಜನರಿಗೆ ಕೆಲಸ ನೀಡಬಹುದಾಗಿತ್ತು, ನೀಡಬೇಕಾಗಬಹುದು ಎಂಬ ವಿಷಯದಲ್ಲಿ ಹೇಳುತ್ತಾ, ಏಪ್ರಲ್, ಮೇ, ಜೂನ್, ಜುಲೈ, ಅಗಸ್ಟ್, ಸೆಪ್ಟಂಬರ್, ನವಂಬರ್ ಹೊತ್ತಿಗೆ ಒಂದು ಲಕ್ಷ ಜನ ಅಂತ ಹೇಳಿ 25 ಲಕ್ಷ ರೂಪಾಯಿ ಬೇಕಾಗಬಹುದು ಎಂದು ಹೇಳಿದ್ದಾರೆ. ಈಗ ಸೆಪ್ಟಂಬರ್ ತಿಂಗಳಿನಲ್ಲಿದ್ದೇವೆ. ಅಕ್ಟೋಬರ್, ನವಂಬರ್ ಇನ್ನೂ ಎರಡು ತಿಂಗಳು ಈ ಪರಿಸ್ಥಿತಿ ಇರಬಹುದು.

4-00 P.M.

ಕೆಲವು ಕಡೆ ಮಳೆ ಬರಬಹುದು, ಕೆಲಸ ಸಿಕ್ಕಬಹುದು, ಬೆಳೆ ಸ್ವಲ್ಪಮಟ್ಟಿಗೆ ಉತ್ತಮವಾಗಿರ ಬಹುದು ಒಂದು ಆಧಾರದಮೇಲೆ ಸರ್ಕಾರದವರು ಕೆಲವು ಅಂಕಿಅಂಶಗಳನ್ನು ಶೇಖರಿಸಿದ್ದಾರೆ. ಅದನ್ನು ಸರಕಾರದವರು ವಾಸ್ತವ ಪರಿಸ್ಥಿತಿಯನ್ನು ನೋಡಿ ಸಂಗ್ರಹಿಸಿದ್ದರೂ ಕೂಡ, ಸರಕಾರದ ವರು ಕೆಲಸಮಾಡುವುದಕ್ಕೇನು ಆರಂಭಿಸಿದ್ದಾರೆ, ಅದರಿಂದ ದೊರೆಯುವ ಫಲ, ಅವರ ಶೌರ್ಯ, ಸಹಾನುಭೂತಿ, ಬಹಳ ಸಹಾಯಮಾಡಬೇಕೆಂದು ಕಳಕಳಿಯಿಂದ ಹೇಳುವುದು ಇದೆಲ್ಲವನ್ನೂ ನೋಡಿದರೆ ಅವರಿಗೆ ಈ ವಿಷಯದ ಬಗ್ಗೆ ಕಳಕಳಿ ಇದೆ ಎಂಬಂತೆ ಕಾಣುತ್ತದೆ. ಆದರೆ ಹೋದ ವರ್ಷ ಅಥವಾ ಅದರ ಹಿಂದಿನ ವರ್ಷ ಏನು ರಿಲೀಫ್ ಕಾಮಗಾರಿ ನಡೆಸಿದ್ದಾರೆ ಅದಕ್ಕಿಂತ ವಿಶೇಷವಾಗಿ ಈ ವರ್ಷ ಏನೂ ಕಂಡುಬರುತ್ತಿಲ್ಲ. ಕೇಂದ್ರ ಸರಕಾರದಿಂದ ಹಣ ಬರಬೇಕಾಗಿದೆ, ನಿಜ. ಅದಕ್ಕೆ ಸಾಕಷ್ಟು ಅಂಕಿಅಂಶ ಸಂಗ್ರಹಿಸಿರುವುದು ನಿಜ, ಈ ವಿಷಯದಲ್ಲಿ ನನ್ನ ಭಿನ್ನಾಭಿ ಪ್ರಾಯವಿಲ್ಲ. ಇಂಥ ಸಂದರ್ಭದಲ್ಲಿ ಕೇಂದ್ರ ಸರಕಾರದವರು ರಾಜ್ಯ ಸರಕಾರಕ್ಕೆ ಸಾಕಾದಷ್ಟು ಹಣಕಾಸಿನ ನೆರವನ್ನು ನೀಡಬೇಕಾದ್ದು ಅದರ ಕರ್ತವ್ಯವಾಗಿದೆ. ಅದನ್ನು ಅವರು ನಿರ್ವಹಿಸಲೇ ಬೇಕು. ನಾನೂ ಮತ್ತು ಸಿದ್ದವೀರಪ್ಪನವರು ಮೊನ್ನೆ ಕಾನಕಾನಹಳ್ಳಿ ತಾಲ್ಲೂಕಿಗೆ ಹೋಗಿದ್ದೆವು. ಅಲ್ಲಿ ದಾರಿಯುದ್ದಕ್ಕೂ ನಾವು ನೋಡಿದ್ದೇನೆಂದರೆ ಒಣಗಿ ನಿಂತಿರುವ ರಾಗಿ ಪೈರು, ಕಬ್ಬು, ನೀರಿಲ್ಲದೆ ತಳ ಕಾಣುತ್ತಿರುವ ಕೆರೆಗಳು, ಈ ದೃಶ್ಯವನ್ನು ನಾವು ನೋಡಿದೆವು. ಕೆಲವು ಕಡೆ ರಿಲೀಫ್ ಕೆಲಸ ಗಳಲ್ಲಿ ತೊಡಗಿರುವ ಕೂಲಿ ಜನಗಳಿದ್ದರು. ಶಿವಮೊಗ್ಗ ಜಿಲ್ಲೆ ಬತ್ತದ ಕಣಜ, ಹೆಚ್ಚುವರಿ ಜಿಲ್ಲೆ, ಅಲ್ಲಿನ ಜನರು ಸುಖಿಗಳು, ಬಹಳವಾಗಿ ಬೆಳೆಯುತ್ತಾರೆ ಎಂಬ ಅಭಿಪ್ರಾಯವಿದೆ. ಆದರೆ ಅಲ್ಲಿ ನವರ ಮೇಲೆ ವಿಶೇಷ ಹೊರೆ ಹಾಕುವುದು, ಕಂದಾಯ ಹೆಚ್ಚಿಸುವುದು ಇತ್ಯಾದಿ ವಿಚಾರ ಸರಕಾರ ದಲ್ಲಿದೆ. ಶಿವಮೊಗ್ಗಾಕ್ಕೆ ನಾನು ನಿನ್ನೆ ಹೋಗಿದ್ದೆ. ಅಲ್ಲಿ ಮಘೆ ಮಳೆ ಮತ್ತು ಪುಬ್ಬ ಮಳೆ ಸರಿ ಯಾಗಿ ಬಾರದಿದ್ದರೆ ಬತ್ತ ಹೊಡೆ ಆಗುವಾಗ 15-20 ದಿವಸ ಮಘೆ ಮಳೆ ಬಾರದಿದ್ದರೆ ಕೈಗೆ ಬಂದ ಫಸಲು ಕೂಡ ನಷ್ಟವಾಗುತ್ತದೆ. ಅದು ರಾಮಕೃಷ್ಣ ಹೆಗಡೆಯವರಿಗೆ ಗೊತ್ತಿರಬಹುದು. ಕಾರ ವಾರದ ಪರಿಸ್ಥಿತಿಯನ್ನು ನಾಡಕರ್ಣಿಯವರು ಹೇಳಿದರು. ಶಿವಮೊಗ್ಗ ಜಿಲ್ಲೆಯಲ್ಲಿ ಕೆಲವು ಭಾಗ ಮಳೆಯ ನೀರಿನಿಂದ ಆಗುವುದಿದೆ, ಕೆಲವು ಭಾಗದಲ್ಲಿ ಭದ್ರಾ ಮತ್ತು ತುಂಗಾ ನಾಲೆ ಇದೆ, ಕೆರೆ ಕೆಲವು ಭಾಗದಲ್ಲಿದೆ. ಈ ವರ್ಷ ಬೆಂಕಿ ರೋಗ ತಗಲಿ ನೀರಾವರಿ ಅಚ್ಚುಕಟ್ಟು ಪ್ರದೇಶದಲ್ಲಿ ಇದ್ದ ಬೆಳೆ ಕೈಗೆ ಸಿಕ್ಕದಹಾಗಾಗಿದೆ, ಕೆಲವು ಕಡೆ ಪೆಸ್ಟ್ಸ್ ಬಂದಿವೆ ಎಂದು ಹೇಳುತ್ತಾರೆ. ಇತರ ಕೆಲವು ಪ್ರದೇಶಗಳ ವಿಚಾರ ಹೇಳಿದ್ದಾರೆ, ಅದನ್ನು ನಾನು ಚಿತ್ರಿಸಬೇಕಾಗಿಲ್ಲ. ಅದು ಎಲ್ಲರಿಗೂ ಗೊತ್ತಿದೆ. ಸರಕಾರ ಹೇಳಿರುವಂತೆ 174 ತಾಲ್ಲೂಕುಗಳಲ್ಲಿ ನೂರರಲ್ಲಿ ಅನಾವೃಷ್ಟಿ ಪರಿಸ್ಥಿತಿ ಇದೆ. 25 ಸಾವಿರ ಹಳ್ಳಿಗಳಲ್ಲಿ ಸುಮಾರು 13 ಸಾವಿರ ಹಳ್ಳಿಗಳ ಸ್ಥಿತಿ ಚಿಂತಾಜನಕವಾಗಿದೆ. ಇದರಿಂದ ಸುಮಾರು 21 ಲಕ್ಷ ಜನರು ಈ ಒಂದು ಕಾರಣದಿಂದ ತೀವ್ರ ಭೀತಿಗೊಳಗಾಗಿದ್ದಾರೆ. ಈ ಚಿತ್ರವನ್ನು ಸರಕಾರ ಒಪ್ಪಿಕೊಂಡಿದೆ. ಈಗ ನಾನು ವಿಶೇಷವಾಗಿ ಸಾಮಾನ್ಯ ವಿಷಯಗಳನ್ನು ಚರ್ಚಿಸಿ ಸಭೆಯ ಕಾಲ ವನ್ನು ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. 20 ವರ್ಷಗಳ ಆಡಳಿತದಲ್ಲಿ ಒಂದು ದೊಡ್ಡ ತಪ್ಪನ್ನು ಸರಕಾರದವರು ಮಾಡಿದ್ದಾರೆ. ಅದನ್ನು ಅವರು ಒಪ್ಪಿಕೊಳ್ಳಬೇಕು. ಎಲ್ಲಿಯತನಕ ಈ ದೇಶದ ಬೇಸಾಯ ವರುಣ ಮತ್ತು ಇಂದ್ರನ ಕೃಪೆಯಮೇಲೆ ನಿಂತಿರುತ್ತದೆಯೋ ಅಲ್ಲಿಯ ತನಕ ಈ ದೇಶದಲ್ಲಿ ಒಂದಲ್ಲ ಒಂದು ರಾಜ್ಯದಲ್ಲಿ ಅತಿವೃಷ್ಟಿ ಅಥವಾ ಅನಾವೃಷ್ಟಿಯಿಂದ ಬೆಳೆ ಕಳೆದುಕೊಳ್ಳುವುದು ಇದ್ದೇ ಇರುತ್ತದೆ. ಇದು ಸಾಮಾನ್ಯವಾಗಿ ಎಲ್ಲರ ಅಭಿಪ್ರಾಯವಾಗಿದೆ, ತಜ್ಞರೂ ಈ ಅಭಿಪ್ರಾಯ ಸೂಚಿಸಿದ್ದಾರೆ. ಸಾಮಾನ್ಯ ಜನರದೂ ಇದೇ ಅಭಿಪ್ರಾಯವಿದೆ. ಇದಕ್ಕೆ ಪರಿಹಾರವೇನೆಂದರೆ ಸಾಧ್ಯವಾದಮಟ್ಟಿಗೆ ಇರತಕ್ಕ ನೀರನ್ನು ಉಪಯೋಗಿಸಿಕೊಳ್ಳಲು ವಿಶೇಷ ಪ್ರಯತ್ನವನ್ನು ಭಗೀರಥ ಪ್ರಯತ್ನ ಎಂದು ಹೇಳುವುದನ್ನು ಮಾಡಬೇಕು. ಸರಕಾರದ

ವರು ತಾವು ಮಾಡುತ್ತಿರುವುದೂ ಭಗೀರಥ ಪ್ರಯತ್ನವೆಂದು ಸಮಾಧಾನದಿಂದ ಇದ್ದಾರೆ. ಭಕ್ರಾನಂಗಲ್ ಡ್ಯಾಂ, ತಂಗಭದ್ರ ಮುಂತಾದ ಬೃಹತ್ ಯೋಜನೆಗಳನ್ನು ಮಾಡಿರುವುದಾಗಿ ಹೇಳುತ್ತಾರೆ. ಆದರೆ ಒಂದು ವಿಷಯಕ್ಕೆ ಗಮನ ಸೆಳೆಯುತ್ತೇನೆ. ಭದ್ರಾ ಪ್ರಾಜೆಕ್ಟನ್ನು ಯಾವಾಗ ಆರಂಭಿಸಿ ಎಷ್ಟಕ್ಕೆ ಅಂದಾಜು ಮಾಡಿದರು, ಎಷ್ಟು ಖರ್ಚುಮಾಡಿ ಅದರ ನೀರನ್ನು ಎಷ್ಟು ದಿವಸಗಳಲ್ಲಿ ಉಪಯೋಗಿಸಲು ಕೊಟ್ಟರು, ಅದೇ ರೀತಿ ತುಂಗಭದ್ರ, ಘಟಪ್ರಭ, ಮಲಪ್ರಭ, ನುಗು ಅಣೆಕಟ್ಟು ಮುಂತಾದುವುಗಳಿಗೆ ಸಂಬಂಧಪಟ್ಟಂತೆ ಆಗಿರುವ ಅನಾಹುತ ಇದೆಲ್ಲವನ್ನೂ ನೋಡಬಹುದು. ಬ್ರಿಟಿಷರು ಈ ದೇಶಬಿಡುವಾಗ ಸೇಕಡ 5-6 ರಷ್ಟು ನೀರಾವರಿ ಇತ್ತು. ನೀವು ಬಹಳ ಚೆನ್ನಾಗಿ ಕೆಲಸಮಾಡಿರುವುದಾಗಿ ಹೇಳುತ್ತೀರಿ. 20 ವರ್ಷಗಳಲ್ಲಿ ಸೇಕಡ ಮೂರರಷ್ಟು ಜಾಸ್ತಿಮಾಡಲು ಸಾಧ್ಯವಾಗಿದೆ. ಇನ್ನೂ 20-25 ಪರ್ಸೆಂಟ್ ಪೊಟೆನ್ಷಿಯಲ್ ಇದೆ ಎಂದು ಹೇಳುವುದನ್ನು ಉಪಯೋಗಿಸುವುದಕ್ಕೆ ಎಷ್ಟು ವರ್ಷಬೇಕು ಎಂಬುದನ್ನು ಲೆಕ್ಕ ಹಾಕಬಹುದು. ಮಾತನಾಡುವಾಗ ದೊಡ್ಡ ಯೋಜನೆಗಳನ್ನು ಕೈಕೊಂಡಿದ್ದೇವೆ, ಎಲ್ಲಾ ಕಡೆಯೂ ಉದ್ಯಮಗಳನ್ನು ಸ್ಥಾಪಿಸಿದ್ದೇವೆ ಎಂದು ದೊಡ್ಡದಾಗಿ ಹೇಳುತ್ತಾರೆ. ಆದರೆ ಪರಿಸ್ಥಿತಿ ನೋಡಿದರೆ ಸರಕಾರದ ವೈಫಲ್ಯತೆ ಕಂಡುಬರುತ್ತದೆ. ಇದು ಚಾರಿತ್ರಿಕ ವೈಫಲ್ಯತೆಯಲ್ಲ. ಇಂದು ಸಣ್ಣ ನೀರಾವರಿಗೆ ಬಹಳ ಗಮನ ಕೊಡುತ್ತಿದ್ದಾರೆ. ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಬೋರ್ಡಿಗೆ ಹೋಗುವುದು ಇದ್ದೇ ಇದೆ. ಯೋಜನೆಗಳನ್ನು ನಡೆಸುವ ವೇಗ ನೋಡಿದರೆ ಈ ದೇಶದಲ್ಲಿ ಕಾಲಕಾಲಕ್ಕೆ ಬರುವ ಅನಾವೃಷ್ಟಿ ಮತ್ತು ಅನಾಹುತವನ್ನು ತಪ್ಪಿಸಲು ಸಾಧ್ಯವೇ ? ಜನರನ್ನು ಈ ಅನಾಹುತದಿಂದ ಪಾರುಮಾಡಲು ಈಗ ನಡೆಸುತ್ತಿರುವ ಕೆಲಸದಿಂದ ಸಾಧ್ಯವೇ ? ಇದನ್ನು ನೋಡಿದರೆ ಸಾಧ್ಯವಿಲ್ಲವೆಂದು ಕಾಣುತ್ತದೆ. ಯಾರೂ ಪ್ರಾಮಾಣಿಕವಾಗಿ ಇಲ್ಲದೆ ಹೋದರೆ ಇದಕ್ಕೆ ಇದೇ ಪರಿಹಾರ ಎಂದು ಯಾರೂ ಹೇಳಲಾರರು. ಮುಖ್ಯವಾಗಿ ಸಣ್ಣ ನೀರಾವರಿ ಕೆಲಸ, ಹೂಳು ತೆಗೆಸತಕ್ಕದ್ದು, ಪ್ರತಿಯೊಂದು ಕಡೆ ಇರುವ ನೀರನ್ನು ಪೋಲಾಗದಂತೆ ಕಾಪಾಡಿಕೊಳ್ಳತಕ್ಕದ್ದು ಮುಖ್ಯವಾದುದು. ಗುಲ್ಹಾಟಿ ಆಯೋಗದವರು ನೀರಿನ ಬಗ್ಗೆ ಒಂದು ಮಾತನ್ನು ಹೇಳಿದರು. ನೀರು ಬಹಳ ಅಪರೂಪವಾದ, ಪ್ರಕೃತಿ ಕೊಟ್ಟಿರತಕ್ಕ ಅಮೂಲ್ಯವಾದ ವಸ್ತು. ಇದನ್ನು ಕಣಕಣ ಕೂಡಿಟ್ಟುಕೊಳ್ಳಬೇಕು. ದುರ್ವ್ಯಯ, ದುಂದುವೆಚ್ಚ ಸಾಧ್ಯವಿಲ್ಲ, ಎನ್ನುವ ಮಾತನ್ನು ಹೇಳಿದ್ದಾರೆ. ಆ ಆಯೋಗ ಬಂದು ಹೋದ ಮೇಲೂ ರಾಜ್ಯ ಸರ್ಕಾರದವರು ಈ ವಿಷಯವನ್ನು ಮನಗಂಡು ಪ್ರಯತ್ನ ಮಾಡಿದ್ದಾರೆ ಎಂದು ನನಗನ್ನಿಸುವುದಿಲ್ಲ. ವರ್ಷೇ ವರ್ಷೇ ಏನೋ ಅಂಕಿಸಂಖ್ಯೆ ಇಟ್ಟುಕೊಂಡಿದ್ದಾರೆ ; ಹೋದ ವರ್ಷ 5 ಸಾವಿರ ಪಂಪ್‌ಸೆಟ್ ಎನರ್ಜೈಸ್ ಮಾಡಿದೆವು, ಈ ವರ್ಷ 5,300, ಮುಂದಿನ ವರ್ಷ 5,600 ಮಾಡಿದರೆ ಸಾಕು, ಹೀಗೆ ಏನೋ ಒಂದು ಬೇಸಿಸ್, ಒಂದು ಸಂಖ್ಯೆ ಇರುತ್ತದೆ. ಅದಕ್ಕಿಂತ ಸ್ವಲ್ಪ ಜಾಸ್ತಿ ಮಾಡಿದರೆ ನಾವು ಧನ್ಯರು ಎನ್ನುವ ಅಭಿಪ್ರಾಯದಿಂದ ಸರ್ಕಾರ ನಡೆಯುತ್ತಿದ್ದ ಹಾಗೆ ಇದೆ. ಅಗತ್ಯತೆ, ಆವಶ್ಯಕತೆ ಮತ್ತು ಮಾಡಬೇಕಾದ ಕೆಲಸ ಇವುಗಳಿಗೆ ಹೋಲಿಸಿ ನೋಡಿದರೆ, ನೀವು ಮಾಡಿರುವ ಕೆಲಸ, ನಿಮ್ಮ ಸಾಧನೆ ಎಷ್ಟು ತೃಪ್ತಿಕರವಾಗಿದೆ ಎಂದು ಯಾರಾದರೂ ನಿರಪೇಕ್ಷ ಬುದ್ಧಿಯಿಂದ ನೋಡಿದರೆ, ಮಾಡಿರುವುದು ಏನೂ ಸಾಲದು, ಬಸವನ ಹುಳುವಿನ ವೇಗದಲ್ಲಿ ಹೋಗುತ್ತಿದೆ ಎನ್ನುವುದು ಗೊತ್ತಾಗುತ್ತದೆ. ಈ ಸನ್ನಿವೇಶದಲ್ಲಿ ಸರ್ಕಾರದವರು ಹಾಕಿಕೊಂಡಿರುವ ಯೋಜನೆಗಳ ಕಡೆಗೆ ವಿಶೇಷ ಗಮನಕೊಟ್ಟು ನೀರಾವರಿ ಯೋಜನೆಗಳನ್ನು ನಡೆಸಿಕೊಂಡು ಹೋಗುವುದರ ಕಡೆಗೆ ಆದ್ಯತೆಯನ್ನು ಕೊಡಬೇಕು.

ಎಂಟು, ಹತ್ತು ಕೋಟಿ ರೂಪಾಯಿಗಳಷ್ಟು ಹಣವಾದರೆ ಈಗ ಇರುವ ಪರಿಸ್ಥಿತಿಯನ್ನು ದಾಟುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಸಾಮಾನ್ಯ ಅಂದಾಜಿದೆ. ಹಣದ ರೂಪದಲ್ಲಿ ಅದು ಏನೇನೂ ಸಾಲದು. ನೀವೇ ಹೇಳುವ ಪ್ರಕಾರ ಪ್ರತಿ ದಿವಸ 10-15 ಲಕ್ಷ ರೂಪಾಯಿನಂತೆ ಎಷ್ಟು ಹಣ ಬೇಕಾಗುವುದೆನ್ನುವುದನ್ನು ಯೋಚನೆ ಮಾಡಿ. ಹಣದ ಅಭಾವದಿಂದ ಎಷ್ಟು ಗಾತ್ರದ ಯೋಜನೆಗಳು ಹಾಗೆಯೇ ಇವೆ ಎಂದು ಯೋಚಿಸಬೇಕು. ಇವೊತ್ತು 24 ಲಕ್ಷ ಬೇಸಾಯ ಕೂಲಿಕಾರರು ಇದ್ದಾರೆ. ಯಾವಾಗ ಮಳೆ ಇಲ್ಲ, ಆಗ ಜಮೀನ್ದಾರನಾದವನು ಬೇಸಾಯದ ಕೆಲಸವಿಲ್ಲ ಎಂದರೆ, ಆ ಕೂಲಿಕಾರರು, ಸೀಸನಲ್ ಕಂಡೀಷನ್ಸ್ ಚೆನ್ನಾಗಿರುವಾಗಲೇ ವರ್ಷದಲ್ಲಿ ಮೂರು ತಿಂಗಳು, ಆರು ತಿಂಗಳು, ಒಂಬತ್ತು ತಿಂಗಳು ಕೆಲಸ ಮಾಡಿ ಜೀವನ ಮಾಡತಕ್ಕವರು, ಇವೊತ್ತು ನಿರಂತರವಾಗಿ ಉಪವಾಸ ಸಾಯುವ ಪರಿಸ್ಥಿತಿ ಬಂದಿದೆ. ಎಮರ್ಜೆನ್ಸಿ ಫೀಡಿಂಗ್ ಇತ್ಯಾದಿ ಎಲ್ಲ ಹೇಳಿದ್ದಾರೆ. ಬಾಣಂತಿಯರು, ಬಸುರಿಯರು, ಸಣ್ಣ ಮಕ್ಕಳು ಇವರಿಗಾಗಿ 'ಕೇರ್' ಸಂಸ್ಥೆ ಕೊಟ್ಟ ತಿಂಡಿ ತೀರ್ಥ, ಪೌಷ್ಟಿಕ ಆಹಾರ ಕೊಡಬೇಕೆಂಬ ಯೋಚನೆ ಇದೆ. ಮಾನ್ಯ ಸದಸ್ಯರು ಮಾತನಾಡಿದವರೆಲ್ಲರೂ ಈಗಿನ ಪರಿಸ್ಥಿತಿಯ ಬಗ್ಗೆ ಕಳವಳವನ್ನು ವ್ಯಕ್ತಪಡಿಸಿದ್ದಾರೆ. ಇದರ

(ಶ್ರೀ ಎಸ್. ಗೋಪಾಲಗೌಡ)

ಜೊತೆಗೆ ನಿಮ್ಮ ಏಜೆನ್ಸಿ, ವಿತರಣೆಯ ಕೆಲಸವನ್ನು ಯಾರಿಗೆ ಒಪ್ಪಿಸುತ್ತೀರಿ, ಅದರ ಬಗ್ಗೆಯೂ ವಿಶೇಷ ಅಸಂತೃಪ್ತಿ, ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ಮದ್ದೂರು ಕ್ಷೇತ್ರದ ಸದಸ್ಯರು ಮಾತನಾಡುತ್ತ ಎರಡು ಲಕ್ಷ ರೂಪಾಯಿ ಖರ್ಚು ಮಾಡಲಾಗಿದೆ ಎಂದು ಹೇಳಿದರು. ಕೆಲವರು ಪುಣ್ಯಾತ್ಮರು ಇರಬಹುದು. ಅಲ್ಲಲ್ಲಿ ಜನತೆಯ ಹಿತದೃಷ್ಟಿಯಿಂದ ಅಥವಾ ತನ್ನ ಪ್ರಾಮಾಣಿಕತನವನ್ನು ಸ್ಪಷ್ಟಪಡಿಸುವುದಕ್ಕೆ ಪ್ರಾಮಾಣಿಕವಾಗಿ ಕೆಲಸಮಾಡುವ ಜನ ಇಲ್ಲ ಎಂದು ನಾನು ಹೇಳುವುದಿಲ್ಲ. ಎಲ್ಲಿಯೂ ಪ್ರಾಮಾಣಿಕರಿಲ್ಲ ಎಂದರೆ ನಾವು ಈ ದೇಶ ಬಿಟ್ಟು ಗುಳೆ ಕಟ್ಟಿಕೊಂಡು ಎಲ್ಲಿಗೆ ಹೋಗುವುದು ? ಈ ಚಕ್ರ ಏನು ನಡೆಯುತ್ತಿದೆ, ಅಲ್ಲಿ ಒಂದು ತರಹ ಜನ ಇರುತ್ತಾರೆ, ಬಹಳ ನಿಕೃಷ್ಟ ಜನ. ನಮ್ಮ ಕಡೆ ಒಂದು ಗಾದೆ ಇದೆ: 'ಹೆಣದ ಬಾಯಲ್ಲಿರುವ ಬೆಣ್ಣೆಯನ್ನು ತಿನ್ನುವವರು' ಎಂದು. ನಮ್ಮಲ್ಲಿ ಶವ ಸಂಸ್ಕಾರ ಮಾಡುವಾಗ ಹೆಣದ ಬಾಯಲ್ಲಿ ಬೆಣ್ಣೆಯನ್ನು ಹಾಕುತ್ತಾರೆ. ಅದನ್ನು ತೆಗೆದು ತಿನ್ನುವವರೂ ಇದ್ದಾರೆಂದು ಹೇಳುತ್ತಾರೆ. ಮಕ್ಕಳ ಬಾಯಿಗೆ ಹಾಲು ಮಾಡಿ ಹಾಕಲು ಯಾರೋ ದಾನಿಗಳು ಕೊಟ್ಟಂಥ ಹಾಲಿನ ಪುಡಿಯನ್ನು ಅವರ ಬಾಯಿಗೆ ಹಾಕದಂತೆ, ಯಾರೋ ಕೊಟ್ಟ ಜೋಳ, ರಾಗಿಯನ್ನು ಜನತೆಗೆ ತಿನ್ನುವುದಕ್ಕೆ ಕೊಡದಂತೆ ಅದರಲ್ಲಿ ಕೈವಾಡ ಮಾಡಿ ಅದನ್ನು ತಿನ್ನುವವರಿದ್ದಾರೆ. ಪರಿಹಾರ ಕಾರ್ಯಗಳಿಗಾಗಿ ಕೊಟ್ಟ ದುಡ್ಡಿನಲ್ಲಿ 500 ರೂಪಾಯಿಗಳನ್ನು ಕೂಲಿಯ ರೂಪದಲ್ಲಿ ಜನಗಳಿಗೆ ಹಂಚಿ 500 ರೂಪಾಯಿಗಳನ್ನು ಜನತೆಗೆ ಕೊಡದೆ ಇರುವವರೂ ಇದ್ದಾರೆ. ಹೀಗಾದರೆ ನಿಮ್ಮ ಕೋಟಿಗಳು ಏನು ಕೆಲಸ ಮಾಡೀತು ? ಇದು ಬಹಳ ಭಯಾನಕವಾದ ಪರಿಸ್ಥಿತಿ. ಜವಾಬ್ದಾರಿಯಾದವರೆಲ್ಲರೂ ತಲೆ ತಗ್ಗಿಸಬೇಕಾದ ವಿಚಾರ.

ವೀರೇಂದ್ರ ಪಾಟೀಲರು ತಮ್ಮ ಭಾಷಣದಲ್ಲಿ ಇಂಥವರ ಮೇಲೆ ಉಗ್ರವಾದ ಕ್ರಮ ತೆಗೆದುಕೊಂಡು ಶಿಕ್ಷೆ ಮಾಡುತ್ತೇವೆ, ಹುಷಾರು ಎಂದು ಹೇಳಿದ್ದಾರೆ. ನಾವು ಅಡ್ಜರ್ನ್‌ಮೆಂಟ್ ಮೋಷನ್ ತಂದು ಅಭಾವ ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡುವುದರ ಬದಲು ಮಾನ್ಯ ಮುಖ್ಯ ಮಂತ್ರಿಗಳೇ ಒಂದು ಮೋಷನ್ ತಂದಿದ್ದಾರೆ. ಈ ಎಲ್ಲ ಲವಲವಿಕೆಯನ್ನೂ ಆಡಳಿತ ಪಕ್ಷದ ಸ್ನೇಹಿತರು ತೋರಿಸಿದ್ದಾರೆ. ಅವರು ರಾಜಕೀಯಕ್ಕಾಗಿ ಇದನ್ನು ಮಾಡಿದ್ದಾರೆಂದು ನಾನು ಭಾವಿಸುವುದಿಲ್ಲ. ಆದರೆ ಬರೀ ಮಾತಿನಲ್ಲಿ ಏನೂ ಆಗುವುದಿಲ್ಲ. ನಾನು ಈಗ ಹೇಳುವುದು ಸಹಕಾರ ಸಂಘಗಳು ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಲಿಯ ವಿಚಾರ. ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಕಾಲಾತೀತವಾಗಿ 8-9 ವರ್ಷವಾಯಿತು. ಹೆಚ್ಚು ಕಡಮೆ ಖಾಯಂದಾರರನ್ನಾಗಿ ನೇಮಿಸಿ ಕೆಲಸ ಮಾಡಿಸುತ್ತಿದ್ದೀರಿ. ಅಲ್ಲಿ ಕೆಲಸ ಮಾಡುವವರೆಲ್ಲರೂ ಕೆಟ್ಟವರು ಎಂದು ನಾನು ಹೇಳುತ್ತಿಲ್ಲ. ಅನೇಕ ಕಡೆಗಳಲ್ಲಿ ಹಣ ಮತ್ತು ಅಧಿಕಾರ ದುರುಪಯೋಗವಾಗಿದೆ ಎಂದು ನಮಗೆ ಸ್ವಲ್ಪಮಟ್ಟಿಗೆ ಗೊತ್ತಾಗಿದೆ. ಸೊಸೈಟಿಗಳ ವಿಚಾರದಲ್ಲಿ ಒಂದು ಅಂಶ ನಮ್ಮ ಗಮನಕ್ಕೆ ಬಂತು. ಸೊಸೈಟಿಗಳು ಕಾಂಗ್ರೆಸ್ಸಿನವರ ಕೈಯಲ್ಲಿದ್ದರೆ ಪರಿಹಾರ ಕಾರ್ಯಕ್ಕಾಗಿ ಬರುವ ಹಣ ಮತ್ತು ಆಹಾರ ಧಾನ್ಯಗಳನ್ನು ಸೊಸೈಟಿಗೇ ಕೊಡಿ ಎಂದು ತಹಸೀಲ್ದಾರರ ಮೇಲೆ ಮತ್ತು ಜಿಲ್ಲಾಧಿಕಾರಿಗಳ ಮೇಲೆ ಒತ್ತಾಯ ತರುವುದು. ಒಂದು ವೇಳೆ ಸೊಸೈಟಿ ತಮ್ಮ ಕೈಯಲ್ಲಿಲ್ಲದೆ ತಾಲ್ಲೂಕು ಬೋರ್ಡ್ ಇದ್ದರೆ ತಾಲ್ಲೂಕು ಬೋರ್ಡಿಗೆ ಕೊಡಿ ಎಂದು ಒತ್ತಾಯ ಮಾಡುವುದು. ಇದು ಖಂಡನೀಯವಾದ ವಿಷಯ. ಪಕ್ಷಾತೀತ ಎಂದು ಹೇಳಿ, ಮಾನವೀಯ ಸಮಸ್ಯೆ ಎಂದು ಹೇಳಿ, ಯಾವ ತಪ್ಪೂ ಆಗಬಾರದು, ವಿಳಂಬವಾಗಬಾರದು, ಯಾರು ದುಸ್ಥಿತಿಯಲ್ಲಿದ್ದಾರೆ ಅವರಿಗೆ ಎಲ್ಲ ರೀತಿಯ ನೆರವನ್ನೂ, ಸಹಾಯವನ್ನೂ ಮಾಡಬೇಕು ಅವರನ್ನು ಸಂಕಟದಿಂದ ಪಾರು ಮಾಡಬೇಕು, ನಾವೆಲ್ಲ ಅದಕ್ಕಾಗಿ ದುಡಿಯಬೇಕು ಎಂದು ಹೇಳುವಾಗ ಒತ್ತಾಯದ ಮೇಲೆ ಕೆಲಸ ಮಾಡುವುದಾದರೆ ಇದು ಯಾರಿಗೂ ಶ್ರೇಯಸ್ಸು ತರತಕ್ಕದ್ದಲ್ಲ, ರಾಜಕೀಯವಾಗಿ ನಾವು ಇದನ್ನು ಯಾವತ್ತಿಗೂ ಖಂಡಿಸತಕ್ಕದ್ದು, ಖಂಡಿಸುತ್ತೇವೆ. ಪಂಚಾಯಿತಿಗಳಿಗೆ ಹೊಸದಾಗಿ ಚುನಾವಣೆಗಳಾಗಿವೆ. ಪಂಚಾಯಿತಿಗಳ ಮಟ್ಟದಿಂದ ಈ ಕೆಲಸ ಷುರು ಮಾಡಿ. ಜನವರಿ ತಿಂಗಳಿನಲ್ಲಿ ಜಾಗ್ರತರಾದವರು ಸೆಪ್ಟೆಂಬರ್ ತಿಂಗಳ ತನಕ ಪರಿಸ್ಥಿತಿಯನ್ನು ಕಾಯುತ್ತ ಇದ್ದೀರಿ. ಸಭೆಯಲ್ಲಿ ಈ ಬಗ್ಗೆ ಚರ್ಚೆ ಷುರುವಾದ ಮೇಲೆ ಬೆಂಗಳೂರಿನಲ್ಲಿ ಮಳೆ ಬಂತು; ಕಾದ ಹೆಂಚಿನ ಮೇಲೆ ನೀರು ಬಿದ್ದ ಹಾಗೆ. ಕಾದಿರುವ ನೆಲದಲ್ಲಿ ಅಲ್ಪಸ್ವಲ್ಪ ಮಳೆ ಬಿದ್ದರೆ ಇರುವ ಪೈರು ಒಣಗುವುದಲ್ಲದೆ ಬಾವಿಗಳಲ್ಲಿರುವ ನೀರು ಕೆಳಕ್ಕೆ ಹೋಗುತ್ತದೆ ಮತ್ತು ಸಣ್ಣ ತೊರೆಗಳು ಬತ್ತಿ ಹೋಗಿ ಇನ್ನಷ್ಟು ಹಾಹಾಕಾರ ನೀರಿನ ಬಗ್ಗೆ ಉಂಟಾಗುತ್ತದೆ. ಇದು ಅನುಭವದ ಮಾತು.

ತಾವು ಎಷ್ಟು ಕಾಲವನ್ನು ಕೇಂದ್ರದ ಜೊತೆ ಸಂಭಾಷಣೆ ಮಾಡುವುದರಲ್ಲಿ, ನಿಯೋಗ ಹೋಗುವುದರಲ್ಲಿ ಕಳೆದಿದ್ದೀರಿ ಎನ್ನುವುದು ಸ್ಪಷ್ಟವಾಗುತ್ತದೆ. ಯಾರು ಬೇಸಾಯ ಕೂಲಿಕಾರರಿದ್ದಾರೆ, ಯಾರು ಮಳೆ ಬಾರದ್ದರಿಂದ ಕಷ್ಟಕ್ಕೆ ಗುರಿಯಾಗಿದ್ದಾರೆ; ಬೇಸಾಯ ಮಾಡುವವರಲ್ಲಿ ಪೂರ್ತಿ ಫಸಲು ಹಾಳಾಗಿರತಕ್ಕವರು ಯಾರು, ಇವರುಗಳ ಸಂಖ್ಯೆ ಎಷ್ಟು, ಇವುಗಳನ್ನೆಲ್ಲ ಒಟ್ಟು ಲೆಕ್ಕ ಹಾಕಿ ಅದರ ಆಧಾರದ ಮೇಲೆ ಪರಿಹಾರ ಕಾರ್ಯಗಳನ್ನು ಆರಂಭ ಮಾಡಬೇಕು. ಸಾಯಿಲ್ ಕನ್‌ಸರ್ವೇಷನ್, ಮತ್ತು ಇನ್ನೂ ಏನೋ ಒಂದು ಕೆಲಸ ಶಾಶ್ವತ ಪರಿಹಾರ ಕಾರ್ಯಗಳು ಎಂದು ಹೇಳಿದ್ದಾರೆ. ಸರ್ಕಾರಿ ಯಂತ್ರದಲ್ಲಿ ಕೂಲಿ ಕೊಡತಕ್ಕ ಕೆಲಸ ನಡೆಯುತ್ತಿದೆ. ಎಲ್ಲೆಲ್ಲಿ ಸಣ್ಣ ಪುಟ್ಟ ಕೆಲಸಗಳಿವೆ, ಯಾವ ಗ್ರಾಮದಲ್ಲಿ ಎಷ್ಟು ಜನ ನಿರುದ್ಯೋಗಿಗಳಾಗಿದ್ದಾರೆ, ಮಳೆ ಹೋಗಿರುವುದರಿಂದ, ಬೇಸಾಯ ಹಾಳಾಗಿರುವುದರಿಂದ ಸಂತ್ರಸ್ತರಾಗಿದ್ದಾರೆ, ಆ ಜನತೆಗೆ ತಾವು ನೆರವನ್ನು ಬೇಗ ನೀಡುವುದಕ್ಕೆ ಪ್ರಯತ್ನ ಮಾಡಬೇಕು. ಈಗ ಮಳೆ ಬಂದರೂ ಖಾರಿಫ್ ಬೆಳೆ ನಿಮ್ಮ ಕೈಗೆ ಸಿಕ್ಕುವುದಿಲ್ಲ.

ಈ ದಿವಸ ನಾವು ಸ್ವಾವಲಂಬನೆ ಮಾಡುತ್ತೇವೆಂದು ಏನು ಭವಿಷ್ಯ ಹೇಳಿದರೂ ಅದು ಆಗುವುದಿಲ್ಲ, ಅದರ ಗುರಿ ಮುಟ್ಟುವುದಕ್ಕೆ ಸಾಧ್ಯವಿಲ್ಲ ಎಂದು ಈಗಾಗಲೇ ಗೊತ್ತಾಗಿದೆ. ಮೈಸೂರು ರಾಜ್ಯದಲ್ಲಿ ಪದಾರ್ಥಗಳ ಬೆಲೆಗಳಲ್ಲಿ ಏರಿಕೆ ಉಂಟಾಗಿದೆ. ಮುಂದಿನ ಮಾರ್ಚಿ ತನಕ ರಬಿ ಕ್ರಾಪ್ ಆಗುವವರೆಗೂ ಈ ಪರಿಸ್ಥಿತಿ ಸುಧಾರಿಸುವುದಿಲ್ಲ. ಆಹಾರ ಧಾನ್ಯಗಳ ಬೆಲೆ ಏರಿಕೆ ಈಗಾಗಲೇ ಗಗನಕ್ಕೆ ಏರುತ್ತಾ ಇದೆ. ಆದುದರಿಂದ ಧಾನ್ಯವನ್ನು ಹೊರಗಡೆಯಿಂದ ತರುವ ಮುಖಾಂತರವಾಗಲೀ, ಅಥವಾ ನಮ್ಮಲ್ಲಿರತಕ್ಕಂಥ ಧಾನ್ಯವನ್ನು ಬಿಡುವುದರ ಮುಖಾಂತರವಾಗಲೀ ಬೆಲೆ ಏರಿಕೆ ತಗ್ಗಿಸಬೇಕು. ನಿರ್ಗತಿಕರಾದಂಥವರಿಗೆ ಗಂಜಿ ಕೇಂದ್ರಗಳನ್ನು ತೆರೆಯುವ ವ್ಯವಸ್ಥೆ ಮಾಡಬೇಕು. ಇದರಿಂದ ನಮ್ಮ ಸ್ಟಾಕ್‌ನಲ್ಲಿ ಸ್ವಲ್ಪ ಕೊರತೆ ಬೀಳಬಹುದು. ರಬಿ ಕ್ರಾಪ್ 2–3 ಆಣೆ ಬೆಳೆ ಬರಬಹುದು. ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ನಾವು ನವಂಬರ್ ತನಕ ಕೈಕಟ್ಟಿಕೊಂಡು ಕುಳಿತುಕೊಂಡಿರುವುದಕ್ಕಾಗುವುದಿಲ್ಲ. ಅಲ್ಲಿಯವರೆಗೂ ನಿಮ್ಮ ಜವಾಬ್ದಾರಿಯನ್ನು ತಳ್ಳಿಹಾಕುವುದಕ್ಕಾಗುವುದಿಲ್ಲ. ಆದುದರಿಂದ ಶಾಶ್ವತವಾದ ಒಂದು ಕಾರ್ಯಕ್ರಮ ಹಾಕಿ ಈಗ ನಮಗೆ ಒದಗಿರುವ ಕಷ್ಟದಿಂದ ಪಾರು ಮಾಡಬೇಕು. ನಾವು ಇಂತಿಂತಹ ಪ್ರಾಜೆಕ್ಟ್‌ಗಳನ್ನು ತೆಗೆಯುತ್ತಾ ಇದ್ದೇವೆ, ನಮಗೆ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲ, ನೀರಾವರಿ ಯೋಜನೆಗಳಿಗೆ ಹಾಕತಕ್ಕಂಥ ದುಡ್ಡು ವಾಪಸ್ಸು ಬರುತ್ತಾ ಇಲ್ಲ, ಎನ್ನುವ ವಿಚಾರಗಳನ್ನು ಕೇಂದ್ರದೊಡನೆ ಚರ್ಚೆ ಮಾಡಿ ಹೆಚ್ಚು ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಲು ಕೇಂದ್ರದಿಂದ ಸಹಾಯ ಪಡೆಯಬೇಕು. ಎಲೆಕ್ಟ್ರಿಸಿಟಿ ಒದಗಿಸುವುದಕ್ಕಾಗಲೀ, ಯಾವುದೇ ಒಂದು ಕೆಲಸವನ್ನು ತೆಗೆದುಕೊಳ್ಳಲಿ ಯಾವುದೇ ನ್ಯಾಯವಾದಂಥ ಯೋಜನೆಗಳಿಗೆ ಆಗಲೀ ಹಣವನ್ನು ಉಪಯೋಗಿಸಬೇಕು. ನೀರಾವರಿ ಯೋಜನೆಗಳು ಮತ್ತು ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ಜನಗಳಿಗೆ ಉದ್ಯೋಗಗಳನ್ನು ಕೊಡಿಸಬೇಕು. ಇದನ್ನು ವಿಶೇಷವಾಗಿ ನಡೆಸಿಕೊಂಡು ಹೋಗಬೇಕು. 3 ಮತ್ತು 4 ನೇ ಪಂಚವಾರ್ಷಿಕ ಯೋಜನೆಯಲ್ಲಿ ಕೆಲಸ ಪ್ರಾರಂಭ ಮಾಡಿದ್ದರೆ, ಹಣಕಾಸಿನ ಪರಿಸ್ಥಿತಿ ಚೆನ್ನಾಗಿದ್ದರೆ, ಇಂಜಿನೀಯರ್ಸ್‌ಗಳು ನಿರುದ್ಯೋಗಿಗಳಾಗುವುದನ್ನು ಎದುರಿಸಬಹುದಾಗಿತ್ತು. ಪರಿಹಾರ ನೀಡುವ ಕಾರ್ಯಕ್ರಮಗಳನ್ನು ತೀವ್ರಗೊಳಿಸಬೇಕು. ಅದಕ್ಕಾಗಿ ವಿಶೇಷವಾಗಿ ಪ್ರಯತ್ನಪಟ್ಟು ಗ್ರಾಮಮಟ್ಟದಲ್ಲಿರುವ ಸತ್ಯಸಂಗತಿಗಳನ್ನು ಸರ್ಕಾರದವರು ತಿಳಿದುಕೊಳ್ಳಬೇಕು. ಸರ್ಕಾರದವರು ಕೊಡತಕ್ಕಂಥ ಸೌಲಭ್ಯಗಳು ಏನು ಇವೆಯೋ ಅದು ಜನತೆಗೆ ಮುಟ್ಟುವಂತೆ ಏರ್ಪಾಡು ಮಾಡಬೇಕು. ಜನತೆಗೆ ನೀವು ಕೊಡುವ 10 ಕೋಟಿ, ರೂಪಾಯಿಗಳು ಮಧ್ಯದಲ್ಲಿರತಕ್ಕಂಥಹವರಿಗೆ ಹೋಗದಂತೆ ನೋಡಬೇಕು ಆದುದರಿಂದ ನೀವೇ ಮುತುವರ್ಜಿ ವಹಿಸಿ ಜನರಿಗೆ ಉದ್ಯೋಗ ಕಲ್ಪಿಸಿಕೊಡುವಂತೆ ಏರ್ಪಾಡು ಮಾಡುವುದು ಮತ್ತು ಪಡಿತರ ವ್ಯವಸ್ಥೆ ಇಲ್ಲದೇ ಇರುವ ಕಡೆ ಪಡಿತರ ವ್ಯವಸ್ಥೆ ಮಾಡುವುದು ಇತ್ಯಾದಿ ವಿಚಾರಗಳಲ್ಲಿ ಸರ್ಕಾರದವರು ಬಾಯಿಯಲ್ಲಿ ಏನು ಹೇಳುತ್ತಾರೋ ಅದನ್ನು ಕೃತಿಯಲ್ಲಿ ಮಾಡಿ ತೋರಿಸಬೇಕು. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ಮುನಿಯಪ್ಪ (ಬಾಗೇಪಲ್ಲಿ).—ಸ್ವಾಮಿ, ಈವೊತ್ತಿನ ದಿವಸ ಈ ಅಭಾವ ಪರಿಸ್ಥಿತಿ ವಿಚಾರವಾಗಿ ಯಾವ ಭೇದಭಾವವೂ ಇಲ್ಲದೆ ಎಲ್ಲಾ ಪಕ್ಷಪಂಗಡಗಳೂ ಪ್ರತಿಯೊಬ್ಬರೂ ಬಹಳ ದೀರ್ಘವಾಗಿ ಭಾಷಣ ಮಾಡಿ ಸರ್ಕಾರಕ್ಕೆ ಸಲಹೆ ಮಾಡಿದ್ದಾರೆ. ಮನೆಗೆ ಬೆಂಕಿ ಹತ್ತಿಕೊಂಡರೆ ಜಾತಿಮತ ಭೇದ ಇಲ್ಲದೆ ಬೆಂಕಿಯನ್ನು ಹೇಗೆ ಆರಿಸುತ್ತಾರೋ ಹಾಗೆ ಈ ಸಭೆಯಲ್ಲಿ ಇರತಕ್ಕಂಥ ಸರ್ವಸದಸ್ಯರೂ ಈ ಅಭಾವ ಪರಿಸ್ಥಿತಿ ವಿಚಾರವಾಗಿ ಅಭಾವವನ್ನು ನೀಗಿಸುವುದಕ್ಕೆ ಸರ್ಕಾರ ಹೇಗೆ ನಡೆಯಬೇಕು ಮುಂತಾದ ಸಲಹೆಗಳನ್ನು ಬಹಳವಾಗಿ ಹೇಳಿದ್ದಾರೆ. ಅದರೆ ಇದರಲ್ಲೇ ಒಂದು

(ಶ್ರೀ ಎ. ಮುನಿಯಪ್ಪ)

ವಿಚಾರ ಮಾತ್ರ ಹೇಳುತ್ತೇನೆ. ಇದು ಸರ್ಕಾರದವರ ಜವಾಬ್ದಾರಿ ಎಂದು ಅರಿಯಬಾರದು. ಇದು ಎಲ್ಲ ಜನತೆಯು, ಎಲ್ಲ ಪಾರ್ಟಿಗಳ ಮತ್ತು ಎಲ್ಲ ಸಂಸ್ಥೆಗಳ ಜವಾಬ್ದಾರಿ ಎನ್ನುವುದನ್ನು ಅರಿಯಬೇಕು. ಏಕೆಂದರೆ ಈ ಒಂದು ಅಭಾವವನ್ನು ನೀಗಬೇಕಾದರೆ ಎಲ್ಲರೂ ಸಹಕಾರ ಮಾಡ ಬೇಕು. ಸಂಘಸಂಸ್ಥೆಗಳೂ ಕೈಹಾಕಬೇಕು, ದೇಶದಲ್ಲಿರುವಂಥ ಹಣವಂತರು, ದಾನಿಗಳು ಈ ಒಂದು ಕೆಲಸ ಕಾರ್ಯದಲ್ಲಿ ಸರ್ಕಾರಕ್ಕೆ ಭುಜಕ್ಕೆ ಭುಜ ಕೊಟ್ಟು ಹಿಂದೆ ಯಾವ ದಾನಧರ್ಮಗಳನ್ನು ಮಾಡಿ ಬಿರುದು ಪಡೆಯುತ್ತಿದ್ದರೋ ಅದೇರೀತಿ ಈಗಲೂ ಕೂಡ ಜನತೆಯ ಕಷ್ಟ ನೋಡಿ ನಿರ್ಗತಿಕ ರಾದವರಿಗೆ ಗಂಜಿ ಕೇಂದ್ರಗಳನ್ನು ತೆರೆಯುವಂಥ ಮತ್ತು ದಾನಧರ್ಮಗಳನ್ನು ಮಾಡುವಂಥ ವ್ಯವಸ್ಥೆ ಮಾಡಬೇಕು ಆದುದರಿಂದ ಈ ಜವಾಬ್ದಾರಿ ಎಲ್ಲರ ಮೇಲೂ ಇದೆ ಎಂಬುವನ್ನು ಅರಿಯ ಬೇಕು.

ಇನ್ನೊಂದು ವಿಷಯ ಏನೆಂದರೆ, ಈ ಒಂದು] ಅಭಾವ ಪರಿಸ್ಥಿತಿಯನ್ನು ರೆವಿನ್ಯೂ ಇಲಾಖೆ ಯವರು ಒಬ್ಬರೇ ಮಾಡಬೇಕು ಎಂದು ಹೇಳಿದ್ದಾರೆ. ಇದಕ್ಕೆ ಎಲ್ಲಾ ಇಲಾಖೆಗಳೂ ಗಮನ ಕೊಡ ಬೇಕು. ಏತಕ್ಕೆಂದರೆ ಈ ರಿಲೀಫ್ ಕೆಲಸಕ್ಕೆ ಏನು ಹಣ ಕೊಡುತ್ತಾರೋ ಒಂದು ತಾಲ್ಲೂಕಿಗೆ 10 ಸಾವಿರ, 20 ಸಾವಿರ ರೂಪಾಯಿ ಕೊಟ್ಟರೆ ಆ ತಾಲ್ಲೂಕಿನಲ್ಲಿರತಕ್ಕಂಥ ಎಲ್ಲ ಜನರಿಗೂ ಒಂದು ದಿವಸದ ಕೂಲಿಗೂ ಸಾಕಾಗುವುದಿಲ್ಲ. ಆದುದರಿಂದ ಇದಕ್ಕೆ ಪಿ.ಡಬ್ಲ್ಯು.ಡಿ. ಯವರು, ವ್ಯವಸಾಯ ಇಲಾಖೆಯವರು ಗಮನ ಕೊಡಬೇಕು. ಈ ರಿಲೀಫ್ ಕಾಮಗಾರಿಗೆ ನೀವು ಕೊಡುತ್ತಾ ಇರುವ ಹಣ ನೋಡಿದರೆ ಆನೆ ಬಾಯಿಗೆ ಬಿಸ್ಕತ್ತು ಕೊಟ್ಟ ಹಾಗೆ ಇದೆ. ಸರ್ಕಾರದವರು ಕೊಟ್ಟ ದುಡ್ಡು ಕೆಲಸಗಾರರಿಗೆ ಒಂದು ದಿವಸದ ಕೂಲಿಗೆ ಸರಿಹೋಗುತ್ತದೆ. ಆದುದರಿಂದ ರೆವಿನ್ಯೂ ಇಲಾಖೆಯವರೂ ಕೂಡ ಈ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಸಿದ್ಧರಾಗಿರಬೇಕು.

ಮೂರನೆಯದಾಗಿ ರಾಜ್ಯದ ಅಭಾವ ಪರಿಸ್ಥಿತಿ ಯಾವ ಕೆಲಸಕಾರ್ಯಗಳನ್ನು ಮಾಡಬೇಕೋ ಅದು ಸರ್ಕಾರದ್ದು ಒಂದೇ ಜವಾಬ್ದಾರಿ ಎಂದು ತಿಳಿದುಕೊಳ್ಳಬಾರದು. ಇದರಲ್ಲಿ ಪ್ರೆಸ್‌ನವರದ್ದೂ ಜವಾಬ್ದಾರಿ ಇದೆ. ಪ್ರೆಸ್‌ನವರು ಈ ವಿಚಾರದಲ್ಲಿ ಬಹಳ ಜವಾಬ್ದಾರಿಯುತವಾಗಿರಬೇಕು. ಅವರು ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಅಭಾವ ಪರಿಸ್ಥಿತಿ ಏನು ಇದೆ ಎನ್ನುವುದನ್ನು ನೋಡಿ ಕೊಂಡು ಪೇಪರುಗಳಿಗೆ ಹಾಕಬೇಕು. ಆಗ ಅಧಿಕಾರಿಗಳಿಗೂ ಭಯ ಬರುತ್ತದೆ. ಆದುದರಿಂದ ಪ್ರೆಸ್‌ನವರು ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಈ ಅಭಾವ ಪರಿಸ್ಥಿತಿ ಏನು ಇದೆ ಎನ್ನುವುದನ್ನು ಎಲ್ಲರಿಗೂ ತಿಳಿಯುವಂತೆ ಮಾಡತಕ್ಕಂಥಾದ್ದು ಅವರ ಜವಾಬ್ದಾರಿಯಾಗಿರಬೇಕು. ಈ ವ್ಯವಸ್ಥೆ ಮಾಡಬೇಕು; ಏಕೆಂದರೆ ಈಗ ಎಲ್ಲಾ ಪೇಪರಿನವರು ಒಂದು ಸ್ಟೇಟ್‌ಮೆಂಟ್ ಕೊಟ್ಟು, ಅದು ಪೇಪರಿನಲ್ಲಿ ಬಂದ ತಕ್ಷಣ ಅಧಿಕಾರಿಗಳು ಕೂಡಲೇ ದಿಗಿಲು ಬೀಳುತ್ತಾರೆ. ಆದ್ದರಿಂದ ಪೇಪರಿನವ ರಿಗೆ ಇಂಥ ಒಂದು ಅವಕಾಶ ಸರ್ಕಾರದವರು ಕೊಟ್ಟು ಅದಕ್ಕೆ ಬೇಕಾದ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

4-30 P.M.

ಇನ್ನು ಅರಣ್ಯ ಇಲಾಖೆಯ ವಿಚಾರ. ಇವತ್ತು ಅರಣ್ಯದ ಮರಗಳ ಕೆಳಗಡೆ ಬಿದ್ದಿರತಕ್ಕ ಗೊಬ್ಬರ ಬಹಳವಾಗಿವೆ. ಅದನ್ನು ಸರಿಯಾಗಿ ಉಪಯೋಗ ಮಾಡುವುದಿಲ್ಲ. ಇನ್ನು ಹಳ್ಳಿಗಾಡಿನಲ್ಲ ಕೆಲವು ಬುದ್ಧಿವಂತರು ಇರುತ್ತಾರೆ, ಅವರು ಹಳ್ಳಿಗಾಡಿಗೆ ಮೀಸಲಾದ ಹಣವನ್ನು ಟೌನಿನ ಸುತ್ತು ಮುತ್ತಲು ಖರ್ಚು ಮಾಡುತ್ತಾರೆ. ಮಾನ್ಯ ವೀರಪ್ಪಗೌಡರು ಹೇಳುತ್ತಾರೆ, ಅಧಿಕಾರಿಗಳಲ್ಲಿ ಸತ್ಯ ವಂತರು, ದಯಾವಂತರು ಇದ್ದಾರೆ ಎಂದು. ಆದರೆ ಕೆಲವರು ಅಧಿಕಾರಿಗಳು ಆ ರೀತಿ ಇರ ಬಹುದು. ಮಾನ್ಯ ಪುಟ್ಟಸ್ವಾಮಿಯವರು ಹೇಳುತ್ತಾರೆ, ಅಧಿಕಾರಿಗಳನ್ನು ತಿದ್ದುವುದು ಬಹಳ ಕಷ್ಟವೆಂದು ಒಂದು ಉದಾಹರಣೆಯನ್ನು ಹೇಳುತ್ತೇನೆ. ಬಾಗೇಪಲ್ಲಿ ತಾಲ್ಲೂಕಿನಲ್ಲಿ ಪರಶುರಾಮನ ಹಳ್ಳಿ ಮತ್ತು ದೇವರಗುಡಿ ಪಲ್ಲಿ ಎಂದು ಇದೆ. ಅಲ್ಲಿಗೆ 999 ರೂಪಾಯಿ ಮತ್ತು 500 ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ. ಆದರೆ ಪರಶುರಾಮನಹಳ್ಳಿಯಲ್ಲಿ ಕೆಲಸ ಆಗಿರತಕ್ಕದ್ದು ಕೇವಲ250 ರೂಪಾಯಿಯದ್ದು. ಆದರೆ 999 ರೂಪಾಯಿಗೆ ಬಿಲ್ ಮಾಡಿ ಕೊಟ್ಟಿರುತ್ತಾರೆ. ಸಾವಿರಕ್ಕೆ 5 ರೂಪಾಯಿ ಕೂಡ ಖರ್ಚು ಮಾಡಿಲ್ಲ. ದೇವರಗುಡಿಪಲ್ಲಿಯಲ್ಲಿ ಪಿ.ಡಬ್ಲ್ಯು. ಡಿ. ಯವರು ಚಾನಲ್ ಮಾಡಿದ್ದಾರೆ. ಅಲ್ಲಿ ಆ ಕಡೆ ಈ ಕಡೆ 25 ರೂಪಾಯಿ ಖರ್ಚು ಮಾಡಿ ಚ್ಯಾನಲ್ ಎಂದು ಕರೆಯು ತ್ತಾರೆ. ಈಗ ಯಾರಿಗೆ ಕ್ಷಾಮ ಬಂದಿದೆ ಎಂದರೆ, ಬಡವರು, ನಿರ್ಗತಿಕರಾದವರಿಗೆ ಕ್ಷಾಮ

ಬಂದಿದೆ. ಸಾಯತಕ್ಕ ಜನರ ಬಾಯಿಗೆ ಹೋಗತಕ್ಕ ಗಂಜಿಯನ್ನು ಕೆಲವು ಅಧಿಕಾರಿಗಳು ಕಿತ್ತು ತಿನ್ನುತ್ತಿದ್ದಾರೆ. ಅಂಥವರನ್ನು ತಿದ್ದುವುದು ಹೇಗೆ? ಬಾಗೇಪಲ್ಲಿಯಲ್ಲಿ ಈಗ ಎಲ್ಲಾ ಹೇಳಿದ ನಂತರ ಲೈಟ್ ಇಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆ. ಬಾಗೇಪಲ್ಲಿಯು ನಿಜವಾಗಿ ನೋಡಿದರೆ, ಎಲ್ಲರೂ ಆಂಧ್ರಪ್ರದೇಶಕ್ಕೆ ಹೋಗಿಬಿಟ್ಟಿದ್ದಾರೆ. ಗುಡಿಬಂಡೆಯಲ್ಲಿಂದ ಕೂಡ ಎಲ್ಲಾ ಹೋಗುತ್ತಿದ್ದಾರೆ. ಆಂಧ್ರಪ್ರದೇಶದ ಬಾರ್ಡರಿನಲ್ಲಿ ಕುಡಿಯುವ ನೀರಿನ ಬಾವಿಯೂ ಇಲ್ಲ. ಅಲ್ಲಿ ಏನಾದರೂ ಕುಡಿಯುವ ನೀರು ಇದ್ದರೆ ನಾನು ಬೇಕಾದರೆ ಈ ಸಭೆಗೆ ರಾಜೀನಾಮೆ ಕೊಡಬಲ್ಲೆ. ಇನ್ನು ಶನಿವಾರ ಚಿಕ್ಕಬಳ್ಳಾಪುರದಲ್ಲಿ ದನಗಳ ಸಂತೆ. ಬೆಂಗಳೂರು ಬಳ್ಳಾರಿ ರೋಡಿನಲ್ಲಿ ಕೂತುಕೊಂಡು ನೋಡಿದರೆ ಎಲ್ಲಾ ಗೊತ್ತಾಗುತ್ತದೆ. ಅಲ್ಲಿ ಕಟುಕರ ಹಾವಳಿ ಜಾಸ್ತಿಯಾಗಿದೆ. 1000, 500, 800 ರೂಪಾಯಿ ಬೆಲೆ ಬಾಳುವ ಎತ್ತುಗಳನ್ನು ನಾಶ ಮಾಡುತ್ತಿದ್ದಾರೆ. ಇಂದು ಸರ್ಕಾರ ಕೊಡುತ್ತಿರುವ ಹಣವು ಬಡವರಿಗೆ ನೇರವಾಗಿ ಮುಟ್ಟುತ್ತಿಲ್ಲ. ಇವತ್ತು ಒಬ್ಬನ ಗಡ್ಡಕ್ಕೆ ಬೆಂಕಿ ಹತ್ತಿಕೊಳ್ಳುತ್ತಿರುವಾಗ, ಅದರಲ್ಲಿ ಇನ್ನೊಬ್ಬನು ಸಿಗರೇಟು ಹಚ್ಚಲಿಕ್ಕೆ ಹೋಗುತ್ತಿದ್ದಾನೆ. ಇಂದು ದುಡ್ಡು ಇರುವುದು ಅಧಿಕಾರಿಗಳ ಕೈಯಲ್ಲಿ, ಬಡವರ ಬಾಯಿಗೆ ಹೋಗತಕ್ಕ ಅನ್ನವನ್ನು ಕೆಲವರು ಅಧಿಕಾರಿಗಳು ಕಿತ್ತುಕೊಂಡು ತಿನ್ನುತ್ತಿದ್ದಾರೆ. ಇದರಿಂದ ಬಡವನಿಗೆ ಅನ್ಯಾಯ ಮಾಡುತ್ತಿದ್ದಾರೆ. ಇಂಥ ಅಧಿಕಾರಿಗೆ ತಕ್ಕ ಶಿಕ್ಷೆ ಕೊಡಬೇಕು, ಇಂಕ್ರಿಮೆಂಟ್ ನಿಲ್ಲಿಸಬೇಕು; ಮತ್ತು ಅವನಿಗೆ ಪ್ರೊಮೋಷನ್ ಕೂಡ ನಿಲ್ಲಿಸಬೇಕು. ನಾನು ಬೇರೆ ವಿಚಾರಗಳಲ್ಲಿ ಇಂಥ ಕಠಿಣ ಪದಗಳನ್ನು ಉಪಯೋಗಿಸುತ್ತಾ ಇರಲಿಲ್ಲ. ಅಂಥವರಿಗೆ ಮಾನ್ಯ ಮುಖ್ಯಮಂತ್ರಿಯವರು ಉಗ್ರ ಶಿಕ್ಷೆ ಮಾಡುತ್ತೇವೆಂದು ಹೇಳಿದ್ದಾರೆ. ಇಂಥ ವಿಷಯದಲ್ಲಿ ಅಧಿಕಾರಿಗಳು ಯಾರೇ ಆಗಲಿ, ಸ್ಥಳೀಯ ಸಂಸ್ಥೆಗಳೇ ಆಗಲಿ, ಇಲ್ಲವೇ ಸಾರ್ವಜನಿಕರೇ ಆಗಲಿ, ಅಭಾವ ಪರಿಸ್ಥಿತಿಗೆ ಧಕ್ಕೆ ತರತಕ್ಕಂತಹ ಕಾರ್ಯದಲ್ಲಿ, ಬಡವರಿಗೆ ಕೊಡತಕ್ಕಂತಹ ಧಾನ್ಯಗಳನ್ನು ಬ್ಲಾಕ್‌ಮಾರ್ಕೆಟ್ಟಿನಲ್ಲಿ ಮಾರತಕ್ಕವರಿಗೆ, ಉಗ್ರ ಶಿಕ್ಷೆಯನ್ನು ಕೊಡಬೇಕು. ಅಭಾವ ಪರಿಸ್ಥಿತಿಯನ್ನು ತಡೆಗಟ್ಟುವುದರಲ್ಲಿ ಸರ್ಕಾರದ ಜವಾಬ್ದಾರಿಯೊಂದೇ ಅಲ್ಲ, ಅದರಲ್ಲಿ ಸಾರ್ವಜನಿಕರದ್ದೂ, ಹಾಗೂ ಇಲ್ಲಿರತಕ್ಕ ಎಲ್ಲಾ ಸದಸ್ಯರದ್ದೂ ಸಹಕಾರ ಇರಬೇಕು, ಹಾಗಿದ್ದರೆ ಮಾತ್ರ ಧೈರ್ಯದಿಂದ ಎದುರಿಸಬಹುದು ಎಂದು ಹೇಳಿ, ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

* * * * * * *

Mr. DEPUTY SPEAKER.—I now call upon Sri Rame Gowda to speak.

†ಶ್ರೀ ಜಿ. ರಾಮೇಗೌಡ.—ಸ್ವಾಮಿ, ರಾಜ್ಯದಲ್ಲಿ ಬಹಳ ದಿವಸಗಳಿಂದಲೂ ಮಳೆ ಬಾರದೆ ಬಹಳ ತೀವ್ರ ಸ್ಥಿತಿ ಇದ್ದು ಅಭಾವ ಎನ್ನುವುದು ಕ್ಷಾಮವಾಗಿ ಪರಿಣಮಿಸಿದೆ. ಈಗಿರತಕ್ಕ ಪರಿಸ್ಥಿತಿಯನ್ನು ನಾವು ಕ್ಷಾಮವೆಂದು ಹೇಳಬೇಕೇ ಹೊರತು ಅಭಾವ ಪರಿಸ್ಥಿತಿ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಹಾಗೆಂದಮೇಲೆ ಮೊದಲನೆಯದಾಗಿ ಅಧಿಕವಾಗಿ ಬೇಕಾಗಿರತಕ್ಕ ನೀರು ಏನಿದೆ ಅದು ಪ್ರಾಣಿಗಳಿಂದ ಹಿಡಿದು ಮನುಷ್ಯನ ವರೆಗೂ ಸಿಕ್ಕದಂಥ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಇವತ್ತು ಇದೆ. ಕೆಲವು ಜಿಲ್ಲೆಗಳಲ್ಲಿ ಪರಿಸ್ಥಿತಿ ಉತ್ತಮವಾಗಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದ್ದಾರೆ. ಆದರೆ ಅಂತಹ ಪರಿಸ್ಥಿತಿಯನ್ನು ನೋಡತಕ್ಕ ಅವಕಾಶ ನಮಗೆ ಇಲ್ಲ. ಆದರೆ ಬೆಂಗಳೂರು ಜಿಲ್ಲೆಯ ವಿಷಯವಾಗಿ ಹೇಳುವುದಾದರೆ ಇವತ್ತು ದನಕರುಗಳ ಗೋಳು ಹೇಳ ತೀರದು. ಇವತ್ತು ಮಾಡಿರುವ ವ್ಯವಸ್ಥೆಯಿಂದ ಕುಡಿಯುವ ನೀರಿನ ಪರಿಸ್ಥಿತಿ ಸ್ವಲ್ಪಮಟ್ಟಿಗೂ ಕೂಡ ಸುಧಾರಿಸಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಪ್ರತಿಯೊಂದು ಗ್ರಾಮದಲ್ಲಿಯೂ ಮೊದಲು ದನಕರುಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಎಲ್ಲಿ 10-12 ಅಡಿಗಳ ಆಳದಲ್ಲಿ ನೀರು ಸಿಗುತ್ತದೋ ಅಂತಹ ಸ್ಥಳಗಳನ್ನು ಚುನಾಯಿಸಿಕೊಂಡು ಬಾವಿ ಅಥವಾ ಕೊಳದ ರೂಪದಲ್ಲಿ ನೀರನ್ನು ತೆಗೆಯುವ ವ್ಯವಸ್ಥೆಯನ್ನು ಕೂಡಲೇ ಮಾಡಬೇಕು. ಅನೇಕ ಜನ ಅಧಿಕಾರಿಗಳು ಹಾಗೂ ಮಂತ್ರಿಗಳು ಈ ವ್ಯವಸ್ಥೆಯನ್ನು ಮಾಡಿದ್ದೇವೆಂದು ಹೇಳುತ್ತಾರೆ. ಪ್ರತ್ಯಕ್ಷವಾಗಿ ನೋಡುವುದಾದರೆ ಖಂಡಿತವಾಗಿ ಈ ವ್ಯವಸ್ಥೆ ಆಗಲಿಲ್ಲ. ಅದನ್ನು ಹೇಗೆ ತಿಳಿದುಕೊಳ್ಳಬೇಕೆಂದರೆ, ನಾವು ಏನೊಂದು ಕಾರ್ಯಕ್ರಮವನ್ನು ನಿಗದಿ ಮಾಡುತ್ತೇವೋ ಅದರಂತೆ ರಾಜ್ಯದ ಅಧಿಕಾರಿಗಳು ತೆಗೆದುಕೊಂಡಿದ್ದಾರೋ ಅಥವಾ ಇಲ್ಲವೋ ಅದನ್ನು ಸೂಕ್ಷ್ಮವಾಗಿ ಸೂಪರ್‌ವೈಜ್ ಮಾಡುವ ವ್ಯವಸ್ಥೆ ನಮ್ಮಲ್ಲಿಲ್ಲ.

**** Indicates matter expunged as ordered by the Chair.

(ಶ್ರೀ ಜಿ. ರಾಮೇಗೌಡ)

ಅದು ಈಗ ಬಹು ಮುಖ್ಯವಾಗಿ ಆಗಬೇಕಾಗಿದೆ. ಅದು ಆದರೆ ವ್ಯಾಲ್ಯುಯೇಷನ್ ಕಮಿಟಿಯ ಮೂಲಕ ನಾವು ಕೊಡುವ ಹಣವನ್ನು ಅವರು ಸರಿಯಾದ ರೀತಿಯಲ್ಲಿ ಉಪಯೋಗಿಸುತ್ತಿದ್ದಾರೆಯೇ ಅಥವಾ ಇಲ್ಲವೇ ಅಥವಾ ಅದರಿಂದೇನಾದರೂ ಪ್ರತಿಫಲ ದೊರಕಿದೆಯೇ ಎಂಬುದನ್ನು ನೋಡಬಹುದು. ಆ ಒಂದು ವ್ಯವಸ್ಥೆ ಇಲ್ಲ. ನಮ್ಮನೆ ಹತ್ತಾರು ಸಾವಿರ ರೂಪಾಯಿಗಳನ್ನು ಒಂದೊಂದು ತಾಲ್ಲೂಕಿಗೂ ಕೊಡುತ್ತಿದ್ದೇವೆಂದು ಹೇಳುತ್ತಾರೆ. ಇದರಿಂದ ಖಂಡಿತವಾಗಿ ಏನೂ ಉಪಕಾರವಾಗಿಲ್ಲ. ಒಂದು ತಾಲ್ಲೂಕಿನಲ್ಲಿ ಒಂದು ಲಕ್ಷ ಜನರು ಇರುವ ಕಡೆ 25,000 ಜನಗಳಿಗೆ ನೀರಿನ ವ್ಯವಸ್ಥೆ ಇಲ್ಲವೆಂದು ಹೇಳಿದರೆ ಅದು ಸತ್ಯಕ್ಕೆ ದೂರವಾದ ಮಾತಲ್ಲ. ಬೇಕಾದಷ್ಟು ವ್ಯವಸ್ಥೆ ಮಾಡಿದ್ದೇವೆಂದು ಜಿಲ್ಲಾ ಕಮಿಷನರ್, ಸಬ್ ಡಿವಿಜನಲ್ ಆಫೀಸರ್, ತಹಸೀಲ್ದಾರ್ ಮುಂತಾದ ಎಲ್ಲಾ ಅಧಿಕಾರಿಗಳೂ ಹೇಳಿದ್ದಾರೆ. ಆದರೆ ಇವರು ಮಾಡಿರತಕ್ಕದ್ದೇನೆಂಬುದನ್ನು ಪರೀಕ್ಷೆ ಮಾಡುವ ವ್ಯವಸ್ಥೆ ನಮ್ಮಲ್ಲಿ ಏನೂ ಇಲ್ಲ. ಮೂಕ ಪ್ರಾಣಿಗಳಿಗೆ ಮೊದಲು ನೀರು ಸಿಗುವ ವ್ಯವಸ್ಥೆ ಸ್ವಲ್ಪಮಟ್ಟಿಗಾದರೂ ಆಗಬೇಕು. ಇವತ್ತಿನ ದಿವಸ ಸುಮಾರು 25 ಸಾವಿರ ಕೂಲಿ ಮಾಡುವ ಜನಗಳಿಗೆ ಸರ್ಕಾರದವರು ಮಾಡಿರುವ ವ್ಯವಸ್ಥೆ ಏನೆಂದರೆ, ಒಂದು ತಲೆಗೆ ಒಂದು ತಿಂಗಳಿಗೆ ಒಂದು ಕೆ.ಜಿ. ಮೈಲೊ ಅಥವಾ ಎರಡು ಕೆ.ಜಿ. ಮೈಲೊ ಅಥವಾ ಒಂದು ಕೆ.ಜಿ. ಗೋಧಿ ಕೊಡುವುದಷ್ಟೆ. ಹೀಗೆ ಕೊಟ್ಟಿರುವಂಥಾದ್ದನ್ನು ನೀರಾಗಿ ಮಾಡಿ ಅರೆದು ಅದನ್ನು ಒಂದು ಚಮಚ ಹೊಟ್ಟೆಗೆ ಹಾಕಿದರೆ ಮಾತ್ರ ಪ್ರಾಣ ಉಳಿಯುತ್ತದೆ. ಅದರ ಮೇಲೆ ಸರ್ಕಾರದವರು ಅವರಿಗೆ ಕೊಟ್ಟಿದ್ದಾರೋ ಅಥವಾ ಇಲ್ಲವೋ ಎಂಬುದನ್ನು ಅವರೇ ಆತ್ಮಶೋಧನೆ ಮಾಡಿಕೊಳ್ಳಬೇಕು. ಈಗ ಬಹಳ ತೀಕ್ಷ್ಣ ಪರಿಸ್ಥಿತಿಯಲ್ಲಿ ಇರುವಾಗ ಸರ್ಕಾರದವರು ಮಾಡಿರುವ ವ್ಯವಸ್ಥೆ ಸಮರ್ಪಕವಾಗಿದೆಯೆಂದು ಹೇಳಿದರೆ ನಮ್ಮ ಕೆಲಸ ಆಗಲಿಲ್ಲ. ಇದನ್ನು ತಿಳಿದುಕೊಳ್ಳುವುದಕ್ಕೆ ಇನ್ನೂ ಎಷ್ಟೋ ತಿಂಗಳುಗಳಾಗಬಹುದು. ಎಷ್ಟು ಸೇಕಡಾ ಜನಗಳಿಗೆ ಆಹಾರ ರಾತ್ರಿಗೆ ಇಲ್ಲವೋ ಅಂತಹವರಿಗೆ ಅವರೇ ಎದ್ದು ನಿಂತುಕೊಳ್ಳುವ ಮಟ್ಟದಲ್ಲಾದರೂ ಆಹಾರವನ್ನು ತಕ್ಷಣ ಕೊಡುವ ವ್ಯವಸ್ಥೆ ಮಾಡಬೇಕು. ಆಹಾರಧಾನ್ಯಗಳನ್ನು ಕೊಳ್ಳುವ ಶಕ್ತಿ ಅನೇಕರಿಗೆ ಇಲ್ಲದೇ ಇರುವುದರಿಂದ ಅಂತಹವರಿಗೆ ಕೂಲಿ ಕೆಲಸವಾದರೂ ಸಿಗುವಂತೆ ಮಾಡಿ ದಿನಗೂಲಿ ಒಂದು ರೂಪಾಯಿ ಅವನಿಗೆ ಸಿಗುವಂತೆ ವ್ಯವಸ್ಥೆ ಮಾಡಬೇಕು. ಇನ್ನು ರಸ್ತೆ ಕಾಮಗಾರಿ, ಗೋಕಟ್ಟೆ ಕೆಲಸ, ಡಿಸಿಲ್ಟ್ ಕಾಮಗಾರಿ ಕೆಲಸಗಳನ್ನು ನೀವು ಮಾಡಿಸುತ್ತಿರತಕ್ಕ ವ್ಯವಸ್ಥೆ ಯಾವರೀತಿ ಇದೆಯೆಂದು ಈ ಸಭೆಯಲ್ಲಿ ಹೇಳಿದರೆ ನಾಚಿಕೆಯಾಗುತ್ತದೆ. ಯಾವತ್ತಾದರೂ ಒಂದು ದಿನಕ್ಕೆ ಒಬ್ಬ ಕೂಲಿ ಮಾಡುವವನಿಗೆ ಒಂದು ರೂಪಾಯಿ ಕೊಟ್ಟಿದ್ದು ಇದ್ದರೆ ನಿಮಗೆ ನಾನು ಸಾಷ್ಟಾಂಗ ನಮಸ್ಕಾರ ಮಾಡುತ್ತೇನೆ. ಇಲ್ಲದಿದ್ದರೆ ಪಶ್ಚಾತ್ತಾಪಪಡುತ್ತೇನೆಂದು ನಾನು ಹೇಳುತ್ತೇನೆ. ಬರೀ ಕಾಗದದ ಮೇಲೆ ಇವರ ಯೋಜನೆಗಳು ಆಗಿವೆಯೇ ಹೊರತು ಇನ್ನೇನೂ ಇಲ್ಲ.

ಇನ್ನು ದನಗಳಿಗೆ ಹುಲ್ಲು ತರುವ ವ್ಯವಸ್ಥೆ ಮಾಡಿದ್ದಾರೆ. ಸರ್ಕಾರದವರು ಒಂದು ಲಾರಿಗೆ 250 ರೂಪಾಯಿಗಳನ್ನು ಕೊಟ್ಟು ಇಲ್ಲಿ ಕೊಳ್ಳುತ್ತಿದ್ದಾರೆ. ಅದಕ್ಕೆ ಬಾಡಿಗೆಯನ್ನೂ ಸಹ ನಾವೇ ಕೊಡುತ್ತಿದ್ದೇವೆಂದು ಸರ್ಕಾರದವರು ಹೇಳಿದ್ದಾರೆ. ಒಂದು ಲಾರಿಗೆ ಸುಮಾರು 50–60 ಹುಲ್ಲಿನ ಹೊರೆ ತುಂಬಬಹುದು. ಒಂದು ಹೊರೆಗೆ 4–5 ರೂಪಾಯಿಗಳಂತೆ ಆಯಿತು. ಬಡವನಾದವನು ಅಷ್ಟು ದುಡ್ಡು ಕೊಟ್ಟು ಕೊಳ್ಳಬೇಕಾದರೆ ಕಷ್ಟವಾಗುತ್ತದೆ. 5 ರೂಪಾಯಿಗಳನ್ನು ಒಂದು ಹೊರೆಗೆ ಕೊಟ್ಟು ದನಗಳನ್ನು ಸಾಕಬೇಕಾದರೆ ಅದು ಸಾಹುಕಾರನಿಗೆ ಮಾತ್ರ ಸಾಧ್ಯ. ಹೀಗಾದರೆ ಬಡವರ ಗತಿಯೇನು ? ಅದಕ್ಕಾಗಿಯೇ ಅನೇಕ ಬಡ ರೈತರು ತಮ್ಮ ದನಕರುಗಳನ್ನು ಸಾಕಲಾರದೆ ಕಟುಕರ ಮನೆಗೆ ಕೊಡುತ್ತಿದ್ದಾರೆಂಬುದಾಗಿ ಮಾನ್ಯ ಶ್ರೀ ಮುನಿಯಪ್ಪನವರು ಹೇಳಿದರು ಅದು ಉತ್ತಮವೆಂದು ನಾನು ಹೇಳಬೇಕಾಗಿದೆ. ಅವುಗಳನ್ನು ಪರಿಪಾಲನೆ ಮಾಡುವ ನೀತಿ ಸರ್ಕಾರಕ್ಕೆ ಇಲ್ಲದೇ ಇರುವಾಗ, ಅವನ್ನು ಕಟುಕರಿಗೆ ಕೊಡುವುದು ಒಳ್ಳೆಯದು. ಅವು ಮೇವಿಲ್ಲದೆ, ನೀರು ಇಲ್ಲದೆ ಪ್ರಾಣ ಬಿಡುವುದಕ್ಕಿಂತ ಕಟುಕರಿಗೆ ಕೊಡುವುದು ಮೇಲು ಎಂಬುದಾಗಿ ಅನೇಕ ಬಡ ರೈತರು ಹೇಳುತ್ತಿದ್ದಾರೆ. ಮಂತ್ರಿಗಳು ಉತ್ತರ ಕೊಡುವಾಗ ಮಂಡ್ಯಾದಲ್ಲಿ ಬತ್ತದ ಹುಲ್ಲು ಇರುವುದನ್ನು ಇಲ್ಲಿಗೆ ತರುವ ಖರ್ಚು ಸೇರಿಸಿ ಕೊಂಡುಕೊಳ್ಳಬೇಕಾದರೆ ಸುಮಾರು 250 ರೂಪಾಯಿಗಳಾಗುತ್ತದೆಂದು ಹೇಳಿದರು ಎರಡು ಲಾರಿಗಳಲ್ಲಿ ಆದರೂ ಹುಲ್ಲನ್ನು ತಂದು ಹಂಚಿದ್ದೇವೆ ಎಂದು ಹೇಳಿದ್ದರೆ, ನಾನು ಖಂಡಿತವಾಗಿ ಸಂತೋಷಪಡುತ್ತಿದ್ದೆ. ಒಂದೊಂದು ತಾಲ್ಲೂಕಿನಲ್ಲಿ 5–6 ಲಕ್ಷ ರೂಪಾಯಿಗಳ ಪ್ರಾಜೆಕ್ಟ್ ಕೆಲಸ ನಡೆಯುತ್ತಿದ್ದರೂ ಯಾವ ಕಾಮಗಾರಿಯಲ್ಲಿ 10 ಜನರು ಕೆಲಸ ಮಾಡುತ್ತಿದ್ದಾರೆ ಎಂದು ಹೇಳಲಿ, ಕೇವಲ 10 ಜನರೂ ಕೂಡ ಕೆಲಸ ಮಾಡುತ್ತಾ ಇಲ್ಲ. 5–6–10 ಲಕ್ಷ ರೂಪಾಯಿಗಳ ಕೆಲಸವನ್ನು ಒಂದೊಂದು ತಾಲ್ಲೂಕಿನಲ್ಲಿ ಮಾಡಿದರೆ, ಅಲ್ಲಿ ನೂರಾರು ಜನರು ಕೆಲಸ ಮಾಡುವುದಕ್ಕೆ ಪ್ರಾರಂಭಮಾಡಿದರೆ, ಆಗ ಕ್ಷಾಮ ಸ್ವಲ್ಪ ಕಡಿಮೆಯಾಗುತ್ತದೆ. ಆದರೆ ಇದಕ್ಕೆ ಕಾನೂನು

ಅದ್ದಿ. ಈಗ ನೀವು ಕ್ಷಾಮಕ್ಕಾಗಿ ಕೊಟ್ಟಿರುವ ದುಡ್ಡು, ತಹಸೀಲ್ದಾರ್ ಬಿಲ್ ಮಾಡಿ, ಅಸಿಸ್ಟೆಂಟ್ ಕಮಿಷನರ್ ಸ್ಕ್ರೂಟಿನಿ ಆಗಿ, ಜಿಲ್ಲಾಧಿಕಾರಿಗಳ ಮಂಜೂರಾತಿ ಪಡೆದ ನಂತರ ಕ್ಷಾಮ ಪ್ರದೇಶಗಳಲ್ಲಿ ವಿತರಣೆಯಾಗಬೇಕಾಗಿದೆ. ಇದು ಆಗಬೇಕಾದರೆ ಇನ್ನು 17 ದಿನಗಳಾಗುತ್ತವೆ. ಅದುವರೆಗೆ ಜನ ಏನು ತಿನ್ನಬೇಕು ? ಆದ್ದರಿಂದ ಕೆಲಸ ಮಾಡುವವನಿಗೆ ಕೆಲಸ ಮಾಡಿದ ದಿವಸವೇ ಕೂಲಿಕೊಡಬೇಕು. ಅಂಥಾ ವ್ಯವಸ್ಥೆ ಕೇವಲ ಒಂದು ತಾಲ್ಲೂಕಿನಲ್ಲಿದ್ದರೂ ನಾನು ಸಂತೋಷಪಡುತ್ತೇನೆ. ಇಂತಹ ಸಿದ್ಧತೆಯನ್ನು ಜಾಗ್ರತೆಯಾಗಿ ಮಾಡಬೇಕು. ಮಾನ್ಯ ಮಂತ್ರಿಗಳು ಈಗ ಕೊಟ್ಟಿರುವ ಪುಸ್ತಕ ನೋಡಿದರೇನೋ ಸಂತೋಷವಾಗುತ್ತದೆ. ಆದರೆ ಈಗ ನಡೆಯುತ್ತಿರುವುದನ್ನು ನೋಡಿದರೆ ದುಃಖ ಅಗಾಧವಾಗಿ ಬರುತ್ತದೆ. ಈ ಬಾಬಿನಲ್ಲಿ ಕೊಟ್ಟ ಹಣ ಸರಿಯಾಗಿ ವಿತರಣೆಯಾಗುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು.

ಇನ್ನು ಕುಡಿಯುವ ನೀರಿನ ಬಾವಿಗಳ ಬಗ್ಗೆ ಏನೇನು ಅನ್ಯಾಯವಾಗಿದೆ ಎಂಬುದನ್ನು ಸ್ವಲ್ಪ ಮಟ್ಟಿಗೆ ಹೇಳುತ್ತೇನೆ. ಲೋಕೋಪಯೋಗಿ ಇಲಾಖೆಯವರು ವರ್ಷೇ ವರ್ಷೇ ಬೇಕಾಗುವ ಐಟಂಗಳಿಗೆ ಶೇಕಡ 10ರಂತೆ ಹೆಚ್ಚಿಸಿಕೊಂಡಿದ್ದಾರೆ. ಆದರೆ ಕುಡಿಯುವ ನೀರಿನ ಬಾವಿಗಳ ಐಟಂ ಏನಿದೆ ಆ ಬಾಬಿಗೆ ಸುಮಾರು 15 ವರ್ಷಗಳಿಂದಲೂ ಬದಲಾವಣೆ ಮಾಡಿಲ್ಲ. ಈ ವಿಚಾರವನ್ನು ನಾವು ಪ್ರತಿಯೊಂದು ಆಯವ್ಯಯ ಅಧಿವೇಶನದಲ್ಲಿಯೂ ಮಂತ್ರಿಗಳಿಗೆ ಹೇಳುತ್ತಲೇ ಇದ್ದೇವೆ. ಇದನ್ನು ಹೋಲಿಕೆಮಾಡಿ ನೋಡಿ. ಸುಮಾರು 15 ವರ್ಷಗಳಿಂದಲೂ ಕುಡಿಯುವ ನೀರಿನ ಬಾವಿಗಳ ಐಟಂಗೆ ಏನು ಮೊಬಲಗು ಇದೆಯೋ ಅದನ್ನೇ ಈಗಲೂ ಒದಗಿಸಿದ್ದಾರೆ. ಏನಾದರೂ ಬದಲಾವಣೆ ಮಾಡಿದ್ದಾರೆಯೇ ಅಂದರೆ ಏನೂ ಇಲ್ಲ. ಅದರಲ್ಲಿ ಏನು ಕಷ್ಟ ಎಂದು ನಾನು ಮಂತ್ರಿಗಳನ್ನು ಕೇಳುತ್ತೇನೆ. ಈ ಬಾವಿಗಳ ರೇಟನ್ನು ಬದಲಾವಣೆ ಮಾಡಿ ಎಂದರೆ, ಅದು ಆಗುವುದಿಲ್ಲ ಎನ್ನುತ್ತಾರೆ. ಏತಕ್ಕೋಸ್ಕರ ಅದು ಆಗುವುದಿಲ್ಲ ? ಎಲ್ಲರ ಸಹಕಾರವನ್ನು ಸರ್ಕಾರದವರು ಕೇಳುವಾಗ ಈ ರೇಟನ್ನು ಬದಲಾವಣೆ ಮಾಡುವುದಕ್ಕೆ ಸರ್ಕಾರದವರು ಏತಕ್ಕೆ ಮನಸ್ಸು ಮಾಡುವುದಿಲ್ಲ ಎಂಬುದು ನನಗೆ ಅರ್ಥವಾಗುವುದಿಲ್ಲ. ಇದನ್ನು ಬದಲಾವಣೆ ಮಾಡತಕ್ಕದ್ದು ಅಗತ್ಯ. ಆದ್ದರಿಂದ ಮಾನ್ಯ ಮಂತ್ರಿಗಳು ಇದನ್ನು ಗಮನಿಸಬೇಕು.

ಈ ಪರಿಹಾರ ಕಾಮಗಾರಿಗಳಿಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಈಗ ಕೆಲವು ಕಡೆ ಸ್ವಲ್ಪಮಟ್ಟಿಗೆ ಮಳೆ ಆಗಿದೆ, ಆದ್ದರಿಂದ ಪರಿಸ್ಥಿತಿ ಸ್ವಲ್ಪ ಉತ್ತಮವಾಗಿದೆ ಎಂದು ಸರ್ಕಾರದವರ ಮನಸ್ಸಿಗೆ ಬಂದಿರಬಹುದು. ನಿಜವಾಗಿಯೂ ಸರ್ಕಾರದವರು ಆ ಒಂದು ಮನೋಭಾವವನ್ನು ತಾಳಬಾರದು. ಏತಕ್ಕೆಂದರೆ ಭೂಮಿ ಕಾದುಹೋಗಿದ್ದರಿಂದ ಈಗ ಸ್ವಲ್ಪ ಮಳೆ ಆಗಿರುವುದರಿಂದ ಉಷ್ಣ ಜಾಸ್ತಿಯಾಗಿದೆ, ಸೆಕೆ ಜಾಸ್ತಿಯಾಗಿದೆ. ಬೆಳೆಯನ್ನು ಕೆಡಿಸತಕ್ಕ ಪರಿಸ್ಥಿತಿಯಲ್ಲಿ ಮಳೆ ಬಂದಿದೆ. ಆದ್ದರಿಂದ ಮಳೆ ಬಂದಮೇಲೆ ಬೆಳೆ ಉತ್ತಮವಾಗಿದೆ ಎಂದು ಮಾನ್ಯ ಮಂತ್ರಿಗಳು ಭಾವಿಸುವುದಾದರೆ ಅದು ತಪ್ಪು ಅಭಿಪ್ರಾಯ. ಆದಕಾರಣ ಅಭಾವ ಪರಿಸ್ಥಿತಿಯ ಪರಿಹಾರ ಕಾಮಗಾರಿಗಳಿಗೆ ಸಂಬಂಧಪಟ್ಟ ವಿಶೇಷ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ತಕ್ಕ ಕ್ರಮವನ್ನು ಸರ್ಕಾರದವರು ಕೈಗೊಳ್ಳಬೇಕೆಂದು ನಾನು ಒತ್ತಿ ಒತ್ತಿ ಸರ್ಕಾರದವರಿಗೆ ಹೇಳುತ್ತೇನೆ. ಈ ಕೆಲಸವನ್ನು ತಾಲ್ಲೂಕ್ ಬೋರ್ಡಿನವರು ಮಾಡುತ್ತಾರೆ ಮತ್ತೊಬ್ಬರು ಮಾಡುತ್ತಾರೆ ಎನ್ನತಕ್ಕ ವಾದ ಇದೆ. ನಾನು ಒಂದು ತಾಲ್ಲೂಕ್ ಬೋರ್ಡ್ ಅಧ್ಯಕ್ಷನಾಗಿದ್ದೇನೆ. ಯಾವ ತಾಲ್ಲೂಕ್ ಬೋರ್ಡಿನವರೂ ಸ್ಕೇರ್ಸಿಟಿ ಕೆಲಸಕ್ಕೆ ಸಂಬಂಧಪಟ್ಟ ಹಾಗೆ ಒಂದು ನಯಾಪೈಸೆ ಕೆಲಸವನ್ನೂ ಮಾಡಿಸಿಲ್ಲ. ಈ ಕೆಲಸಗಳನ್ನು ಮಾಡಿಸಬೇಕೆಂದು ತಾಲ್ಲೂಕು ಬೋರ್ಡುಗಳಿಗೆ ಸರ್ಕ್ಯುಲರ್ ಏನೋ ಬಂದಿದೆ. ಆದರೆ ಅವರಿಗೆ ಆ ಕೆಲಸವನ್ನು ಮಾಡಿಸುವುದಕ್ಕೆ ಇನ್ನೂ ಹಣವನ್ನು ಸರ್ಕಾರದವರು ಕೊಟ್ಟಿಲ್ಲ. ಅವರಿಗೆ ಕೊಡುವುದಕ್ಕೆ ಮುಂಚೆ ಈಗ ಇರತಕ್ಕಂಥ ಮೆಷಿನರಿಯನ್ನು ಉಪಯೋಗಿಸಿಕೊಂಡು ಸರಿಯಾಗಿ ಕೆಲಸವನ್ನು ಏತಕ್ಕೆ ಮಾಡಲಿಲ್ಲ ಎಂದು ನಾನಾದರೂ ಕೇಳುತ್ತೇನೆ. ಈಗ ತಾಲ್ಲೂಕ್ ಬೋರ್ಡುಗಳಲ್ಲಿ ಚೆನ್ನಾಗಿ ಕೆಲಸ ಮಾಡತಕ್ಕ ಸಂಸ್ಥೆಗಳೂ ಇವೆ. ಎಲ್ಲಾ ಸಂಸ್ಥೆಗಳಲ್ಲೂ ಕೆಲಸ ಚೆನ್ನಾಗಿ ನಡೆಯುವುದಿಲ್ಲ ಎನ್ನುವ ವಾದವನ್ನು ನಾನು ಒಪ್ಪುವುದಿಲ್ಲ. ತಾಲ್ಲೂಕು ಬೋರ್ಡುಗಳಲ್ಲಿ ಒಳ್ಳೆಯ ಕೆಲಸವನ್ನು ಮಾಡತಕ್ಕ ಸಜ್ಜನರೂ ಇದ್ದಾರೆ. ಕೆಟ್ಟದ್ದನ್ನು ಸರಿ ಮಾಡತಕ್ಕ ವ್ಯವಸ್ಥೆ ನಮ್ಮ ಸರ್ಕಾರದಲ್ಲಿ ಇಲ್ಲ. ಕೆಟ್ಟ ಜನಗಳು ಜಾಸ್ತಿಯಾಗಿ ಸಜ್ಜನರು ಕಡಿಮೆ ಆಗುವುದಕ್ಕೆ ಪ್ರೋತ್ಸಾಹ ಸಿಕ್ಕುತ್ತಿದೆ ; ಬಾಯಿಬಡುಕರಿಗೆ ಪ್ರೋತ್ಸಾಹ ಜಾಸ್ತಿ ಸಿಕ್ಕುತ್ತಿದೆ. ಸರ್ಕಾರದವರು ಯಾವ ಒಂದು ಕೆಲಸವನ್ನು ಮಾಡಿಸಬೇಕಾದರೂ ಕೂಡ ತಮ್ಮ ಶಕ್ತಿ ಎಷ್ಟು ಇದೆ ಅಷ್ಟನ್ನೂ ಉಪಯೋಗಿಸಿಕೊಂಡು ಮಾಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಈ ಕೆಲಸಗಳನ್ನು ಮಾಡಿಸುವಾಗ ಪ್ರತಿಯೊಂದು ಕಡೆಯಲ್ಲಿಯೂ ಕೂಡ ಒಂದು ಇವ್ಯಾಲ್ಯುಯೇಷನ್ ಕಮಿಟಿ ಎಂದು ಮಾಡಿ, ಮಾಡಿದಂತಹ ಕೆಲಸಗಳು ಸರಿಯಾಗಿದೆ, ಅಥವಾ ಸರಿಯಾಗಿಲ್ಲ ಎಂದು ಹೇಳುವಂಥಹ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ನಾನು

(ಶ್ರೀ ಜಿ. ರಾಮೇಗೌಡ)

ಹೇಳುತ್ತೇನೆ. ಸರ್ಕಾರದವರು ಲಕ್ಷಗಟ್ಟಲೇ ಹಣವನ್ನೇನೋ ಖರ್ಚು ಮಾಡುತ್ತಾರೆ, ಆದರೆ ಕೆಲಸಗಳು ಸಮರ್ಪಕವಾಗಿ ನಡೆಯುವುದಿಲ್ಲ. ದಕ್ಷತೆ ಇಲ್ಲದೇ ಇರತಕ್ಕ ಅಧಿಕಾರಿಗಳನ್ನು ಸೂಕ್ಷ್ಮವಾದ ರೀತಿಯಲ್ಲಿ ಕಂಡುಹಿಡಿದು ಅವರನ್ನು ಬದಲಾಯಿಸಿ. ಅವರನ್ನು ಬೇಕಾದರೆ ನಿಮ್ಮ ಆಫೀಸುಗಳಲ್ಲಿ ಇಟ್ಟುಕೊಳ್ಳಿ. ಅವರನ್ನು ಜನತೆಯ ಸೇವೆಗೆ ಬಿಡಬೇಡಿ. ದಕ್ಷತೆ ಇಲ್ಲದ ಅಧಿಕಾರಿಗಳಿಂದ, ಲಂಚಕೋರ ಅಧಿಕಾರಿಗಳಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಆದ್ದರಿಂದ ಧರ್ಮ ರೀತಿಯಲ್ಲಿ ಉತ್ತಮ ಕೆಲಸವನ್ನು ಮಾಡತಕ್ಕ ಅಧಿಕಾರಿಗಳನ್ನು ಜನತೆಯ ಸೇವೆಯನ್ನು ಮಾಡುವುದಕ್ಕೆ ಹಾಕಿ. ಆಗ ಅವರು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತದೆ ಎಂದು ನಾನು ಒತ್ತಿ ಒತ್ತಿ ಹೇಳುತ್ತೇನೆ.

ಇನ್ನು ಕೊನೆಯದಾಗಿ ಒಂದೇ ಒಂದು ಸಲಹೆಯನ್ನು ನಾನು ಕೊಡುತ್ತೇನೆ. ತಹಶೀಲ್ದಾರರು ಅಸಿಸ್ಟೆಂಟ್ ಕಮೀಷನರು, ಮತ್ತು ಡೆಪ್ಯುಟೀ ಕಮೀಷನರು ಈ ಮೂರು ಮಟ್ಟದಲ್ಲಿ ಇವೊತ್ತು ವ್ಯವಹಾರ ನಡೆಯುತ್ತಿದೆ. ಆದ್ದರಿಂದ ಈಗ ಡೆಪ್ಯುಟೀ ಕಮೀಷನರಿಗೆ ಇರತಕ್ಕ ಅಧಿಕಾರವನ್ನು ಅಸಿಸ್ಟೆಂಟ್ ಕಮೀಷನರಿಗಾಗಲೀ, ತಹಶೀಲ್ದಾರರಿಗಾಗಲೀ, ಕೊಡುವುದಿಲ್ಲ. ಇದರಿಂದಾಗಿ ಈ ಮೂರು ಮಟ್ಟಗಳಲ್ಲಿಯೂ ಕೆಲಸ ನಡೆಸುವುದಕ್ಕೆ ಅಸಾಧ್ಯವಾಗುತ್ತದೆ. ಕೆಲಸಗಳನ್ನು ಜಾಗ್ರತೆಯಾಗಿ ಮಾಡುವುದಕ್ಕಾಗುವುದಿಲ್ಲ. ಅಧಿಕಾರವನ್ನು ವಿಕೇಂದ್ರೀಕರಣ ಮಾಡಿ ತಾಲ್ಲೂಕು ಮಟ್ಟದಲ್ಲಿ ಹೆಚ್ಚು ಅಧಿಕಾರವನ್ನು ಕೊಡಬೇಕು. ಆ ಕೆಲಸಗಳನ್ನು ಅವರು ನಿರ್ವಹಿಸುವುದಕ್ಕೆ ಸರ್ಕಾರದವರು ಸಹಾಯ ಮಾಡಬೇಕು. ಈ ಪ್ರಕಾರ ಕೆಲಸಗಳನ್ನು ವಹಿಸಿಕೊಟ್ಟು ಅದರ ಬಗ್ಗೆ ಸರ್ಕಾರದವರು ಹೆಚ್ಚು ಗಮನ ನೀಡಬೇಕು. ಈಗ ದೇಶದಲ್ಲಿ ಇರತಕ್ಕ ಅಭಾವ ಪರಿಸ್ಥಿತಿಯನ್ನು ನೀಗಲು ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವುದರ ಜೊತೆಗೆ ಈ ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸಲು ಒಂದು ಶಾಶ್ವತವಾದ ಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಂ. ಇದಿನಬ್ಬ (ಮಂಗಳೂರು-೨).—ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ ಅಭಾವ ಪರಿಸ್ಥಿತಿಯ ಸೂಚನೆಯನ್ನು ಕುರಿತು ನಾಲ್ಕು ಮಾತುಗಳನ್ನು ಹೇಳುವುದಕ್ಕೆ ನಾನು ಅಪೇಕ್ಷೆ ಮಾಡುತ್ತೇನೆ. ಅನೇಕ ಮಾನ್ಯ ಸದಸ್ಯರು ಈಗಾಗಲೇ ಈ ಬಗ್ಗೆ ವಿಪುಲವಾಗಿ ಚರ್ಚೆ ಮಾಡಿದ್ದಾರೆ. ಮತ್ತು ಅವರು ಉತ್ತಮವಾದ ಸಲಹೆಗಳನ್ನು ಸೂಚನೆಗಳನ್ನೂ ಕೊಟ್ಟು ಯಾವ ರೀತಿಯಲ್ಲಿ ಅಭಾವ ಪರಿಸ್ಥಿತಿಯನ್ನು ನೀಗಿಸಬೇಕು ಎಂಬುದನ್ನು ಹೇಳಿದ್ದಾರೆ. ನನ್ನ ಮಿತ್ರರು ಈಗಾಗಲೇ ಹೇಳಿದಹಾಗೆ ನಾನು 150ಮೈಲಿ ಕರಾವಳಿ ಪ್ರದೇಶವುಳ್ಳ ದಕ್ಷಿಣಕನ್ನಡ ಜಿಲ್ಲೆಯಿಂದ ಇಲ್ಲಿಗೆ ಚುನಾಯಿತನಾಗಿ ಬಂದಿದ್ದೇನೆ. ಕಡಲಿನ ಕಡು ಮಡಿಲಲ್ಲಿರತಕ್ಕ ದಕ್ಷಿಣ ಕನ್ನಡ ಜಿಲ್ಲೆ ಇವೊತ್ತು.........

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ ಇವೊತ್ತೇ ಮುಗಿಸುತ್ತೀರಾ ಅಥವಾ ನಾಳೆಗೂ ಅವಕಾಶ ಇದೆಯೋ? ನಾವು ಇಲ್ಲ ಏತಕ್ಕೆ ಬಂದಿದ್ದೇವೆ ಅಂತ ತಿಳಿದುಕೊಂಡಿದ್ದೀರಾ, ನಮಗೆ ಮಾತನಾಡಲಿಕ್ಕೆ ಬರೋದಿಲ್ಲ ಎಂದು ತಿಳಿದುಕೊಂಡಿದ್ದೀರಾ?

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಸ್ವಲ್ಪ ಸಾವಧಾನದಿಂದ ಮಾತನಾಡಬೇಕು. ಅವರ ವಿಪ್ ಅವರ ಲಿಸ್ಟ್ ಕೊಟ್ಟಿದ್ದಾರೆ. ಸದಸ್ಯರಿಗೆ ಏನಾದರೂ ಗ್ರೀವೆನ್ಸಸ್ ಇದ್ದರೆ, ಅವರ ಹತ್ತಿರ ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್.—ನಾವು ಜನತೆಯ ಪ್ರತಿನಿಧಿಗಳು, ಜನತೆಯಿಂದ ಚುನಾಯಿತರಾಗಿ ಬಂದಿದ್ದೇವೆ. ನಾವು ಇಲ್ಲಿ ದನ ಕಾಯುವುದಕ್ಕೆ ಬಂದಿದ್ದೇವೆ ಎಂಬುದು ತಮ್ಮ ಭಾವನೆಯೇ? ನಿಮ್ಮ ನೀತಿಯನ್ನು ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರು ಸಭೆಯಿಂದ ಹೊರಗಡೆ ಹೊರಟು ಹೋದರು).

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದು ಏನೆಂದರೆ ವಿರೋಧ ಪಕ್ಷದಲ್ಲಿ, ಮತ್ತು ಆಡಳಿತ ಪಕ್ಷದಲ್ಲಿ ಬಹಳ ಜನ ಮಾತನಾಡುವವರು ಇದ್ದಾರೆ. ಈಗ ತಾನೆ ಮಾನ್ಯ ಅಧ್ಯಕ್ಷರ ಹತ್ತಿರ ಮಾನ್ಯ ಮುಖ್ಯಮಂತ್ರಿಗಳ ಸಮೇತ ಈ ವಿಷಯವನ್ನು ಇಷ್ಟು ಹೊತ್ತು ಚರ್ಚೆ ಮಾಡುತ್ತಿದ್ದೆವು. ಅದರ ಮೇಲೆ ಈ ದಿವಸ 8 ಘಂಟೆಯಾಗಲೀ 9 ಘಂಟೆಯಾಗಲೀ ಅಲ್ಲಿಯವರೆಗೂ ಕುಳಿತು ಚರ್ಚೆ ಮಾಡಬಹುದು, ನಾಳೆ ದಿವಸ

ಪ್ರಶ್ನೋತ್ತರ ವೇಳೆ ಆದ ಮೇಲೆ ಮುಖ್ಯಮಂತ್ರಿಗಳು ಉತ್ತರ ಕೊಡುವುದು ಎಂದು ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಅದರಂತೆ ಚರ್ಚೆ ನಡೆಸುವುದರಿಂದ ನಮ್ಮ ಲಿಸ್ಟಿನಲ್ಲಿರತಕ್ಕ ಸದಸ್ಯರಿಗೆ ಎಲ್ಲರಿಗೂ ಅವಕಾಶವನ್ನು ಕಲ್ಪಿಸಿ ಕೊಡುವುದಕ್ಕೆ ಸಾಧ್ಯ ಎಂದು ನಾನು ಹೇಳುತ್ತೇನೆ.

ಉಪಾಧ್ಯಕ್ಷರು.—ಈ ಸಭೆಯನ್ನು ಹೆಚ್ಚು ಹೊತ್ತು ನಡೆಸಲು ನಾನು ತಯಾರಾಗಿದ್ದೇನೆ. ವಿಪ್‌ಗಳು ಏನು ಲಿಸ್ಟ್ ಕೊಟ್ಟಿದ್ದಾರೆಯೋ ಅದರ ಪ್ರಕಾರ ಹೆಸರುಗಳನ್ನು ಕರೆಯುತ್ತೇನೆ. ಶ್ರೀ ವಾಟಾಳ್ ನಾಗರಾಜ್ ಅವರ ಹೆಸರು ಈ ಲಿಸ್ಟಿನಲ್ಲಿ ಇಲ್ಲ.

* * * * * *

ಶ್ರೀ ಬಿ. ಪಿ. ಗಂಗಾಧರ್.—ನೀವು ನನ್ನನ್ನು ಹೆದರಿಸಲಾರಿರಿ. ಬೇಕಾದರೆ ಹೊರಟು ಹೋಗುತ್ತೇನೆ.

Mr. DEPUTY SPEAKER.—The hon'ble member may withdraw from the House.

(Sri B. P. Gangadhar withdrew from the House)

* * * *

5-00 P.M.

ಶ್ರೀ ಬಿ. ಎಂ. ಇದಿನಬ್ಬ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು 150 ಇಂಚು ಮಳೆ ಬರುತ್ತಿತ್ತು ಇದರಿಂದ ಒಳ್ಳೆಯ ಬೆಳೆ ಬೆಳೆಯುತ್ತಿದ್ದರು. ಅದೇ ರೀತಿ ಉತ್ತರ ಕನ್ನಡ ಜಿಲ್ಲೆಯಲ್ಲೂ ಒಳ್ಳೆಯ ಮಳೆ ಬರುತ್ತಿತ್ತು. ಯಾವ ಯಾವ ಕಾಲಕ್ಕೆ ಯಾವ ಯಾವ ಮಳೆ ಬರಬೇಕೋ ಅವು ಸರಿಯಾಗಿ ಬಂದರೆ ಬೆಳೆ ಕೂಡ ಚೆನ್ನಾಗಿ ಆಗುತ್ತದೆ. ನಮ್ಮ ಜಿಲ್ಲೆಯಲ್ಲಿ ಈಚೆಗೆ ಕೆಲವು ಕಾಲ ಮಳೆ ಸಕಾಲದಲ್ಲಿ ಬಾರದೇ ಇದ್ದುದರಿಂದಾಗಿ ರೈತರಿಗೆ ಅನುಕೂಲವಾಗುವಂತೆ ಅಭಾವದ ಪರಿಸ್ಥಿತಿಗೆ ಅನುಕೂಲವಾಗುವಂತಹ ಕಾರ್ಯಗಳನ್ನು ಕೈಗೊಳ್ಳಲೇ ಬೇಕಾಗುತ್ತದೆ. ನಾವು ಹೋದ ಮಾಹೆ 19, 20, 21ನೇ ತಾರೀಖುಗಳ ವರ್ತಮಾನ ಪತ್ರಿಕೆಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆರೆಯ ಹಾವಳಿಯಿಂದಾಗಿ ಅನೇಕ ಜನರು ಸತ್ತರು ಮತ್ತು ಇದರ ಬಗ್ಗೆ ಸರಕಾರಕ್ಕೆ ತಕ್ಷಣ ತಿಳಿಸಿದಾಗ ಸರಕಾರದವರು ವಿಚಾರ ಮಾಡಿ ಸೂಕ್ತವಾದ ಕ್ರಮಗಳನ್ನು ತೆಗೆದುಕೊಂಡರು ಅಲ್ಲದೆ ಒಂದು ಸಂಸಾರದಲ್ಲಿದ್ದ ಹತ್ತು ಜನರಿಗೆ ವಿಪರೀತ ಹಾನಿಯಾಗಿದೆ ಎಂದು ಸರಕಾರದಲ್ಲಿ ವಿನಂತಿ ಮಾಡಿದಾಗ ಮಂತ್ರಿಗಳು ಸ್ವತಃ ಇಲ್ಲಿನ ಜನಕ್ಕೆ ಎಷ್ಟು ನಾಶವಾಗಿದೆ ಮತ್ತು ಎಷ್ಟು ಬೆಳೆಗೆ ಹಾನಿಯಾಗಿದೆ ಎನ್ನುವುದನ್ನು ನೋಡಿ ತಕ್ಷಣ ಅಲ್ಲಿನ ಅಧಿಕಾರಿಗಳಿಗೆ ಸೂಕ್ತವಾದ ಆದೇಶವನ್ನು ಕೊಟ್ಟು ಕ್ಷಿಪ್ರದಲ್ಲೇ ಕೆಲಸ ಮಾಡಬೇಕೆಂದು ನಮ್ಮ ಮುಖ್ಯ ಮಂತ್ರಿಗಳೂ ಅವಶ್ಯಕವಾದ ಎಲ್ಲ ಪರಿಹಾರ ಕಾರ್ಯಕ್ರಮಗಳನ್ನು ಮಾಡಿ ಅದಕ್ಕೆ ಬೇಕಾಗುವ ಹಣವನ್ನೂ ಒದಗಿಸಿಕೊಡಿ ಎಂದು ಹೇಳಿದರು. ಮತ್ತು ಒಂದು ಸಂಸಾರದಲ್ಲಿ ಹತ್ತು ಜನರು ಸತ್ತರು ಎನ್ನುವ ವಿಚಾರ ತಿಳಿದು ಅವರಿಗೆಲ್ಲಾ ಸೂಕ್ತವಾದ ಸಹಾಯ ಮಾಡಬೇಕು ಎಂದು ಏರ್ಪಾಡು ಮಾಡಿದರು. ನೆರೆ ಬಂದಾಗ ಸುಮಾರು ಹತ್ತು ಸಾವಿರ ಎಕರೆಗಳಷ್ಟು ಬೆಳೆಗೆ ತೊಂದರೆಯಾಗಿ ಅವು ಪೂರ್ತಿ ಹಾಳಾಗಿದೆ. ಹಿಂದೇನೋ ಇಲ್ಲಿ ಒಳ್ಳೆಯ ರೀತಿಯಾಗಿ ಬೆಳೆಯಾಗುತ್ತಿತ್ತು. ಆದರೆ ಈಚೆಗೆ ನೆರೆಯಿಂದ ತೊಂದರೆಯಾಯಿತು ಅಲ್ಲದೆ ಬೆಳೆ ಬಂದು ತೆನೆ ಬಂದಿರುವಾಗ ಅದಕ್ಕೆ ಒಳ್ಳೆಯ ಮಳೆ ಬೇಕು. ಇಲ್ಲಿ ಒಬ್ಬರು ಮಾನ್ಯ ಸದಸ್ಯರು ಹೇಳಿದಂತೆ ಮಘ ಹಾಗೂ ಪುಬ್ಬ ಮಳೆ ಸಹ ಸಕಾಲದಲ್ಲಿ ಬಂದರೆ ಬತ್ತದ ತೆನೆಗಳು ಬಲಿತು ಚೆನ್ನಾಗಿ ಬೆಳೆ ಬರುತ್ತದೆ. ಇಲ್ಲದೇ ಹೋದರೆ ಬತ್ತದ ಬೆಳೆ ನಾಶವಾಗುತ್ತದೆ. ಈ ಸಾರಿ ಮಘೆ, ಪುಬ್ಬೆ ಮಳೆ ಬಾರದೆ ಈಚೆಗೆ ಇಪ್ಪತ್ತು ದಿನಗಳಲ್ಲಿ ಸ್ವಲ್ಪ ಮಳೆ ಬಂದುದರಿಂದ ಅಲ್ಲಲ್ಲಿ ಸ್ವಲ್ಪ ಬೆಳೆಯಾಗಿದೆ ಮತ್ತು ಬತ್ತದ ತೆನೆಗಳೂ ಬರುತ್ತಿವೆ. ಇದಕ್ಕೆ ಈಗ ಸ್ವಲ್ಪ ಮಳೆ ಬೇಕು. ಮಳೆ ಬಾರದೇ ಹೋದರೆ ಈಗ ಇರುವ ಪೈರು ಒಣಗಿ ಹೋಗುತ್ತದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಸಮಯದಲ್ಲಿ ಮಳೆ ಬೀಳಬೇಕು. ಹಿಂದೆ ಇಲ್ಲಿ ಸುಮಾರು 150 ಇಂಚಿನಷ್ಟು ಮಳೆ ಬರುತ್ತಿತ್ತು. ಈಚೆಗೆ ಅದು ಕಡಿಮೆಯಾಗಿದೆ. ಒಳ್ಳೆ ಮಳೆ ಬಂದರೆ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉತ್ತರ ಕನ್ನಡ ಜಿಲ್ಲೆ ಇಲ್ಲಿ ಒಳ್ಳೆಯ

* * * Matter expunged as ordered by the Chair.

(ಶ್ರೀ ಬಿ. ಎಂ. ಇದಿನಬ್ಬ)

ಬೆಳೆಯಾಗುತ್ತದೆ ಮತ್ತು ಕಳೆದ ಐವತ್ತು ವರ್ಷಗಳಿಂದಲೂ ಬತ್ತದ ಬೆಳೆ ಜಾಸ್ತಿ ಬರುತ್ತಿದ್ದುದರಿಂದ ಹೊರಕ್ಕೂ ಕೂಡ ಕಳುಹಿಸಲಾಗುತ್ತಿತ್ತು. ಇಂತಹ ಬತ್ತದ ಕಣಜವಾಗಿದ್ದ ಈ ಪ್ರದೇಶದಲ್ಲಿ ಇಂದು ಅಭಾವದ ಪರಿಸ್ಥಿತಿ ಒದಗಿ ಬಂದಿದೆ. ಮತ್ತು ಹಿಂದೆ ಒಳ್ಳೆಯ ಮಳೆ ಬರುತ್ತಿದ್ದುದು ಇಂದು ಅಂತಹ ಮಳೆ ಬಾರದೇ ಇರಲು ಕಾರಣ ಇಲ್ಲಿದ್ದ ಸುಮಾರು ನೂರು ಎಕರೆಗಳಷ್ಟು ಪ್ರದೇಶದಲ್ಲಿದ್ದ ಎಷ್ಟೋ ಮರಗಳನ್ನು ಕಡಿದು ನಾಶ ಮಾಡಿರುವುದು. ಬ್ರಿಟಿಷರ ಕಾಲದಿಂದಲೂ ನಮ್ಮ ಹಿಂದೂ ಸ್ಥಾನದಲ್ಲಿರುವ ಅರಣ್ಯ ಸಂಪತ್ತು ಬಹಳ ಚೆನ್ನಾಗಿತ್ತು ಎಂದು ಎಲ್ಲರೂ ಹೇಳುತ್ತಿದ್ದರು. ಇಂದು ಇಂತಹ ಅರಣ್ಯ ಸಂಪತ್ತನ್ನು ಸರಿಯಾದ ರೀತಿಯಲ್ಲಿ ಕಾಪಾಡದೆ ನಾಶ ಮಾಡುವುದು ಸರಿಯಲ್ಲ.

[Mr. Chairman (Sri G. Rame Gowda) in the Chair]

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅದರಲ್ಲೂ ಕಾರ್ಕಳ ತಾಲ್ಲೂಕಿನಲ್ಲಿದ್ದಂತಹ ಅನೇಕ ಮರಗಳನ್ನು ಕಡಿದು ನಾಶ ಮಾಡಿರುವುದರಿಂದ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಹೆಚ್ಚು ತೊಂದರೆಯಾಗಿದೆ ಮತ್ತು ಪ್ರಕೃತಿಯ ವಿಕೋಪದಿಂದಲೂ ನಮ್ಮ ಭಾಗಕ್ಕೆ ಬಹಳ ತೊಂದರೆಯಾಗಿದೆ. ಇದಕ್ಕಾಗಿ ನಮ್ಮ ಜಿಲ್ಲೆಗೆ ಅನುಕೂಲವಾಗುವಂತೆ ಕೆಲವು ಪ್ರಾಮುಖ್ಯವಾದ ಸೂಚನೆಗಳನ್ನು ಇಲ್ಲಿ ಕೊಡಲು ಇಚ್ಛಿಸುತ್ತೇನೆ. ಇಂತಹ ಪರಿಸ್ಥಿತಿಯನ್ನು ಪಯೋಗಿಸಿಕೊಳ್ಳುವ ಕಾಳಸಂತೆಕೋರರು ಇರುತ್ತಾರೆ. ಇವರುಗಳು ಇಂತಹ ಸಮಯವನ್ನು ಪಯೋಗಿಸಿಕೊಂಡು ಬಡವರ ರಕ್ತವನ್ನು ಹೀರುತ್ತಿರುತ್ತಾರೆ, ಬಡವರ ರಕ್ತವನ್ನು ಕುಡಿಯಲಿಕ್ಕಾಗಿ ಇವರು ಕೆಲಸ ಮಾಡುತ್ತಿರುತ್ತಾರೆ. ನಾವು ಈಚೆಗೆ ಪೇಟೆಯಲ್ಲಿ ನೋಡುತ್ತಿರುತ್ತೇವೆ. ಒಂದು ಕೆ. ಜಿ. ಧಾನ್ಯಕ್ಕೆ ಹತ್ತು, ಹದಿನೈದು ಇಪ್ಪತ್ತು ಪೈಸೆಯಷ್ಟು ಬೆಲೆ ಹೆಚ್ಚಾಗಿದೆ. ಇದರಿಂದ ಹೆಚ್ಚು ದುಡ್ಡು ಸಂಪಾದನೆ ಮಾಡಲು ಅವರಿಗೆ ಅವಕಾಶವಾಗಿದೆ. ಇದರ ಕಡೆಗೆ ನಿಗಾ ಕೊಡಬೇಕು. ದೊಡ್ಡ ಮೀನು ಚಿಕ್ಕ ಮೀನನ್ನು ನುಂಗಿತು ಎನ್ನುವಂತೆ ಶ್ರೀಮಂತರು ಬಡವರ ರಕ್ತವನ್ನು ಹೀರಲು, ಬಡವರನ್ನು ಶೋಷಣೆ ಮಾಡಲು ಕಾಳಸಂತೆಕೋರರಾಗಿ ಕೆಲಸ ಮಾಡುತ್ತಿರುವುದು ನಮಗೆ ಗೋಚರವಾಗುತ್ತಿದೆ. ಕಾಳಸಂತೆಕೋರರು ಮಾಡಿಕೊಂಡಿರುವ ಗೋಡೌನುಗಳನ್ನೆಲ್ಲಾ ಸರಕಾರದವರೇ ತಮ್ಮ ವಶಕ್ಕೆ ತೆಗೆದುಕೊಂಡು ಆದರ ಮುಖೇನ ಬಡ ಜನಕ್ಕೆ ಕಾಳು ಕಡ್ಡಿ ಸಿಗುವಂತೆ ವ್ಯವಸ್ಥೆ ಮಾಡಬೇಕು. ಈ ಸಂದರ್ಭದಲ್ಲಿ ನಮ್ಮ ಮುಖ್ಯ ಮಂತ್ರಿಗಳೇನೋ ಇಂತಹ ಅಭಾವದ ಕಾಲದಲ್ಲಿ ಹೇಳಿಕೆಗಳನ್ನು ಕೊಡುವುದರಿಂದ ಅಭಾವವೇನೂ ಪರಿಹಾರವಾಗುವುದಿಲ್ಲ. ನಮ್ಮ ದೇಶದಲ್ಲಿರುವ ಬಡಜನತೆಯನ್ನು ಉಳಿಸಲು, ನಮ್ಮ ರಾಜ್ಯವನ್ನು ಉಳಿಸಲು ಕೈಗೊಂಡಿರುವ ಅಭಾವದ ಕೆಲಸಗಳನ್ನು ನಡೆಸುತ್ತಿರುವ ಅಧಿಕಾರಿಗಳಲ್ಲಿ ಅನ್ಯಾಯ ಮಾಡತಕ್ಕವರು ಇದ್ದರೆ ಅಂತಹವರನ್ನು ಉಗ್ರವಾಗಿ ಶಿಕ್ಷಿಸುತ್ತೇವೆ ಎಂದು ಹೇಳಿದ್ದಾರೆ. ಆ ಬಗ್ಗೆ ಒಂದು ಆದೇಶವನ್ನು ನಮ್ಮ ಸರ್ಕಾರದವರು ಹೊರಡಿಸಿದರೆ ಆಗ ಜನರಲ್ಲಿ ಒಂದು ರೀತಿಯಾದ ಭಯ ಬರುತ್ತದೆ. ಖಂಡಿತವಾಗಿಯೂ ಇದರಲ್ಲಿ ಯಾವ ದಾಕ್ಷಿಣ್ಯವನ್ನೂ ಇಟ್ಟುಕೊಳ್ಳದೆ ಇವರು ಶ್ರೀಮಂತರು, ಇವರು ಬಡವರು ಎನ್ನುವ ಭೇದಭಾವವನ್ನು ಇಡದೇ ಸರಿಯಾಗಿ ಎಲ್ಲರಿಗೂ ಕಡ್ಡಿ ಕಾಳು ಸಿಗುವಂತೆ ವ್ಯವಸ್ಥೆ ಮಾಡಬೇಕು. ಹಿಂದೆ ಚರಿತ್ರೆಯಲ್ಲಿ ನಾವು ಓದಿದ್ದೇವೆ. ಉಮ್ಮರ್ ಕಲೀಫರು ರಾಜ್ಯವಾಳುತ್ತಿದ್ದಾಗ ಅಲ್ಲಿನ ರಾಜನಾಗಿದ್ದ ಕಲೀಫರು ನ್ಯಾಯಕ್ಕೆ ಪ್ರಸಿದ್ಧರಾಗಿದ್ದವರು. ಇವರ ಕಾಲದಲ್ಲಿ ಇವರ ಮಗನೇ ತಪ್ಪು ಮಾಡಿದರು ಎಂದು ಅವರಿಗೆ ದೂರು ಬಂದಾಗ ಅವರನ್ನು ವಿಚಾರಣೆ ಮಾಡಿ ಎಲ್ಲ ಜನರೆದುರಿಗೂ ತಪ್ಪು ಸಾಬೀತಾದಾಗ ಅವನಿಗೆ 150 ಚಡಿ ಏಟುಗಳನ್ನು ಕೊಡಬೇಕೆಂದು ಆಜ್ಞೆ ಮಾಡಿ ಬಾಕಿ ಎಲ್ಲ ಜನಗಳಿಗೂ ನ್ಯಾಯ ದೊರೆಯುವಂತೆ ಇಲ್ಲೂ ಮಾಡಿದರು ಎನ್ನುವುದು ನಮಗೆ ಗೊತ್ತಾಗುತ್ತದೆ. ಇದನ್ನು ಉದಾಹರಣೆಯಾಗಿ ಇಲ್ಲಿ ಹೇಳಿದೆ. ಆದುದರಿಂದ ತಪ್ಪು ಮಾಡಿದವರಿಗೆ ಉಗ್ರವಾದ ಶಿಕ್ಷೆಯನ್ನು ಅವರು ಯಾವ ಅಧಿಕಾರಿಗಳೇ ಆಗಲೀ ಅವರಿಗೆ ವಿಧಿಸಿದರೆ ಆಡಳಿತದಲ್ಲಿ ಬಿಗಿ ಇರುತ್ತದೆ ಮತ್ತು ಆಗ ಅದಕ್ಕನುಗುಣವಾದ ರೀತಿಯಲ್ಲಿ ಹೆದರುತ್ತಾರೆ. ಇಲ್ಲದೆ ಇದ್ದರೆ ಪ್ರಜಾಪ್ರಭುತ್ವ ಶಿಥಿಲವಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಎಷ್ಟು ಕಠಿಣವಾದ ಧೋರಣೆಯನ್ನು ತಾಳಿದರೆ ಅಷ್ಟು ಜನಕ್ಕೆ ಅನುಕೂಲವಾಗುತ್ತದೆ. ಸರಕಾರಕ್ಕೆ ಬಡವರಿಂದಲ್ಲದೇ ಶ್ರೀಮಂತರಿಂದಲೂ ಟ್ಯಾಕ್ಸು ಹಣ ಬರಬಹುದು. ಆದರೆ ಎಲ್ಲರಿಂದ ಬಂದ ಹಣವನ್ನು ಉಪಯೋಗಿಸಿಕೊಳ್ಳುವಾಗ ಅಧಿಕಾರಿಗಳಾದವರು ಕಟ್ಟುನಿಟ್ಟಾಗಿ ಸರಕಾರದ ಧೋರಣೆಯಂತೆ ಕೆಲಸ ಮಾಡುವುದು ಅವಶ್ಯಕ. ಸರಕಾರದ ಹೇಳಿಕೆಯಂತೆ ಅದನ್ನು ಕಾರ್ಯ ರೂಪಕ್ಕೆ ತರುವುದು ಅತಿ ಮುಖ್ಯ. ಮಲೆನಾಡು ಭಾಗಗಳಾದ ಶಿವಮೊಗ್ಗಾ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ಕಿಯನ್ನು ಕಾಳಸಂತೆಯಲ್ಲಿ ಮಾರಲು ಕೇರಳ ಬಾರ್ಡರಿಗೆ

ಸಾಗಿಸಲು, ಸಮುದ್ರದ ಮೇಲೆ ಬೋಟುಗಳ ಮೂಲಕ ಲಾರಿಗಳ ಮೂಲಕ ಸಾಗಿಸುತ್ತಿದ್ದಾರೆ. ಇದನ್ನು ತಡೆಗಟ್ಟಲು ಇನ್ನೂ ಸಾಧ್ಯವಾಗಿಲ್ಲ. ಸರಕಾರ ಇಂತಹ ಕಾಳಸಂತೆಕೋರರನ್ನು ಬಗ್ಗು ಬಡಿಯಲು ಬೇಕಾದ ಕ್ರಮಗಳನ್ನು ಬಿಗಿಯಾಗಿ ತೆಗೆದುಕೊಳ್ಳಬೇಕು. ಇಂತಹ ಅಭಾವದ ಪರಿಸ್ಥಿತಿಯಲ್ಲಿ ಕಾಳಸಂತೆಕೋರರನ್ನು ಹಿಡಿದು ಅವರಿಂದ ಪಡೆಯುವ ಅಕ್ಕಿಯನ್ನು ಬಡ ಜನಕ್ಕೆ ಹಂಚುವ ವ್ಯವಸ್ಥೆ ಮಾಡಬೇಕು. ಇಲ್ಲದೇ ಹೋದರೆ ಇದು ಹೇಗಾಗುತ್ತದೆ ಎಂದರೆ ಗೋಣೀ ಚೀಲದ ತಳದಲ್ಲಿ ಎರಡು ಮೂರು ತೂತುಗಳನ್ನು ಹೊಡೆದು ಪೂರ್ತಿ ಚೀಲದಲ್ಲಿ ಕಾಳನ್ನು ತುಂಬಿದರೆ ಅದು ದಾರಿಯಲ್ಲೇ ಸುರಿದು ಹೋಗುವಂತೆ ಇದು ಆಗುತ್ತಿದೆ. ಕಳ್ಳಸಂತೆಕೋರರು ಸಮುದ್ರದ ಮೇಲೆ, ದೋಣಿಗಳ ಮೂಲಕ ದಿನನಿತ್ಯ ಅಕ್ಕಿಕಾಳನ್ನು ಕೇರಳ ಬಾರ್ಡರಿಗೆ ಸಾಗಿಸುತ್ತಿದ್ದಾರೆ. ಕೇರಳದ ಗಡಿಯಲ್ಲಿ ಹೋಗುತ್ತಿರುವ ಈ ಕಾಳನ್ನು ತಡೆಗಟ್ಟಿ ಇದಕ್ಕೆ ತಕ್ಕ ಬಂದೋಬಸ್ತನ್ನು ಮಾಡಬೇಕು. ನಮ್ಮ ರಾಜ್ಯದ ತರುಣ ಮುಖ್ಯಮಂತ್ರಿಗಳಾದವರು ಖಂಡಿತ ಇದರ ಬಗ್ಗೆ ಧೈರ್ಯ ದಿಂದ ತಕ್ಕ ಕ್ರಮ ತೆಗೆದುಕೊಳ್ಳುತ್ತಾರೆ ಎಂಬ ನಂಬಿಕೆ ನನಗಿದೆ. ಅವರೂ ಕೂಡ ದೇಶದಲ್ಲಿರುವ ಅಭಾವದ ಪರಿಸ್ಥಿತಿಯನ್ನು ಚೆನ್ನಾಗಿ ಅರಿತಿದ್ದಾರೆ ಮತ್ತು ದನಕರುಗಳಿಗೆ ಮೇವಿಲ್ಲ ಎನ್ನುವುದೂ ಅವರಿಗೆ ಗೊತ್ತಿದೆ. ಸಕಾಲದಲ್ಲಿ ಮಳೆಯಾಗದೇ ಹಳ್ಳಿ ಜನ ಬಹು ಕಷ್ಟಪಡುತ್ತಿದ್ದಾರೆ ಎನ್ನುವುದೂ ಅವರಿಗೆ ಗೊತ್ತಿದೆ. ಇದಕ್ಕಾಗಿ ಪಟ್ಟಣಗಳಲ್ಲಿರುವ ಜನಕ್ಕೆ ಯಾವ ರೀತಿಯಾಗಿ ಕಾಳು ಕಡ್ಡಿಗಳನ್ನು ಹಂಚುತ್ತಿದ್ದಾರೋ ಅದೇ ರೀತಿ ಹಳ್ಳಿಗಳಲ್ಲಿರುವ ಜನಕ್ಕೂ ಕಾಳುಗಳನ್ನು ತರಿಸಿ ಹಂಚುವ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದು ಅವಶ್ಯಕ. ಹೇಗಾದರೂ ಮಾಡಿ ಇಂದು ಇರುವ ಅಭಾವದ ಪರಿಸ್ಥಿತಿಯನ್ನು ಎದುರಿಸಬೇಕಾದ ಪರಿಸ್ಥಿತಿ ಬಂದಿದೆ. ನಮ್ಮ ದೇಶದ ಸುಮಾರು ಶೇಕಡ ಎಂಬತ್ತರಷ್ಟು ಜನ ಹಳ್ಳಿಗಳಲ್ಲಿ ವಾಸ ಮಾಡತಕ್ಕವರೇ ಆಗಿರುತ್ತಾರೆ. ಅವರನ್ನು ಉಳಿಸು ವುದರ ಸಲುವಾಗಿ ನಾವು ಇಲ್ಲಿ ಸರಕಾರಕ್ಕೆ ಏನೇನು ಸೂಚನೆಗಳನ್ನು ಕೊಟ್ಟಿದ್ದೇವೋ ಅವುಗಳನ್ನು ಸ್ವಲ್ಪಮಟ್ಟಿಗಾದರೂ ಕಾರ್ಯರೂಪಕ್ಕೆ ತರುವಂತೆ ಮಾಡುವುದರ ಕಡೆಗೆ ಲಕ್ಷ್ಯ ಕೊಡುವುದು ಅಗತ್ಯ. ಇದರಲ್ಲಿ ನಾವು ಮದ್ರಾಸು ಕರ್ಣಾಟಕದವರು ಅವರು ಮುಂಬಯಿ ಕರ್ಣಾಟಕದವರು ಬೇರೆ ಭಾಗ ದವರು ಎನ್ನುವ ಭೇದಭಾವಗಳು ಬೇಡ. ಎಲ್ಲರಿಗೂ ಅನುಕೂಲವಾಗುವಂತೆ ನಾವೆಲ್ಲರೂ ಸೇರಿ ದುಡಿಯೋಣ ಎಂದು ನಾವು ದೇವರನ್ನು ಪ್ರಾರ್ಥನೆ ಮಾಡೋಣ.

ಈ ಸಂದರ್ಭದಲ್ಲಿ ಪೂಜ್ಯ ಕವಿಗಳಾದ ದ. ರಾ. ಬೇಂದ್ರೆಯವರು ಒಂದು ಕವನದಲ್ಲಿ ಹೀಗೆ ಹೇಳುತ್ತಾರೆ :

''ಹರನ ಮುಡಿಯಿಂದ ಇಳಿದು ಬಾ ತಾಯೆ,
ಋಷಿಯ ಅಡಿಯಿಂದ ಇಳಿದು ಬಾ ತಾಯಿ.''

ಎಂದು ಹೇಳುತ್ತಾ ವರುಣದೇವನನ್ನು ನಾವು ಇಲ್ಲಿ ಪ್ರಾರ್ಥನೆ ಮಾಡೋಣ.

ಚೇರ್ಮನ್ ಅವರು.—ಶ್ರೀ ಬಿ. ಪಿ. ಗಂಗಾಧರ್‌ರವರು ಸಭೆಯಲ್ಲಿ ಈಗ ಹಾಜರಿಲ್ಲ. ಶ್ರೀ ಸಿ. ಎಂ. ಎಸ್. ಶಾಸ್ತ್ರಿ.

†ಶ್ರೀ ಸಿ. ಎಂ. ಎಸ್. ಶಾಸ್ತ್ರಿ (ಚಿಕ್ಕಮಗಳೂರು).—ಮಾನ್ಯ ಸಭಾಧ್ಯಕ್ಷರೇ, ಈ ದಿವಸ ಮೈಸೂರು ರಾಜ್ಯದಲ್ಲಿ ಉಂಟಾಗಿರತಕ್ಕ ಕ್ಷಾಮವನ್ನು ಯಾವ ರೀತಿ ಪರಿಹಾರ ಮಾಡಬೇಕು ಎನ್ನುವ ವಿಷಯ ಕುರಿತು ನಾವೀಗ ಚರ್ಚೆ ಮಾಡುತ್ತಿದ್ದೇವೆ. ಚಿಕ್ಕಮಗಳೂರೇನೋ ಮಲೆನಾಡು ಪ್ರದೇಶದಲ್ಲಿರ ತಕ್ಕ ಒಂದು ಜಿಲ್ಲೆ ಎನ್ನುವುದು ಹಳೆದು. ಅಲ್ಲಿ ಇಲ್ಲಿಯತನಕ ಸ್ವಾಭಾವಿಕವಾಗಿ ಮಳೆಬೆಳೆಗಳು ಆಗುತ್ತಿದ್ದವು. ಆದರೆ ಅದೇನು ಕಾರಣದಿಂದಲೋ ಇಲ್ಲಿಗೆ ನಾಲ್ಕಾರು ವರ್ಷಗಳಿಂದ ನಮ್ಮ ಮಲೆನಾಡು ಪ್ರಾಂತ ಕೂಡ ಅಭಾವದ ದವಡೆಗೆ ಸಿಕ್ಕಿ ನರಳುತ್ತಿದೆ. ಜನರು ಅನೇಕ ಕಷ್ಟನಷ್ಟಗ ಳಿಗೆ ಈಡಾಗಿದ್ದಾರೆ. ವಾಸ್ತವ ಪರಿಸ್ಥಿತಿಗಳು ಹೀಗಿದ್ದಾಗ್ಯೂ ಸರ್ಕಾರದವರು ಇದನ್ನು ಸ್ಕೇರ್ಸಿಟಿ ಎಂದು ಕರೆದಿರತಕ್ಕದ್ದು ಸರಿಯಲ್ಲ. ಇದನ್ನು ಕೂಡಲೇ ಬದಲಾಯಿಸಿ ಇಡೀ ರಾಜ್ಯ ಕ್ಷಾಮಕ್ಕೆ ಒಳಗಾಗಿದೆ ಎಂದು ಸಾರಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದಕ್ಕೆ ನಾವು ಪರಿ ಹಾರವನ್ನು ಹುಡುಕತಕ್ಕ ಮಾರ್ಗದಲ್ಲಿ ವಾರ್ ಎಮರ್ಜೆನ್ಸಿ ಬೇಸಿಸ್ ಮೇಲೆ ಕಾರ್ಯಗಳನ್ನು ನಡೆಸಬೇಕಾಗಿದೆ. ಹಿಂದಿನ ಜನವರಿ ತಿಂಗಳಲ್ಲಿ ನಮ್ಮ ಸರ್ಕಾರದವರು ಇದನ್ನು ತಡೆಗಟ್ಟಲು ಕೇಂದ್ರ ಸರ್ಕಾರಕ್ಕೆ 10 ಕೋಟಿ ರೂಪಾಯಿಗಳನ್ನು ಕೇಳಿದ್ದರು. ಆದರೆ ಆಗ್ಗೂ ಈಗ್ಗೂ ಪರಿಸ್ಥಿತಿ ತುಂಬಾ ಬದಲಾವಣೆಯಾಗಿದೆ. ಈ ದಿವಸ ಪರಿಸ್ಥಿತಿ ಪೂರಾ ಹದಗೆಟ್ಟಿದೆ. ನಮಗೆ ಈ ದಿವಸ ಒಂದು ನೂರು ಕೋಟಿ ರೂಪಾಯಿಗಳಾದರೂ ಸಾಲದು. ಏನೋ ಪ್ರತಿಯೊಂದು ಜಿಲ್ಲೆಗೂ ಕನಿಷ್ಟ ಪಕ್ಷ 5–5 ಕೋಟಿ ರೂಪಾಯಿಗಳನ್ನಾದರೂ ಖರ್ಚು ಮಾಡಿದರೆ ಪರಿಸ್ಥಿತಿಯನ್ನು ಸ್ವಲ್ಪಮಟ್ಟಿಗಾ

(ಶ್ರೀ ಸಿ. ಎಂ. ಎಸ್. ಶಾಸ್ತ್ರಿ)

ದರೂ ಸುಧಾರಣೆ ಮಾಡಬಹುದು. ಇದಕ್ಕಾಗಿ ಸರ್ಕಾರಕ್ಕೆ ಬೇಕಾಗುವ ಅಂಕಿ ಅಂಶಗಳನ್ನು ಕೂಡಲೇ ಒದಗಿಸುವಂತೆ ಅಧಿಕಾರಿಗಳಿಗೆ ಅಜ್ಞೆಯನ್ನು ಕಳುಹಿಸಬೇಕು. ಹಾಗಿಲ್ಲವಾದರೆ ನಮಗೆ ಅಗತ್ಯವಾಗಿ ಬೇಕಾಗಿರತಕ್ಕ ಹಣ ಸಿಕ್ಕುವುದಿಲ್ಲ. ಈ ದಿವಸ ಮಳೆ ಹೋಗಿದೆ ಎಂಬುದು ಮುಖ್ಯ ವಲ್ಲ. ಮುಂದೆ ನಾವು ಪುನಃ ಇಲ್ಲಿ ಪಚ್ಚೆ ಪೈರುಗಳನ್ನು ಕಾಣಬೇಕಾಗಿದ್ದರೆ 1970 ನೇ ಇಸ್ವಿ ಬರಬೇಕು, ಅಂದರೆ 15 ತಿಂಗಳ ಕಾಲ ಕಾಯಬೇಕಾಗಿದೆ. ಅಷ್ಟು ಕಾಲ ಈ ಅಭಾವ ಪರಿಸ್ಥಿತಿ ಯನ್ನು ಸುಧಾರಣೆಮಾಡಬೇಕಾಗಿದ್ದರೆ ಸರ್ಕಾರದವರು ಕೇಂದ್ರ ಸರ್ಕಾರದಿಂದಲಾದರೂ ಸರಿಯೇ ಅಥವಾ ಮತ್ತೆ ಯಾವ ಮೂಲದಿಂದಲಾದರೂ ಸರಿಯೇ 100 ಕೋಟಿ ರೂಪಾಯಿಗಳನ್ನು ತಂದು ಪ್ರತಿಯೊಂದು ಜಿಲ್ಲೆಗೂ 5-5 ಕೋಟಿ ರೂಪಾಯಿಗಳನ್ನು ಒದಗಿಸಿದರೆ, ಮತ್ತು ವಿವೇಕದಿಂದ ಆ ಹಣವನ್ನು ಖರ್ಚುಮಾಡಿದರೆ ಸರಿ, ಇಲ್ಲವಾದರೆ ಜನಜಾನುವಾರುಗಳ ಪ್ರಾಣಹಾನಿಯಾಗುವುದು ಖಂಡಿತ. ಅವಕ್ಕೆಲ್ಲ ಸರ್ಕಾರದವರೇ ಜವಾಬ್ದಾರರಾಗಬೇಕಾಗುತ್ತದೆ. ಆ ಪ್ರಾಣಹಾನಿ ಯಾಗದಂತೆ ನೋಡಿಕೊಳ್ಳಬೇಕೆಂದು ನಾನು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಬಜಾರಿನಲ್ಲಿ ದವಸ ಧಾನ್ಯಗಳು ದುರುಪಯೋಗವಾಗದಂತೆ ಅವು ಒಂದು ನಿಗದಿ ಯಾದ ಬೆಲೆಯಲ್ಲಿ ಜನರಿಗೆ ಸಿಕ್ಕುವಂತೆ ಮಾಡಬೇಕು. ಇದು ಸರ್ಕಾರದವರಿಗೆ ಸೇರಿರತಕ್ಕ ಒಂದು ಮುಖ್ಯ ಜವಾಬ್ದಾರಿಯ ಕಾರ್ಯ. ಹದ್ದುಮೀರಿ ನಡೆದವರನ್ನು ಉಗ್ರ ಶಿಕ್ಷೆಗೆ ಗುರಿಪಡಿಸಿ ಅವರನ್ನು ಜೈಲಿಗೆ ಕಳುಹಿಸತಕ್ಕದ್ದು. ಈಗಾಗಲೇ ಜನರು ಕೊಳ್ಳುವುದಕ್ಕೆ ಸಾಧ್ಯವಾಗದಷ್ಟು ಧಾನ್ಯಗಳ ಬೆಲೆಗಳು ಏರಿಹೋಗಿವೆ. ದಪ್ಪ ಅಕ್ಕಿ ಒಂದು ಕಿಲೋಕ್ಕೆ ಒಂದೂವರೆ ರೂಪಾಯಿ ಆಗಿದೆ ಅಂದಾಗ ಇನ್ನುಳಿದ ಧಾನ್ಯಗಳ ಬೆಲೆಯೇನಾಗಿರಬೇಕು ಎಂಬುದನ್ನು ತಾವೇ ಊಹಿಸಬೇಕು. ಆದ್ದರಿಂದ ಸರ್ಕಾರದವರು ಕೂಡಲೇ ಈ ಬಗ್ಗೆ ಎಚ್ಚರಿಕೆ ವಹಿಸಬೇಕೆಂದು ಹೇಳುತ್ತೇನೆ.

ಇನ್ನು ಮಂತ್ರಿಗಳು ಈ ಕ್ಷಾಮದ ಹಾವಳಿ ತಗ್ಗುವವರೆಗೂ ಅವರು ತಮ್ಮ ಪ್ರವಾಸವನ್ನು ರದ್ದುಮಾಡಬೇಕು. ಇನ್ನು 15 ತಿಂಗಳ ಕಾಲ ಯಾವ ಮಂತ್ರಿಯೂ ಅವರವರ ಜಿಲ್ಲೆಯನ್ನು ಬಿಟ್ಟು ಬೇರೆ ಜಿಲ್ಲೆಗಳಿಗೆ ಪ್ರವಾಸ ಮಾಡಬಾರದು. ಅವರವರ ಜಿಲ್ಲೆಯಲ್ಲೇ ಇದ್ದು ಅಲ್ಲಿಯ ಕೆಲಸ ಕಾರ್ಯಗಳನ್ನು ಶ್ರದ್ಧೆಯಿಂದ ನೋಡಿಕೊಳ್ಳಬೇಕು.

ಇನ್ನು ಚಿಕ್ಕಮಗಳೂರು ಜಿಲ್ಲೆಯಲ್ಲಿ ಯಾವ ಅಂಥ ಕೆರೆಕಟ್ಟೆಗಳೂ ಇರುವುದಿಲ್ಲ. ಅಲ್ಲ ಮಳೆ ಯಿಂದಲೇ ಬೆಳೆಯಾಗಬೇಕು. ಆದ್ದರಿಂದ ಅಲ್ಲಿ ಕಳೆದ 6—7 ವರ್ಷಗಳಿಂದ ಸರಿಯಾಗಿ ಮಳೆಯಾ ಗದೆ ಪರಿಸ್ಥಿತಿ ಬಹಳ ಬಿಗಡಾಯಿಸಿದೆ. ಆ ಜಿಲ್ಲೆಯಲ್ಲಿ ಕನಿಷ್ಟ ಅರ್ಧಭಾಗದ ಜಿಲ್ಲೆಯನ್ನಾದರೂ ಕ್ಷಾಮಪೀಡಿತ ಪ್ರದೇಶ ಎಂದು ಸಾರಬೇಕಾಗಿದೆ. ಅಲ್ಲಿ ಹರಿಯುತಕ್ಕ ತುಂಗಭದ್ರ ಹೇಮಾವತಿ ಮತ್ತು ಯಗಚಿ ನದಿಗಳ ಎರಡೂ ದಡಗಳಲ್ಲಿ ಕಮ್ಯುನಿಟಿ ಪಂಪ್ ಸೆಟ್ಟುಗಳನ್ನು ಹಾಕಿಸಿ ರೈತರಿಗೆ ನೀರಾವರಿ ಅನುಕೂಲತೆಯನ್ನು ಒದಗಿಸಬೇಕು.

ಇನ್ನು ಮಲೆನಾಡಿನಲ್ಲಿ ಮರಗಳನ್ನು ಕಡಿಯುತಕ್ಕ ಯೋಜನೆಯೊಂದು ಮಾತ್ರ ಧಾರಾಳವಾಗಿ ನಡೆಯುತ್ತಿದೆ. ಆದರೆ ಅದೇ ಮಟ್ಟದಲ್ಲಿ ಮರಗಳನ್ನು ಬೆಳೆಸತಕ್ಕ ಕಾರ್ಯ ಮಾತ್ರ ನಡೆಯುತ್ತಿಲ್ಲ. ನಮ್ಮ ಮಲೆನಾಡಿನಲ್ಲಿ ಮಳೆ ಬಾರದಿರುವುದಕ್ಕೆ ಇದೂ ಒಂದು ಕಾರಣ. ಹೀಗಾಗಿ ಅಲ್ಲಿ ತರಿ ಬೆಳೆಗೆ ಬಹಳ ತೊಂದರೆಯಾಗಿದೆ. ಅಲ್ಲದೆ ಅಲ್ಲಿ ಮಳೆ ಹೋದ್ದರಿಂದ ಅಲ್ಲಿರತಕ್ಕ ಕಾಫೀ ಪ್ಲಾಂಟ ರಿಗೂ ಬಹಳ ತೊಂದರೆಯಾಗಿದೆ. ಕಾಫೀ ಬೀಜದ ಎಳೆಯ ಕಾಯಿಗಳು ನೆಲದ ಮೇಲೆ ಉದುರು ತ್ತಿವೆ. ಅದಕ್ಕೆ ಮಳೆ ಬಾರದಿರುವುದರಿಂದ ಬೋರರ್ ಎಂಬ ರೋಗ ತಗುಲಿದೆ. ಹೀಗೆ ನಮ್ಮ ಜಿಲ್ಲೆಯ ರೈತರು ಅನೇಕ ರೀತಿಯಲ್ಲಿ ತೊಂದರೆಗೆ ಸಿಕ್ಕಿಕೊಂಡಿದ್ದಾರೆ. ಇದಕ್ಕೆಲ್ಲಾ ಕಾರಣ ಅಲ್ಲಿದ್ದ ವನಸಂಪತ್ತನ್ನು ಹಾಳುಮಾಡಿದ್ದೇ ಆದ್ದರಿಂದ ಅಲ್ಲಿ ಸಾಧ್ಯವಾದಮಟ್ಟಿಗೂ ವನಸಂಪತ್ತನ್ನು ಹೆಚ್ಚಿಸಬೇಕು. ನಮ್ಮ ಮೈಸೂರು ರಾಜ್ಯದಲ್ಲೂ ಅನೇಕ ತಾತಾ ಬಿರ್ಲಾಗಳು ಇದ್ದಾರೆ. ಅಂಥವ ರಿಂದ ಸಾಕಷ್ಟು ತೆರಿಗೆಯನ್ನೂ ಕಂದಾಯಗಳನ್ನು ವಸೂಲ್ಮಾಡಿ ಬಡವರಿಗೆ ರಿಯಾಯ್ತಿ ತೋರಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸರ್ಕಾರದವರು ಒಂದು ಆಜ್ಞೆಯನ್ನು ಈಗ ಹೊರಡಿಸಿದ್ದಾರೆ. ಅದೇನು ಎಂದರೆ ಎಲ್ಲಾ ದೇವಾಲಯಗಳಲ್ಲಿಯೂ ಅಭಿಷೇಕ ಪೂಜಾ ಕಾರ್ಯಗಳನ್ನು ನಡೆಸಬೇಕು ಎಂಬುದಾಗಿ. ಇದನ್ನು ನೋಡಿದರೆ ಸಂಕಟ ಬಂದಾಗ ವೆಂಕಟರಮಣ ಎಂದು ಧ್ಯಾನ ಮಾಡಿದಹಾಗೆ, ಆದರೆ ಇದು ನಿಜವಾದ ಪ್ರಾರ್ಥನೆಯಲ್ಲ. ಏಕೆಂದರೆ ಕಲ್ಲುನಾಗರ ಕಂಡರೆ ಹಾಲನೆರೆಯೆಂಬರಯ್ಯಾ ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯಾ ಎಂಬ ನಾಣ್ಣುಡಿಯಂತೆ ಈ ದಿವಸ ನಮ್ಮ ನಿಜ ದೇವರು ದೀನ

ದಲಿತರು. ಅವರ ಪೂಜೆಯನ್ನು ನಾವು ಯಶಸ್ವಿಯಾಗಿ ನಡೆಸಿದರೆ ಆ ಕಣ್ಣಿಗೆ ಕಾಣದ ಪರಮಾತ್ಮ ಒಪ್ಪುತ್ತಾನೆ. ಆದ್ದರಿಂದ ನಾವು ದೀನದಲಿತರ ಕಡೆಗೆ ಹೆಚ್ಚಿನ ಗಮನ ಕೊಡಬೇಕೆಂದು ಹೇಳಿ ನನಗೆ ಇಷ್ಟು ಮಾತುಗಳನ್ನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸೋಲೂರು ಸಿದ್ದಪ್ಪ (ಕುದೂರು).—ಸನ್ಮಾನ್ಯ ಸಭಾಪತಿಗಳೇ, ಮೂರು ದಿವಸಗಳಿಂದಲೂ ಈ ವಿಚಾರವಾಗಿ ವಿಪುಲವಾದ ಚರ್ಚೆ ನಡೆದಿದೆ. ಇತರ ಕೆಲಸಗಳನ್ನು ಬದಿಗೊತ್ತಿ ಆಹಾರ ಸಮಸ್ಯೆ ಮತ್ತು ಕ್ಷಾಮದ ನಿವಾರಣೆ ಕಾರ್ಯವನ್ನು ಅತಿ ಅಮೂಲ್ಯವಾದ ಕಾರ್ಯವೆಂದು ಭಾವಿಸಿ ಪೂರ್ಣ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಂತ್ರಿಗಳು ಪ್ರವಾಸವನ್ನು ಕೈಕೊಂಡಾಗ ಪ್ರತಿ ಜಿಲ್ಲೆಯಲ್ಲೂ ನಿಯಮಿತವಾದ ಹಣ ಕೊಟ್ಟಿರುವುದು ಸರಿಯಾಗಿ ವಿನಿಯೋಗವಾಗಿದೆಯೇ, ಧಾನ್ಯ ಸರಿಯಾದ ರೀತಿಯಲ್ಲಿ ಹಂಚಿಕೆಯಾಗಿದೆಯೇ ಎಂಬುದನ್ನು ಆಯಾಯ ಜಿಲ್ಲಾಧಿಕಾರಿಗಳಿಂದ ತಿಳಿದುಕೊಂಡು ಎಲ್ಲ ರೀತಿಯಿಂದಲೂ ಸಮರ್ಪಕವಾದ ರೀತಿಯಲ್ಲಿ ಕೆಲಸ ಕಾರ್ಯಗಳು ನಡೆಯುವಂತೆ ಮಾಡಬೇಕು ಇಲ್ಲವೆ ಇದ್ದ ಪಕ್ಷದಲ್ಲಿ ಕಷ್ಟಪಟ್ಟು ತಾವು ಒದಗಿಸಿರತಕ್ಕ ಹಣದ ಸೌಲಭ್ಯ ಜನಗಳಿಗೆ ಸಿಕ್ಕದಂತಾಗುತ್ತದೆ ಈ ವಿಷಯವನ್ನು ಸರ್ಕಾರದವರು ಗಮನವಲ್ಲಿಟ್ಟುಕೊಂಡು ಆಹಾರ ಧಾನ್ಯಗಳನ್ನು ಈಗ ಕೊಡುತ್ತಾ ಇರುವ ಮಟ್ಟಕ್ಕಿಂತಲೂ ನಾಲ್ಕರಷ್ಟು ಹೆಚ್ಚಿಸಬೇಕೆಂದು ಸಲಹೆ ಮಾಡುತ್ತೇನೆ. ಇದಕ್ಕೆ ಡಿಪೋಗಳಲ್ಲಿ ಸರಿಯಾದ ವ್ಯವಸ್ಥೆ ಇರಬೇಕು. ಅದರ ಮೇಲ್ವಿಚಾರಣೆಯನ್ನು ತಾಲ್ಲೂಕಿನ ತಹಸೀಲ್ದಾರರು ಮತ್ತು ಬಿ.ಡಿ.ಓ. ಗಳು ಅಲ್ಲದೆ ಇತರ ಅಧಿಕಾರಿಗಳು ಮಾಡಬೇಕು ಮತ್ತು ಡಿಪೋಗಳಲ್ಲಿ ತಾವು ಒದಗಿಸತಕ್ಕ ಧಾನ್ಯ ಸರಿಯಾಗಿ ವಿನಿಯೋಗವಾಗುತ್ತಿದೆಯೇ ಇಲ್ಲವೇ ಎಂಬುದನ್ನು ಗಮನಿಸಬೇಕು. ಸರ್ಕಾರದವರು ಬಹಳ ಶ್ರಮಪಟ್ಟು ಒದಗಿಸತಕ್ಕ ಧಾನ್ಯ ಜನಗಳ ಕೈ ಸೇರುತ್ತಿಲ್ಲ. ನಾನೂ ಕೂಡ ಡಿಸ್ಟ್ರಿಕ್ಟ್ ಫುಡ್ ಕೌನ್ಸಿಲ್‌ನಲ್ಲಿ ಮತ್ತು ತಾಲ್ಲೂಕು ಫುಡ್ ಕೌನ್ಸಿಲ್‌ನಲ್ಲಿ ಇದ್ದೇನೆ. ನಮಗೆ ಬರತಕ್ಕ ಕೂಗು ಏನೆಂದರೆ ಆಹಾರಧಾನ್ಯ ಸರಿಯಾಗಿ ವಿನಿಯೋಗವಾಗುತ್ತಾ ಇಲ್ಲ ಎಂಬುದೇ ಆಗಿದೆ. ರಿಲೀಫ್ ಕಾಂಗಾರಿಗಳನ್ನು ಕೈಕೊಂಡಾಗ ಅವರಿಗೆ ಕೊಡತಕ್ಕ ಕೂಲಿಯನ್ನು ಹಣದ ರೂಪದಲ್ಲಿ ಕೊಡುವುದಕ್ಕೆ ಬದಲಾಗಿ ಧಾನ್ಯವನ್ನು ಆಯಾಯಾ ಸ್ಥಳದಲ್ಲಿಯೇ ಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಆ ರೀತಿ ಬಡಜನರಿಗೆ ಅನುಕೂಲವಾಗತಕ್ಕ ಕಾರ್ಯಕ್ರಮವನ್ನು ಸರ್ಕಾರದವರು ಹೊಸದಾಗಿ ರೂಪಿಸಿಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಸಾಯಂಕಾಲದ ಮೇಲೆ ಹಣ ಕೊಡುವುದು, ಅವರು ಅಲ್ಲಿಂದ ಡಿಪೋಗೆ ಹೋಗಿ ಧಾನ್ಯವನ್ನು ತಂದು ಊಟ ಮಾಡುವುದು, ಮತ್ತೆ ಪುನಃ ಬೆಳಿಗ್ಗೆ ಎದ್ದು ಕೆಲಸಕ್ಕೆ ಹೋಗುವುದು ಎಂದರೆ ಅವರಿಗೆ ಬಹಳ ಕಷ್ಟವಾಗುತ್ತದೆ. ಇಂತಹ ಕಷ್ಟ ಕಾಲ ಸುಮಾರು 50—60 ವರ್ಷಗಳಿಂದಲೂ ಕೂಡ ನಮಗೆ ಗೊತ್ತಿರಲೇ ಇಲ್ಲ. ದುರ್ದೈವವಶಾತ್ 3—4 ವರ್ಷಗಳಿಂದ ಸರಿಯಾಗಿ ಮಳೆ ಬರದೇ ಈ ವರ್ಷವೂ ಕೂಡ ಮಳೆ ಬರದೆ ದೇವರು ನಮ್ಮನ್ನು ಕೈಬಿಟ್ಟಿದ್ದಾನೆ. ಇದಕ್ಕೆ ಕಾರಣವೇನು ಎಂಬುದನ್ನು ತಾವೇ ಅರಿತುಕೊಳ್ಳಬೇಕಾಗಿದೆ. ಮಾನ್ಯರೇ, ಈಗ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಈಗ ಈ ಕ್ಷಾಮನಿವಾರಣೆಗೆ ಒದಗಿಸಿರತಕ್ಕ ಹಣ ಏನೇನೂ ಸಾಲದು. ಇದನ್ನು ಹೆಚ್ಚಿನ ಮಟ್ಟದಲ್ಲಿ ಒದಗಿಸಬೇಕು. ಇಂಜನಿಯರಿಂಗ್ ಇಲಾಖೆಯವರು ಈ ಹಣ ಒದಗಿಸಿರುವುದನ್ನು ತಾಲ್ಲೂಕು ಅಮಲ್ದಾರರುಗಳಿಂದ ವಿಷಯ ಸಂಗ್ರಹಣೆ ಮಾಡಿ ಸರಿಯಾದ ಕ್ರಮವನ್ನು ಅನುಸರಿಸಿ ಕೆಲಸ ಕಾರ್ಯಗಳನ್ನು ಮಾಡಬೇಕೆಂದು ಆಜ್ಞೆ ಹೊರಡಿಸಿದ್ದಾರೆ, ಇದು ಬಹಳ ಸ್ತುತ್ಯವಾದ ವಿಚಾರ. ಈ ಆಜ್ಞೆಯನ್ನು ಮುಂದುವರಿಸಿ ಆಯಾಯಾ ತಾಲ್ಲೂಕಿನಲ್ಲಿ ಪಿ. ಡಬ್ಲ್ಯು. ಡಿ. ಇಲಾಖೆಯಲ್ಲಿ ಕಾರ್ಯವಾಗದೇ ನಿಂತಿರತಕ್ಕ ಕೆರೆಗಳು, ಕೋಡಿಗಳು, ತೂಬುಗಳು ಇವುಗಳ ಕೆಲಸ ಕಾರ್ಯಗಳನ್ನು ಕೈಕೊಳ್ಳಬೇಕೆಂದು ಹೇಳುತ್ತೇನೆ. ಇಂತಹ ಕೆಲಸ ಕಾರ್ಯಗಳು ಕ್ಷಾಮ ನಿವಾರಣೆಯ ಬಗ್ಗೆಯೂ ಆಗಬೇಕು ಮತ್ತು ಭದ್ರತೆಯ ಕೆಲಸ ಕಾರ್ಯಗಳೂ ಕೂಡ ಆಗಬೇಕು. ಈಗ ಎರಡು ಮೂರು ದಿವಸಗಳಿಂದ ದೇವರು ಮಳೆಯನ್ನು ದಯಪಾಲಿಸುತ್ತಾ ಇದ್ದಾನೆ. ಕಾರಣ ಸರ್ಕಾರದವರು ಒಂದು ಸ್ಟೇಟ್‌ಮೆಂಟ್ ಮಾಡಿ ದೇಶಾದ್ಯಂತ ಇರತಕ್ಕ ಎಲ್ಲ ದೇವಾಲಯಗಳಲ್ಲೂ ಪೂಜೆ ಪುನಸ್ಕಾರಗಳು ನಡೆದು, ನಾವು ಮಾಡಿರತಕ್ಕ ಅಪರಾಧಗಳಿಗೆ ಕ್ಷಮಾಪಣೆಯನ್ನು ಕೇಳಿಕೊಂಡ ಪ್ರಯುಕ್ತ ಮಳೆ ಬರುತ್ತಾ ಇದೆ. ಈಗ ದೇಶದಲ್ಲಿ ಉಂಟಾಗಿರತಕ್ಕ ಕಷ್ಟವನ್ನು ಸರ್ಕಾರದವರು ಪರಿಹಾರ ಮಾಡಬೇಕಾಗಿದ್ದರೆ ಕೇಂದ್ರ ಸರ್ಕಾರದಿಂದ ಹಣ ಸಹಾಯವನ್ನು ಪಡೆದು ಈ ಕ್ಷಾಮ ನಿವಾರಣೆಯನ್ನು ಮಾಡಬೇಕು. ಹಿಂದೆ 1926 ರಿಂದ 41 ರ ವರೆಗೂ ನಮ್ಮ ಸರ್ಕಾರದಲ್ಲಿ ರಿಸರ್ವ್‌ಫಂಡ್ ಅಂತ ಹೇಳಿ ಇಟ್ಟು ಅದಕ್ಕೆ ಯಾವಾಗಲೂ ಕೈ ಹಾಕದೇ ಇಡುತ್ತಾ ಇದ್ದರು, ಈಗ ಆ ರಿಸರ್ವ್ ಫಂಡ್ ಇದೆಯೋ ಇಲ್ಲವೋ ಗೊತ್ತಿಲ್ಲ. ಅನೇಕ ದೇಶಗಳಲ್ಲಿ ಬರಗಾಲ ಬಂದಿದೆ. ಇದು ಜನಗಳಿಗೆ ಮಾತ್ರವಲ್ಲ ಜಾನುವಾರುಗಳಿಗೂ ಕೂಡ ಇದರ ಪರಿತಾಪವುಂಟಾಗಿದೆ. ಅವುಗಳಿಗೆ

(ಶ್ರೀ ಸೋಲೂರು ಸಿದ್ದಪ್ಪ)

ಹುಲ್ಲು ಇಲ್ಲ, ಹುರುಳಿ ಇಲ್ಲ, ಸಕಾಲದಲ್ಲಿ ಕುಡಿಯುವುದಕ್ಕೆ ನೀರು ಇಲ್ಲ. ಇಂತಹ ಒಂದು ವೀರ ಕ್ಷಾಮವನ್ನು ಭಗವಂತ ಒದಗಿಸಿ ಸರ್ಕಾರಕ್ಕೂ ಮತ್ತು ಮಹಾಜನಗಳಿಗೂ ಕಷ್ಟವನ್ನು ತಂದೊಡ್ಡಿದ್ದಾನೆ. ಇದರ ಬಗ್ಗೆ ನಾವು ಭಗವಂತನನ್ನು ಆರಾಧಿಸುವುದರ ಜೊತೆಗೆ ನಮ್ಮ ಕಾರ್ಯದಲ್ಲಿ ಸತ್ಯ ಧರ್ಮಕ್ಕೆ ಒಳಪಟ್ಟು ಕಾರ್ಯವನ್ನು ನೆರವೇರಿಸುತ್ತಾ ದೇಶದಲ್ಲಿ ಸಂಪ್ರದಾಯವಾಗಿ, ನೀತಿ ಬದ್ಧವಾಗಿ, ನ್ಯಾಯಬದ್ಧವಾಗಿ ನಡೆಯತಕ್ಕ ಕಡೆಗೆ ಹೆಚ್ಚು ಗಮನ ಕೊಟ್ಟರೆ ದೇಶದ ಅಭ್ಯುದಯಕ್ಕೆ ದೇಶದಲ್ಲಿ ಉಂಟಾಗಿರತಕ್ಕ ಕಷ್ಟಪರಂಪರೆಯ ನಿವಾರಣೆಗೆ ಸಹಾಯಕವಾಗುತ್ತದೆ ಎಂದು ನಂಬಿದ್ದೇನೆ.

ಕಂದಾಯದ ವಿಷಯ. 5 ಎಕರೆ ಮೇಲೆ ಇರತಕ್ಕ ಜಮೀನ್ದಾರರಿಗೆ ರೆಮಿಷನ್ ಕೊಡಬೇಕು ಎಂದು ಹೇಳಿ ನಾವು ಈ ಶಾಸನ ಸಭೆಯಲ್ಲಿ ಹೇಳಿದ್ದೇವೆ. ಡೆಪ್ಯೂಟಿ ಕಮೀಷನರಿಂದ ಸರ್ಕಾರದವರಿಗೆ ರಿಪೋರ್ಟು ಬಂದಿದೆ. ಇದುವರೆಗೂ ಕೂಡ ಏನೂ ಆಗಿಲ್ಲ. ಬರಗಾಲ ಬಂದಿದೆ, ಬೆಲೆ 4 ಆಣೆಗಿಂತ ಕಡಿಮೆಯಾಗಿರತಕ್ಕ ಪ್ರದೇಶಗಳಲ್ಲಿ ರೆಮಿಷನ್ ಕೊಡಬೇಕೆಂದು ಸರ್ಕಾರದ ಆಜ್ಞೆಯಾಗಿದ್ದರೂ ಅದು ಕಾರ್ಯಗತವಾಗಿಲ್ಲ. ಅದನ್ನು ಮಾಡಿಕೊಟ್ಟು ಜನಗಳಿಗೆ ಈಗ ಬಂದಿರುವ ಈ ಕಷ್ಟಕಾರ್ಪಣ್ಯಗಳನ್ನು ನಿವಾರಣೆ ಮಾಡಿಕೊಡಬೇಕೆಂದು ಹೇಳುತ್ತೇನೆ. ನಾನು ಮೂರು ದಿವಸಗಳಿಂದಲೂ ಮಾತನಾಡಬೇಕೆಂದು ಇದ್ದೆ, ದೇವರ ಇಚ್ಛೆ, ಈಗ ಮಾತನಾಡುವುದಕ್ಕೆ ಅವಕಾಶ ಸಿಕ್ಕಿತು. ನನ್ನ ಪ್ರಾರ್ಥನೆ ಸರ್ಕಾರದವರಲ್ಲಿ ಇಷ್ಟೆ, ಇದಕ್ಕಿಂತಲೂ ಕಷ್ಟಕಾಲ ಇನ್ನು ಬರುವುದಿಲ್ಲ, ಶಾಸಕರು ಏನೇನು ಸಲಹೆ ಮಾಡುತ್ತಾರೋ ಅದನ್ನೆಲ್ಲಾ ಸರ್ಕಾರದವರು ಮಾನ್ಯ ಮಾಡಿ ಜನಗಳು ಬರಗಾಲದಲ್ಲಿ ಎಲ್ಲೂ ಸಾಯಲಿಲ್ಲ ಎನ್ನತಕ್ಕ ರೀತಿಯಲ್ಲಿ ಈ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಿ ಸರ್ಕಾರದವರು ಒಂದು ಗೌರವವನ್ನು ಪಡೆಯಬೇಕೆಂದು ಹೇಳಿ ಸರ್ಕಾರದವರಲ್ಲಿ ಬಿನ್ನಹ ಮಾಡಿ ನನಗೆ ಮಾತನಾಡಲು ಕಾಲವನ್ನು ಕೊಟ್ಟಂಥ ಸ್ಪೀಕರ್‌ರವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ. ಜೈ ಹಿಂದ್.

5-30 P.M.

ಶ್ರೀ ಮಹದೇವ್ ಜಿ. ಬಣಕಾರ್ (ಬ್ಯಾಡಗಿ).—ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೆ ಅನೇಕ ವಿರೋಧಪಕ್ಷದ ಮತ್ತು ಆಡಳಿತ ಪಕ್ಷದ ಸದಸ್ಯರು ಅಭಾವ ಪರಿಸ್ಥಿತಿಯ ಬಗ್ಗೆ ಹೆಚ್ಚು ವಿವರಗಳನ್ನು ನೀಡಿದ್ದಾರೆ. ನನಗೆ ತಿಳಿದಮಟ್ಟಿಗೆ ಈ ದೇಶದಲ್ಲಿ ಮಂತ್ರಿಗಳಿಗೆ ಮಾತ್ರ ಅಭಾವವಿಲ್ಲ, ಅವರ ಸಂಖ್ಯೆ ಬಲವಾಗಿದೆ, ಉಳಿದ ಎಲ್ಲದಕ್ಕೂ ಅಭಾವವಿದೆ. ಮಂತ್ರಿಗಳ ಸಂಖ್ಯೆ ಮಾತ್ರ ದಿನೇ ದಿನೇ ಬೆಳೆಯುತ್ತಿದೆ. ಅಧ್ಯಕ್ಷರೇ, ಇಂದು ಪ್ರಾಮುಖ್ಯವಾಗಿ ದೇಶಕ್ಕೆ ಬಂದಿರುವ ಬರಗಾಲವನ್ನು ನಿವಾರಣೆ ಮಾಡಬೇಕಾಗಿದೆ. ಈ ಪರಿಸ್ಥಿತಿಯಲ್ಲಿ ಪಕ್ಷಪಂಗಡಗಳ ಭೇದವಿಲ್ಲದೆ ನೇರವಾಗಿ ಎಲ್ಲರೂ ಕೂಡ ಜನಹಿತ ಕಾರ್ಯದ ಕಡೆ ಲಕ್ಷ ಕೊಡಬೇಕಾಗಿದೆ. ಈ ಸಂದರ್ಭದಲ್ಲಿ ಎರಡು ಮಾತುಗಳನ್ನು ಹೇಳುತ್ತೇನೆ. ಈ ಅಭಾವ ಪರಿಸ್ಥಿತಿ ತಲೆದೋರುವುದಕ್ಕೆ ಸರಕಾರದ ಕಾರ್ಯ ದೌರ್ಬಲ್ಯ ಮತ್ತು ಸಾಮಾಜಿಕ ಮುಖಂಡರ ಅನೈತಿಕ ವ್ಯವಹಾರ ಇವೆರಡೂ ಕಾರಣ. ಸರಕಾರಿ ದೌರ್ಬಲ್ಯಕ್ಕೆ ಒಂದು ನಿದರ್ಶನ ಕೊಡುತ್ತಿದ್ದೇನೆ. ಸರಕಾರಿ ಆಡಿಟ್ ವರದಿಯಲ್ಲಿ ಒಂದು ಕಡೆ ಈ ರೀತಿ ಇದೆ:

> "Though the annual reports of financial stock taking are due by the first week of September each year, the reports for 1964-65 in respect of 16 project schemes, total expenditure incurred being Rs. 100.29 crores out of 53 project schemes, we have not received even at the end of August 1966".

ಸ್ವಾಮೀ, ನೂರು ಕೋಟಿ ರೂಪಾಯಿಗಳ ಲೆಕ್ಕ ಸರಕಾರಕ್ಕೆ ಇನ್ನೂ ಬಂದಿಲ್ಲ ಎಂದು ತಿಳಿಸಿದ್ದಾರೆ. ಇಂದು ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸಲು ಕೇಂದ್ರ ಸರಕಾರವನ್ನು ಕೇಳಿರುವುದು 10 ಕೋಟಿ. ಆದರೆ ವಸೂಲಿ ಇಲ್ಲದೆ, ಸರಕಾರಕ್ಕೆ ಇಲಾಖೆಗಳಿಂದ ಮಾಹಿತಿ ಇಲ್ಲದೆ 100 ಕೋಟಿ ರೂಪಾಯಿ ಲೆಕ್ಕ ಬರಬೇಕಾಗಿದೆ. ಎಂದಮೇಲೆ ಕೇಂದ್ರ ಸರಕಾರ ಎಷ್ಟು ಸಾವಿರ ಕೋಟಿ ಕೊಟ್ಟರೂ ಪ್ರಯೋಜನವೇನು? ಲೆಕ್ಕವಿಡುವ ಪದ್ಧತಿ ಮೈಸೂರು ಸರಕಾರದಲ್ಲಿಲ್ಲ ಎಂದು ಹೇಳಬಹುದು. 1963 ರಿಂದ 1965ರ ವರೆಗೆ 15 ಮೇಜರ್ ಮತ್ತು ಮೈನರ ನೀರಾವರಿ ಕೆಲಸಗಳನ್ನು ಕೈಕೊಂಡು 13 ಲಕ್ಷ 5 ಸಾವಿರ ಎಕರೆ ಭೂಮಿಯನ್ನು ನೀರುಣಿಸಲು ಸುಮಾರು 80

ಕೋಟಿ ರೂಪಾಯಿಗಳನ್ನು ಈ ಸರಕಾರ ಖರ್ಚುಮಾಡಿದೆ. ಆದರೆ ಇದರ ಪರಿಣಾಮವಾಗಿ ಕೇವಲ 6 ಲಕ್ಷ ಎಕರೆ ಮಾತ್ರ ನೀರಾವರಿಯಾಗಿದೆಯೇ ಹೊರತು ಯೋಜನೆ ಪ್ರಕಾರ ಆಗಿಲ್ಲ, ಹಣ ಮಾತ್ರ ಖರ್ಚಾಗಿದೆ. ಇಂಥ ಬೇಜವಾಬ್ದಾರಿ ಪರಿಸ್ಥಿತಿಯಲ್ಲಿ ಸರಕಾರಕ್ಕೆ ಸಾಲ ಕೊಡಲು ಯಾರಾದರೂ ಮುಂದೆ ಬರುವರೇ ಎಂಬುದನ್ನು ಯೋಚನೆಮಾಡಬೇಕು. 64 ಫ್ಯಾಮಿನ್ ರಿಲೀಫ್ ವರ್ಕ್ಸ್ ಎಂಬ ಬಾಬಿಗೆ ಕೇಂದ್ರ ಸರಕಾರ ಕೊಟ್ಟ 7 ಲಕ್ಷ 42 ಸಾವಿರ ರೂಪಾಯಿಗಳಲ್ಲಿ ಬೆಂಗಳೂರು ಡಿವಿಜನ್ನಿಗೆ 3 ಲಕ್ಷ 41 ಸಾವಿರ ರೂಪಾಯಿ, ಚಿತ್ರದುರ್ಗಕ್ಕೆ 6 ಲಕ್ಷ 48 ಸಾವಿರ ರೂಪಾಯಿ ಹೀಗೆಲ್ಲಾ ಕೊಟ್ಟಿದ್ದರಲ್ಲಿ ಅರ್ಧ ಕೂಡ ಖರ್ಚುಮಾಡಲಿಲ್ಲ. ಇದರಿಂದ ಕೇಂದ್ರ ಸರಕಾರಕ್ಕೆ ಸಾಲ ಕೊಡಲು ಅನುಮಾನವಾಗಿದೆ, ಕೊಟ್ಟ ಹಣ ಸರಿಯಾಗಿ ಉಪಯೋಗವಾಗುವುದಿಲ್ಲ ಎಂಬ ಸಂದೇಹ ಇರುವಂತೆ ತೋರುತ್ತದೆ. ಅದು ಸ್ವಾಭಾವಿಕವೇ ಸರಿ.

ಇನ್ನೊಂದು ಮಾತು. ಈ ಕೆಲಸದ ಜವಾಬ್ದಾರಿ ಸಾರ್ವಜನಿಕರ ಕೈಲಿರಬಾರದು, ಅಧಿಕಾರಿಗಳ ಕೈಲಿರಬೇಕು, ನೇರವಾಗಿ ಅವರಿಂದಲೇ ಕೆಲಸ ನಡೆಯಬೇಕು, ತಾಲ್ಲೂಕು ಬೋರ್ಡಿನಲ್ಲಿ ಬಹಳ ಕಾಂಗ್ರೆಸ್ಸಿನವರಿರುವುದರಿಂದ ಕೊಡುವ ಸೌಲಭ್ಯ ತಪ್ಪಿಹೋಗಬಹುದು ಎಂದು ಹೇಳಿದ್ದಾರೆ. ನನಗೆ ತಿಳಿದಹಾಗೆ ಈ ದೇಶದಲ್ಲಿ ಬರಗಾಲ ಬಂದಾಗಲೂ ಕೆಲವರು ಸುಖವಾಗಿಯೇ ಇರುವರು. ಎರಡು ಉದಾಹರಣೆ ಕೊಡುತ್ತೇನೆ. ಧೈರ್ಯವಿದ್ದರೆ ಒಂದು ಕಮಿಷನ್ ನೇಮಿಸಿ ಅವರನ್ನು ಬೈಲಿಗೆ ತರಬೇಕು. ಹಿಂದೆ ಅಲಸೂರು ದುರಂತವು ಹಾವೇರಿ ಬಳಿ ನಡೆಯಿತು. ವರದಾನದಿ ಫ್ಲಡ್ ರಿಲೀಫ್‌ಗೆ ಇದು ಸಂಬಂಧಪಟ್ಟಿದೆ. ಆ ಹಳ್ಳಿ ನೀರಿನಲ್ಲಿ ಕೊಚ್ಚಿಹೋಯಿತು. ಅರೆಬೆತ್ತಲೆ ಇರುವ ಹೆಣ್ಣುಮಕ್ಕಳ ಚಿತ್ರವಿದೆ. ಕೂಸನ್ನು ನಡುನೀರಿನಲ್ಲಿ ಹೊತ್ತವರು ಕೆಲವರಿದ್ದರು. ತೊಟ್ಟಿಲುಗಳು ಗಿಡಕ್ಕೆ ನೇತುಬಿದ್ದಿದ್ದವು. ಆಗ ಕೆಲವರು ಅವರಿಗೆ ಬಟ್ಟೆ, ರವಿಕೆ, ಹಣ ಕೊಟ್ಟರು. ಆ ಭೀಕರ ಪರಿಸ್ಥಿತಿಯನ್ನು ಸಹಿಸದಾದರು. ಉದಾರವಾಗಿ ಮುಂದೆ ಬಂದರು. ಆದರೆ ಅದು ನೊಂದವರಿಗೆ ಸರಿಯಾಗಿ ಹಂಚಿಕೆಯಾಗಲಿಲ್ಲ. ಆ ಸಮಿತಿಯ ಅಧ್ಯಕ್ಷರ ಹೆಸರನ್ನು ಹೇಳುವುದಕ್ಕಾಗುವುದಿಲ್ಲ. ಅವರು ಮತ್ತೊಂದು ಮನೆಯ ಸದಸ್ಯರು. ಅವರು ಯಾರಿಗೋ ಬೇಕಾದವರಿಗೆ ಕೊಟ್ಟು ಉಳಿದುದನ್ನು ಮಾರಾಟಮಾಡಿಕೊಂಡಿದ್ದಾರೆ. ಅರೆಬೆತ್ತಲೆಯಿದ್ದು ಮಾನ ಮುಚ್ಚಿಕೊಳ್ಳುವುದಕ್ಕೆ ಅವಕಾಶವಿಲ್ಲದೆ ಇದ್ದವರಿಗೂ ಸಹ ಬಟ್ಟೆ ಕೊಡದೆ ಅವರಿಗೆ ಕೊಡಬೇಕಾದ್ದನ್ನು ತಮ್ಮ ಮನೆಗೆ ಉಪಯೋಗಿಸಿಕೊಂಡಿದ್ದಾರೆ. ಇಂಥವರಿಗೆ ಮುಖಂಡತ್ವ ವಹಿಸಿದರೆ ಸರಿಯಾಗಿ ಜನರಿಗೆ ಹಂಚಿಕೆಯಾಗುವುದೇ ? ಸರಿಯಾದವರಿಗೆ ಅವಕಾಶ ಕೊಡಬೇಕು.

ಇನ್ನು ಎರಡನೆಯದಾಗಿ ಚೈನಾದುರಾಕ್ರಮಣದ ಸನ್ನಿವೇಶದಲ್ಲಿ ದೇಶಕ್ಕೆ ಗಂಡಾಂತರ ಪರಿಸ್ಥಿತಿ ಒದಗಿತ್ತು. ಆಗ ವಿಜಾಪುರ ಜಿಲ್ಲೆಯ ಉಪಾಧ್ಯಾಯರು ಹೆಂಡತಿಯ ಮಾಂಗಲ್ಯವನ್ನು ರಕ್ಷಣಾನಿಧಿಗೆ ಕೊಟ್ಟರು, ದೇಶಕ್ಕೆ ಗಂಡಾಂತರ ಬಂದಾಗ ರಕ್ಷಣೆಗೆ ಸಹಾಯಮಾಡಬೇಕು ಎಂದು ದೇಶದ ರಕ್ಷಣೆಗಾಗಿ ಜನರು ರಕ್ಷಣಾನಿಧಿಗಾಗಿ ಕೊಟ್ಟ ಬಂಗಾರವನ್ನು ದುರುಪಯೋಗ ಮಾಡಿಕೊಂಡು ಅದರಲ್ಲಿ ಕೆಲವು ಭಾಗ ಹತ್ತಾಳೆಯಾಯಿತು ಎಂದು ಹೇಳಿರುವುದುಂಟು. ಹೀಗಾದರೆ ಜನತೆ ಹೇಗೆ ಸರಕಾರದಲ್ಲಿ, ಮುಖಂಡರಲ್ಲಿ ವಿಶ್ವಾಸವನ್ನಿಡಲು ಸಾಧ್ಯ? ಇನ್ನೊಂದು ಸಣ್ಣ ಉದಾಹರಣೆ, ಈಗ ತಾಲ್ಲೂಕು ಬೋರ್ಡುಗಳಿಗೆ ಪರಿಹಾರ ಕಾರ್ಯ ವಹಿಸಿದರೆ ಏನು ಅನ್ಯಾಯವಾಗುತ್ತದೆ ಎಂಬ ಬಗ್ಗೆ ಹೇಳುತ್ತೇನೆ. ಬ್ಯಾಡಗಿ ತಾಲ್ಲೂಕಿನಲ್ಲಿ ಅಳಲೇ ಅಳಲಗೆರೆ ಎಂಬ ಸಣ್ಣ ಗ್ರಾಮವಿದೆ. ಕೇರ್ ಸಂಸ್ಥೆಯ ಗೋಧಿಯ ನುಚ್ಚಿನಿಂದ ಅಲ್ಲಿ ಒಂದು ಶಾಲಾ ಕಟ್ಟಡ ಕಟ್ಟಿದ್ದಾರೆ. ಆದರೂ ಅದಕ್ಕೆ ಸರಕಾರದ ಹಣ, ತಾಲ್ಲೂಕು ಬೋರ್ಡಿನ ಹಣ, ಜನರ ವಂತಿಕೆ ಇವೆಲ್ಲ ರೀತಿಯಿಂದ ದೊರೆತ ಹಣವನ್ನು ಖರ್ಚುಹಾಕಿದ್ದಾರೆ. ಅಲ್ಲಿ ಹಣ ದುರುಪಯೋಗವಾಗಿದೆ. ಆದರೆ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಯಾವ ಕ್ರಮವನ್ನೂ ಕೈಕೊಂಡಿಲ್ಲ. ಹೀಗೆಲ್ಲಾ ಆಗುತ್ತಿರುವುದರಿಂದ ಜನರು ಮುಖಂಡರಲ್ಲಿ ವಿಶ್ವಾಸ ಕಳೆದುಕೊಂಡಿದ್ದಾರೆ. ಆದುದರಿಂದ ಪರಿಹಾರ ಕಾರ್ಯಗಳನ್ನು ಸರಕಾರಿ ವಲಯದಲ್ಲಿ ಅಧಿಕಾರಿ ವಲಯದಲ್ಲಿ ಕೈಗೊಳ್ಳುವುದು ಸೂಕ್ತ. ಅಂಗರಗಟ್ಟೆಯಲ್ಲಿ ಒಂದು ಕೆಲಸ ನಡೆಯುತ್ತಿದ್ದಾಗ ಕೆಲಸಕ್ಕಾಗಿ 15 ನೂರು ಜನರು ಹೋದರು. ಆದರೆ ಅಲ್ಲಿ 4 ನೂರು ಜನರಿಗೆ ಮಾತ್ರ ಕೆಲಸ ದೊರೆಯುವುದು, ಬೇಕಾದ ಇನ್ನು ಕೆಲವು ಸಾಮಾನುಗಳು ಬಂದರೆ 2 ಸಾವಿರ ಜನರಿಗೆ ಕೆಲಸ ಒದಗಿಸಬಹುದು ಎಂದು ಹೇಳಿ ಅನೇಕರನ್ನು ಅಲ್ಲಿಂದ ವಾಪಸು ಕಳಿಸಿದರು. ರೋಲರ ಮತ್ತು ಡಿಪ್ಪರುಗಳಿಲ್ಲದ್ದರಿಂದ ಹೆಚ್ಚು ಮಂದಿಗೆ ಕೆಲಸ ಒದಗಿಸಲಾಗಲಿಲ್ಲ. ಆದರೆ ಇನ್ನು ಸರಕಾರವು ಪ್ರತಿಯೊಂದಕ್ಕೂ ಸಮಿತಿಗಳನ್ನು ಮಾಡಿ ಬೇಕಾದವರನ್ನು ಅಲ್ಲಿಗೆ ಹಾಕುತ್ತಾರೆ. ಆದರೆ ಅದರಿಂದ ಹಣ ವ್ಯಯವಾಗುತ್ತಿದೆಯೇ ಹೊರತು ಜನತೆಗೆ ಸಾಕಷ್ಟು ಸಹಾಯವಾಗುತ್ತಿಲ್ಲ. ಕೆಲಸಮಾಡಲು ಬರುವವರಿಗೆ ಕೆಲಸ ದೊರೆಯುತ್ತಿಲ್ಲ. ಈ ಬಗ್ಗೆ ಸ್ಟಡಿ ಟೀಮಿನವರು ರಾಜ್ಯ ಸರಕಾರಕ್ಕೆ ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ರಾಜ್ಯ ಸರ್ಕಾರದವರು ಕೆಲವು

(ಶ್ರೀ ಮಹದೇವ್ ಜಿ. ಬಣಕಾರ್)

ಸಲಹೆಗಳನ್ನು ಕೊಟ್ಟಿದ್ದಾರೆ. ಯೋಜನೆಗಳನ್ನು ರೂಪಿಸುವುದರಲ್ಲಿ ಪ್ರಾಯಶಃ ಮೈಸೂರು ರಾಜ್ಯ ಪ್ರಥಮ ಪ್ರಾಶಸ್ತ್ಯವನ್ನು ಪಡೆಯಬಹುದೋ ಏನೋ, ಈ ದೃಷ್ಟಿಯಿಂದ ಯಾರು ಯಾರಿಗೆ ಶಕ್ತಿ ಇದೆಯೋ, ಯಾರು ಯಾವುದರಲ್ಲಿ ಬುದ್ಧಿವಂತರೋ, ಯಾರು ಯಾವುದರಲ್ಲಿ ನಿಷ್ಣಾತರೋ ಅಂಥವರನ್ನು ಮೆರಿಟ್ ಮೇಲೆ ಫ್ಯಾಮಿನ್ ರಿಲೀಫ್ ಸಮಿತಿಗೆ ಒಪ್ಪಿಸಬೇಕು ಎಂದು ಹೇಳುತ್ತಿದ್ದೇನೆ.

ಕೊನೆಯದಾಗಿ ಈ ರಾಜ್ಯದ ಮಂತ್ರಿಮಂಡಲದ ಮೇಲೆ ನಾನು ಒಂದು ಕವನವನ್ನು ರಚಿಸಿದ್ದೇನೆ. ಅದನ್ನು ಓದಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಜಾತಿಗೂ ಜಿಲ್ಲೆಗೂ ಪ್ರಾತಿನಿಧ್ಯ!
ಬರಿಯ ಯೋಗ್ಯತೆ ಇರಲು ಏನು ಸಾಧ್ಯ?
ವನವಾಸ ಕೈಕೊಂಡ ಕಲಿಯುಗದ ರಾಮು
ಹಳೆಯ ಹುಲಿಗಳಿಗಿಟ್ಟ ಮೂರು ನಾಮ!
ಅರೆ ಮಂತ್ರಿ, ಸರಿಮಂತ್ರಿ ಮಂತ್ರಿಗಳ ದಂಡು
ಕಂಡು ನಿಂತಿದೆ ಜನತೆ ದಿಗಿಲುಗೊಂಡು
ಮಳೆಯಿಲ್ಲ, ಬೆಳೆಯಿಲ್ಲ ಅನ್ನವಿಲ್ಲ
ಮಂತ್ರಿಮಾನ್ಯರಿಗಿದರ ಅರಿವೆ ಇಲ್ಲ.
ಕೇಂದ್ರದಲಿ ಹಣವಿಲ್ಲ ಯೋಜನೆಗೆ ಬಲವಿಲ್ಲ
ಸಚಿವಸೇನೆಗೆ ಇರಲು ಜಾಗೆಯಿಲ್ಲ.
ಹೀಗಿರಲು ಬರಗಾಲ ಕೊನೆಗೊಳ್ಳಬಹುದೆ?
ಶುಭಕಾಲ ಸನಿಹದಲಿ ಸುಳಿಯಬಹುದೆ!

ಭ್ರಷ್ಟಾಚಾರ ನಿರ್ಮೂಲನ ಮಾಡುತ್ತೇವೆಂದು ಹೇಳುವವರು ಶುದ್ಧಹಸ್ತರಾಗಲಿ, ಜನತೆಯ ವಿಶ್ವಾಸವನ್ನು ಪಡೆಯಲು ದೇಶಕ್ಕೆ ಬಂದಿರುವ ಗಂಡಾಂತರವನ್ನು ಪರಿಹರಿಸಲು ದೇವರು ಸರ್ವಶಕ್ತಿಯನ್ನೂ ಕೊಡಲಿ ಎಂದು ಪ್ರಾರ್ಥಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

†ಶ್ರೀ ಬಿ. ನಂಜಪ್ಪ (ಗಂಡಸಿ).—ಸನ್ಮಾನ್ಯ ಸಭಾಪತಿಗಳೇ, ಮಾನ್ಯ ಮುಖ್ಯಮಂತ್ರಿಗಳು ಅಭಾವ ಪರಿಸ್ಥಿತಿಯ ವಿಚಾರದಲ್ಲಿ ಇಟ್ಟಿರುವ ನಿರ್ಣಯವನ್ನು ಅನುಮೋದನೆ ಮಾಡುತ್ತ ಎರಡು ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ.

ಸ್ವಾಮಿ, ನಾಲ್ಕು ವರ್ಷಗಳಿಂದ ಮಳೆ ನಮ್ಮ ರಾಜ್ಯದಲ್ಲಿ ಸರಿಯಾಗಿ ಆಗದೆ ಇವೊತ್ತಿನ ದಿವಸ ಪರಿಸ್ಥಿತಿ ಏನಾಗಿದೆ ಎನ್ನುವುದು ದೇಶದ ಎಲ್ಲ ಜನಗಳಿಗೂ ಹಾಗೂ ನಮಗೂ ಸಾಕಾದಷ್ಟು ಮನವರಿಕೆಯಾಗಿದೆ. ರೈತಾಪಿ ಜನಗಳು ಅಭಾವ ಪರಿಸ್ಥಿತಿಯನ್ನು ಎದುರಿಸಲು ತಮ್ಮಲ್ಲಿದ್ದಂಥ ದನಕರುಗಳು, ಪಾತ್ರೆಪರಡಿಯಾದಿಯಾಗಿ ಮಾರಾಟ ಮಾಡಿ ತಮ್ಮ ಜೀವನವನ್ನು ಇಲ್ಲಿಯವರೆಗೂ ನಡೆಸುತ್ತ ಬಂದಿದ್ದಾರೆ. ಇವೊತ್ತು ಅವರಿಗೆ ತಿನ್ನುವುದಕ್ಕೆ ಅನ್ನವಿಲ್ಲ, ಕೂಲಿ ಮಾಡುವುದಕ್ಕೆ ಕೆಲಸ ಕೂಡ ಸಿಕ್ಕುತ್ತಿಲ್ಲ. ಈಗ ಅಭಾವ ಪರಿಸ್ಥಿತಿ ಸಂಬಂಧವಾಗಿ ಅಲ್ಲಲ್ಲಿ ಕೆಲವು ಕೆಲಸಕಾರ್ಯಗಳನ್ನು ಏರ್ಪಾಡು ಮಾಡಿದ್ದಾರೆ. ಈ ಕೆಲಸಕಾರ್ಯಗಳು ಏನೇನೂ ಸಾಲದಾಗಿರುತ್ತವೆ. ಜನಗಳು ಕೆಲಸಕ್ಕೆ ಹೋದರೆ ಕೇವಲ 50 ಜನಗಳಿಗೆ, 25 ಜನಗಳಿಗೆ ಹೀಗೆ ಕೆಲಸ ಸಿಕ್ಕುತ್ತದೆ, ಬಾಕಿ ಜನಗಳಿಗೆ ಕೆಲಸ ಸಿಕ್ಕುತ್ತಿಲ್ಲ. ಆದುದರಿಂದ ಹೆಚ್ಚು ಹೆಚ್ಚಾಗಿ ಕೆಲಸಗಳನ್ನು ಜನಗಳಿಗೆ ಒದಗಿಸಿಕೊಡುವುದು ಜರೂರಾಗಿ ಮಾಡಬೇಕಾದ ಕೆಲಸ.

ಜನಗಳು ಕೂಲಿಮಾಡಿ, ಕೆಲಸಕ್ಕಾಗಿ ಅಲೆದು ಜೀವನವನ್ನು ನಡೆಸುತ್ತಿರುವ ಸಂದರ್ಭದಲ್ಲಿ ಕಂದಾಯವನ್ನು ಮತ್ತು ರೈತರಿಗೆ ಕೊಟ್ಟಿರುವ ಸಾಲಗಳನ್ನು ವಸೂಲು ಮಾಡುವುದಕ್ಕಾಗಿ ಸರ್ಕಾರದ ವತಿಯಿಂದ ಜರೂರು ಆಜ್ಞೆಗಳು ಪ್ರತಿ ಜಿಲ್ಲೆಗೂ ಕೂಡ ಬರುತ್ತಿವೆ. ಇದು ಬಹಳ ಆಶ್ಚರ್ಯವಾಗಿ ಕಾಣುತ್ತದೆ. ಒಂದು ಕಡೆ ದೇಶದಲ್ಲಿ ಮಳೆ ಬಾರದೆ ಅಭಾವದಿಂದ ತೊಂದರೆಯಾಗಿರುವ ವಿಷಯವನ್ನು ಚರ್ಚೆ ಮಾಡುತ್ತಿದ್ದಾರೆ ಇನ್ನೊಂದು ಕಡೆ ಕಂದಾಯ ಮತ್ತು ಸಾಲ

ಗಳನ್ನು ಜರೂರಾಗಿ ವಸೂಲು ಮಾಡಬೇಕೆಂದು ಆಜ್ಞೆಗಳು ಬರುತ್ತಿದ್ದು ವಿರೋಧಾಭಾಸವನ್ನು ಕಾಣುತ್ತಿದ್ದೇವೆ. ಈಗ ಹಾಸನ ಜಿಲ್ಲೆಯ ವಿಷಯ ಹೇಳುವುದಾದರೆ ಸುಮಾರು ಒಂಬತ್ತೂವರೆ ಲಕ್ಷ ರೂಪಾಯಿಗಳವರೆಗೂ ರಿಮಿಷನ್ ಆಗಬೇಕೆಂದು ಅಧಿಕೃತವಾಗಿ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಬರೆದು ಕಳಿಸಿದ್ದರೂ ಕೂಡ ಇದುವರೆಗೆ ರಿಮಿಷನ್ ಆಜ್ಞೆ ಬಂದಿಲ್ಲ. ಪದೇ ಪದೇ ಒತ್ತಾಯ ಮಾಡುತ್ತಿದ್ದರೂ ಸರ್ಕಾರದವರು ಜರೂರಾಗಿ ರಿಮಿಷನ್ ಆಜ್ಞೆ ಮಾಡಿ ಕಂದಾಯ ಮತ್ತು ಸಾಲದ ವಸೂಲಿ ಕ್ರಮವನ್ನು ತಾತ್ಕಾಲಿಕವಾಗಿಯಾದರೂ ತಡೆಹಿಡಿಯಬೇಕೆಂದು ನಾನು ಮುಖ್ಯಮಂತ್ರಿಯವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಎಲ್ಲ ನೋಡಿದರೂ ಕುಡಿಯುವ ನೀರಿನ ಅಭಾವ ಹೆಚ್ಚಾಗಿದೆ. ಸುಮಾರು 40-50 ಅಡಿ ಆಳವಿರುವ ಬಾವಿಗಳಲ್ಲಿ ಕೂಡ ಕುಡಿಯುವ ನೀರಿಲ್ಲ. ಕುಡಿಯುವ ನೀರಿನ ಬಾವಿಗಳನ್ನು ಕೊಡಲು ಮತ್ತು ಇರುವ ಬಾವಿಗಳನ್ನು ಆಳಮಾಡಲು 64, ಫ್ಯಾಮಿನ್‌ನಲ್ಲಿ ಹಣವನ್ನು ಒದಗಿಸಿಲ್ಲ. ಕುಡಿಯುವುದಕ್ಕೆ ನೀರನ್ನಾದರೂ ಸಾಕಾದಷ್ಟು ಒದಗಿಸಿಕೊಡಬೇಕಾಗಿದೆ. ಇದಕ್ಕಾಗಿ ಸರ್ಕಾರದ ವತಿಯಿಂದ ಜಾಗ್ರತೆಯಾಗಿ ಕ್ಷಾಮ ಪರಿಹಾರ ನಿಧಿಯಲ್ಲಿ ಕುಡಿಯುವ ನೀರಿನ ಬಾವಿಗಳನ್ನು ಆಳಪಡಿಸುವುದಕ್ಕೆ ಆಜ್ಞೆ ಕಳುಹಿಸಿಕೊಡಬೇಕು ಎಂದು ಪ್ರಾರ್ಥನೆ ಮಾಡುತ್ತಿದ್ದೇನೆ.

ಕ್ಷಾಮ ಪರಿಹಾರದ ವಿಚಾರದಲ್ಲಿ ಎರಡು ವಿಧವಾಗಿ ಮಾಡಬೇಕು. ಜರೂರಾಗಿ ಏನು ವ್ಯವಸ್ಥೆ ಮಾಡಬೇಕು ಎಂದರೆ ಕುಡಿಯುವ ನೀರನ್ನು ಒದಗಿಸುವುದು ಮತ್ತು ವ್ಯವಸಾಯ ಕೂಲಿಕಾರರಿಗೆ ಕೆಲಸವನ್ನು ಒದಗಿಸಿ ಅವರು ಮಾಡುವಂಥ ಕೆಲಸಕ್ಕೆ ಕೂಲಿ ಮತ್ತು ಅದರ ಜೊತೆಗೆ ಆಹಾರ ಧಾನ್ಯಗಳನ್ನು ಅವರು ಎಲ್ಲಿ ಕೆಲಸ ಮಾಡುತ್ತಾರೆಯೋ ಅಲ್ಲಿಯೇ ವಿತರಣೆ ಮಾಡತಕ್ಕದು. ಅದನ್ನು ಮಾಡಿದರೆ ತಾತ್ಕಾಲಿಕವಾಗಿ ಸಹಾಯ ಮಾಡಿದಂತಾಗುತ್ತದೆ. ತಾತ್ಕಾಲಿಕವಾಗಿ ಕೆಲಸವನ್ನು ಕೂಡ ನಾವು ಪೂರ್ತಿಯಾಗಿ ಮಾಡುತ್ತಿಲ್ಲ. ಎಲ್ಲೋ ಒಂದು ಪಂಚಾಯಿತಿ ಮುಖ್ಯಸ್ಥಳದಲ್ಲಿ ಅಥವಾ ಹೋಬಳಿಯಲ್ಲಿ ಒಂದೆರಡು ಕಡೆ ಕೆಲಸ ನಡೆಯುತ್ತದೆ. ಅಲ್ಲಿಗೆ ಹೋಗಿ ಕೆಲಸ ಮಾಡಿ ಎಂದು ಹೇಳುತ್ತಾರೆ; ಲೋಕೋಪಯೋಗಿ ಇಲಾಖೆಯಲ್ಲಿ ಕಾಮಗಾರಿಗಳು ನಡೆಯುತ್ತಿವೆ, ಅಲ್ಲಿ ಹೋಗಿ ಕೆಲಸ ಮಾಡಿ ಎಂದು ಹೇಳುತ್ತಾರೆ. ನಾಲ್ಕೈದು ಮೈಲಿ, ಹತ್ತಾರು ಮೈಲಿ ದೂರ ಹೋಗಿ ರೈತಾಪಿ ಜನಗಳು ಕೆಲಸ ಮಾಡಿ ಸಾಯಂಕಾಲದ ವೇಳೆಗೆ ಮನೆಗೆ ವಾಪಸು ಬರುವುದಕ್ಕೆ ಸಾಧ್ಯವೇ ! ಆದುದರಿಂದ ಜನಗಳು ಎಲ್ಲೆಲ್ಲಿ ಕೆಲಸ ಮಾಡುವುದಕ್ಕೆ ಮುಂದೆ ಬರುತ್ತಾರೆ; ಯಾವ ಯಾವ ಹಳ್ಳಿಗಳಲ್ಲಿ ಮುಂದೆ ಬರುತ್ತಾರೆ ಅಂಥ ಸ್ಥಳಗಳನ್ನೇ ಕೇಂದ್ರವಾಗಿ ಮಾಡಿ ಅವರಿಗೆ ಬೇಕಾದಷ್ಟು ಆಹಾರ ಮತ್ತು ಕೆಲಸಗಳನ್ನು ಜರೂರಾಗಿ ಏರ್ಪಾಡು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶಾಶ್ವತವಾದ ಪರಿಹಾರ ಕಾರ್ಯಗಳ ವಿಚಾರವಾಗಿ ಹೇಳಬೇಕಾದರೆ ಕ್ಷಾಮ ಎನ್ನುವುದು ಇವೊತ್ತು ಹೊಸದಾಗಿ ಬಂದಿಲ್ಲ. ಸಾಮಾನ್ಯವಾಗಿ ನೂರಾರು ವರ್ಷಗಳಿಂದ ಒಂದಲ್ಲ ಒಂದು ಪ್ರದೇಶ, ಒಂದು ದೇಶವಲ್ಲ ಇನ್ನೊಂದು ದೇಶ ಒಂದೊಂದು ಸಾರಿ ಕ್ಷಾಮಕ್ಕೆ ಈಡಾಗುತ್ತಿವೆ. ಇದಕ್ಕೆ ನಾವು ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಂಡು ಕ್ಷಾಮ ನಿವಾರಣೆ ಮಾಡಬೇಕು. ಒಂದೆರಡು ಮಳೆ ಬಂದರೆ ಸಾಕು, ದೇಶದಲ್ಲಿ ಕ್ಷಾಮವಿಲ್ಲ ಎಂದು ಕ್ಷಾಮ ಪರಿಹಾರ ಕಾರ್ಯವನ್ನು ನಿಲ್ಲಿಸುವುದು, ಕ್ಷಾಮ ಕಾಲದಲ್ಲಿ ಏನೇನು ವ್ಯವಸ್ಥೆಯನ್ನು ಮಾಡುತ್ತೀರಿ ಅದನ್ನೆಲ್ಲ ಕೈ ಬಿಟ್ಟು ಮಾಮೂಲಾದ ಕೆಲಸಗಳು ಏನಿವೆ ಅವುಗಳನ್ನು ಮಾತ್ರ ಮಾಡುತ್ತೀರಿ. ಹಾಗೆ ಮಾಡಿದರೆ ಶಾಶ್ವತವಾದ ಪರಿಹಾರವನ್ನು ಮಾಡಿದಂತಾಗದೆ ಹೋಗುವುದರಿಂದ ಇನ್ನು ಹತ್ತು ವರ್ಷಕ್ಕಾದರೂ ಕ್ಷಾಮ ತಲೆದೋರುತ್ತದೆ ಎಂದು ತಿಳಿದುಕೊಂಡು ಶಾಶ್ವತವಾದ ಪರಿಹಾರ ಕಾರ್ಯಗಳನ್ನು ಮಾಡಬೇಕು.

ಹಾಸನ ಜಿಲ್ಲೆಯಲ್ಲಿ ಬೇಕಾದಷ್ಟು ನೀರಾವರಿ ಕಾಮಗಾರಿಗಳನ್ನು ಮಾಡಲು ಅವಕಾಶವಿದೆ. ಹಾರಂಗಿ, ಯಗಚಿ, ಮಾಚೇಹಳ್ಳಿ, ಹೇಮಾವತಿ ಇಂಥ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳ ಕೆಲಸ ಕಾರ್ಯಗಳನ್ನು ಮಾಡಬೇಕೆಂದು ಅಂದಾಜು ಮಾಡಿದ್ದಾರೆ. ಬಹುಶಃ ಐದಾರು ವರ್ಷಗಳಿಂದಲೂ ಕೂಡ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಕ್ಕೆ ಪತ್ರ ವ್ಯವಹಾರ ನಡೆಯುತ್ತಿದೆ. ಈ ವ್ಯವಹಾರವೇನಾದರೂ ನಿಧಾನವಾಗುತ್ತಿದೆಯೇ ಎನ್ನುವುದು ಗೊತ್ತಾಗುವುದಿಲ್ಲ. ಒಂದು ಕೆಲಸವನ್ನು ಮಾಡಬೇಕೆಂದು ತೀರ್ಮಾನ ಮಾಡಿದರೆ ಅದನ್ನು ಜರೂರಾಗಿ ಸರ್ಕಾರದವರು ಮಾಡಬೇಕು. ದಯವಿಟ್ಟು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಈ ಯೋಜನೆಗಳ ವಿಚಾರದಲ್ಲಿ ಜರೂರಾಗಿ ಕೆಲಸ ಕಾರ್ಯಗಳನ್ನು ಮಾಡಿದರೆ ಅದರಿಂದ ಖಾಯಂ ಆದ ಪರಿಹಾರ ಸಿಕ್ಕುತ್ತದೆ ಎಂದು ಈ ಸಂದರ್ಭದಲ್ಲಿ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಶ್ರೀ ಬಿ. ನಂಜಪ್ಪ)

ಅನೇಕ ಕಡೆ ನದಿಗಳಲ್ಲಿ ನೀರು ಹರಿಯುತ್ತಾ ಇದೆ. ಅಂಥ ಕಡೆ ನೀರಾವರಿಗೆ ಸಂಬಂಧಪಟ್ಟ ಹಾಗೆ ಲಿಫ್ಟ್ ಇರ್ರಿಗೇಷನ್ ವ್ಯವಸ್ಥೆಯನ್ನು ಮಾಡುವುದು ಒಳ್ಳೆಯದು. ಯಾರು ಯಾರು ಲಿಫ್ಟ್ ಇರಿಗೇಷನ್ ಮುಂದೆ ಮಾಡಲಿಕ್ಕೆ ಬರುತ್ತಾರೋ, ಅವರಿಗೆ ನಾಲೆಯ ದಂಡೆಯಲ್ಲಿ ಭೂಮಿಗಳನ್ನು ಕೊಡುವ ವ್ಯವಸ್ಥೆ ಮಾಡಿ ಎಲೆಕ್ಟ್ರಿಸಿಟಿ ಪವರ್ ಕೊಟ್ಟು ಲಿಫ್ಟ್ ಇರ್ರಿಗೇಷನ್ ವ್ಯವಸ್ಥೆ ಮಾಡಬೇಕು. ಈ ಸಂದರ್ಭದಲ್ಲಿ ಎಲೆಕ್ಟ್ರಿಸಿಟಿ ಬೋರ್ಡ್‌ನವರು ಅವರ ಕೆಲಸ ಕಾರ್ಯಗಳಲ್ಲಿ ಹಿಂದುಳಿದಿದ್ದಾರೆ. ಏನು ಕೇಳಿದರೂ ಕೂಡ ನಮ್ಮ ಹತ್ತಿರ ದುಡ್ಡು ಇಲ್ಲ. ನಮಗೆ ದುಡ್ಡಿಗೆ ಬಹಳ ತೊಂದರೆಯಾಗಿದೆ ಯಾವ ಯೋಜನೆಗಳನ್ನೂ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಅವರು ಯಾವಾಗ ಮಾಡುತ್ತಾರೋ ನನಗೆ ಅರ್ಥವಾಗುವುದಿಲ್ಲ. ಮಾನ್ಯ ಚಿಕ್ಕೇಗೌಡರು ಒಂದು ಮಾತು ಹೇಳಿದರು, ಸರ್ಕಾರ ಒಂದು ತೀರ್ಮಾನ ತೆಗೆದುಕೊಂಡರೆ ಬೋರ್ಡ್‌ನವರು ಒಂದು ಸರ್ಕ್ಯುಲರ್ ಹೊರಡಿಸುತ್ತಾರೆ ಎಂದು. ಆದರೆ ಜನರು ಸಾಲ ತೆಗೆದುಕೊಂಡು ಬಾವಿಗಳನ್ನು ತೆಗೆದು ಪೂರ್ತಿ ಮಾಡಿ ಎಲ್ಲಾ ಅಣಿ ಮಾಡಿಕೊಂಡಿರುವಾಗ ನಮಗೆ ಕರೆಂಟ್ ಕೊಡುವುದಕ್ಕೆ ದುಡ್ಡು ಇಲ್ಲ ಎಂದು ಹೇಳಿದುದನ್ನು ನಾನು ಕಣ್ಣಾರೆ ನೋಡಿದ್ದೇನೆ. ಇದು ಬಹಳ ಶೋಚನೀಯವಾದ ವಿಚಾರ. ಒಂದು ಕಡೆ ಅಭಾವ ನೀಗಬೇಕು, ಹೆಚ್ಚು ಆಹಾರಧಾನ್ಯ ಉತ್ಪತ್ತಿ ಮಾಡಬೇಕು, ಈ ಬರವನ್ನು ಕೊನೆಗಾಣಿಸಬೇಕು ಎಂದು ಅನೇಕ ಸಾರಿ ಹೇಳಿದ್ದಾರೆ. ಜನಗಳಿಗೆ ಪ್ರಚಾರ ಮಾಡುತ್ತಾರೆ. ಆದರೆ ಇದುವರೆಗೂ ಕೂಡ ಕಾರ್ಯಗತವಾಗಿಲ್ಲ. ಎಲೆಕ್ಟ್ರಿಸಿಟಿ ಬೋರ್ಡ್‌ನವರು ಪವರ್ ಕೊಡದೆ ಬಾವಿಗಳಲ್ಲಿ ನೀರು ಇದ್ದರೂ ಕೂಡ ಪಂಪು ಸೆಟ್ಟು ಕೆಲಸ ಮಾಡದೆ ಹಾಗೆಯೇ ಇವೆ. ಇದು ಅನ್ಯಾಯ. ಏನು ತೊಂದರೆಗಳಿದ್ದರೂ ಕೂಡ ನೀರಾವರಿ ಬಾವಿಗಳಿಗೆ ಜರೂರಾಗಿ ಕರೆಂಟ್ ಕೊಡುವುದಕ್ಕೆ ಎಲೆಕ್ಟ್ರಿಸಿಟಿ ಬೋರ್ಡ್‌ನವರು ಏರ್ಪಾಡು ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದೇ ರೀತಿ ಅನೇಕ ಕಡೆಗಳಲ್ಲಿ ಬೋರ್‌ವೆಲ್ಸ್ ತೆಗೆದು ವ್ಯವಸಾಯಕ್ಕೆ ನೀರನ್ನು ಒದಗಿಸಿಕೊಡುವ ವ್ಯವಸ್ಥೆ ಮಾಡಬೇಕು. ಅದಕ್ಕೆ ಇವೊತ್ತಿನ ದಿವಸ ಹೆಚ್ಚು ನಿಗಾ ಕೊಡುತ್ತಿಲ್ಲ. ಬೋರ್‌ವೆಲ್ ಯಂತ್ರಗಳನ್ನು ತರಿಸಿ ಬಾವಿಗಳನ್ನು ತೋಡಿಸುವುದಕ್ಕೆ ಸಹಾಯ ಮಾಡಿಕೊಡಬೇಕು ಎಂದು ಪ್ರಾರ್ಥನೆ ಮಾಡಿಕೊಂಡು ಈ ದಿವಸ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಸ್. ಪುಟ್ಟಸ್ವಾಮಿ (ಚಾಮರಾಜನಗರ).—ಸನ್ಮಾನ್ಯ ಸಭಾಪತಿಗಳೇ, ಇಂದು ಮೈಸೂರು ರಾಜ್ಯದಲ್ಲಿ ಉಂಟಾಗಿರತಕ್ಕ ಅಭಾವ ಪರಿಸ್ಥಿತಿ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯ ಮುಂದೆ ಇಟ್ಟಿರತಕ್ಕಂಥ ಪ್ರಸ್ತಾವನೆಯ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಅನೇಕ ಮಾನ್ಯ ಸದಸ್ಯರುಗಳೂ ಸೂಕ್ತ ಸಲಹೆಗಳನ್ನು ಕೂಡ ನೀಡಿದ್ದಾರೆ. ಈಗ ಒದಗಿರುವ ಗಂಭೀರವಾದ ಪರಿಸ್ಥಿತಿಯನ್ನು ಸರ್ಕಾರ ಅರ್ಥಮಾಡಿಕೊಂಡು, ಸರ್ಕಾರದವತಿಯಿಂದ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನೂ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಅಲ್ಲದೆ ಸರ್ಕಾರದವರು ಈ ರಾಜ್ಯದಲ್ಲಿ ಏನೇನು ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕೋ ಅದನ್ನು ಈಗಾಗಲೇ ಪ್ರಾರಂಭಿಸುವುದಕ್ಕೆ ಹಣವನ್ನು ಒದಗಿಸಿಕೊಟ್ಟಿದ್ದಾರೆ. ಇನ್ನೂ ಸ್ವಲ್ಪಮಟ್ಟಿಗೆ ಹೆಚ್ಚು ಹಣವನ್ನು ಕೊಡುವುದಕ್ಕೆ ಯೋಚನೆ ಮಾಡುತ್ತಾ ಇರುವುದು ಮಾನ್ಯ ಮುಖ್ಯ ಮಂತ್ರಿಗಳು ಇಟ್ಟಿರತಕ್ಕಂಥ ಹೇಳಿಕೆಯಿಂದ ನಮಗೆ ಅರ್ಥವಾಗುತ್ತದೆ. ಸರ್ಕಾರ ಈ ಒಂದು ಪರಿಸ್ಥಿತಿಯನ್ನು ಸುಧಾರಿಸುವ ಸಲುವಾಗಿ ಕೇಂದ್ರ ಸರ್ಕಾರದವರು ಕೊಟ್ಟಿರತಕ್ಕಂಥ ಹಣವನ್ನು 4 ವಿಭಾಗಗಳಿಗೆ ಒದಗಿಸಿಕೊಟ್ಟಿದ್ದಾರೆ. ಸರ್ಕಾರದವರು ಏಜೆನ್ಸಿ ಮುಖಾಂತರ ಕೆಲಸ ಕಾರ್ಯಗಳನ್ನು ನಡೆಸುತ್ತಿದ್ದಾರೆ ಎನ್ನುವ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ನಾನು ಹೆಚ್ಚು ಹೇಳಲು ಹೋಗುವುದಿಲ್ಲ. ಈಗಾಗಲೇ ಸರ್ಕಾರದವರು ಏನು ಹಣವನ್ನು ಒದಗಿಸಿಕೊಟ್ಟಿದ್ದಾರೋ ಆ ಹಣದಲ್ಲಿ ನಮ್ಮ ರಾಜ್ಯದಲ್ಲಿ ಅಭಾವಕ್ಕೆ ಒಳಗಾಗಿರುವ ಜಿಲ್ಲೆಗಳಲ್ಲಿ ಕೆಲಸಕಾರ್ಯಗಳು ನಡೆಯುತ್ತಾ ಇವೆಯೆಂದು ಹೇಳಿದರು. ಆದರೆ ಅದು ಸಾಕಷ್ಟು ಪ್ರಮಾಣದಲ್ಲಿ ನಡೆಯುತ್ತಾ ಇಲ್ಲ. ಸರ್ಕಾರ ಕೆಲವು ಸಣ್ಣ ನೀರಾವರಿ ಯೋಜನೆಗಳಿಗೆ ಬೇಕಾದಂಥ ಹಣವನ್ನು ಸೇರಿಸಿ ಮಂಜೂರು ಮಾಡಿದ್ದಾರೆ. ಇದರಲ್ಲಿ ಹೆಚ್ಚು ಆಹಾರವನ್ನು ಬೆಳೆಯುವ ಸಲುವಾಗಿ ಜಮೀನು ಅಭಿವೃದ್ಧಿ ಬ್ಯಾಂಕುಗಳ ಮುಖಾಂತರ ಬಾವಿಗಳನ್ನು ತೆಗೆಸುವುದಕ್ಕೆ ಸಾಲ ಕೊಡುವುದು, ವಿದ್ಯುಚ್ಛಕ್ತಿಯನ್ನು ಕೊಡುವುದು ಈ ಯೋಜನೆಯನ್ನು ಕೈಗೊಂಡಿದ್ದೇವೆ ಎಂದು ಹೇಳಿದ್ದಾರೆ. ಈಗ ನಮ್ಮ ಮೈಸೂರು ರಾಜ್ಯಕ್ಕೆ ಸಂಬಂಧಪಟ್ಟಂತೆ ಕೆಲವು ದೊಡ್ಡ ಪ್ರಮಾಣದ ಮತ್ತು ಮಧ್ಯಮ ಪ್ರಮಾಣದ ನೀರಾವರಿ ಯೋಜನೆಗಳನ್ನು ಮಂಜೂರು ಮಾಡಿ ಕೆಲಸ ನಡೆಯುತ್ತಾ ಇರತಕ್ಕಂಥದ್ದರ ಬಗ್ಗೆ ಒಂದೆರಡು ಸಲಹೆಗಳನ್ನು ಕೊಡುತ್ತೇನೆ. ಮುಖ್ಯವಾಗಿ ನನ್ನ ತಾಲ್ಲೂಕಿಗೆ ಸೇರಿರತಕ್ಕಂಥ ಕೆಲಸಗಳನ್ನು ಸರ್ಕಾರ ತೀವ್ರವಾಗಿ ಮಾಡಬೇಕೆಂದು ಸರಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ನನ್ನ ತಾಲ್ಲೂಕಿಗೆ ಸೇರಿದ ಹಾಗೆ ಸರ್ಕಾರದವರು 1 ಕೋಟಿ 87 ಲಕ್ಷ ರೂಪಾಯಿ ಅಂದಾಜಿನಲ್ಲಿ ಒಂದು ಸುವರ್ಣವತಿ ಮಧ್ಯಮ ವರ್ಗದ ನೀರಾವರಿ ಯೋಜನೆಯನ್ನು ಮಂಜೂರು ಮಾಡಿ 5 ವರ್ಷ ದಿಂದಲೂ ಕೆಲಸ ನಡೆಯುತ್ತಾ ಇದೆ. ಈ ಪ್ರಾಜೆಕ್ಟಿನ ಮಂಜೂರಾತಿ ಕೊಡತಕ್ಕಂಥ ಕಾಲದಲ್ಲಿ ಒಂದು ಅಂದಾಜಿನಲ್ಲಿ 3 ಸಬ್ ಡಿವಿಷನ್ ತೆಗೆಯಲಾಯಿತು. ಕಾಲುವೆಗಳಿಗೆ ಮತ್ತು ಪ್ರಾಜೆಕ್ಟ್ ಕೆಲಸಗಳಿಗೆ ಒಂದು ಸಬ್ ಡಿವಿಷನ್, ಅದರ ಕೆಲಸ ನಡೆಯುತ್ತಾ ಇದೆ. ಬಲದಂಡೆನಾಲೆಗೆ ಒಂದು ಸಬ್ ಡಿವಿಷನ್ ತೆಗೆದು 3 ಮೈಲಿ ನಾಲೆ ಕೆಲಸ ನಡೆಯುತ್ತಾ ಇದೆ. ಸುವರ್ಣಾವತಿ ಪ್ರಾಜೆಕ್ಟಿಗೆ ಸೇರಿದ ಹಾಗೆ ಹೊಸದಾಗಿ ಅಚ್ಚುಕಟ್ಟಿಗೆ ಬರತಕ್ಕಂಥ 6 ಸಾವಿರ ಎಕರೆಗಳಿಗೂ, ಸುವರ್ಣಾವತಿ ನದಿಯಿಂದ ಈಗ ನೀರನ್ನು ಪಡೆಯುತಕ್ಕಂಥ ಕೆರೆಗಳ ಆಶ್ರಯದಲ್ಲಿ 10 ಸಹಸ್ರ ಎಕರೆಗಳಿಗೆ ಬೇಕಾ ದಂಥ ನಾಲೆಗಳನ್ನು ದುರಸ್ತು ಮಾಡುವುದು ಅಣೆಕಟ್ಟು ಕಟ್ಟುವುದು ಮತ್ತು ನಾಲೆಗಳಿಗೆ ಒಡ್ಡು ಹಾಕುವ ಕೆಲಸಗಳು, ಇವುಗಳನ್ನು ಮಾಡಲಾಗಿದೆ. ಈ ಅಣೆಕಟ್ಟುಗಳನ್ನು ಹಾಕಿ ನಾಲೆಗಳ ಮುಖಾಂತರ ಕೆರೆಗಳಿಗೆ ನೀರು ಒದಗಿಸುವ ಸಲುವಾಗಿ ಈ ಪ್ರಾಜೆಕ್ಟಿಗೆ 10 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ ಎಂದು ತಿಳಿದುಬಂದಿದೆ. ಈ ಕೆಲಸಗಳನ್ನೆಲ್ಲಾ 2 ಸಬ್ ಡಿವಿಷನ್ ಮಾಡುತ್ತಾ ಇರುವ ಕೆಲಸದ ಜೊತೆಗೆ ವಹಿಸಿರುತ್ತಾರೆ. ಆದುದರಿಂದ ನಾಲೆಗಳು ಮತ್ತು ಕೆರೆಗಳನ್ನು ದುರಸ್ತು ಮಾಡುವ ಕೆಲಸವನ್ನೂ ಅವರಿಗೇ ವಹಿಸಿರುವುದರಿಂದ, ಅಣೆಕಟ್ಟುಗಳನ್ನು ಕಟ್ಟುವುದಕ್ಕೇ ಒಂದು ಸಬ್‌ಡಿವಿಷನ್‌ನ್ನು ನಮ್ಮ ಕೇಂದ್ರದಲ್ಲಿ ತೆರೆಯಬೇಕು ಎಂದು ಹೇಳುತ್ತೇನೆ. ಇದರಿಂದ ಈ ಅಭಾವ ಏನು ಇದೆ ಅದು ನೀಗಿದಂತಾಗುವುದು ಎಂದು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸುತ್ತೇನೆ. ಈಗಾ ಗಲೇ ಅದರ ಒಂದು ವ್ಯವಸ್ಥೆ ನಮ್ಮಲ್ಲಿ ಇರುವುದರಿಂದ ಇದನ್ನು ಮಾಡತಕ್ಕಂಥಾದ್ದು ಅಷ್ಟು ಕಷ್ಟ ವಾಗಲಾರದು ಎನ್ನುವ ದೃಷ್ಟಿಯಿಂದ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

1968-69 ನೇ ಸಾಲಿನ ಬಡ್ಜೆಟ್ಟಿನಲ್ಲಿ ನಮ್ಮ ತಾಲ್ಲೂಕಿನಲ್ಲಿ ಶ್ರೀಮಾನ್ ರಾಚಯ್ಯನವರ ಕ್ಷೇತ್ರದಲ್ಲಿ 3 ಕೆರೆಗಳನ್ನೂ, ನನ್ನ ಕ್ಷೇತ್ರದಲ್ಲಿ 1 ಕೆರೆಯನ್ನೂ, ಒಟ್ಟು 4 ಕೆರೆಗಳನ್ನು ಈ ಬಡ್ಜೆಟ್ಟಿನಲ್ಲಿ ಸೇರಿಸಿ ಮಂಜೂರು ಮಾಡಿದ್ದಾರೆ. ಇದಕ್ಕೆ ಸಂಬಂಧಪಟ್ಟ ಸೂಪರಿಂಟೆಂಡೆಂಟ್ ಇಂಜನೀಯರ್ ಮತ್ತು ಎಕ್ಸಿಕ್ಯೂಟೀವ್ ಇಂಜನೀಯರೊಂದಿಗೆ ಸಮಾಲೋಚನೆ ನಡೆಸಿದಾಗ ಈ 4 ಕೆಲಸಗಳಿಗೂ ಕೂಡ ಟೆಕ್ನಿಕಲ್ ಸ್ಯಾಂಕ್ಷನ್ ಬಂದ ಮೇಲೆ ಟೆಂಡರ್ ಕರೆಯುತ್ತೇವೆ ಎಂದು ಹೇಳಿದರು. ಆದುದ ರಿಂದ ಆದಷ್ಟು ಬೇಗನೆ ಟೆಕ್ನಿಕಲ್ ಸ್ಯಾಂಕ್ಷನ್ ಕೊಟ್ಟು ಟೆಂಡರ್ ಕರೆದು ಕೆಲಸಗಳನ್ನು ಬಹುಬೇಗ ಪ್ರಾರಂಭ ಮಾಡಬೇಕು ಎಂದು ಮತ್ತೊಮ್ಮೆ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇತ್ತೀಚೆಗೆ ನಮ್ಮ ಭಾಗದಲ್ಲಿ ಅಭಾವ ಪ್ರದೇಶಕ್ಕೆ ತುತ್ತಾಗಿರುವ ಕೊಳ್ಳೆಗಾಲ, ಗುಂಡ್ಲು ಪೇಟೆ ಮತ್ತು ಚಾಮರಾಜನಗರ ಭಾಗಗಳಲ್ಲಿ ಹೆಚ್ಚು ಹೆಚ್ಚು ನೀರಾವರಿ ಭಾವಿಗಳನ್ನು ತೆಗೆಯು ತಕ್ಕಂಥ ಕೆಲಸ ನಡೆದಿದೆ. ನಮ್ಮಲ್ಲಿ ಪ್ರೀ-ಪ್ರೈಮರಿ ಡೆವಲಪ್‌ಮೆಂಟ್ ಬ್ಯಾಂಕ್ 1968-69 ನೇ ಸಾಲಿಗೆ 270 ಬಾವಿಗಳಿಗೆ ಹಣ ಮಂಜೂರು ಮಾಡಿ ಕೆಲಸ ನಡೆಯುತ್ತಾ ಇದೆ.

6-00 P.M.

ಇನ್ನು ಸುಮಾರು 210 ಬಾವಿಗಳ ಅರ್ಜಿಗಳು ಕೂಡ ಜಮೀನು ಅಭಿವೃದ್ಧಿ ಬಾಂಕುಗಳಲ್ಲಿ 810 ಅರ್ಜಿಗಳು ತಾಲ್ಲೂಕು ಮಟ್ಟದಲ್ಲಿ, ಇನ್ನೂ ಕಾದು ಕುಳಿತಿವೆ. ಕಳೆದ ನಾಲ್ಕು ತಿಂಗಳಿಂದ, ಅರ್ಜಿಗಳನ್ನು ಮಂಜೂರು ಮಾಡುವುದು ಬೇಡ ಎಂದು ಕೇಂದ್ರ ಭೂ ಅಭಿವೃದ್ಧಿ ಬ್ಯಾಂಕ್ ಸರ್ಕುಲರ್ ಹೋಗಿ ಆ ಕೆಲಸವೆಲ್ಲಾ ಹಾಗೆ ನಿಂತು ಹೋಗಿವೆ. ನಾನೀಗಲಾದರೂ ಹೇಳುತ್ತೇನೆ, ಅಲ್ಲಿರತಕ್ಕ ಅರ್ಜಿಗಳನ್ನು ಮಂಜೂರು ಮಾಡುವುದರಿಂದ 200 ಬಾವಿಗಳನ್ನು ತೆಗೆಯುವುದಕ್ಕೆ ಆಗುತ್ತದೆ. ಆ ರೀತಿ ಮಾಡಿ, ರೈತರಿಗೆ ಪರಿಹಾರ ಕಾರ್ಯಗಳನ್ನು ಒದಗಿಸುವ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗಾಗಲೇ ಜನಗಳು ಸ್ವಂತ ಖರ್ಚಿನಲ್ಲಿ ಬಾವಿಗಳನ್ನು ತೆಗೆಸುತ್ತಿದ್ದಾರೆ. ಆದರೆ ತೆಗೆದಿರತಕ್ಕ ಬಾವಿಗಳಿಗೆ ವಿದ್ಯುಚ್ಛಕ್ತಿಯನ್ನು ಪಡೆಯುವುದಕ್ಕೆ ಸುಮಾರು 418 ಬಾವಿಗಳಿಗೆ ಅಂದಾಜು ತಯಾರು ಆಗಿ ಈಗಾಗಲೆ 270 ಅಂದಾಜುಗಳು ಮಂಜೂರಾಗಿವೆ. ಆದರೆ ಈಗಿನ ವಿದ್ಯುತ್ ಮಂಡಲಿಯ ಹೊಸ ನೀತಿಯು ಇದಕ್ಕೆ ತಡೆಯುಂಟುಮಾಡಿದೆ. ಸರ್ಕಾರ ದವರು ಇದನ್ನು ತೆಗೆದುಹಾಕಿದ್ದಾರೆಂದು ಹೇಳಿದ್ದಾರೆ. ಆದರೆ ಕೆಲಸವನ್ನು ಇನ್ನೂ ಮಾಡುವುದಕ್ಕೆ ಪ್ರಾರಂಭ ಮಾಡಿಲ್ಲ. ಆದ್ದರಿಂದ 418 ಅರ್ಜಿಗಳನ್ನು ಎಲ್ಲ ಮಂಜೂರು ಮಾಡಿ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡಬೇಕೆಂದು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಕಬಿನಿ ಪ್ರೊಜೆಕ್ಟಿನಿಂದ ನಮ್ಮ ಮೈಸೂರು ಜಿಲ್ಲೆಗೆ ನಾಲ್ಕೈದು ಅಭಾವ ಪೀಡಿತ ತಾಲೂಕುಗಳಿಗೆ ನೀರನ್ನು ಒದಗಿಸ ಬೇಕೆನ್ನುವ ದೃಷ್ಟಿಯಿಂದ ಮೂರು ಕೋಟಿಗಿಂತಲೂ ಹೆಚ್ಚಾಗಿ ಖರ್ಚು ಮಾಡಿ ಕೆಲಸವನ್ನು ನಡೆಸು

(ಶ್ರೀ ಎಸ್. ಪುಟ್ಟಸ್ವಾಮಿ)

ತ್ತಿದ್ದಾರೆ. ಆದರೆ ಕಬಿನಿ ಪ್ರಾಜೆಕ್ಟಿಗೆ ಒದಗಿಸಿರತಕ್ಕ ಹಣವಾಗಲಿ, ಸಿಬ್ಬಂದಿಯಾಗಲಿ ಇನ್ನೂ ಸಾಲದು. ಪ್ರೊಜೆಕ್ಟಿಗೆ ಒಬ್ಬ ಎಕ್ಸಿಕ್ಯೂಟಿವ್ ಇಂಜಿನಿಯರ್ ಸರ್ವೆಗೆ ಒಬ್ಬರು ಮಾಡಿದರೆ ಸಾಲದು. ಕೊಳ್ಳೆಗಾಲ, ನರಸೀಪುರ, ಮತ್ತು ಚಾಮರಾಜನಗರ ಭಾಗಗಳಿಗೆ ನಾಲೆ ಕೆಲಸ ಮುಗಿಸಲು, ಮತ್ತು ಅದನ್ನು ತ್ವರಿತವಾಗಿ ಮಾಡಲು ಇನ್ನೂ ಒಂದು ಡಿವಿಜನಿನ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದಕ್ಕೆ ಬೇಕಾದ ಹಣವನ್ನು ಮಾನ್ಯ ಮುಖ್ಯಮಂತ್ರಿಯವರು ಒದಗಿಸಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಅದೇ ರೀತಿ ಸಣ್ಣ ನೀರಾವರಿ ಬಗ್ಗೆಯೂ ಕೆಲಸಗಳನ್ನು ಪ್ರಾರಂಭ ಮಾಡಬೇಕೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್ ಅವರು.—ಈಗ ಸಭೆಯನ್ನು ಮುಂದುವರಿಸುವುದೇ ಹೇಗೆ ಎಂದು ಸಭೆಯ ಅಪ್ಪಣೆಯನ್ನು ಕೇಳುತ್ತೇನೆ.

HON'BLE MEMBERS.—Yes.

† ಶ್ರೀ ಕೆ. ಎಂ. ಪುಟ್ಟಸ್ವಾಮಿ (ಚಿಕ್ಕಬಳ್ಳಾಪುರ).—ಮಾನ್ಯ ಅಧ್ಯಕ್ಷರೇ, ಈ ಬರಗಾಲ ಬಂದಿರತಕ್ಕದ್ದು ನಮ್ಮ ಒಂದು ಡಿಸ್ಟ್ರಿಕ್ಟಿನಲ್ಲಲ್ಲ, ಇದು ಇಡೀ ಮೈಸೂರು ದೇಶದಲ್ಲೆಲ್ಲಾ ಬಂದಿದೆ. ಹಿಂದೆ ನಮ್ಮ ತಂದೆಯವರು ಹೇಳುತ್ತಿದ್ದರು, ಅವರ ತಂದೆಯವರು ಅವರಿಗೆ ಹೇಳುತಿದ್ದರಂತೆ—ಹಿಂದೆ ಧಾತು ಸಂವತ್ಸರದಲ್ಲಿ ವಿಶೇಷವಾಗಿ ಬರಗಾಲ ಬಂದಿತ್ತು, ಆಗ ದವಸ ಇತ್ತು, ಲಕ್ಷಾಂತರ ಜನರು ಸತ್ತು ಹೋದರು ಎಂದು. ಹಿಂದೆ ನಮ್ಮ ಜಿಲ್ಲೆಯು ರಾಯಲಸೀಮೆಯು ಕೃಷ್ಣದೇವರಾಯನ ಅಧಿಕಾರದಲ್ಲಿತ್ತು. ಆ ಕಾಲದಲ್ಲಿ ಎರಡು ವರ್ಷ ಬೆಳೆ ಹೋಗಿತ್ತು. ಯಾವಾಗಲೂ ಬರಗಾಲ ನಮ್ಮ ಭಾಗಕ್ಕೆ ಬರುತ್ತದೆ. ಇದಕ್ಕೆ ನಮ್ಮ ಸರ್ಕಾರದವರು ಒಂದು ಶಾಶ್ವತವಾದ ಪರಿಹಾರವನ್ನು ಮಾಡಿ ಬರಗಾಲವನ್ನು ಎದುರಿಸಬೇಕು. ನಮ್ಮ ಜಿಲ್ಲೆಗೆ ಸರ್ಕಾರದವರು ಸುಮಾರು 5 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ; ಮೂರರಷ್ಟು ಕೆಲಸ ಮಾಡಿಸಬಹುದು ಎಂದು ಆರ್ಡರ್ ಮಾಡಿದ್ದಾರೆ. ಇವತ್ತು ಸರ್ಕಾರದವರು ಕೊಡುತ್ತಿರುವ ಹಣ ಬಡವರ ಕೈಗೆ ಹೋಗುತ್ತಾ ಇಲ್ಲ. ಇದು ಏನಾಗಿದೆ ಅಂದರೆ, ತಾಲ್ಲೂಕು ಬೋರ್ಡಿಗೆ ಅಥವಾ ರೆವೆನ್ಯೂ ಆಫೀಸರಿಗೆ ಈ ಹಣ ಹೋಗುತ್ತದೆ. ಆಗ ಅಲ್ಲಿಯ ಕಂಟ್ರಾಕ್ಟುದಾರರು, ಇದನ್ನು ಕಾದು, ಅಂತೂ ತಾಲೂಕು ಬೋರ್ಡು ಚುನಾವಣೆ ಬಂತು ಎಂದು ಪ್ರಭಾವ ಬೀರಿ ಜನಗಳನ್ನು ಕ್ಯಾನ್‌ವಾಸ್ ಮಾಡುವುದಕ್ಕೆ ಉಪಯೋಗ ಮಾಡುತ್ತಾರೆ. ಇಂದು ಕೂಲಿಯವನಿಗೆ 12 ಆಣೆ ಸಿಗುತ್ತದೆ. ಕಂಟ್ರಾಕ್ಟುದಾರನಿಗೆ ಒಂದೂವರೆ ರೂಪಾಯಿ ಸಿಗುತ್ತದೆ. ಆದ್ದರಿಂದ ಸರ್ಕಾರದವರು ಮಾಡತಕ್ಕ ಸಹಾಯ ಮಧ್ಯೆ ಇರತಕ್ಕ ಮನುಷ್ಯನಿಗೆ ಹೋಗುತ್ತಾ ಇದೆ. ಇದರ ಮಧ್ಯೆ ಸಬ್‌ಓವರ್‌ಸಿಯರ್, ಅವರು ಇವರು ಎಂದು ಇದ್ದಾರೆ. ಇದೇ ರೀತಿಯಲ್ಲಿ ಹಣ ಹೋಗುತ್ತದಲ್ಲದೆ, ಬಡಬಗ್ಗರಿಗೆ ಸರಿಯಾದ ರೀತಿಯಲ್ಲಿ ಹೋಗುತ್ತಾ ಇಲ್ಲ. ಇದಕ್ಕೆ ಸರ್ಕಾರ ಒಂದು ಯೋಜನೆ ಮಾಡಬೇಕು. ಈಗ ನಮ್ಮ ಮಂತ್ರಿಮಂಡಲದಲ್ಲಿ 28 ಜನರು ಮಂತ್ರಿಗಳು ಇದ್ದಾರೆ. ಅವರ ಪೈಕಿ 19 ಜಿಲ್ಲೆಗಳ ಪ್ರತಿನಿಧಿಗಳು ಮಂತ್ರಿಗಳಾಗಿದ್ದಾರೆ. ಅವರೆಲ್ಲರೂ ಅವರವರ ಜಿಲ್ಲೆಯಲ್ಲಿ ಪ್ರತಿದಿನ ಒಂದು ತಾಲ್ಲೂಕು ಟೂರ್ ಮಾಡಿ ನಿಜವಾಗಿಯೂ ಬಡವನಿಗೆ ಹಣ ಸಲ್ಲುತ್ತದೆಯೇ, ಅವನಿಗೆ ಕೂಲಿ ಸಿಗುತ್ತದೆಯೇ, ಇಲ್ಲವೇ ಎಂಬುದನ್ನು ನೋಡುವಂತೆ ನಮ್ಮ ಮಾನ್ಯ ಮುಖ್ಯಮಂತ್ರಿಯವರು ಮಾಡಿಸಿಕೊಡಬೇಕು. ಇಂದು ಬೆಂಗಳೂರಿನಲ್ಲಿ ಬರಗಾಲ ಕಾಣುವುದಿಲ್ಲ. ಅವರು ಇಲ್ಲೇ ಇದ್ದುಕೊಂಡರೆ, ಪುನಃ ಅವರ ಜಿಲ್ಲೆಯಲ್ಲಿ ಓಟು ಬರುವುದಿಲ್ಲವೆಂದು ತಿಳಿದುಕೊಳ್ಳಬೇಕು. ಇದರಿಂದ ರೈತರಿಗೂ, ಕೂಲಿಗಾರರಿಗೂ ಒಂದು ಒಳ್ಳೆಯ ಅವಕಾಶವನ್ನು, ಅನುಕೂಲವನ್ನು ಕಲ್ಪಿಸಿದಂತಾಗುತ್ತದೆ. ಇನ್ನೊಂದು ವಿಚಾರವೇನೆಂದರೆ, ಚಿಕ್ಕಬಳ್ಳಾಪುರದಲ್ಲಿ ಸುಮಾರು 80 ಅಡಿ ಬಾವಿ ತೆಗೆದರೂ ನೀರೇ ಇಲ್ಲ. ಅಲ್ಲಿ ಬೆಳೆಗಳು ಸರ್ವನಾಶವಾಗಿದೆ. ಈಗ ಮಳೆ ಬಂದರೂ ಬೆಳೆಯಾಗುವುದಿಲ್ಲ. ಹೋದ ವರ್ಷ 14 ಇಂಚು ಮಳೆಯಾಗಿದೆ. ಈ ಸಾರಿ ಇನ್ನೂ ಮೂರು ನಾಲ್ಕು ಇಂಚು ಕೂಡ ಮಳೆಯಾಗಿಲ್ಲ. ದೊಡ್ಡಬಳ್ಳಾಪುರದಲ್ಲೂ ಕುಡಿಯುವುದಕ್ಕೆ ನೀರಿಲ್ಲ. ಅಲ್ಲಿ ಎಷ್ಟೋ ಅಡಿ ಬಾವಿ ತೆಗೆದರೂ ನೀರು ಉಪ್ಪು. ಮಾನ್ಯ ಅಧ್ಯಕ್ಷರ (ಪಿ. ರಾಮೇಗೌಡರ) ಊರಿನಲ್ಲಿ 80 ಅಡಿ ಆಳ ಬಾವಿ ತೆಗೆದರೂ ಅಲ್ಲಿ ನೀರೇ ಇಲ್ಲ. ಈ ಸಮಯದಲ್ಲಿ ಪಿ. ಡಬ್ಲ್ಯು. ಡಿ. ಯವರು ಹಿಂದಿನ ಕೆಲಸ ಏನು ನಿಂತಿವೆ, ಅವನ್ನು ಎಷ್ಟು ಖರ್ಚಾದರೂ ಬಹಳ ಚೆನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಆಯಾ ತಾಲ್ಲೂಕಿನ ಜನರು ಸರ್ಕಾರಕ್ಕೆ ಈ ವಿಚಾರದಲ್ಲಿ ಕೂಡ ಸಹಕಾರ ಮಾಡಬೇಕು. ಅವರಲ್ಲಿರತಕ್ಕಂತಹ ಹಣ, ಅವರಲ್ಲಿರತಕ್ಕ ಬಂಗಾರವನ್ನು ಒಂದು ಸಹಾಯದ ರೂಪದಲ್ಲಿ ಉಪಯೋಗಿಸಿದರೆ, ದೇವರು ಒಳ್ಳೇದು ಮಾಡುತ್ತಾನೆ. ಇವತ್ತು ಬರಗಾಲ ಬಂದಿರುವುದರಿಂದಲೂ ಬಹಳ ಜನರಿಗೆ ಸಂತೋಷವಾಗಿದೆ.

ಏಕೆಂದರೆ, ಅನೇಕರು ವ್ಯಾಪಾರ ಮಾಡತಕ್ಕವರು, ಅಕ್ಕಿ ಮಾರತಕ್ಕವರು, ಇಂಥವರಿಗೆಲ್ಲಾ ಬಹಳ ಸಂತೋಷವಾಗಿದೆ. ಅವರ ಮನೆಯಲ್ಲಿ ಬಂಗಾರ, ಬೆಳ್ಳಿ ತಾಂಡವಾಡುತ್ತಿದೆ, ಅವರ ಮನೆಯಲ್ಲಿ ದವಸ ಧಾನ್ಯಗಳು ಹೆಚ್ಚಾಗಿವೆ. ಇದೇ ಸಮಯವೆಂದು ಹೇಳಿ ಅವರು ಬೇಕಾದಷ್ಟು ಸಂಪಾದನೆ ಮಾಡುತ್ತಿದ್ದಾರೆ. ಅವರಿಗೆ ಈ ಸರ್ಕಾರದ ಭಯವಿಲ್ಲ. ಇದರಿಂದ ವ್ಯಾಪಾರಸ್ಥರಿಗೆ ಮತ್ತು ಆದಾಯ ತೆರಿಗೆ ಇಲಾಖೆಗಳಿಗೆ ದಗಾಹಾಕಿ ಅವರ ಹೊಟ್ಟೆ ತುಂಬಿಕೊಳ್ಳುತ್ತಿದ್ದಾರೆ. ಆ ಇಲಾಖೆಗಳ ಸಂಬಂಧಪಟ್ಟ ಅಧಿಕಾರಿಗಳು ಏನು ಮಾಡುತ್ತಾರೆಂದರೆ, ಯಾವುದಾದರೂ ಒಂದು ಅಂಗಡಿಗೆ ರಾತ್ರಿ 8 ಗಂಟೆಗೆ ಹೋಗಿ ಲೆಕ್ಕ ತೆಗೆಯಿರಿ ಎಂದು ಕೇಳಿ 3 ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಪುನಃ ಬೆಂಗಳೂರಿಗೆ ಬರುವುದು ಇಂತಹ ನಿದರ್ಶನಗಳು ಅನೇಕವಿವೆ.

ಇನ್ನು ಬೋರ್‌ವೆಲ್ಸ್ ವಿಷಯವಾಗಿ ಹೇಳುವುದಾದರೆ, ದಿನಕ್ಕೊಂದು ಬಾವಿಯನ್ನು ತೆಗೆಯುವ ಮೆಶಿನ್ನುಗಳನ್ನು ತಂದಿದ್ದಾರೆಂದು ಹೇಳಿದರು. ಈಗಾಗಲೇ ಅನೇಕರ್‌ನಲ್ಲಿ ಒಂದು ಅಂತಹ ಯಂತ್ರವನ್ನು ಹಾಕಿದ್ದಾರೆ. ಒಂದು ಬಾವಿಯನ್ನು ಒಂದು ದಿನದಲ್ಲಿ ಕಟ್ಟಿ ಮುಗಿಸುವ ಯಂತ್ರಗಳಾಗಿರುವುದರಿಂದ, ಅಂತಹ ಯಂತ್ರಗಳನ್ನು ಕೋಲಾರ ಜಿಲ್ಲೆಗೆ, ಅದರಲ್ಲಿಯೂ ಚಿಕ್ಕಬಳ್ಳಾಪುರಕ್ಕೆ ಒದಗಿಸಬೇಕು. ಏಕೆಂದರೆ ಅಲ್ಲಿ ಬಾವಿಗಳಿಂದ ನೀರು ಪಡೆದು ಜನಜೀವನವನ್ನು ನಡೆಸುತ್ತಿದ್ದಾರೆ. ಅಲ್ಲಿನ ಕೆಲವು ಬಾವಿಗಳಲ್ಲಿ ನೀರಿಗೆ ಬದಲು ಗಿಡಗಳು ಇವೆ. ಆದ್ದರಿಂದ ಅಲ್ಲಿ ಹೆಚ್ಚಿಗೆ ಬಾವಿಗಳನ್ನು ತೆಗೆಸಬೇಕು. ಅದಕ್ಕೆ ತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಮಾಡಿಸಿಕೊಡಬೇಕು.

ಇನ್ನೊಂದು ವಿಷಯ. ನಮ್ಮ ತಾಲ್ಲೂಕಿನ ಒಂದು ಹೋಬಳಿಯಲ್ಲಿ ಇದುವರೆಗೂ ಯಾವ ಕೆಲಸವೂ ಆಗಿಲ್ಲ. ಎರಡು ತಿಂಗಳಿಂದಲೂ ಕೇಳುತ್ತಿದ್ದೇನೆ. ಬಹಳ ವರ್ಷಗಳ ಹಿಂದಿನಿಂದಲೂ ಅಲ್ಲಿ ಹೆಚ್ಚಿಗೆ ಕಾಮಗಾರಿಗಳನ್ನು ಮಾಡಿಸಿಕೊಡಬೇಕೆಂದು ಸರ್ಕಾರದವರನ್ನು ಕೇಳುತ್ತಲೇ ಇದ್ದೇನೆ. ಯಾವ ಕೆಲಸವೂ ಆಗಿಲ್ಲ. ಹಿಂದೆ ನಮ್ಮ ಈಗಿನ ಮುಖ್ಯಮಂತ್ರಿಗಳು ಲೋಕೋಪಯೋಗಿ ಸಚಿವರಾಗಿದ್ದಾಗ ಬಹಳ ದೊಡ್ಡ ಮನಸ್ಸು ಮಾಡಿ ಅಯ್ಯಮ್ಮನ ಕೆರೆಯನ್ನು ಕಟ್ಟಲು ಮಂಜೂರು ಮಾಡಿದ್ದರು. ಅದು ಇನ್ನೂ ಸರ್ಕಾರಕ್ಕೆ ಬಂದೇ ಇಲ್ಲ. ಆಫೀಸಿನಲ್ಲಿಯೇ ಇದೆಯೆಂದು ನನಗೆ ಕಾಣುತ್ತದೆ. ಅಲ್ಲಿ ಎಷ್ಟು ಹೋಗಿ ಹುಡುಕಿದರೂ ಆ ಕಾಗದವೇ ಸಿಗಲಿಲ್ಲ. ಮೊನ್ನೆ ಮೊನ್ನೆ ಸಿಕ್ಕಿತು. ಅದನ್ನು ವಿಚಾರಿಸಿದ್ದರಿಂದ ಸರ್ಕಾರಕ್ಕೆ ಕಳುಹಿಸುತ್ತೇವೆಂದು ಹೇಳಿದ್ದಾರೆ. ಇನ್ನು ರಂಗಧಾಮ ಫೀಡರ್ ಚಾನಲ್ ಕಾಮಗಾರಿಗಾಗಿ ಸುಮಾರು 70-80 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಪುನಃ ಮಾನ್ಯ ಶ್ರೀ ವೀರೇಂದ್ರ ಪಾಟೀಲರನ್ನು ಆ ಸ್ಥಳಕ್ಕೆ ಕರೆದುಕೊಂಡು ಹೋಗಿ ಮಂಜೂರು ಮಾಡಿಸಲಾಗಿದೆ. ಅದೂ ಕೂಡ ಸರ್ಕಾರಕ್ಕೆ ಬಂದಿದೆ. ಈಗ ಲೋಕೋಪಯೋಗಿ ಮಾನ್ಯ ಸಚಿವರು ಅದನ್ನು ಮಾಡಿಸಿಕೊಟ್ಟರೆ ಈಗಿರತಕ್ಕ ಬರವನ್ನು ನಾವು ತಡೆಗಟ್ಟಬಹುದು. ಏಕೆಂದರೆ ಈ ದೇಶದಲ್ಲಿ ಕ್ಷಾಮ ಬಂದಿದೆ. ಇಂತಹ ಕ್ಷಾಮವನ್ನು ಎದುರಿಸಬೇಕಾದರೆ ನಮ್ಮ ಮಂತ್ರಿಗಳು ಮತ್ತು ಶಾಸನ ಸಭಾಸದಸ್ಯರುಗಳು ಈ ತಿಂಗಳ ಸಂಬಳವನ್ನು ಮತ್ತು ಇಲ್ಲಿ ಬರತಕ್ಕ ಟಿ.ಎ.ಯನ್ನು ಸರ್ಕಾರಕ್ಕೆ ಕೊಟ್ಟು ಆಯಾ ತಾಲ್ಲೂಕುಗಳಲ್ಲಿ ಗಂಜಿ ಕೇಂದ್ರಗಳನ್ನು ಪ್ರಾರಂಭ ಮಾಡಿದರೆ ಮುಂದೆ ಕ್ಷಾಮ ಕಾಲದಲ್ಲಿ ಹೆಚ್ಚಿನ ಅನುಕೂಲಗಳನ್ನು ಅಲ್ಲಿ ಒದಗಿಸುವುದಕ್ಕೆ ಸಹಾಯವಾಗುತ್ತದೆ. ಆದ್ದರಿಂದ ಮಾನ್ಯ ಸ್ನೇಹಿತರೆಲ್ಲರೂ ಈಗ ದೊಡ್ಡ ಮನಸ್ಸು ಮಾಡಿ ಸರ್ಕಾರಕ್ಕೆ ಅವರ ಈ ತಿಂಗಳ ಸಂಬಳ, ಡಿ.ಎ.ಗಳನ್ನು ಹಿಂದಕ್ಕೆ ಕೊಟ್ಟು ಇದೂ ಕ್ಷಾಮ ಪರಿಹಾರ ಕ್ರಮಗಳಲ್ಲಿ ಒಂದಾಗಿ ಭಾವಿಸಬೇಕೆಂದು ಈ ಸಭೆಯ ಎಲ್ಲ ಸದಸ್ಯರನ್ನೂ ನಾನು ಪ್ರಾರ್ಥಿಸುತ್ತೇನೆ.

ಕೊನೆಯದಾಗಿ, ನಮ್ಮ ಅಧ್ಯಕ್ಷರು ನನಗೆ ಇಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಡಿ. ಎಸ್. ಗೌಡ್ (ಚಳ್ಳಕೆರೆ).—ಅಧ್ಯಕ್ಷರೇ, ಈಗಾಗಲೇ ಬಹಳ ಜನರು ಈ ವಿಚಾರವಾಗಿ ಮಾತನಾಡಿದ್ದಾರೆ. ಎಲ್ಲರೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದರೆ ಸ್ವಲ್ಪ ಕಷ್ಟವಾಗುತ್ತದೆ. ಎಲ್ಲಾ ವಿಷಯಗಳನ್ನೂ ಒಂದು ವಾರದಿಂದ ಹೇಳಿದ್ದಾರೆ. ಮುಂದೆ ಮಾತನಾಡುವವರು ಮುಖ್ಯಾಂಶಗಳನ್ನು ಮಾತ್ರ ಹೇಳುವ ರೀತಿಯಲ್ಲಿ ಇರತಕ್ಕ ವೇಳೆಯನ್ನು ಅನಾಟ್ ಮಾಡುವಂತೆ ನಿಗದಿಮಾಡಿದರೆ ಒಳ್ಳೆಯದಾಗಿರುತ್ತದೆ.

†ಶ್ರೀ ಕೆ. ಎಂ. ತಮ್ಮಯ್ಯ (ಕಡೂರು).—ಮಾನ್ಯ ಸಭಾಪತಿಗಳೇ, ಈ ಮೂರು ದಿವಸಗಳಿಂದಲೂ ದೀರ್ಘವಾಗಿ ಎಲ್ಲಾ ಜಿಲ್ಲೆಗಳಲ್ಲಿಯೂ ಜನಗಳು ಅನುಭವಿಸುತ್ತಿರುವ ಕ್ಷಾಮದ ವಿಚಾರದಲ್ಲಿ ವಿಪುಲವಾಗಿ ಚರ್ಚೆ ನಡೆದಿದೆ. ನಾನು ನನ್ನ ತಾಲ್ಲೂಕಿನ ವಿಚಾರವಾಗಿ ಹೇಳುವುದಾದರೆ ಸುಮಾರು 4 ದಿವಸಗಳಿಂದಲೂ ಕೂಡ ಈ ಕ್ಷಾಮದ ದವಡೆಯಲ್ಲಿ ಸಿಕ್ಕಿ ಜನರು ನರಳುತ್ತಿದ್ದಾರೆ. ನಾವು ಎಲ್ಲೆಲ್ಲಿ ನೋಡಿದರೂ ಕೂಡ ಬೆಳೆದು ಒಣಗುತ್ತಿರುವ ಜೋಳದ ಕಡ್ಡಿ,

(ಶ್ರೀ ಕೆ. ಎಂ. ತಮ್ಮಯ್ಯ)

ಕಾಳಿಲ್ಲದೆ ನಿಂತಿರುವ ತೆನೆ, ಕುಡಿಯುವುದಕ್ಕೆ ನೀರಿಲ್ಲದೆ ಇರುವ ಕೆರೆಕಟ್ಟೆಗಳು ಮತ್ತು ಬಾವಿಗಳು— ಇವು ನಮಗೆ ಒಂದನೇ ನಷ್ಟ. ಈಗ ಹಲವು ಯೋಜನೆಗಳನ್ನು ನಮ್ಮ ಸರ್ಕಾರದವರು ತಯಾರು ಮಾಡಿದ್ದಾರೆ. ಅಲ್ಲದೆ ಕುಡಿಯುವ ನೀರಿನ ಬಾವಿಗಳು ಎಲ್ಲಾ ಹಳ್ಳಿಗಳಲ್ಲಿಯೂ ಇರಬೇಕು. ಅದಕ್ಕಾಗಿ ಅವನ್ನು ಆದಷ್ಟು ಶೀಘ್ರವಾಗಿ ಹಾಗೂ ತ್ವರಿತವಾಗಿ ಮಾಡುತ್ತಿದ್ದೇವೆಂದು ಕೈಕಟ್ಟಿ ಕೊಂಡು ಅವರು ಹೇಳುತ್ತಿದ್ದಾರೆ, ನಾವು ಕೇಳುತ್ತಿದ್ದೇವೆ. ಆದರೆ ಅಷ್ಟು ವೇಗವಾಗಿ ಆ ಕಲಸ ಗಳು ನಡೆಯದ್ದೇ ಇರುವುದು ಬಹಳ ವಿಷಾದಕರ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಮೂರನೇ ಒಂದು ಭಾಗ ವಿಸ್ತೀರ್ಣದಲ್ಲಿ ಸುಮಾರು 307 ಹಳ್ಳಿಗಳನ್ನು ಹೊಂದಿರುವ ನಮ್ಮ ತಾಲ್ಲೂಕು ಹಿಂದೆ ಬಹಳ ಚೆನ್ನಾಗಿ ಪೈರು ಪಚ್ಚೆಗಳಿಂದ ಕೂಡಿ ಸುಖವಾಗಿ ಬಾಳುತ್ತಿತ್ತು. ಈಗ ನಮ್ಮ ತಾಲ್ಲೂಕಿನಲ್ಲಿ ನಮ್ಮ ಸ್ಥಿತಿ ಹೇಗಿದೆಯೆಂದರೆ, ಸಮುದ್ರಕ್ಕೆ ನೆಂಟಸ್ತನ, ಉಪ್ಪಿಗೆ ಬಡತನವಿದ್ದಂತೆ ಆಗಿದೆ. ನಮ್ಮ ತಾಲ್ಲೂಕು ಮಲೆನಾಡಿಗೆ ಸೇರಿದ್ದರಿಂದ, ರೆಯಿನ್ ಷ್ಯಾಡೊ ಏರಿಯಾದಲ್ಲಿಯೇ ಇರುವುದರಿಂದ ಬಹಳ ಕಾಲ ಮಳೆ ಬೆಳೆ ಇಲ್ಲದೆ ನಾವು ಇಂತಹ ಬರಗಾಲವನ್ನೇ ಅನುಭವಿಸುತ್ತಿದ್ದೇವೆ. ಅದು ಸರ್ಕಾರದ ಗಮನಕ್ಕೂ ಬಂದಿದೆ. ನಮ್ಮ ತಾಲ್ಲೂಕು 24 ಸಾವಿರ ಎಕರೆ ತರೀ, 14 ಸಾವಿರ ಎಕರೆ ಬಾಗಾ ಯಿತು ಮತ್ತು 1 ಲಕ್ಷ 67 ಸಾವಿರ ಎಕರೆ ಖುಷ್ಕಿ ಬೆಳೆಯನ್ನು ಅಂದರೆ, ರಾಗಿ, ಜೋಳ ಮತ್ತು ಇತರೇ ದ್ವಿದಳಧಾನ್ಯಗಳನ್ನು ಬೆಳೆಯುತ್ತಿದ್ದ ತಾಲ್ಲೂಕು. ಅಲ್ಲಿ ನಮಗೆ ಎರಡು ಕಣ್ಣುಗಳಂತಿರುವ ಅಯ್ಯನಕೆರೆ, ಮದನಕೆರೆಗಳಿವೆ. ಅವೊಂದೊಂದರಿಂದಲೂ 5 ಸಾವಿರ ಎಕರೆಗಳಿಗೆ ನೀರನ್ನು ಒದಗಿಸು ತ್ತಿದ್ದರು. ಈಗ ಅವುಗಳಲ್ಲಿ ಹುಲ್ಲು ತುಂಬಿ ಸುಮಾರು 4 ಸಾವಿರ ಎಕರೆಗಳಿಗೆ ನೀರು ಒದಗಿಸು ವುದಕ್ಕೆ ಕಷ್ಟವಾಗಿದೆ. 107 ಕೆರೆಗಳ ಪೈಕಿ 23 ಮೇಜರ್ ಕೆರೆಗಳು ಹಾಗೂ ಒಡೆದಿರುವ ಸಣ್ಣ ಸಣ್ಣ ಕೆರೆಗಳಲ್ಲಿ ಪ್ರಭಾವಶಾಲಿಗಳು ಅವರ ಹಿಡಿತಕ್ಕೆ ಸಿಕ್ಕಿದ ಜಮೀನುಗಳನ್ನು ಸಾಗುವಳಿ ಮಾಡಿ ದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆ ಮತ್ತು ಸ್ಥಳೀಯ ಅಧಿಕಾರಿಗಳ ಗಮನಕ್ಕೂ ಬಂದಿದೆ. ಈ ಸಂದರ್ಭದಲ್ಲಿ ಒಂದು ನಿದರ್ಶನ ಹೇಳುವುದಾದರೆ, ಹೋದ ವರ್ಷ ಒಬ್ಬ ಪ್ರಭಾವ ಶಾಲಿ ಒಂದು ಊರಿಗೆ ಮತ್ತು ದನಕರುಗಳಿಗೆ ನೀರನ್ನು ಒದಗಿಸುತ್ತಿದ್ದ ಒಂದು ದೊಡ್ಡ ಕೆರೆಯ ಏರಿಯನ್ನು ಕಡಿದು ತನ್ನ ತೋಟದ ತೆಂಗಿನ ಮರಗಳಿಗೆ ಮಣ್ಣನ್ನು ಹಾಕುತ್ತಿದ್ದ. ಈ ವಿಚಾರವನ್ನು ಸಂಬಂಧಪಟ್ಟ ಇಲಾಖೆಯ ಗಮನಕ್ಕೆ ತಂದರೆ ರೆವಿನ್ಯೂ ಇಲಾಖೆಯವರು ಪೋಲೀಸ್‌ನವರ ಮೇಲೆ ಹೇಳುತ್ತಾರೆ, ಪೋಲೀಸಿನವರು ರೆವಿನ್ಯೂ ಇಲಾಖೆಯ ಮೇಲೆ ಹೇಳುತ್ತಾರೆ. ಹೀಗಾಗಿ ಅಲ್ಲಿನ ಜನಗಳಿಗೆ ನೀರು ಇಲ್ಲದೆ ಆ ಕೆರೆಯೇ ಒಣಗಿಹೋಗಿದೆ. ಈ ವಿಚಾರವನ್ನೆಲ್ಲಾ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಕೇವಲ ಸರ್ಕಾರಕ್ಕೆ, ಅಧಿಕಾರಿಗಳಿಗೆ ಬೈಯ್ಯಬೇಕು, ಆಗ ಕೆಲಸ ಮಾಡುತ್ತಾರೆಂದು ಹೇಳುವುದಕ್ಕೆ ಇದು ಒಂದು ನಿದರ್ಶನ.

ಇನ್ನು ಕ್ಷಾಮ ಪರಿಹಾರ ಕೆಲಸಗಳನ್ನು ನಡೆಸುತ್ತೇವೆಂದು ಹೇಳಿ ನಮ್ಮ ತಾಲ್ಲೂಕಿನಲ್ಲಿ ಬಂಡಿಂಗ್ ಹಾಕುವುದು ಆಗಿದೆ. ನಮ್ಮ ತಾಲ್ಲೂಕಿನ ಪಕ್ಕದಲ್ಲಿ ಕ್ಷಾಮದ ಕೆಲಸಗಳು ಎಂಬುದಾಗಿ ಹತ್ತುತ್ತಡಿ ಆಳ ಅಗೆಯುವ ಸಾಯಿಲ್ ಕನ್‌ಸರ್‌ವೇಷನ್ ಕೆಲಸಗಳನ್ನು ಮಾಡಿಸುತ್ತಿದ್ದಾರೆ. 1 ರೂಪಾಯಿ 30 ಪೈಸೆ ಗಂಡಾಳಿಗೆ ಕೊಡುತ್ತಾರೆ. ಒಂದು ರೂಪಾಯಿಯನ್ನು ಹೆಣ್ಣಾಳಿಗೆ ಕೊಡುತ್ತಾರೆ. ಈ ಕ್ಯಾಲುಕ್ಯುಲೇಷನ್ ಪ್ರಕಾರ 10 ಆಳುಗಳು ಇದ್ದರೆ, 20 ಆಳುಗಳಂತೆ ಲೆಕ್ಕ ಹಾಕಿ ಕೊಡುತ್ತಾರೆ.

ಈಗ ಸರ್ಕಾರದವರು ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳಲು ಹಳ್ಳಿಗಳಿಗೆ ಲಕ್ಷಾಂತರ ರೂಪಾಯಿಗಳನ್ನು ಕೊಟ್ಟಿದ್ದಾರೆ, ಹಾಗೆಂದು ಹೇಳಿದರು. ಈ ಕಾಮಗಾರಿ ಕೆಲಸಗಳನ್ನು ಮಾಡಲು 1 ರೂಪಾಯಿ 30 ಪೈಸಾ ಕೂಲಿಗೆ ಯಾರು ತಾನೆ ಬರುತ್ತಾರೆ? ಕೂಲಿಗಾರರಿಗೆ ಆಹಾರ ಧಾನ್ಯವನ್ನಾದರೂ ಒದಗಿಸಿ ಕೊಡುತ್ತೇವೆಂದು ಹೇಳಿದರೆ ಅದರ ಆಶೆಯಿಂದಲಾದರೂ ಜನಗಳು ಕೆಲಸಕ್ಕೆ ಬರುತ್ತಾರೆ. ಈಗ ಸರ್ಕಾರ ಪರಿಹಾರ ಕಾಮಗಾರಿಗೆ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೂ ಕೂಡ ಅದರಲ್ಲಿ 30 ಸಾವಿರ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ಈ ಪರಿಹಾರ ಕಾಮಗಾರಿಗಳಿಗೆ ಒಬ್ಬ ಸ್ಪೆಷಲ್ ಆಫೀಸರನ್ನು ಪ್ರತಿಯೊಂದು ಕಡೆಯಲ್ಲಿಯೂ ನೇಮಿಸಿ ಆ ಕೆಲಸಗಳನ್ನು ಮಾಡಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಪ್ರತಿ ದಿವಸ ಸಾಯಂಕಾಲ ಕೂಲಿಗಾರರಿಗೆ ಕೂಲಿಯನ್ನು ಹಂಚಬೇಕು. ಅದರ ಜೊತೆಗೆ, ಕೂಲಿಗಾರರಿಗೆ ಆಹಾರ ಧಾನ್ಯವೂ ಸಿಕ್ಕುವಂತಹ ಒಂದು ವ್ಯವಸ್ಥೆ ಮಾಡಬೇಕು. ಈಗ ಈ ಎರಡು ವ್ಯವಸ್ಥೆಗಳೂ ಹಳ್ಳಿಗಾಡುಗಳಲ್ಲಿ ಇಲ್ಲದೆ ಇರುವುದರಿಂದ ಅನೇಕರು ಕಳ್ಳತನ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ನಮ್ಮದು ತೆಂಗಿನ ಸೀಮೆ. ಆದ್ದರಿಂದ ರಾತ್ರಿ ಕಾಲದಲ್ಲಿ ತೋಟಗಳಿಗೆ ನುಗ್ಗಿ ಕಳ್ಳತನ ಮಾಡುತ್ತಿದ್ದಾರೆ.

ಇದರಿಂದಾಗಿ ನಮ್ಮ ಕಡೆ ತೋಟಗಾರರು ರಾತ್ರಿ ಹೊತ್ತು ಸುಖವಾಗಿ ನಿದ್ರೆ ಮಾಡುವಂತಿಲ್ಲ. ಇದರಿಂದ ದೇಶದಲ್ಲಿ ಕಳ್ಳತನ ಅರಾಜಕತೆ ಉಂಟಾಗಿ ಕಾನೂನು ಭಂಗವಾಡುವಂತಹ ಒಂದು ಪರಿಸ್ಥಿತಿ ಉಂಟಾಗಿದೆ. ಇದನ್ನು ಪರಿಹಾರ ಮಾಡುವಂತಹ ಪರಿಸ್ಥಿತಿಯಲ್ಲಿ ಸರ್ಕಾರ ಇಲ್ಲ. ಪ್ರತಿ ವರ್ಷ ನಮ್ಮ ದೇಶದಲ್ಲಿ ಕ್ಷಾಮ ಬರತಕ್ಕದ್ದು, ಇದಕ್ಕೆ ಕೇಂದ್ರ ಸರ್ಕಾರವನ್ನು ಹಣ ಕೇಳುವುದು, ಕ್ಷಾಮ ಪೀಡಿತ ಪ್ರದೇಶಗಳಲ್ಲಿ ಕಾಮಗಾರಿ ಕೆಲಸಗಳನ್ನು ಮಾಡಿಸುವುದು, ಇದು ಸ್ವಾಭಾವಿಕವಾಗಿದೆ. ಹಿಂದೆ ಮಾತನಾಡಿದಂತಹ ಒಬ್ಬರು ಮಾನ್ಯ ಸದಸ್ಯರು ಹೇಳಿದರು ಮೈಸೂರು ಸಂಸ್ಥಾನದಲ್ಲಿ ಕೆಲವು ಕಡೆಗಳಲ್ಲಿ ಕ್ಷಾಮ ಪ್ರದೇಶನೆಂದು ಸಾರಬೇಕೆಂದು. ಇವೊತ್ತು ಕೆಲವು ಕಡೆಗಳಲ್ಲಿ ಅಂಥಾ ಒಂದು ಪರಿಸ್ಥಿತಿ ಇದೆ. ಪರಿಹಾರ ಕಾಮಗಾರಿಗಳಿಗೆ ಸರ್ಕಾರದವರು ಹಣವನ್ನು ಮಂಜೂರು ಮಾಡಿದರೂ ಕೂಡ ಕೆಲವರು ಮಧ್ಯಮವರ್ಗದವರು ಅದನ್ನು ದುರುಪಯೋಗ ಮಾಡುತ್ತಾರೆ. ಆದಕಾರಣ ಕ್ಷಾಮ ಪೀಡಿತ ಪ್ರದೇಶಗಳಲ್ಲಿ ವರ್ಷೇ ವರ್ಷೇ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಶಾಶ್ವತವಾದ ಪರಿಹಾರ ಕಾರ್ಯವನ್ನು ಮಾಡಬೇಕು. ಎಲ್ಲೆಲ್ಲಿ ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಮಾಡಿ ಅವುಗಳ ಮುಖಾಂತರ ರೈತರಿಗೆ ನೀರಾವರಿ ಸೌಲಭ್ಯವನ್ನು ಒದಗಿಸುವುದಕ್ಕೆ ಸಾಧ್ಯವಿದೆಯೋ ಅಂಥಾ ಕಡೆ ಆ ಒಂದು ವ್ಯವಸ್ಥೆಯನ್ನು ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಈಗ ಏನಾಗಿದೆ ಎಂದರೆ ಯಾವುದಾದರೂ ಕೆರೆ ಕಟ್ಟೆಗಳ ಅಂದಾಜನ್ನು ತಯಾರು ಮಾಡಿ ಅದಕ್ಕೆ ಮಂಜೂರಾತಿ ಕೊಡುವಾಗ ಮೇಲಿಂದ ಹೋಗುತ್ತದೆ ಕೆಳಗಡೆ ಬರುತ್ತದೆ. ಈಗ ಉದಾಹರಣೆಗೆ ಹೇಳಬೇಕಾದರೆ ನನ್ನ ಕ್ಷೇತ್ರದಲ್ಲಿ ಒಂದು ತಾಲ್ಲೂಕಿನಲ್ಲಿ ನಾಲ್ಕು ಕೆಲಸಗಳ ಎಸ್ಟಿಮೇಟುಗಳು ತಯಾರಾಗಿ ಮಂಜೂರಾಗಬೇಕಾದಂಥವುಗಳು ಆಗಿಲ್ಲ. ಅವುಗಳನ್ನು ಬೇಗ ತಯಾರು ಮಾಡಿ ಅವುಗಳಿಗೆ ಟೆಕ್ನಿಕಲ್ ಮಂಜೂರಾತಿ ಮತ್ತು ಅಡ್ಮಿನಿಸ್ಟ್ರೇಟೀವ್ ಮಂಜೂರಾತಿಯನ್ನು ಕೊಟ್ಟರೆ ಇಂಥಾ ಕ್ಷಾಮ ಕಾಲದಲ್ಲಿ ಆ ಕೆಲಸಗಳನ್ನು ಆದಷ್ಟು ಜಾಗ್ರತೆ ತೆಗೆದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಈ ಬಾವಿಗಳನ್ನು ತೆಗೆಸುವುದಕ್ಕೆ ಸರ್ಕಾರದವರು ಹಣವನ್ನು ಸಾಲ ಕೊಡುವ ವಿಚಾರದಲ್ಲಿ ಬಾವಿಗಳಲ್ಲಿ ಜಲ ಬಂದರೆ ಸರ್ಕಾರದಿಂದ ಸಾಲವಾಗಿ ಪಡೆದ ಹಣವನ್ನು ವಾಪಸ್ಸು ಕೊಡುವುದು, ಬಾವಿಯಲ್ಲಿ ನೀರು ಬಾರದೆ ಇದ್ದರೆ ಸಾಲವನ್ನು ವಾಪಸ್ಸು ಕೊಡಬೇಕಾಗಿಲ್ಲ ಎಂದೂ ಹೇಳಿದರು. ಈ ಯೋಜನೆಯಲ್ಲಿ ತಪ್ಪೇನೂ ಇಲ್ಲ. ಹಣ ತೆಗೆದುಕೊಂಡು ಸದುಪಯೋಗ ಮಾಡುವವರು ತೆಗೆದುಕೊಳ್ಳಲಿ, ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಹಣ ತೆಗೆದುಕೊಳ್ಳುವುದಕ್ಕೆ ಶಕ್ತಿಯಾಗಲೀ, ಅದನ್ನು ತೀರಿಸುವುದಕ್ಕೆ ಶಕ್ತಿಯಾಗಲೀ ಇಲ್ಲದೇ ಇರುವವರಿಗೆ ಯಾರಿಂದಲೋ ಬರೆಸಿಕೊಂಡು ಹಣ ಕೊಟ್ಟಿರುವ ಜನಗಳು ಕೂಡ ಇದ್ದಾರೆ. ಅವರು ಅಲ್ಪಾವಧಿ ಧೀರ್ಘಾವಧಿ, ಮಧ್ಯಮಾವಧಿ ಎಲ್ಲಾ ಸಾಲಗಳನ್ನೂ ತೆಗೆದುಕೊಂಡಿದ್ದಾರೆ. ಅದಕ್ಕೋಸ್ಕರ ನಾನು ಹೇಳುವುದೇನೆಂದರೆ, ಈಗ ನೆರೆಹೊರೆಯ ರಾಜ್ಯಗಳಲ್ಲಿ ಸರ್ಕಾರದವರೇ ರೈತರಿಗೆ ಬಾವಿಗಳನ್ನು ತೆಗೆಸಿಕೊಡುತ್ತಿದ್ದಾರೆ, ಹಾಗೇನಾದರೂ ನಮ್ಮ ಸರ್ಕಾರದವರೂ ಮಾಡಿದರೆ ಆಗ ರೈತರಿಗೆ ಸಾಲವನ್ನು ಕೊಡುವ ಶಕ್ತಿ ಬರಬಹುದು. ಸರ್ಕಾರದವರು ರೈತರಿಗೆ ಬಾವಿಗಳನ್ನು ತೆಗೆಸುವುದಕ್ಕೆ ನೇರವಾಗಿ ಹಣವನ್ನು ಕೊಡುವುದರಿಂದ ಆ ಹಣ ದುರುಪಯೋಗವಾಗುತ್ತದೆ ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಮಲೆನಾಡಿನ ವಿಷಯದಲ್ಲಿ ಶ್ರೀಮಾನ್ ವೀರಪ್ಪಗೌಡರೂ ಹೇಳಿದರು. ಇದ್ದಂಥ ಕಾಡನ್ನೆಲ್ಲಾ ಕಡಿದು ಹಾಳು ಮಾಡಿದ್ದಾರೆ. ಎಲ್ಲೋ ಅಲ್ಲಲ್ಲಿ ನೀಲಗಿರಿ ಗಿಡಗಳು, ಮರಗಳು ಕಾಣುತ್ತಿವೆ ಆದ್ದರಿಂದ ಸರ್ಕಾರದವರು ಕಾಡನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು. ಕಾಡನ್ನು ಬೆಳೆಸುತ್ತೇವೆ, ವನಮಹೋತ್ಸವವನ್ನು ಮಾಡುತ್ತೇವೆ ಎಂದು ಹೇಳಿ ಇದ್ದ ಮರಗಳನ್ನೆಲ್ಲ ಕಡಿದು ಸೌದೆಗೆ ಉಪಯೋಗಿಸುತ್ತಿದ್ದಾರೆ. ಇದು ಸರಿಯಲ್ಲ. ಸಾಧ್ಯವಾದಮಟ್ಟಿಗೆ ಸರ್ಕಾರದವರು ಕಾಡನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು. ಒಳ್ಳೆಯ ಫಲವತ್ತಾದ ಭೂಮಿಯನ್ನು ಆರಿಸಿ ದನಕರುಗಳಿಗೆ ಹುಲ್ಲುಗಾವಲನ್ನು ಬೆಳೆಸುವುದಕ್ಕೆ ವ್ಯವಸ್ಥೆ ಮಾಡಬೇಕು. ಆ ರೀತಿ ಮಾಡಿದರೆ ಜಾನುವಾರುಗಳಿಗೆ ಅನುಕೂಲವಾಗುತ್ತದೆ ಎಂದು ವಿನಂತಿ ಮಾಡಿಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಎಂ. ಚುರ್ಚಿಹಾಳ್‌ಮಠ (ಮುಂಡರಗಿ).—ಸನ್ಮಾನ್ಯ ಅಧ್ಯಕ್ಷರೇ, ಇಂದು ದೇಶದಲ್ಲಿ ಉಂಟಾಗಿರತಕ್ಕ ಬರಗಾಲ ಪರಿಸ್ಥಿತಿಯ ನಿವಾರಣೆಗೆ ಈ ಸಭೆಯ ಮಾನ್ಯ ಸದಸ್ಯರಿಂದ ಸಲಹೆ ಮತ್ತು ಸೂಚನೆಯನ್ನು ಪಡೆಯುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಒಂದು ಸೂಚನೆಯನ್ನು ಈ ಮನೆಯ ಎದುರಿನಲ್ಲಿಟ್ಟು ಅವರ ಧೋರಣೆ ವ್ಯಕ್ತಿತ್ವ, ಅವರ ಬುದ್ಧಿವಂತಿಕೆಯನ್ನು ವ್ಯಕ್ತ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿರತಕ್ಕ 177 ತಾಲ್ಲೂಕುಗಳಲ್ಲಿ 100 ತಾಲ್ಲೂಕುಗಳು ಬರಗಾಲದಿಂದ ಬಳಲುತ್ತಿವೆ. ಅನೇಕ ಮಾನ್ಯ ಸದಸ್ಯರು ತಮ್ಮ ತಾಲ್ಲೂಕುಗಳಲ್ಲಿ 2 ವರ್ಷಗಳಿಂದ ಬರಗಾಲ ಇದೆ

(ಶ್ರೀ ಸಿ. ಎಂ. ಚುರ್ಚಿಹಾಳ ಮಠ)

ಮೂರು ವರ್ಷಗಳಿಂದ ಬರಗಾಲ ಇದೆಯೆಂದು ಹೇಳಿದ್ದಾರೆ. ನಮ್ಮ ತಾಲ್ಲೂಕಿನಲ್ಲಂತೂ ಜನಗಳು ಅರೆಹೊಟ್ಟೆ ಊಟ ಮಾಡಿ, ಅರ್ಧ ಜೀವಗಳಾಗಿ ಅವರು ಯಾವರೀತಿ ಜೀವನ ಮಾಡುತ್ತಿದ್ದಾರೆ ಎಂಬುದನ್ನು ಯಾವ ರೀತಿ ವರ್ಣನೆ ಮಾಡಬೇಕೋ ನನಗಂತೂ ತಿಳಿಯುತ್ತಿಲ್ಲ. ನಮ್ಮ ತಾಲ್ಲೂಕಿನಲ್ಲಿ 1956ನೇ ಇಸವಿಯಿಂದ 1958ನೇ ಇಸವಿಯುವರೆಗೆ ಎಂದರೆ ಈಗ ಸುಮಾರು 12 ವರ್ಷಗಳಿಂದ ಅಲ್ಲಿ ಬರಗಾಲ ನಡೆದುಕೊಂಡು ಬಂದಿದೆ. ಇದನ್ನು ನೋಡಿದರೆ ಬರಗಾಲ ಎನ್ನುವಂಥಾದ್ದು ಇಂದಲ್ಲ ಹಿಂದಿನಿಂದಲೂ ಇತ್ತು ಎಂದು ಅರ್ಥವಾಗುತ್ತದೆ. ತಮಗೆ ಒಂದು ಉದಾಹರಣೆಯನ್ನು ಹೇಳುವುದಾದರೆ ನಮ್ಮ ತಾಲ್ಲೂಕಿನಲ್ಲಿ ಒಂದು ಗ್ರಾಮಕ್ಕೆ ಬರದೂರು ಎಂದು ಹೆಸರು ಬಂದಿದೆ. ನಮ್ಮ ತಾಲ್ಲೂಕಿನ ಪರಿಸ್ಥಿತಿಯನ್ನು ವಿಶ್ವವಾಣಿ, ಸಂಯುಕ್ತ ಕರ್ನಾಟಕ ಮುಂತಾದ ಪತ್ರಿಕೆಗಳಲ್ಲಿ ಬಹಳ ಚೆನ್ನಾಗಿ ವಿವರಿಸಿದ್ದಾರೆ. ಅಲ್ಲಿನ ಜನಗಳ ಕಷ್ಟವನ್ನು ಹೇಳುವುದಕ್ಕಾಗುವುದಿಲ್ಲ. ಅಲ್ಲಿ ಜನಗಳಿಗೆ ಸರಿಯಾಗಿ ಆಹಾರ ಸಿಕ್ಕದೇ ಇರುವುದರಿಂದ ಅವರು ಒಂದು ತರಹ ಗೆಡ್ಡೆ ಗೆಣಸುಗಳಿಂದ ತಮ್ಮ ಹೊಟ್ಟೆಯನ್ನು ತುಂಬಿಕೊಳ್ಳುತ್ತಾರೆ. ಈ ವಿಷಯವನ್ನು ನಾನು ಪತ್ರಿಕೆಯಲ್ಲಿ ಕೂಡ ಓದಿದ್ದೇನೆ. ಅಲ್ಲಿ ಜನಗಳಿಗೆ ಕುಡಿಯುವುದಕ್ಕೆ ನೀರು ಇಲ್ಲ. ನಮ್ಮ ತಾಲ್ಲೂಕಿನಲ್ಲಿ ತ್ರಿವಮ್ಮಾಪುರ, ಹಳ್ಳಿಗುಳಿ ಮುಂತಾದ ಹಳ್ಳಿಗಳಲ್ಲಿ ಲಾರಿಗಳಲ್ಲಿ ನೀರು ತಂದು ಒಬ್ಬೊಬ್ಬರಿಗೆ ಎರಡೆರಡು ಗ್ಯಾಲನ್‌ನಂತೆ ನೀರು ಕೊಡುತ್ತಾರೆ. ಅಲ್ಲಿನ ಜನಗಳು ಜೀವನವನ್ನು ನಡೆಸುವುದನ್ನು ನೋಡಿದರೆ ಅಲ್ಲಿರತಕ್ಕ ಬರಗಾಲ ಪರಿಸ್ಥಿತಿ ಬೇರೆ ಯಾವ ಸದಸ್ಯರ ತಾಲ್ಲೂಕಿನಲ್ಲೂ ಇಲ್ಲ ಎಂಬ ಕಾಣುತ್ತದೆ. ಸರ್ಕಾರದವರು ಕೂಡ ಅದನ್ನು ಗಮನಿಸಿ ಅಲ್ಲಿ ಅನೇಕ ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ತೆಗೆದುಕೊಂಡಿದ್ದಾರೆ ಅದರ ಜೊತೆಗೆ ಫಿಡರ್ ಚಾನಲ್, ರಸ್ತೆಗಳ ಕಾಮಗಾರಿಗಳನ್ನೂ ತೆಗೆದುಕೊಂಡಿದ್ದಾರೆ. ಈಗಾಗಲೇ ಅಲ್ಲಿ ರಸ್ತೆಗಳ ಕಾಮಗಾರಿ ಕೆಲಸ ಮುಗಿಯುತ್ತಾ ಬಂದಿದೆ ಇನ್ನು ಮುಂದೆ ಅಲ್ಲಿ ಯಾವ ಕೆಲಸಗಳನ್ನು ತೆಗೆದುಕೊಳ್ಳಬೇಕು ಎಂದು ಯೋಚನೆ ಮಾಡಬೇಕಾಗಿದೆ. ಆದ್ದರಿಂದ ನಮ್ಮ ತಾಲ್ಲೂಕಿನಲ್ಲಿ ಈ ಬರಗಾಲದಲ್ಲಿ ಜನಗಳಿಗೆ ಯಾವರೀತಿ ಕೆಲಸವನ್ನು ಒದಗಿಸಬೇಕು ಎಂಬುದರಬಗ್ಗೆ ಯೋಚನೆ ಮಾಡಿ ಒಂದು ಯೋಜನೆಯನ್ನು ಕೈಕೊಳ್ಳಬೇಕೆಂದು ನಾನು ಸೂಚನೆ ಮಾಡುತ್ತೇನೆ.

ನಮ್ಮ ತಾಲ್ಲೂಕಿನಲ್ಲಿ ಅನೇಕ ಕೆರೆಗಳಿಗೆ ಸಂಬಂಧಪಟ್ಟ ಹಾಗೆ ಪ್ಲಾನು ಮತ್ತು ಎಸ್ಟಿಮೇಟು ತಯಾರು ಮಾಡಿ ಅವುಗಳಿಂದ ಸಾಕಷ್ಟು ರಿಟರ್ನ್ಸ್ ಇಲ್ಲ ಎಂದು ಅವುಗಳ ಕೆಲಸಗಳನ್ನು ತೆಗೆದುಕೊಳ್ಳದೆ ನಿಲ್ಲಿಸಿದ್ದಾರೆ. ಈ ಸಂದರ್ಭದಲ್ಲಿ ಸರ್ಕಾರದವರು ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳುವಾಗ ಮಳೆ ಬಂದಾಗ ನಿರರ್ಥಕವಾಗಿ ತೇಲಿ ಹೋಗುವಂತಹ ಯೋಜನೆಯನ್ನು ಕೈಗೊಳ್ಳದೆ ಶಾಶ್ವತವಾದ ಅಂಥಾ ಕೆರೆಗಳ ಕೆಲಸಗಳನ್ನು ಕೈಗೊಳ್ಳಬೇಕು. ಒಂದುವೇಳೆ ಆ ಕೆರೆಗಳಿಂದ ಸಾಕಷ್ಟು ರಿಟರ್ನ್ ಬಾರದೆ ಇದ್ದರೂ ಕೂಡ ಬರಗಾಲದ ಪರಿಹಾರ ಕಾಮಗಾರಿಗಳ ಮುಖಾಂತರ ಕೆರೆಗಳನ್ನು ಕಟ್ಟಿ ಜನತೆಗೆ ನೀರಾವರಿ ಸೌಲಭ್ಯವನ್ನು ಒದಗಿಸಿಕೊಟ್ಟಂತಾಗುತ್ತದೆ. ಆದ್ದರಿಂದ ದೋಣಿ, ಮತಿಕೊಪ್ಪ, ಜಗ್ಗಿನ ಕೆರೆ ಮುಂತಾದ ಅನೇಕ ಕೆರೆಗಳ ಪ್ಲಾನು ಮತ್ತು ಎಸ್ಟಿಮೇಟ್‌ಗಳು ತಯಾರಾಗಿ ಸಿದ್ಧವಾಗಿವೆ; ಆ ಕೆರೆಗಳ ಕೆಲಸವನ್ನು ತೆಗೆದುಕೊಂಡರೆ ಜನತೆಗೆ ಕೆಲಸ ಸಿಕ್ಕುತ್ತದೆ; ಆದಕಾರಣ ಆ ಕೆಲಸಗಳನ್ನು ಜಾಗ್ರತೆಯಾಗಿ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಸೂಚನೆ ಮಾಡುತ್ತೇನೆ.

6-30 P.M.

ಇನ್ನು ಆಹಾರಧಾನ್ಯಗಳನ್ನು ಸ್ಕೇರ್ಸಿಟಿ ಕೆಲಸಗಳು ಎಲ್ಲೆಲ್ಲಿ ನಡೆಯುತ್ತಿವೆಯೋ ಅಲ್ಲಿ ಕೆಲಸ ಮಾಡುವ ಜನಕ್ಕೆ ಸಿಗುವ ವ್ಯವಸ್ಥೆ ಮಾಡುವ ಒಂದು ಯೋಜನೆಮಾಡಿ ಕೂಲಿಕಾರ ಜನಗಳಿಗೆ ಆಹಾರ ಧಾನ್ಯ ಸಿಗುವಂತೆ ಮಾಡುವುದು ಸರಕಾರದ ಮುಖ್ಯ ಕರ್ತವ್ಯ. ಆ ಮೂಲಕ ಯಾವ ಯಾವ ಭಾಗಗಳಲ್ಲಿ ಆಹಾರಧಾನ್ಯಗಳು ಸಿಗುವುದಿಲ್ಲವೋ ಅಂತಹ ಭಾಗಗಳಿಗೆ ಬೇರೆ ಕಡೆಯಿಂದಲಾದರೂ ತಂದು ಇಲ್ಲಿ ಹಂಚುವ ಕೆಲಸ ಮಾಡಬೇಕು ಮತ್ತು ಇದಕ್ಕೆ ತಕ್ಕ ಯೋಚನೆ ಮಾಡಬೇಕು.

ಮತ್ತೊಂದು ಯೋಜನೆ ಎಂದರೆ ಬಂಡಿಂಗ್ ವರ್ಕ್ಸ್‌ಗಳನ್ನು ಮಾಡುವುದು. ಸಣ್ಣ ಕೆರೆ ಕಟ್ಟೆಗಳಿಗೆ ಒಡ್ಡುಗಳನ್ನು ಹಾಕಿ ಅಲ್ಲಿನ ನೀರನ್ನು ವ್ಯವಸಾಯಕ್ಕೆ ಉಪಯೋಗಿಸುವ ಕೆಲಸಗಳನ್ನು ಮಾಡಬೇಕು. ನಮ್ಮ ತಾಲ್ಲೂಕಿನಲ್ಲಿ ಒಡ್ಡುಹಾಕುವ ಕೆಲಸ ಒಂದು ಯೋಜನೆ ತೆಗೆದುಕೊಂಡಿದ್ದಾರೆ. ನಮ್ಮ ಬಿಜಾಪುರದಲ್ಲಿ ಒಂದು ಡಿವಿಜನ್ ಇದೆ ಮತ್ತು ಧಾರವಾಡದಲ್ಲಿ ಒಂದು ಸಬ್ ಡಿವಿಜನ್ ಇದೆ. ಆದರೆ ಇಲ್ಲಿ ಕೆಲಸಕಾರ್ಯಗಳು ಸರಿಯಾಗಿ ನಡೆಯುತ್ತಿಲ್ಲ. ಧಾರವಾಡದ ಸಬ್

ಡಿವಿಜನ್ನಿನಲ್ಲಿ ಐದು ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಯಾವ ಕೆಲಸಗಳನ್ನೂ ಮಾಡುವುದಕ್ಕೆ ಅವಕಾಶವಿಲ್ಲ. ಹೆಚ್ಚು ಮೊತ್ತದ ಕೆಲಸವನ್ನು ಮಾಡಲು ಬಿಜಾಪುರ ಡಿವಿಜನ್ನಿಗೆ ಅಧಿಕಾರ ಕೊಟ್ಟಿದ್ದಾರೆ. ಬಿಜಾಪುರದಲ್ಲಿ ಒಂದು ಡಿವಿಜನ್ ಮಾಡಿರುವಂತೆ ಧಾರವಾಡದಲ್ಲೂ ಒಂದು ಡಿವಿಜನ್ ಮಾಡಿದರೆ ಅಲ್ಲಿ ಒಂದು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಬಾವಿಗಳನ್ನು ತೆಗೆಸಿದರೆ ಇಲ್ಲಿನ ಜನಕ್ಕೆ ಬಹು ಅನುಕೂಲವಾಗುತ್ತದೆ. ಇಲ್ಲಿರುವ ಭೂಮಿ ಬಹು ಫಲವತ್ತಾದುದು. ಇಂತಹ ಒಂದು ಯೋಜನೆಯನ್ನು ಈ ಭಾಗದಲ್ಲಿ ತೆಗೆದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಕ್ಷಾಮ ನಿವಾರಣೆಯ ಕ್ರಮವನ್ನು ಶಾಶ್ವತವಾಗಿ ಮಾಡಬೇಕು ಎಂಬುದರ ಬಗ್ಗೆ ಅನೇಕ ಸನ್ಮಾನ್ಯ ಸದಸ್ಯರುಗಳು ಇಲ್ಲಿ ಸರಕಾರಕ್ಕೆ ಸೂಚನೆಗಳನ್ನು ಕೊಟ್ಟಿದ್ದಾರೆ. ಮತ್ತು ಇದರಿಂದ ದೇಶದಲ್ಲಿ ಭ್ರಷ್ಟಾಚಾರ ಹೆಚ್ಚಾಗಿದೆ ಎಂದು ಹೇಳಿದ್ದಾರೆ.

ಇನ್ನು ತುಂಗಭದ್ರಾ ಯೋಜನೆಯಲ್ಲಿ ಇದಕ್ಕೆ ಸಮೀಪವಾಗಿರುವ ಮುಂಡರಗಿಯವರೆಗೆ ಅನೇಕ ಬರಗಾಲಕ್ಕೆ ಸೇರಿದ ಪ್ರದೇಶಗಳು ಇವೆ. ಇದರ ಬಗ್ಗೆ ಸರಕಾರ ಸರ್ವೆ ಮಾಡಿಸಿ ಇದರ ಕೆಲಸಗಳನ್ನು ಆದಷ್ಟು ತೀವ್ರವಾಗಿ ಕಾರ್ಯಗತ ಮಾಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ಅನೇಕ ಸನ್ಮಾನ್ಯ ಸದಸ್ಯರುಗಳು ಮಾತನಾಡುವಾಗ ಅಧಿಕಾರಿಗಳ ಒಂದು ವರ್ತನೆಯ ಬಗ್ಗೆ ದೊಡ್ಡದಾಗಿ ಟೀಕೆ ಮಾಡಿದರು. ಆದರೆ ಇಂದು ಇರುವ ಪ್ರಜಾಸತ್ತಾತ್ಮಕವಾದ ಸರಕಾರದಲ್ಲಿ ಈ ರೀತಿ ಹೇಳುವುದು ಯೋಗ್ಯವೂ ಅಲ್ಲ, ನ್ಯಾಯವೂ ಅಲ್ಲ ಎಂದು ಇಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದೇ ಸಂದರ್ಭದಲ್ಲಿ ಅನೇಕ ಮಿತ್ರರುಗಳು ಸರಕಾರವನ್ನು ಟೀಕೆ ಮಾಡಿದ್ದಾರೆ. ಕೆಲವರಿಗೆ ಸರಕಾರವನ್ನು ಟೀಕೆ ಮಾಡುವುದೇ ಅವರ ಸ್ವಭಾವವಾಗಿರುತ್ತದೆ. ಆಡಳಿತದ ಬಗ್ಗೆ ಟೀಕೆ ಮಾಡುವಾಗ ಸ್ಕೇರ್ಸಿಟಿ ಕಂಡಿಷನ್ಸ್‌ಗಳು ಯಾವ ಭಾಗದಲ್ಲಿ ಹೆಚ್ಚಾಗಿವೆ ಯಾವ ಭಾಗದಲ್ಲಿ ಜನತೆಗೆ ಹೆಚ್ಚು ಕಷ್ಟನಷ್ಟಗಳಾಗಿವೆ ಎನ್ನುವುದರ ಬಗ್ಗೆ ಟೀಕೆ ಮಾಡುವಾಗ ರಚನಾತ್ಮಕವಾದ ಟೀಕೆಗಳನ್ನು ಮಾಡಿದರೆ ಅದನ್ನು ಸರಕಾರ ಒಪ್ಪುತ್ತದೆ ಮತ್ತು ಅದರ ಬಗ್ಗೆ ತಕ್ಕ ಕ್ರಮಗಳನ್ನು ಕೈಗೊಳ್ಳಲು ಅನುಕೂಲವಾಗುತ್ತದೆ.

ಇಷ್ಟು ಮಾತನಾಡಲು ಅವಕಾಶಕೊಟ್ಟುದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸದಾಶಿವಪ್ಪ ಪಾಟೀಲ್ (ದೇವದುರ್ಗ).—ಸನ್ಮಾನ್ಯ ಅಧ್ಯಕ್ಷರೇ, ಎರಡು ಮೂರು ದಿನಗಳಿಂದ ಈ ಮಾನ್ಯ ಸಭೆಯಲ್ಲಿ ಮಾನ್ಯ ಸದಸ್ಯರುಗಳು ಬರಗಾಲದ ಬಗ್ಗೆ ಸೂಕ್ತವಾದ ತಮ್ಮ ಸಲಹೆಗಳನ್ನು ಇಟ್ಟಿದ್ದಾರೆ. ಈ ಕ್ಷಾಮದ ಬಗ್ಗೆ ಆದಷ್ಟು ನ್ಯಾಯ ರೀತಿಯಿಂದ ಪ್ರಾಮಾಣಿಕತೆಯಿಂದ ಕೆಲಸವಾಗಬೇಕು, ಇದರಲ್ಲಿ ಸ್ವಾರ್ಥ ತರಕೂಡದು ಎಂದು ಪ್ರತಿಯೊಬ್ಬ ಸದಸ್ಯರು ಹೇಳಿದ್ದಾರೆ. ಆದರೆ ಈಗ ನಮ್ಮ ರಾಜ್ಯ ಎದುರಿಸುತ್ತಿರುವುದು ಒಂದು ಭಯಂಕರ ಪರಿಸ್ಥಿತಿ. ಈ ಪರಿಸ್ಥಿತಿಯಲ್ಲಿ ಸಾಕಷ್ಟು ಮಟ್ಟಿಗೆ ತಮ್ಮ ಕುಂದುಕೊರತೆಗಳನ್ನು ಪರಿಹರಿಸುವುದರಲ್ಲಿ ಆಡಳಿತ ಎಷ್ಟು ಮಟ್ಟಿಗೆ ಸಹಾಯ ಮಾಡಬೇಕು ಎನ್ನುವುದರ ಬಗ್ಗೆ ಈಗ ತಾನೇ ಮಾನ್ಯ ಸದಸ್ಯರಾದ ಶ್ರೀಮಾನ್ ಚರ್ಚಿಹಾಳ್ ಮಠರವರು ಈ ಮಾನ್ಯ ಸಭೆಯ ಮುಂದೆ ಹೇಳಿದ್ದಾರೆ. ಮತ್ತು ಅವರ ಭಾಗಗಳಲ್ಲಿ ಏನಾಗಬೇಕು ಎನ್ನುವುದರ ಬಗೆಗೂ ಹೇಳಿದ್ದಾರೆ. ಆ ಕಡೆಗಳಲ್ಲಿ ಎಷ್ಟುಮಟ್ಟಿನ ಕೆಲಸಗಳು ಆ ಕಾಲದಲ್ಲಿ ಆಗಬೇಕೋ ಅಷ್ಟು ಮಟ್ಟಿನ ಕೆಲಸಗಳು ಆಗುತ್ತಿಲ್ಲ ಎಂದು ಹೇಳಿದರು. ಇದೇನೇ ಇರಲಿ ಇದರಲ್ಲಿ ವಿರೋಧ ಪಕ್ಷದ ಕೆಲಸ ಕೆಲಸವೇ ಅಲ್ಲ, ಕಾಂಗ್ರೆಸ್ಸು ಪಕ್ಷದ ಕೆಲಸ ಎಂದಲ್ಲ. ಯಾವ ಪಕ್ಷವೇ ಇರಲಿ, ಅದರಿಂದ ಒಳ್ಳೆಯ ಕೆಲಸವಾಗಿ ಕ್ಷಾಮದ ಪರಿಸ್ಥಿತಿ ಸುಧಾರಿಸಬೇಕು ಮತ್ತು ಪ್ರತಿಯೊಬ್ಬರೂ ಇದರಲ್ಲಿ ಭಾಗವಹಿಸಿ ತಮ್ಮ ಹೃತ್ಪೂರ್ವಕವಾದ ಸಹಾಯ ಸಲಕರಣೆಗಳನ್ನು ಒದಗಿಸಬೇಕಾದ್ದು ಮುಖ್ಯ. ಒಟ್ಟಿನಲ್ಲಿ ಇದು ನಾವೆಲ್ಲರೂ ಮಾಡಿಕೊಂಡು ಹೋಗುವ ಕೆಲಸ. ಆದರೆ ಇವೊತ್ತು ನಾವು ಎರಡು ವಿಧವಾದ ತೊಡಕುಗಳನ್ನು ಎದುರಿಸುತ್ತಿದ್ದೇವೆ. ಒಂದು ಬರಗಾಲದ್ದಾದರೆ ಇನ್ನೊಂದು ಆಡಳಿತವರ್ಗದವರು ಕೊಡುತ್ತಿರುವ ಕಿರುಕುಳಗಳು. ಇದನ್ನು ತಡೆಗಟ್ಟಿದ್ದರೆ ಇಂದಿನ ಕ್ಷಾಮದ ಹಾವಳಿಗಳನ್ನು ತಡೆಗಟ್ಟಬಹುದಾಗಿತ್ತು. ನಮ್ಮ ರಾಮದುರ್ಗದಲ್ಲಿರುವ ಒಬ್ಬ ಸಬ್ ಇನ್‌ಸ್ಪೆಕ್ಟರವರನ್ನು ಬೇರೆ ಕಡೆಗೆ ವರ್ಗ ಮಾಡಬೇಕೆಂದು ಒತ್ತಿ ಒತ್ತಿ ಹೇಳುತ್ತಿದ್ದರೂ ಇದರ ಕಡೆಗೆ ಆಡಳಿತದವರು ಗಮನ ಕೊಡುತ್ತಿಲ್ಲ. ಇದರ ಬಗ್ಗೆ ಒಂದೇ ಒಂದು ಉದಾಹರಣೆ ಹೇಳುತ್ತೇನೆ. ನಮ್ಮ ರಾಮದುರ್ಗ ತಾಲ್ಲೂಕಿನಲ್ಲಿ ಒಬ್ಬ ಪೋಲೀಸ್ ಸಬ್ ಇನ್‌ಸ್ಪೆಕ್ಟರನ್ನು ಎರಡು ಸಾರಿ ಟ್ರಾನ್ಸ್‌ಫರ್ ಮಾಡಿದ್ದರು. ಆದರೆ ಅಲ್ಲಿ ಒಬ್ಬ ಕಾಂಗ್ರೆಸ್ ವ್ಯಕ್ತಿ ಚುನಾವಣೆಯಲ್ಲಿ ದೇವದುರ್ಗದಲ್ಲಿ ಸೋತಿದ್ದವರು ತಮ್ಮ ಅನುಕೂಲಕ್ಕಾಗಿ ಎರಡಾವರ್ತಿಯೂ ಆ ವರ್ಗವನ್ನು ರದ್ದುಮಾಡಿಸಿ ಅವರನ್ನು ಅಲ್ಲೇ ಉಳಿಸಿಕೊಂಡಿದ್ದಾರೆ. ಆ ವಿಚಾರವನ್ನು ನಾವು ಮುಖ್ಯಮಂತ್ರಿಗಳ ಗಮನಕ್ಕೆ ತಂದಾಗ ಅವರು, ಹೌದು ಅವರು ಮಾಡಿರತಕ್ಕದ್ದು ಸರಿಯಾಗಿದೆ, ಅವೇ

(ಶ್ರೀ ಸದಾಶಿವಪ್ಪ ಪಾಟೀಲ್)

ಸರಿಯಾದ ಪ್ರೊಸೀಜರು. 2 ವರ್ಷಗಳಿಗೆ ಕಡಮೆ ಹಾಗೆ ಯಾರನ್ನೂ ವರ್ಗಮಾಡಲಿಕ್ಕೆ ಬರುವುದಿಲ್ಲ ಎಂದು ಹೇಳಿದರು. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪೋಲೀಸ್ ಸಬ್‌ಇನ್‌ಸ್ಪೆಕ್ಟರನ್ನು ಮತ್ತು ಇತರೇ ಪೋಲೀಸ್ ಅಧಿಕಾರಿಗಳನ್ನು 15 ದಿನಗಳಲ್ಲಿ 10—15 ಸಾರ್ತಿ ವರ್ಗ ಮಾಡಿರತಕ್ಕ ನಿದರ್ಶನಗಳಿವೆ. ಹಾಗಿದ್ದರೂ ನಮ್ಮಲ್ಲಿ ಪ್ರಜೆಗಳಿಗೆ ತೊಂದರೆ ಕೊಡತಕ್ಕ ಒಬ್ಬ ಎಸ್. ಐ. ಅನ್ನು ವರ್ಗ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಿರುವುದು ಅಲ್ಲಿ ಇವರ ದಬ್ಬಾಳಿಕೆ ಎಷ್ಟರಮಟ್ಟಿಗಿದೆ ಎನ್ನುವುದು ಗೊತ್ತಾಗುತ್ತದೆ. ಹೀಗಾಗಿ ನಮ್ಮಲ್ಲಿ ಒಂದು ಕಡೆ ಕ್ಷಾಮದಿಂದ ಜನರು ಹಾವಳಿಗೆ ತುತ್ತಾಗಿದ್ದರೆ ಇನ್ನೊಂದು ಕಡೆಯಿಂದ ಅಧಿಕಾರಿಗಳ ತೊಂದರೆಗೆ ಸಿಕ್ಕಿ ನರಳಬೇಕಾದ ಪ್ರಸಂಗಬೇರೆ ಅಲ್ಲಿ ಉಂಟಾಗಿದೆ. ಅದೇ ರೀತಿ ಮಂತ್ರಿಗಳ ಕಾಟ ಬೇರೆ ನಮಗೆ ಉಂಟಾಗಿದೆ. ಅವರು ಈ ಮನೆಯ ಕೆಲವು ಸದಸ್ಯರನ್ನು ಮನೆಗೆ ಕಳುಹಿಸುವುದಕ್ಕೆ ಬಹಳವಾಗಿ ಪ್ರಯತ್ನ ಮಾಡುತ್ತಿದ್ದಾರೆ; ಈ ವಿಚಾರ ನನಗೆ ಅನೇಕ ಕಡೆಗಳಿಂದ ತಿಳಿದು ಬಂದಿದೆ. ಅಲ್ಲಿಯ ನಾನ್‌ಕಾಂಗ್ರೆಸ್ ಸದಸ್ಯರೆಲ್ಲರೂ ಕಾಂಗ್ರೆಸ್ಸಿಗೆ ಸೇರಿದರೆ ಅವರ ಕ್ಷೇತ್ರಗಳಲ್ಲಿ ಯಾವ ಒಂದು ತೊಂದರೆಯೂ ಇರುವುದಿಲ್ಲ ಎಂಬುದಾಗಿ ಅಲ್ಲಲ್ಲೇ ಹೇಳಿಕೆಗಳೂ ಬಂದಿವೆ. ಅವರು ಈ ದಿನ ಸರ್ಕಾರದವರು ಸ್ವಾರ್ಥದಿಂದ ಕೆಲಸ ಮಾಡುತ್ತಿಲ್ಲ ಎಂದು ಹೇಳಬಹುದು. ಆದರೆ ಅದಕ್ಕೆ ನಾನು ತಮ್ಮ ನಿದರ್ಶನಕ್ಕೆ ತರಬಯಸುವುದೇನೆಂದರೆ—ನಮ್ಮ ರಾಯಚೂರು ಮತ್ತು ಬೆಳಗಾಂ ಜಿಲ್ಲೆಗಳಿಗೆ ಅಭಿವೃದ್ಧಿಯ ಕೆಲಸಕಾರ್ಯಗಳಿಗಾಗಿ ಹಣವನ್ನು ಒದಗಿಸಿರುವುದಕ್ಕೂ ಮತ್ತು ಲಿಂಗಸುಗೂರು, ಕುಷ್ಟಗಿ ಇತ್ಯಾದಿ ಎಲ್ಲೆಲ್ಲಿ ಕಾಂಗ್ರೆಸ್ಸಿನವರು ಚುನಾಯಿತರಾಗಿ ಬಂದಿದ್ದಾರೋ ಆ ಕ್ಷೇತ್ರಗಳಿಗೂ ಒದಗಿಸಿರತಕ್ಕ ಹಣವನ್ನು ನೋಡಿದರೆ ಅದೇ ಗೊತ್ತಾಗುವುದು. ಸಿಂಧನೂರಿಗೆ 25 ಸಾವಿರ ರೂಪಾಯಿ, ದೇವದುರ್ಗಕ್ಕೆ 50 ಸಾವಿರ ರೂಪಾಯಿ, ರಾಯಚೂರಿಗೆ 50 ಸಾವಿರ ರೂಪಾಯಿ. ಆದರೆ ಅದೇ ಲಿಂಗಸೂಗೂರು—ಕುಷ್ಟಗಿ ಇವುಗಳಿಗೆ ಒಂದು ಲಕ್ಷ ಮತ್ತು 80 ಸಾವಿರ ಹೀಗೆಲ್ಲಾ ಹೆಚ್ಚು ಹಣವನ್ನು ಒದಗಿಸಿದ್ದಾರೆ. ನಾವು ಹೀಗೆಲ್ಲಾ ಅನ್ಯಾಯಗಳು ನಡೆಯುತ್ತಿವೆ ಎಂದರೆ ಅದನ್ನು ವಿಚಾರ ಮಾಡುತ್ತೇವೆ, ಪರಿಶೀಲನೆ ಮಾಡುತ್ತೇವೆಂದು ಎಂಬುದಾಗಿ ನಮ್ಮ ಮುಖ್ಯಮಂತ್ರಿಗಳು ಹೇಳುತ್ತಾರೆ. ನಾವು ಈ ವಿಚಾರಗಳನ್ನೆಲ್ಲಾ ಸರ್ಕಾರದವರಿಗೆ ಬರವಣಿಗೆಯ ಮೂಲಕ ತಿಳಿಸಿದ್ದಾಗಿದೆ. ಆದರೆ ಅವರು ಇನ್ನು ಮುಂದೆಯೂ ಇದೇ ರೀತಿ ಬಾಯಲ್ಲಿ ನಿಸ್ವಾರ್ಥ ಸೇವೆ ಎಂದು ಹೇಳುತ್ತಾ ಕೆಲಸಗಳನ್ನು ಮಾಡುತ್ತಾ ಹೋದರೆ ಅವರ ಈ ಸರ್ಕಾರ ಇನ್ನೆಷ್ಟು ದಿನಗಳು ಇರುತ್ತದೆಯೋ ಅದನ್ನು ತಾವೆಲ್ಲರೂ ಯೋಚಿಸಬೇಕೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಇನ್ನು ನೀರಾವರಿ ಬಾವಿಗಳನ್ನು ತೋಡಿಸತಕ್ಕ ವಿಚಾರದಲ್ಲಿ ಮತ್ತು ಆ ಬಾವಿಗಳಿಗೆ ಸಕಾಲದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸತಕ್ಕ ಬಗ್ಗೆ ಸರ್ಕಾರದವರು ಬಹಳ ನಿಧಾನದಿಂದ ಕೆಲಸ ಮಾಡುತ್ತಿದ್ದಾರೆ. ಬಾವಿಗಳನ್ನು ತೋಡಿ—ಅವುಗಳಿಗೆ ವಿದ್ಯುಚ್ಛಕ್ತಿ ಮಂಜೂರಾಗಿ 2 ವರ್ಷಗಳ ಮೇಲಾಗಿದ್ದರೂ ಲೈನನ್ನು ಎಳೆಯದೆ ಅದಕ್ಕೆ ಬೇರೆ 2 ಸಾವಿರ ರೂಪಾಯಿಗಳನ್ನು ಕೇಳುತ್ತಿದ್ದಾರೆ. ಅವರು ಹೇಳತಕ್ಕ ಆ ಪ್ರೊಸೀಜರನ್ನು ಯಾರಿಗೂ ಅನುಸರಿಸಲು ಸಾಧ್ಯವಿಲ್ಲ. ನನಗೇ ಸುಮಾರು 50—60 ರೂಪಾಯಿಗಳ ಮೇಲೆ ಖರ್ಚಾಗಿದೆ. ಇನ್ನು ಒಂದು ಟ್ರಾಕ್ಟರನ್ನು ಅಲ್ಲಿಗೆ ತರಿಸುವುದಕ್ಕೆ 15 ತಿಂಗಳ ಮೇಲಾಯಿತು. ಕೆಲಸಗಳು ಹೀಗೆ ನಡೆಯುವುದಾದರೆ ಇನ್ನು ನಾವು ಯಾವ ವರ್ಷಕ್ಕೂ ಕ್ಷಾಮವನ್ನು ನಿವಾರಣೆ ಮಾಡುವುದಕ್ಕಾಗುವುದಿಲ್ಲ. ನಮ್ಮಲ್ಲಿರತಕ್ಕಂಥ ಈ ಕ್ಷಾಮಕ್ಕಿಂತ ನಮ್ಮಲ್ಲಿ ಮಾನವೀಯತೆ ಬಹಳ ಕಡಮೆಯಾಗಿದೆ. ಈ ಮಾನವೀಯತೆ ಎಂಬುದು ನಮಗಿಂತಲೂ ಸ್ವಲ್ಪ ಕಡಮೆಯಾಗಿ ಮಂತ್ರಿಗಳಲ್ಲಿದೆ. ಅವರಿಗಿಂತ ಕಡಮೆಯಾಗಿ ಅದು ಮುಖ್ಯ ಮಂತ್ರಿಗಳಲ್ಲಿದೆ. ಆದರೆ ಈ ಕ್ಷಾಮನಿವಾರಣಾ ಕಾರ್ಯಗಳನ್ನು ಅಧಿಕಾರಿಗಳಿಗೆ ವಹಿಸಬೇಕೇ ಬೇಡವೇ ಎನ್ನತಕ್ಕ ವಿಚಾರದಲ್ಲಿ ನನ್ನ ಸಲಹೆಯೇನೆಂದರೆ ಇದರಲ್ಲಿ ಅಧಿಕಾರಿಗಳೂ ಅಧಿಕಾರೇತರರೂ ಎಲ್ಲರೂ ಒಟ್ಟು ಸೇರಿ ಕೆಲಸ ಮಾಡಬೇಕು ಎಂದು ಹೇಳುತ್ತೇನೆ. ತಾಲ್ಲೂಕಿನಲ್ಲಿರತಕ್ಕ ತಾಶೀಲ್ದಾರರು, ಬಿ. ಡಿ. ಒ. ಗಳೂ ಮತ್ತು ಪಿ. ಡಬ್ಲ್ಯು. ಡಿ. ಅಧಿಕಾರಿಗಳೂ ಮತ್ತು ತಾಲ್ಲೂಕ್ ಬೋರ್ಡಿನ ಅಧ್ಯಕ್ಷರೂ ಮತ್ತು ಉಪಾಧ್ಯಕ್ಷರೂ ಎಲ್ಲರೂ ಸೇರಿ ಕೆಲಸ ಮಾಡಿದರೆ ಇದು ಯಶಸ್ವಿಯಾಗಬಹುದು ಎಂದು ಹೇಳಿ ನನಗೆ ಈ ಎರಡು ಮಾತುಗಳನ್ನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವೆಂಕಾನಾಯಕ್ (ಹರಪನಹಳ್ಳಿ).—ಮಾನ್ಯ ಸಭಾಧ್ಯಕ್ಷರೇ, ಈ ದಿವಸ ದೇಶದಲ್ಲಿ ಉಂಟಾಗಿರತಕ್ಕ ಅಭಾವಪರಿಸ್ಥಿತಿಯನ್ನು ಮತ್ತು ಆಹಾರದ ಕೊರತೆ ಇವುಗಳನ್ನು ಹೋಗಲಾಡಿಸಲು ನಮ್ಮ ನಾಯಕರು ಅನೇಕ ಮುಂಜಾಗ್ರತೆಯ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾಗ್ಗೂ ವಿರೋಧಪಕ್ಷದ ನಾಯಕರು ಅದನ್ನು ಟೀಕಿಸಬೇಕಾದ್ದು ಸ್ವಾಭಾವಿಕವಾದದ್ದೇ.

ನಮ್ಮ ದೇಶದಲ್ಲಿ ಒದಗಿರತಕ್ಕ ಕ್ಷಾಮವನ್ನು ನಿವಾರಣೆ ಮಾಡಲು ಮತ್ತು ಜನರಿಗೆ ಉದ್ಯೋಗವನ್ನು ದೊರಕಿಸಿಕೊಡಲು ಅನೇಕ ಕೆಲಸಕಾರ್ಯಗಳನ್ನು ಕೈಗೊಂಡಿದ್ದಾರೆ. ಅದಕ್ಕೆಲ್ಲಾ ಸಾಕಷ್ಟು ಹಣವನ್ನು ಕೊಡುವಂತೆ ಕೇಂದ್ರ ಸರ್ಕಾರಕ್ಕೆ ಕೋರಿಕೆಯನ್ನಿಟ್ಟಿದ್ದಾರೆ. ಅದರಂತೆ ಅವರಿಗೆ ಅಲ್ಲಿಂದ ಹೆಚ್ಚಿನ ಹಣ ಸಹಾಯ ಸಿಕ್ಕಬಹುದು.

ಇನ್ನು ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಹರಪನಹಳ್ಳಿ, ಕೂಡ್ಲಿಗಿ, ಹಡಗಲಿ, ಶಿರಗುಪ್ಪ, ಮುಂಡರಗಿ ಭಾಗಗಳಲ್ಲಿ ಮಳೆಬಾರದೆ ಅನೇಕ ಕಡೆ ಬಿತ್ತನೆಗಳೂ ಕೂಡ ಆಗಿಲ್ಲ. ಕೆಲವು ಕಡೆ ಅಷ್ಟಿಷ್ಟು ಮಳೆ ಬಿದ್ದಾಗ ಅಲ್ಲಲ್ಲೆ ಹೈಬ್ರಿಡ್ ಜೋಳವನ್ನು ಬಿತ್ತಿದ್ದರು. ಆದರೆ ಇತ್ತೀಚೆಗೆ ಮಳೆ ಸುತರಾಂ ಬಾರದೆ ಇದ್ದ ಕಾರಣ ನೂರಾರು ಎಕರೆಗಳಲ್ಲಿದ್ದ ಪೈರೆಲ್ಲಾ ಹಾಳಾಗಿವೆ. ಎಲ್ಲಿ ನೋಡಿದರೂ ಜನರಿಗೆ ಕೆಲಸವಿಲ್ಲ. ಬಾವಿಗಳೆಲ್ಲಾ ಬತ್ತಿ ಹೋಗಿರುವುದರಿಂದ ಜನರಿಗೆ ಕುಡಿಯುವುದಕ್ಕೆ ನೀರೂ ಸಹಾ ಸಿಕ್ಕುತ್ತಿಲ್ಲ. ಅದೇ ರೀತಿ ಕೆರೆಗಳೆಲ್ಲಾ ಒಣಗಿಹೋಗಿವೆ. ದನಕರುಗಳಿಗೂ ನೀರಿಲ್ಲ; ಮೇವಿಲ್ಲ. ಆದ್ದರಿಂದ ನಮ್ಮ ಜಿಲ್ಲೆಗೆ ಹೆಚ್ಚು ಹಣವನ್ನು ಒದಗಿಸಿ ಅಲ್ಲಿ ಹೆಚ್ಚಿನ ಪರಿಹಾರ ಕಾಮಗಾರಿಗಳನ್ನು ಕೈಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲಿಗೆ ಈ ದಿವಸ ಕೇವಲ 20–30 ರಿಲೀಫ್ ಕಾಮಗಾರಿಗಳನ್ನು ಮಾತ್ರ ಮಂಜೂರು ಮಾಡಿದ್ದಾರೆ. ಅದು ಸಾಲದು, ಇನ್ನೂ ಹೆಚ್ಚು ಕೆಲಸಗಳನ್ನು ಅಲ್ಲಿಗೆ ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ತಾಲ್ಲೂಕು ಮಟ್ಟದಲ್ಲಿರತಕ್ಕ ತಾಶೀಲ್ದಾರರೂ ಮತ್ತು ಬಿ. ಡಿ. ಒ. ಗಳು ಸರಿಯಾಗಿ ಕೆಲಸಮಾಡುವಂತೆ ಆಜ್ಞೆ ಮಾಡಬೇಕು. ಅವರಿಗೆ ವಹಿಸತಕ್ಕ ಕಾರ್ಯವನ್ನು ಅವರು ಶ್ರದ್ಧೆಯಿಂದ ನೆರವೇರಿಸುವಂತೆ ನೋಡಿಕೊಳ್ಳಬೇಕು. ಅವರು ಜನರ ಕುಂದುಕೊರತೆಗಳನ್ನು ಸಮಾಧಾನದಿಂದ ಕೇಳುವಂತೆ ಆಜ್ಞೆ ಮಾಡಬೇಕು. ಇನ್ನು ಕೆಲಸ ಮಾಡತಕ್ಕ ಕೂಲಿಯ ಜನಕ್ಕೆ ಸರಿಯಾದ ಕೂಲಿ ಸಿಗುವಂತೆ ಮಾಡಬೇಕು. ಈಗ 14 ಆಣೆ ಮಾತ್ರ ಕೂಲಿ ಕೊಡುತ್ತಿದ್ದಾರೆ. ಇದು ಬಹಳ ಅನ್ಯಾಯ. ಅವರಿಗೆ ಸರಿಯಾದ ಕೂಲಿಯನ್ನು ಕೊಟ್ಟು ಕೆರೆ ಕಟ್ಟೆ ಇತ್ಯಾದಿ ಕೆಲಸಗಳನ್ನು ಪರಿಹಾರ ಕಾಮಗಾರಿಯಲ್ಲಿ ಕೈಕೊಳ್ಳಬೇಕೆಂದು ಕೋರಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ಜೈ ಹಿಂದ್.

†**Sri G. AMARE GOWDA** (Sindhnoor).—Mr. Speaker Sir, much has been spoken on the subject on both the sides. India faces two kinds of famines. One is natural famine, another is man-made famine. Or one is God--made famine and another is man-made famine. No doubt famine is a permanent feature, coming continuously from centuries in India. Now, as a matter of fact, in this scientific age there should not be any famine at all. Of course, we cannot have any control over natural famines. Natural famines in India are of two types: One is droughts for lack of rains and another is floods due to heavy rains. We have to seek solution for both.

India is no country; but it is a world. If we go from place to place, seasonal conditions vary; at one place there will be heavy rains, at another place there will be no rain at all. Conditions go on varying from State to State. If in one State if we have heavy rains and floods, in another State there will be failure of rains and monsoon. In our State itself, seasonal conditions vary. In Raichur and Gulbarga we have no rains but in some other Districts of the State there are rains. This is a fundamental phenomenon: there will be famine due to rains and famine of no-rains. We have to seek permanent solution for both. We have to remove famine conditions from places where we expect all these floods and rains.

Another aspect of this famine is that we not only face famine of food but also famine of fodder. If we cannot provide fooder to animals, they will die. We have to face famines in spite of rains. Our inadequacy to face famines is also due to lack of means of communication. Wherever the human agency works very faithfully, and honestly, famines

(SRI G. AMARE GOWDA)

can be faced. Another factor at the same time for meeting the famine situation successfully is proper distribution of all the resources which we have got at our command—the resources which are here and the resource coming from outside. I refer to the statement of the hon. Chief Minister made in this connection. He has said that the money required for scarcity relief is about Rs. 8 crores. Our requirements of finance are much more when compared to the situation we have to face, what the Chief Minister has envisaged is very insufficient. Before solving problems, we have to take a correct analysis of the picture and must have correct data about our requirements and resources. As my friend Mr. Sadasivappa Patil remarked there is inequity in the distribution of funds. There are some Taluks which have received more funds than the others. I do not grudge those taluks getting more; as a matter of fact, they do not have other resources and they have to receive even more. But there seems to be a misconception about some districts. For example, so far as Raichur District is concerned, there is a notion that the Thunga-Bhadra serves the entire District. That is not the case. More than half of the District is not developed. The Tungabhadra sources are not sufficient. Unless the waters of the canal reach the tail end no useful purpose can be served. At the same time, we can face any sort of natural famine if human agency works properly.

In the last session the present Chief Minister gave an assurance regarding Kanakanala project which will solve the whole problem. He said it would be completed by the end of June. But it is still not completed. It is not possible to understand where the lacuna lies. There are Chief Engineers, Superintending Engineers and they are very reluctant even to reply to the letters. Such being the case, how can there be supervision? Unless proper supervision is there, work cannot be done. There are about 60 or 70 pumpsets sanctioned perhaps six or seven months back. But they have not been electrified. This famine condition is going to be there permanently in these ciacumstances. There are wells and nalas and there is water in them. If those waters are utilised properly, definitely the problem of food at least in such areas can be solved. When we are spending public money, there should be some permanent schemes. We know that famine will always be there in India and so, whatever work we do, it should be done on a permanent basis. Where we cannot have any resources or wells, we must have industries. Agriculture in India is such a thing that it requires some supplementary industries. It is necesssary to have home industries, small scale industries wherever there is no possibility of providing water. At this juncture the question that arises is, whatever amount that is brought from the Centre or whatever resources that are going to be tapped here, they are quite insufficient. We have to make out a permanent fund to solve this problem. In India we will have to face this problem every year or at least for some time we cannot escape this danger. We have to create a permanent fund. When we have good rains for one or two

years, we must create a permanent fund. But then the question is how this fund should be utilised. That is the great problem. Co-operative Societies and Taluk Boards are there. We all know the fate of these co-operative institutions. These co-operative societies are selling ammonium sulphate with a mixture of sand and we can all know what will be the growth of our crops. The remedy is also known. The Chief Minister has stated it. I will just read:

> "There is still too much red tape in the matter of sanctioning of estimates, drawal of funds and disbursal which tend to slow down the pace of relief to the people. I have also heard that some middlemen are coming to appear in order to make illegitimate profit out of these works. I have also heard complaints that some officers entrusted with the sacred duty of implementing these programmes have proved to be men of questionable integrity."

What is the punishment given to such people? When we are going to solve this problem if we find such persons, the only punishment that one can think of is hanging them in the streets and not only withholding their promotions or increments. The only punishment that can be thought of is what I have said. If the Government is prepared to take such drastic action against such officers, this problem can be solved otherwise not. The human agency is so important in solving this problem and if they are honest we will be nowhere. I thank you for giving me an opportunity to speak.

ಶ್ರೀ ಆರ್. ಮುನಿಸ್ವಾಮಯ್ಯ (ಆನೇಕಲ್).—ಮಾನ್ಯ ಅಧ್ಯಕ್ಷರೇ, ಮೈಸೂರು ದೇಶದಲ್ಲಿ ಈಗ ಒದಗಿರತಕ್ಕ ಅಭಾವ ಪರಿಸ್ಥಿತಿಯು ಕಾಲದಲ್ಲಿ ಕೇಂದ್ರ ಸರ್ಕಾರದಿಂದ ಏನು ಸಹಾಯ ಪಡೆಯಬಹುದು ಮತ್ತು ಸ್ಥಳೀಯವಾಗಿ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು, ಅದೇ ರೀತಿ ಕಷ್ಟಕ್ಕೆ ಈಡಾಗಿರತಕ್ಕ ಜನಗಳು ಮತ್ತು ದನಕರುಗಳನ್ನು ಯಾವ ರೀತಿ ರಕ್ಷಣೆ ಮಾಡಬೇಕು ಎಂಬ ವಿಷಯಗಳನ್ನು ಈಗ ಮೂರು ದಿವಸಗಳಿಂದಲೂ ಚರ್ಚೆ ಮಾಡುತ್ತಾ ಇದ್ದೇವೆ. ನಾನು ಚುನಾಯಿತನಾಗಿ ಬಂದಿರುವ ಆನೆಕಲ್ಲು ತಾಲ್ಲೂಕಿನ ಬಹುಭಾಗ ಅಭಾವ ಪರಿಸ್ಥಿತಿಗೆ ಒಳಪಟ್ಟಿದೆ. ದನಕರುಗಳಿಗೆ ಮೇವು ಇಲ್ಲ. ಹುಲ್ಲು ಇಲ್ಲ, ಸಾಹುಕಾರರುಗಳೂ ಸಹ ತಮ್ಮ ದನಕರುಗಳನ್ನು ಬೇರೆ ಭಾಗಗಳಿಗೆ ಕಳುಹಿಸಿದ್ದಾರೆ. ಅಲ್ಲಿರತಕ್ಕ ದನಕರುಗಳನ್ನು ಕಾಪಾಡಿಕೊಳ್ಳುವುದಕ್ಕೆ,—ಅರಳೀಮರ, ಆಲದ ಮರ ಇಂತಹ ದೊಡ್ಡ ದೊಡ್ಡ ಅನೇಕ ಮರಗಳು ಬೋಳಾಗಿ ಹೋಗುತ್ತಾ ಇವೆ. ಸೊಪ್ಪಿಗಾಗಿ ಆ ಮರಗಳನ್ನೆಲ್ಲಾ ಕತ್ತರಿಸುತ್ತಾ ಇದ್ದಾರೆ. ಎಲ್ಲಿ ನೋಡಲಿ ಬೋಳು ಬೋಳು ಮರಗಳನ್ನು ಇವತ್ತು ಅಲ್ಲಿ ನೋಡುತ್ತಾ ಇದ್ದೇವೆ. ಇದಕ್ಕೆ ಬಹಳ ವ್ಯಸನ ಪಡಬೇಕಾಗಿದೆ. ದನಕರುಗಳಂತೂ ಬಹಳ ಬಡವಾಗಿ ಮೂಳೆಗಳನ್ನು ಬಿಟ್ಟುಕೊಂಡಿವೆ. ಇನ್ನು ಎಷ್ಟು ದಿವಸ ಈ ಪರಿಸ್ಥಿತಿ ಇರುತ್ತದೆಯೋ ಗೊತ್ತಿಲ್ಲ. ಹುಲ್ಲನ್ನು ಬೇರೆ ಕಡೆಯಿಂದ ತರಿಸಿ ಸಾಧ್ಯವಾದಷ್ಟು ಜಾಗ್ರತೆ ಅವುಗಳಿಗೆ ಹಂಚಬೇಕು ಎಂದು ಹೇಳುತ್ತೇನೆ.

ನಮ್ಮ ಪ್ರದೇಶದಲ್ಲಿ ನೀರಾವರಿ ಬಾವಿಗಳನ್ನು ಆಳಪಡಿಸಬೇಕೆಂದು ಹೇಳುತ್ತೇನೆ. ವ್ಯವಸಾಯದ ಇಲಾಖೆಯವರು ಪ್ರಾಯೋಗಿಕವಾಗಿ ಬ್ಲಾಸ್ಟ್ ಮಾಡತಕ್ಕ ಯಂತ್ರಗಳನ್ನು ಇಟ್ಟುಕೊಂಡು ಒಂದು ದಿವಸದಲ್ಲಿ 30 ಅಡಿ ಅಗಲದ ಬಾವಿಗಳನ್ನು 5 ಅಡಿ ಆಳವನ್ನು 500 ರೂಪಾಯಿಗಳ ಖರ್ಚಿನಲ್ಲಿ ಮಾಡುತ್ತಾ ಇದ್ದಾರೆ, ಈ ಪ್ರಯೋಗ ಬಹಳ ಫಲಪ್ರದವಾಗಿದೆ, ಈ ಒಂದು ಸೌಕರ್ಯವನ್ನು ಸಬ್ಸಿಡಿ ಮುಖಾಂತರ ವ್ಯವಸ್ಥೆ ಮಾಡಿಕೊಟ್ಟು ಬಾವಿಗಳನ್ನು ಆಳಪಡಿಸುವುದಕ್ಕೆ ಸಹಾಯ ಮಾಡಬೇಕೆಂದು ಸರ್ಕಾರದವರಿಗೆ ಸಲಹೆ ಮಾಡುತ್ತೇನೆ. ಆ ಯಂತ್ರಕ್ಕೆ ಸುಮಾರು 8 ಸಾವಿರ ರೂಪಾಯಿಗಳಾಗುತ್ತದೆ ಎಂದು ಹೇಳುತ್ತಾರೆ. ವ್ಯವಸಾಯದ ಇಲಾಖೆಯ ಇಂಜನಿಯರಿಂಗ್ ಡಿಪಾರ್ಟ್‌ಮೆಂಟಿನ ಶ್ರೀಮಾನ್ ತಿಮ್ಮಯ್ಯನವರು ಆ ಪ್ರಯೋಗ ಮಾಡುತ್ತಾ ಇದ್ದಾರೆ ಹಾಗೆ

(ಶ್ರೀ ಆರ್. ಮುನಿಸ್ವಾಮಯ್ಯ)

ಎಲ್ಲಾ ತಾಲ್ಲೂಕುಗಳಿಗೂ ತಾಲ್ಲೂಕಿಗೆ ಎರಡು ಯಂತ್ರಗಳನ್ನು ತರಿಸಿಕೊಡಬೇಕೆಂದು ಸಲಹೆ ಮಾಡುತ್ತೇನೆ.

ನಮ್ಮಲ್ಲಿ ಭರಣಿ, ಕೃತ್ತಿಕ, ರೋಹಿಣಿ ಮಳೆಗಳು, ಪುನರ್ವಸು, ಪುಷ್ಯ ಈ ಯಾವ ಮಳೆಗಳೂ ಬರಲಿಲ್ಲ, ಆರಿದ್ರಾ ಮಳೆ ಬಂದಾಗ ಜನ ಅಲ್ಪಸ್ವಲ್ಪ ಬಿತ್ತನೆ ಮಾಡಿದರು, ಅದೂ ಕೂಡ ಈಗ ಎಲ್ಲಾ ಒಣಗಿ ಹೋಗಿದೆ. ರೈತ ಕಂಗಾಲಾಗಿದ್ದಾನೆ.

7·00 P.M.

ಬೆಳೆ ಇದ್ದುದ್ದೂ ಕೂಡ ಕೆಟ್ಟುಹೋಗಿ ಬಹಳ ವ್ಯಸನವಾಗಿದೆ, ಪರಿಸ್ಥಿತಿ ಹೀಗಿದೆ. ಭರಣಿ ಮಳೆ ಬಿದ್ದರೆ ಧರಣಿಯು ಮೇಲೆ ಚೆನ್ನಾಗಿ ಬೆಳೆಯಾಗುತ್ತದೆಂದು ಹೇಳುತ್ತಾರೆ. ಆದರೆ ಆ ಮಾತು ಸುಳ್ಳಾಗುವ ಹಾಗೆ ಕಾಣುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ರೈತರಿಗೆ ಬೇಕಾದಷ್ಟು ಸಹಾಯ ಮಾಡಬೇಕು. ಆನೇಕಲ್ ತಾಲ್ಲೂಕಿನಲ್ಲಿ ಹಲವು ಸಣ್ಣ ಸಣ್ಣ ಹಳ್ಳಿಗಳಿವೆ, ಹೆಬ್ಬಳ್ಳ, ಮುತ್ಯಾಲಮಡುಗು ಹೊಳೆ, ಮುಂತಾದವು ಇವೆ. ಅವುಗಳಿಗೆ ಅಡ್ಡಕಟ್ಟೆ ಹಾಕಿದರೆ ಸುಮಾರು 4 ಸಾವಿರ ಎಕರೆ ನೀರಾವರಿಯಾಗುವುದು. ಅದಕ್ಕೆ ಸರ್ವೆಮಾಡಿ ಅಂದಾಜು ಮಾಡಿದ್ದಾರೆ, ಅದು ಸರಕಾರದ ಮಟ್ಟದಲ್ಲಿದೆ, ಜಾಗ್ರತೆ ಮಂಜೂರುಮಾಡಿ, ಈಗ ಕ್ಷಾಮ ಪರಿಸ್ಥಿತಿ ಇರುವುದರಿಂದ, ಬೇಗ ಕಾಮಗಾರಿಯನ್ನು ತೆಗೆದುಕೊಳ್ಳಬೇಕು. ಈ ತಾಲ್ಲೂಕಿನಲ್ಲಿ ಅನೇಕ ಕೆರೆಗಳಿಗೆ ಸಂಬಂಧಪಟ್ಟ ಕೆಲಸದ ಬಗ್ಗೆ ಅಂದಾಜಾಗಿದೆ, ಆ ಅಂದಾಜುಗಳು ಕೆಲವು ಎಗ್ಜಿಕ್ಯುಟಿವ್ ಎಂಜಿನಿಯರು, ಸೂಪರಿಂಟೆಂಡಿಂಗ್ ಎಂಜಿನಿಯರು, ಚೀಫ್ ಎಂಜಿನಿಯರು, ಸೆಕ್ರೆಟೇರಿಯಟ್ ಮುಂತಾದ ಆಫೀಸುಗಳಲ್ಲಿವೆ. ಅವನ್ನು ಜಾಗ್ರತೆ ಮಂಜೂರುಮಾಡಿ ಕೆಲಸ ಜಾಗ್ರತೆ ತೆಗೆದುಕೊಳ್ಳಬೇಕು. ಜನರಿಗೆ ಬೇಗ ಕೆಲಸ ಒದಗಿಸಬೇಕು, ಅವರು ಕಂಗೆಟ್ಟಿದ್ದಾರೆ. ಆಹಾರವಿಲ್ಲದೆ ಕಷ್ಟ ಸ್ಥಿತಿಯಲ್ಲಿದ್ದಾರೆ, ಅವರಿಗೆ ಪರಿಹಾರ ಕಾರ್ಯಗಳ ಮೂಲಕ ಸಹಾಯ ಮಾಡಬೇಕು, ಈ ತಾಲ್ಲೂಕಿನಲ್ಲಿ ಬಾವಿಗಳನ್ನು ಹೆಚ್ಚಾಗಿ ತೋಡಿಸಬೇಕು. ದೇವನಹಳ್ಳಿ, ಶಿಡ್ಲಘಟ್ಟ ಮುಂತಾದ ಕಡೆ ಬಾವಿಗಳನ್ನು ತೋಡಿದ್ದಾರೆ, ದೊಡ್ಡಬಳ್ಳಾಪುರ, ಆನೇಕಲ್, ನೆಲಮಂಗಲ ತಾಲ್ಲೂಕುಗಳಲ್ಲಿ ಹೆಚ್ಚು ಬಾವಿಗಳನ್ನು ತೋಡಿಲ್ಲ, ಈಗ ತೋಡುತ್ತಿದ್ದಾರೆ. ಆದರೆ ಮೊದಲು ಅದಕ್ಕೆ 3 ಸಾವಿರ ರೂಪಾಯಿಗಳನ್ನು ಸಾಲವಾಗಿ ಕೊಡುತ್ತಿದ್ದರು, ಈಗ 5 ಸಾವಿರ ರೂಪಾಯಿಗೆ ಅದನ್ನು ಹೆಚ್ಚಿಸಿದ್ದಾರೆ. ಅದೂ ಸಾಲದು, ಈಗ 7ರಿಂದ 10 ಸಾವಿರ ರೂಪಾಯಿಗಳವರೆಗೆ ಒಂದು ಬಾವಿಗೆ ವೆಚ್ಚವಾಗುತ್ತಿದೆ. ಆದುದರಿಂದ ಕನಿಷ್ಠ ಪಕ್ಷ ಒಂದು ಬಾವಿಗೆ 8 ಸಾವಿರ ರೂಪಾಯಿ ಸಾಲವನ್ನಾದರೂ ಕೊಡಬೇಕು. ರೈತರು ಬಾವಿ ತೆಗೆದು ನೀರಾವರಿ ವ್ಯವಸಾಯ ಮಾಡಲು ಪ್ರೋತ್ಸಾಹ ಕೊಡಬೇಕು. ಪಂಜಾಬು ಮುಂತಾದ ಕಡೆ ಟ್ಯೂಬ್ ವೆಲ್ಸ್ ತೆಗೆಯುತ್ತಿದ್ದಾರೆ, ಆ ಪದ್ಧತಿಯನ್ನು ಇಲ್ಲೂ ಜಾರಿಗೆತರಬೇಕು. ಬೋರ್‌ವೆಲ್‌ಗಿಂತ ಟ್ಯೂಬ್‌ವೆಲ್ ಒಳ್ಳೆಯದು. ಒಂದೊಂದು ಬಾವಿಯಿಂದ 500-600 ಎಕರೆ ನೀರಾವರಿಯಾಗುವುದು.

ವಿದ್ಯುಚ್ಛಕ್ತಿ ಇಲಾಖೆಯವರು ಕಂಬವಿಲ್ಲ, ತಂತಿಯಿಲ್ಲ, ಟ್ರಾನ್ಸ್‌ಫಾರ್ಮರ್ ಇಲ್ಲ. ಹಣವಿಲ್ಲ ಎಂದು ಹೇಳುತ್ತಾರೆ, ಇದನ್ನು ಗಮನಿಸಬೇಕು, ಈ ಸಾಮಾನುಗಳು ದೊರೆಯುವಂತೆ ಮಾಡುವುದು ಮಂತ್ರಿಮಂಡಲಕ್ಕೆ ಸೇರಿದ ಜವಾಬ್ದಾರಿ. ಈಗಿರುವ 28 ಮಂತ್ರಿಗಳೂ ಕೂಡ ವಿದ್ಯುಚ್ಛಕ್ತಿ ಇಲಾಖೆ ಅಧಿಕಾರಿಗಳ ಮೇಲೆ ಕುಳಿತು 20 ದಿವಸಗಳಲ್ಲಿ ಎಷ್ಟು ಬಾವಿಗಳಿವೆಯೋ ಅಷ್ಟಕ್ಕೂ ಪಂಪುಸೆಟ್ಟು, ತಂತಿ, ಕಂಬ ಮುಂತಾದ್ದನ್ನು ಒದಗಿಸಿ ನಂತರ ನಿದ್ರೆಮಾಡಬೇಕು ಎಂದು ಈ ಸಂದರ್ಭದಲ್ಲಿ ಎಚ್ಚರಿಕೆ ಕೊಡುತ್ತೇನೆ. ಇಷ್ಟನ್ನೂ ತುರ್ತು ಪರಿಸ್ಥಿತಿಯಲ್ಲಿ ಮಾಡಬೇಕು.

ಇದಲ್ಲದೆ ಖಾಯಮಾಗಿ ಕ್ಷಾಮ ಪರಿಹಾರ ಮಾಡಲು ಸೂಕ್ತಕ್ರಮ ಕೈಕೊಳ್ಳಬೇಕು. ಇದಕ್ಕಾಗಿ ಗಂಗಾ ನದಿಯಿಂದ ಬೆಂಗಳೂರಿಗೆ ನೀರನ್ನು ತರಲು ಕೇಂದ್ರ ಸರಕಾರದ ಮುಂದೆ ಯೋಜನೆಯನ್ನು ಇಡಬೇಕು. ಈಗ ಮೈಸೂರಿನ ಹತ್ತಿರದಿಂದ ಕಾವೇರಿ ನೀರನ್ನು ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. 3 ಸಾವಿರ ಅಡಿ ಎತ್ತರದಲ್ಲಿರುವುದರಿಂದ ಗಂಗಾನದಿಯಿಂದ ನೀರನ್ನು ತರಲು ಸಾಧ್ಯವಿದೆ. ಗಂಗಾನದಿಯಿಂದ ನೀರನ್ನು ಭಾರತಕ್ಕೆಲ್ಲಾ ಒದಗಿಸಬಹುದು. ಬೇಸಿಗೆಯಲ್ಲಿ ಮಂಜು ಕರಗಿ ನೀರೊದಗುವುದು, ಮಳೆಗಾಲದಲ್ಲಿ ಪ್ರವಾಹ ಬರುವುದು. ನಾನು ಹೇಳಿದಂತೆ ಮಾಡಿದರೆ ಪ್ರವಾಹದ ಹಾವಳಿಯನ್ನೂ ತಪ್ಪಿಸಬಹುದು. ಇದರ ಸಂಬಂಧದಲ್ಲಿ ಕೇಂದ್ರ ಸರಕಾರದೊಡನೆ ವ್ಯವಹರಿಸಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†Sri P. B. NANDIHALI (Aland).—Mr. Speaker, Sir, at the time of the discussion of this serious problem I want to bring to the kind notice of this House some difficulties of my constituency and of the

Marathi part of Belgaum District which is purposely neglected for many years. This is not the first year when we are facing difficulties of famine. Even during the last two years the same conditions were prevailing and I have been appealing to the Government for the last two years to sympathetically consider the conditions of this part of Belgaum District. I am sorry to say that Government have not taken any action at all. I am also very sorry to bring to the notice of Government and of this House that some of the officers there are also purposely neglecting this area, especially the Marathi area of Belgaum District. I suspect that the officers are instructed by this Government—and I make this charge against the Government—to behave accordingly to treat the Marathi people on political considerations. In the western part of Belgaum Taluk we are facing these difficulties for the last two years. This year I cannot imagine the miserable condition of my people there. Crops which were flourishing up to August are withering now there and they are drying. The farmers are crying and thereby the poor people are bound to die without food. For the last few months they have not been able to get any food. The condition of the landless labourers there is very miserable. I cannot imagine how they will survive this year. So I very earnestly request the Government not to further neglect this area. This area of Belgaum taluk and Khanapur taluk must be included in the scarcity areas and all the facilities must be given to the people.

As regards relief measures, I would suggest to the Government that all the tanks which are silted up now in my taluk must be desilted immediately and the control of these tanks must be given not to the P.W.D. but to all the Gram Panchayats so that the members of the Gram Panchayats concerned will take care of these tanks. The proper distribution of the water will be made by the panchayats. I have been suggesting for the last many months so many irrigation schemes in my taluk. I had given a list of such irrigation schemes to the present Chief Minister who was the Minister for Public Works then and he had also promised to do the needful, but that promise seems to have vanished in the thin air and no action has been taken up to now. I request the Government that the present time should be considered as an emergency and useful schemes which I had suggested to the Government in the western part of Belgaum Taluk should be taken up for execution immediately.

If we want to improve the condition of the agriculturists we must have roads in all the villages. In most of the villages there are no roads at present. There are some villages like Dhamman where there are no roads up to three miles round about and they are like Andaman Islands. The farmers there cannot bring the harvest from their fields to the market. I therefore suggest that these roads are a great necessity in such villages.

In these days in some parts it is very difficult to get drinking water and so water supply schemes must be taken up on a priority basis.

(SRI P. B. NANDIHALI)

About rationing, I have been requesting the Government to introduce it off and on but it is neglected. At least this year landless labourers in the villages must be supplied rationed articles and thus the problem of food must be solved.

There is much criticism about Government officials. The same experience is there in Belgaum also. My friend suggested that the corrupt officers must be hanged. Today what happens is that these officers are transferred by way of punishment. But I do not think that by this punishment there will be improvement. On the other hand, the transfer will be a better field for them to graze. The Hon'ble the Chief Minister is also one with us and he has said that the officials in some cases have failed to act with imagination and are slow. I am very sorry to see that not a single officer is punished for misbehaviour. There are so many young Ministers now. They must see very carefully all the grievances of the people and the misbehaviour of the officials and they must take some action so that the whole machinery will improve in good time. With these remarks I thank the Chair.

† ಶ್ರೀ ಕೆ. ಪ್ರಭಾಕರ್ (ವರ್ತೂರು).—ಮಾನ್ಯ ಅಧ್ಯಕ್ಷರೇ, ಎರಡು ಮೂರು ದಿವಸಗಳಿಂದಲೂ ವಿಪುಲವಾದ ಚರ್ಚೆ ದೇಶದ ಕ್ಷಾಮ ದೇವತೆಯನ್ನು ಕುರಿತು ಆಗಿದೆ. ಸರ್ಕಾರದವರು ಸಾಕಷ್ಟು ಕೆಲಸವನ್ನು ಮಾಡಿದ್ದಾರೆ ಎನ್ನುವ ಕಾಲ ಬಂದಿತ್ತು. ಆದರೆ ಬರಗಾಲ ವಿಪುಲವಾದ ರೂಪವನ್ನು ತಾಳಿದ್ದರಿಂದ ಸರ್ಕಾರದ ಶಕ್ತಿಗೂ ಮತ್ತು ಆ ಉಗ್ರ ದೇವತೆಯು ಪೀಠಕ್ಕೂ ಹೋರಾಟ ನಡೆದು ನನ್ನನ್ನು ಯಾರು ಬಗ್ಗಿಸುವವರು ಎನ್ನುವ ರೀತಿಯಲ್ಲಿ ಕ್ಷಾಮ ದೇವತೆ ದೇಶವಲ್ಲ ಕಾಡುತ್ತಿದೆ. ಮೊದಲೇ ಎಂದರೆ 1968ನೇ ಜನವರಿ ತಿಂಗಳಿನಲ್ಲಿ ನಮ್ಮ ಶಕ್ತಿಯನ್ನು ಕುಂದಿಸುವ ಹಾಗೆ ಚಾಲೆಂಜ್ ನಡೆಯುತ್ತಿದೆ ಎಂದು ಹಿಂದೆ ಇದ್ದ ಮಾನ್ಯ ಮುಖ್ಯ ಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಸಹಾಯ ಬೇಕು ಎಂದು ಕೋರಿದ್ದಾರೆ. ಆದರೆ ಸಾಕಷ್ಟು ಸಹಾಯವನ್ನು ಕೇಂದ್ರ ಸರ್ಕಾರದವರು ಮೈಸೂರು ದೇಶಕ್ಕೆ ಇದುವರೆಗೂ ಕೊಟ್ಟಿಲ್ಲ. ಎಷ್ಟೋ ವಿಚಾರಗಳಲ್ಲಿ ಮೈಸೂರು ಸರ್ಕಾರದವರು ಕೇಂದ್ರವನ್ನು ಕೇಳುತ್ತಾರೆ. ಆದರೆ ಅವರು ಸಾಕಷ್ಟು ಸಹಾಯ ಕೊಡುವುದಿಲ್ಲ ಮತ್ತು ಸಕಾಲದಲ್ಲಿಯೂ ಕೊಡುವುದಿಲ್ಲ. ಒಂದು ರೂಪದಲ್ಲಿ ದುರ್ದೈವ ಎನ್ನುವುದು ವೀಕ್‌ನೆಸ್ ಎಂದಾಗುತ್ತದೆ. ಕೇಂದ್ರದವರು ಅಷ್ಟು ಚೆನ್ನಾಗಿ ಮೈಸೂರನ್ನು ನೋಡಿಕೊಳ್ಳುವುದಿಲ್ಲವೇನೋ ಎಂದು ಯಾರು ಬೇಕಾದರೂ ಅಂದುಕೊಳ್ಳತಕ್ಕ ವಿಚಾರ.

ಕ್ಷಾಮದ ವಿಚಾರವನ್ನು ಈ ಸಭೆಯ ಮುಂದೆ ಮಾನ್ಯ ಮುಖ್ಯ ಮಂತ್ರಿಗಳು ಇಷ್ಟು ಜನಮನವನ್ನು ತಿಳಿದುಕೊಳ್ಳುವುದಕ್ಕೆ ಒಂದು ಅವಕಾಶವನ್ನು ಕಲ್ಪಿಸಿದ್ದಾರೆ. ಇದು ಒಳ್ಳೆಯ ಸಮಾಚಾರ. ಎಲ್ಲರೂ ಹೇಳಿದರೂ ಕೂಡ ಅದರಲ್ಲಿರುವುದೇ ಮೂರು ವಿಷಯ, ಇನ್ನೂ ಎಷ್ಟು ಮಾತು ಎಂದು ಬೇಜಾರುಪಟ್ಟುಕೊಳ್ಳುವ ಹಾಗೆ. ಕ್ಷಾಮದ ವಿಚಾರದಲ್ಲಿ ಸರ್ಕಾರ ಕೈಗೊಂಡಿರತಕ್ಕ ಕಾರ್ಯವನ್ನು ನಾವು ಕಂಡುಕೊಂಡಿದ್ದೇವೆ. ಆದರೆ ಸರ್ಕಾರದ ಮಟ್ಟದಲ್ಲಿ, ಸೆಕ್ರೆಟೇರಿಯಟ್ ಮಟ್ಟದಲ್ಲಿ, ಜನತೆಗೆ ನಾವು ಏನೇನು ಮಾಡಿದ್ದೇವೆ ಎಂದು ಸರ್ಕಾರದವರು ಹೇಳುತ್ತಾರೆ. ಆ ಮಟ್ಟಿಗೆ ಜನಗಳಿಗೆ ಆ ಸಹಾಯ ತಲುಪಿಲ್ಲ. ತಮ್ಮ ಆಜ್ಞೆಯೇನೋ ಇದೆ. ಅಧಿಕಾರ ವರ್ಗದಲ್ಲಿ ಡಿಟರ್ಮಿನೇಷನ್ ಡಿವೋಷನ್ ಇವೆಲ್ಲ ಕಡಮೆ. ಇನ್ನೂ ಹೆಚ್ಚಿನ ಸೇವಾದೃಷ್ಟಿಯಿಂದ ಕೆಲಸ ಮಾಡಬೇಕಾಗಿತ್ತು ಎಂದು ಮಾನ್ಯ ಮುಖ್ಯ ಮಂತ್ರಿಗಳು ಕೂಡ ಹೇಳಿದ್ದಾರೆ. ಈ ಪರಿಸ್ಥಿತಿಯನ್ನು ಉತ್ತಮಪಡಿಸಬೇಕಾಗಿದ್ದರೆ ಡೆಮಾಕ್ರಸಿ ಎನ್ನುವುದೇ ಒಂದು ಸ್ಪಿರಿಟ್‌ನಿಂದ ನಡೆಯತಕ್ಕ ಯಂತ್ರ. ಅದರಲ್ಲಿ ಡಿಟರ್ಮಿನೇಷನ್ ಇರಬೇಕು, ಡೆಡಿಕೇಟೆಡ್ ಎಫರ್ಟ್ಸ್ ಇರಬೇಕು ಎಂದು ಹೇಳಿಕೊಳ್ಳುತ್ತ ಅಸಡ್ಡೆ ಮನೋಭಾವ, ಬ್ಯೂರೋಕ್ರಾಟಿಕ್ ಮನೋಭಾವವಿರತಕ್ಕ ಅಧಿಕಾರಿಗಳು, ನಮ್ಮ ಯೋಜನೆಗಳನ್ನು ಸಫಲ ಮಾಡುವುದರಲ್ಲಿ ಅಸಡ್ಡೆಯನ್ನು ಯಾರು ತೋರಿಸುತ್ತಾರೆ ಅವರಿಗೆ ಎಕ್ಸೆಂಪ್ಲರಿ ಪನಿಷ್‌ಮೆಂಟ್ ಕೊಡುತ್ತೇನೆ ಎಂದೂ ಹೇಳಿದ್ದಾರೆ. ಇದು ಮೆಚ್ಚತಕ್ಕ ಮಾತೇ. ಆದರೆ ಈ ರೀತಿ ತಪ್ಪು ಮಾಡುವವರನ್ನು ಕಂಡು ಹಿಡಿಯುವವರು ಯಾರು ? ಯಾರ ಮಾತಿನಮೇಲೆ ಅವರಿಗೆ ಶಿಕ್ಷೆ ಕೊಡುತ್ತೀರಿ, ಹೇಗೆ ಕೊಡುತ್ತೀರಿ ಎನ್ನುವುದು ನಾವುಗಳು ನೋಡಬೇಕಾದ ವಿಚಾರ.

ಒಂದು ಸಂತೋಷದ ವಿಚಾರವೆಂದರೆ ಹಿಂದೆ ಯಾವಾಗಲೋ ನಮ್ಮ ಡೆಲಿಬರೇಷನ್ಸ್‌ನಲ್ಲಿ ಎನ್. ಡಿ. ಎಫ್. ವಸೂಲಿ ಸಂಬಂಧದಲ್ಲಿ ಚೀಣಾ ದೇಶದವರು ಚಾಲೆಂಜ್ ಮಾಡಿದಾಗ, ಪಾಕಿಸ್ಥಾನದವರು ಆಕ್ರಮಣ ಮಾಡಿದಾಗ, ಹುಡುಕಿದರೂ ಈ ಮಾತು ಸಿಕ್ಕುವುದಿಲ್ಲವೇನೋ ಎಂದೆನ್ನಿಸುತ್ತದೆ. The entire Government machinery with determination, dedication and with a spirit of service will be directed towards the solving of this problem.

ಎಂಥ ಮಾತು, ಹಿಂದೆ ಯಾವೊತ್ತಿಗೂ ಕೂಡ ಇಡೀ ಸರ್ಕಾರದ ಯಂತ್ರವನ್ನೇ ತಿರುಗಿಸುವ ಸಂದರ್ಭ ಬಂದಿದ್ದರೂ ಕೂಡ ಈ ಸ್ಪಿರಿಟ್‌ನಿಂದ ಹೇಳಿರಲಾರರೋ ಏನೋ ಎಂದು ನಾವು ಸಂತೋಷ ಪಟ್ಟುಕೊಳ್ಳಬೇಕಾಗಿದೆ. ಅದನ್ನು ಯಾವ ರೀತಿ ಮಾಡುತ್ತಾರೆ, ಯಾವ ರೀತಿ ಮಾಡಿ ತೋರಿಸುತ್ತಾರೆ ಎಂದು ನಾವು ನೋಡಬೇಕಾಗಿದೆ.

ರೆಡ್ ಟೇಪಿಸಂ ಅನ್ನು ಅಳಿಸಿಹಾಕುವುದಕ್ಕಾಗುವುದಿಲ್ಲವೇನೋ. It should be cut to the minimum ಎಂದು ಹೇಳುತ್ತಾರೆ. ಹಿಂದೆ ಇದ್ದ ಮಾನ್ಯ ಮುಖ್ಯ ಮಂತ್ರಿಗಳು ಲಂಚವನ್ನು ನಿರ್ಮೂಲ ಮಾಡುವುದಕ್ಕೆ ಗಣೇಶನಿಂದಲೂ ಸಾಧ್ಯವಾಗಿಲ್ಲ ಎನ್ನುವ ಮಾತನ್ನು ಹೇಳಿದರು. ತಪ್ಪು ಮಾಡುವವರಿಗೆ ಶಿಕ್ಷೆ ಕೊಡುವುದಕ್ಕೆ ಮನಸ್ಸಿಲ್ಲ ಎಂದು ಹೇಳುತ್ತಿದ್ದ ಕಾಲವಿತ್ತು. ಆದರೆ ಈಗ ಮಾನ್ಯ ಮುಖ್ಯ ಮಂತ್ರಿಗಳು ಹೇಳಿರುವುದನ್ನು ನೋಡಿದರೆ ಅದು ಯಾರಾದರೂ ಮೆಚ್ಚತಕ್ಕ ಮಾತೇ. ತಪ್ಪು ಮಾಡಿದವರು ಸಿಕ್ಕಿದರೆ ಉಗ್ರ ಶಿಕ್ಷೆ ಕೊಡುತ್ತೇವೆಂದು ಒಳ್ಳೆಯ ಸಮಯದಲ್ಲಿ ಹೇಳಿದ್ದಾರೆ. ಬರಗಾಲದಲ್ಲಿ ಆಗುವ ಕಾಮಗಾರಿಗಳಲ್ಲಿ, ಸರ್ಕಾರದ ಎಲ್ಲ ಕಾರ್ಯಕಲಾಪದಲ್ಲಿ ಸೇವೆಯೇ ಗುರಿಯಾಗಿದೆ to protect the weaker, to protect the humble, to protect women ಎಂದು ಹೇಳಿಕೊಳ್ಳುವಾಗ ಮಕ್ಕಳಿಗೆ ಮುದುಕರಿಗೆ ವಲ್ನರಬಲ್ ಸೆಕ್ಷನ್ಸ್ ಯಾರಿದ್ದಾರೆ ಅವರಿಗೆ ರಕ್ಷಣೆಯನ್ನು ಕೊಡುವುದಕ್ಕಾಗುವುದಿಲ್ಲವೆಂದರೆ ಆಡಳಿತ ಯಂತ್ರದ ನಿರ್ವಹಣೆಯಲ್ಲಿ ಎಲ್ಲಿಯೋ ತೊಂದರೆ ಇದೆ ಎಂದು ಹೇಳಬಹುದು. ಅದನ್ನು ಅವರೂ ಒಪ್ಪಿಕೊಂಡಿದ್ದಾರೆ. ನಿಜವಾಗಿ ಯಾರಿಗೆ ಒಂದು ತುತ್ತು ಆಹಾರ ಸಿಕ್ಕಬೇಕೋ ಅದು ಸಿಕ್ಕುತ್ತಿಲ್ಲ. ಸರ್ಕಾರ ನಡೆಸುತ್ತಿರುವ ಆಹಾರದ ಖಾತೆಯ ಮಂತ್ರಿಗಳು ಆ ಮಾತನ್ನು ಒಪ್ಪುವುದಕ್ಕಾಗುವುದಿಲ್ಲ ಎಂದು ಸತ್ಕಾಲವಾಗಿ ಹೇಳಿದರೂ ಕೂಡ ನಮ್ಮ ದೇಶದ ವಾತಾವರಣದಲ್ಲಿ ಬಡವರಿಗೆ ಸಿಕ್ಕುವ ಸಹಾಯ ಸಾಕಷ್ಟಿಲ್ಲ ಎಂದು ಆತ್ಮ ಮುಟ್ಟಿ ಹೇಳುತ್ತೇನೆ. ಸರ್ಕಾರದ ಗುರಿ ನೆರವೇರುವುದರಲ್ಲಿ ಹೆಚ್ಚು ನಿಗಾ ಕೊಟ್ಟು ಅವುಗಳನ್ನು ಸರಿಮಾಡಬೇಕು.

ಕ್ಷಾಮದ ವಿಚಾರ ಇವೊತ್ತು ಬಂತು, ನಾಳೆ ಹೋಯಿತು ಎಂದು ಬಿಡುವುದಕ್ಕಾಗುವುದಿಲ್ಲ. ಪಾಂಡವರ ಕಾಲದಲ್ಲಿ, ಶ್ರೀರಾಮನ ಕಾಲದಲ್ಲಿ ಕೂಡ ಇತ್ತೋ ಏನೋ. ಕ್ಷಾಮ ಎನ್ನತಕ್ಕದು ಯಾವತ್ತಿಗೂ ಇತ್ತು ಎಂದು ಹೇಳಬಹುದು ಮಧುಗಿರಿ, ಪಾವಗಡ, ನಾಗಮಂಗಲ ಹೀಗೆ ಒಂದು ಬೆಲ್ಟ್ ಏನಿದೆ ಅದು ಪದೇ ಪದೇ ಕ್ಷಾಮಕ್ಕೆ ಈಡಾಗತಕ್ಕ ಪ್ರದೇಶ. ಅಲ್ಲಿನ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಪ್ರಯತ್ನಮಾಡಿ ಎಂದರೆ ಅದಕ್ಕೆ ಶಾಶ್ವತವಾದ ಯೋಜನೆಯೊಂದನ್ನೂ ಹಾಕಿಲ್ಲ. ಇದಕ್ಕಾಗಿಯೇ ಬ್ರಿಟಿಷರು ಫ್ಯಾಮಿನ್ ಕೋಡ್ ಎಂದು ಬರೆದರು. ಅದರ ಆಶ್ರಯದಲ್ಲಿ ಕ್ಷಾಮ ಎಂದು ಪರಿಗಣಿಸಿ ಆ ನಂತರ ಅದರ ಪರಿಹಾರ ಕಾರ್ಯಗಳನ್ನು ಕೈಗೊಳ್ಳಬೇಕಾಗಿದೆ. ಅದರಲ್ಲಿ ಕುಡಿಯುವುದಕ್ಕೆ ನೀರಿಲ್ಲದೆ, ತಿನ್ನುವುದಕ್ಕೆ ಆಹಾರವಿಲ್ಲದೆ, ಜನ ನಗ್ನರಾಗಿ ಓಡಾಡಬೇಕು ಎಂದು ಏನೇನೋ ಇರುವಂಥ ಫ್ಯಾಮಿನ್ ಕೋಡನ್ನು ನಮ್ಮ ಸರ್ಕಾರದವರೂ ಅನುಸರಿಸುತ್ತಿದ್ದಾರೆ. ಇದು ಸರಿಯಲ್ಲ. ಕ್ಷಾಮ ಪರಿಹಾರ ಕಾರ್ಯಗಳನ್ನು ನಿರ್ವಹಿಸಲು ಒಂದು ಕಮಿಷನ್ ನೇಮಕ ಮಾಡಬೇಕು, ಅದರ ಕೈಕೆಳಗೆ ಕೆಲಸ ಮಾಡತಕ್ಕ ಅಧಿಕಾರಿಗಳು ಎಲ್ಲ ಕಡೆಯೂ ಶಾಶ್ವತವಾದ ಯೋಜನೆಗಳನ್ನು ತೆಗೆದುಕೊಳ್ಳಬೇಕು.

3 ಮತ್ತು 4ನೇ ಪಂಚವಾರ್ಷಿಕ ಯೋಜನೆಗಳು ಎಷ್ಟೇ ಆಗಿದ್ದರೂ ಕೂಡ ನಮಗೆ ಕೇಂದ್ರದ ಸಹಾಯ ಸಾಕಷ್ಟು ದೊರೆಯಲಿಲ್ಲ ಎಂದು ಹೇಳುತ್ತೇನೆ. ಇದರ ಬಗ್ಗೆ ಮುಖ್ಯ ಮಂತ್ರಿಗಳು ಡೆಲ್ಲಿಯಲ್ಲಿ ಪ್ರಯತ್ನ ಮಾಡಿ ಜಾಸ್ತಿ ಫಂಡ್ ತರಬೇಕು. ಅದಕ್ಕಾಗಿ ಅವರಿಗೆ ನಾವು ಬೆಂಬಲ ಕೊಡಬೇಕು. ಬರಗಾಲ ಸಮಿತಿ ಎಂದು ಒಂದು ಕಮಿಟಿ ಮಾಡಿ, ಸ್ಟೇಟ್ ಲೆವಲ್‌ನಲ್ಲಿ ಒಂದು ಕ್ಯಾಬಿನೆಟ್ ಸಬ್ ಕಮಿಟಿ ಮಾಡಿ, ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಒಂದು ಕಮಿಟಿ ಮಾಡಬೇಕು. ಈಗ ಇರುವ ಕಮಿಟಿಗಳಲ್ಲಿ ಅಷ್ಟೊಂದು ಕೋ ಆರ್ಡಿನೇಷನ್ ಸಾಲದು. ನಾವು ಎಷ್ಟರಮಟ್ಟಿಗೆ ನಿರೀಕ್ಷಣೆ ಮಾಡಿದ್ದೆವೋ ಅಷ್ಟರಮಟ್ಟಿಗೆ ಅವುಗಳಲ್ಲಿ ಕೋ ಆರ್ಡಿನೇಷನ್ ಕಂಡು ಬರುತ್ತಾ ಇಲ್ಲ. ದನಕರುಗಳಿಗೆ ನೀರು ಸಿಕ್ಕುವುದಿಲ್ಲ. ಅಂತಹ ಕಡೆ ಶಾಶ್ವತವಾದ ಒಂದು ವಾಟರ್ ಸೋರ್ಸ್ ಇರುವ ಹಾಗೆ ಮಾಡಬೇಕು. ಸೋರ್ಸ್ ಎಲ್ಲೆಲ್ಲಿದೆ ಎನ್ನುವುದನ್ನು ಒಂದು

(ಶ್ರೀ ಕೆ. ಪ್ರಭಾಕರ್)

ಲಿಸ್ಟ್ ಮಾಡಬೇಕು. ತಾಲ್ಲೂಕು ಕಮಿಟಿಯಲ್ಲಿ ಇಂತಹ ಲಿಸ್ಟ್ ಯಾವುದೂ ಮಾಡಿಲ್ಲ. ಆದುದರಿಂದ ಒಂದು ಲಿಸ್ಟನ್ನು ತಯಾರು ಮಾಡಬೇಕು. ಇದಕ್ಕೆ ಸರ್ಕಾರದವರ ಕೋ ಆಪರೇಷನ್ ಬೇಕು. ಪ್ರತಿ ದಿವಸವೂ ಕೂಲಿಗಾರರಿಗೆ ಕೂಲಿ ಕೊಡುವ ಬದಲಾಗಿ ಒಂದಷ್ಟು ದವಸ ಕೊಡುವಂತೆ ಮಾಡಬೇಕು. ಕೂಲಿ ಒಂದು ಕಡೆ ಕೊಟ್ಟರೆ, ಧಾನ್ಯ ಎಲ್ಲೋ ಒಂದು ಕಡೆ ತೆಗೆದುಕೊಳ್ಳುತ್ತಾರೆ. ಆದುದರಿಂದ ಕೂಲಿ ಎಲ್ಲಿ ಸಿಕ್ಕುತ್ತದೋ ಅಲ್ಲೇ ಧಾನ್ಯ ಸಿಕ್ಕುವಂತೆ ಏರ್ಪಾಡು ಮಾಡಬೇಕು. ಇದಕ್ಕಾಗಿ ಇಟ್ಟಿರುವ ಹಣವನ್ನು ಸರಿಯಾದ ರೀತಿಯಲ್ಲಿ ಖರ್ಚುಮಾಡಬೇಕು. ರಿಲೀಫ್ ಕಾಮಗಾರಿ ಕೆಲಸಕ್ಕೆ ಕೊಟ್ಟಿರುವ ಹಣ ಸಕಾಲದಲ್ಲಿ ಖರ್ಚಾಗುವಂತೆ ಮಾಡಬೇಕು. ಮೇಲಧಿಕಾರಿಗಳನ್ನು ಕೇಳಿದರೆ ಮಾಮೂಲಿ ಉತ್ತರ ಹೇಳುತ್ತಾರೆ. ಅಧಿಕಾರಿಗಳು ಲಂಚಕೋರರು ಬಹಳ ಮಟ್ಟಿಗೆ ಇದ್ದಾರೆ. ಇಲ್ಲಿ ಲಂಚಕ್ಕೆ ಅವಕಾಶ ಇಲ್ಲದಂತೆ ನೋಡಿಕೊಳ್ಳಬೇಕು. ಇಲ್ಲವೇ ಹೋದರೆ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುವುದಿಲ್ಲ, ದೇಶದ ಒಳಗೂ ಹೊರಗೂ ಒಳ್ಳೆಯ ಹೆಸರು ಬರುವುದಿಲ್ಲ. ಹಾಗೇನಾದರೂ ತಪ್ಪು ಮಾಡಿದರೆ ಅಂತಹವರಿಗೆ ಶಿಕ್ಷೆ ಮಾಡಬೇಕು. ಹಿಂದೆ ಬಂಬುರೆಡ್ಡಿಯವರು ಇವತ್ತಿಗ ಸಾರ್ವಜನಿಕರ ದೃಷ್ಟಿಯಲ್ಲಿ ಅವರು ತಪ್ಪು ಮಾಡಿದ್ದಾರೆ ಎಂದು ಕಂಡುಬಂದುದರಿಂದ ಅವರನ್ನು ಮನೆಗೆ ಕಳುಹಿಸಲಾಯಿತು. ಅದೇ ತರಹ ತಪ್ಪು ಮಾಡಿದವರೆಲ್ಲರಿಗೂ ಶಿಕ್ಷೆ ಆಗಬೇಕು. ರಿಲೀಫ್ ವರ್ಕ್ಸ್‌ಗೆ ಕೇಂದ್ರ ಸರ್ಕಾರದವರನ್ನು 8 ಕೋಟಿ ರೂಪಾಯಿ ಕೇಳಿದ್ದರಲ್ಲಿ 2½ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅವರಲ್ಲೂ ಹೆಚ್ಚಿಗೆ ಖರ್ಚಾಗಿಲ್ಲ ಎಂದು ಹೇಳಿದ್ದಾರೆ. ಒಂದು ಕಾಮನ್‌ವೆಲ್‌ಗೆ 5 ಸಾವಿರ ರೂಪಾಯಿ ಸಾಲ ಕೊಡಬೇಕು ಎನ್ನುವ ಲಿಮಿಟ್ ಇಟ್ಟುಕೊಂಡಿದ್ದಾರೆ. ಆ ಬಾವಿಯಲ್ಲಿ ನೀರು ಬಂದರೆ ಬೆನಿಫಿಷಿಯರಿ ಯಾರು ಇರುತ್ತಾರೋ ಅವರು ಕೊಡುತ್ತಾರೆ. ಅದರಲ್ಲಿ ನೀರು ಬರದೇ ಹೋದರೆ ಅದರ ಖರ್ಚನ್ನು ಸರ್ಕಾರದವರು ವಹಿಸಿಕೊಳ್ಳಬೇಕು. ಇದಕ್ಕೆ 64ನೇ ಫ್ಯಾಮಿನ್‌ನಿಂದ ದುಡ್ಡು ಒದಗಿಸಿ ಕೊಡಬೇಕು. ಯಾವ ಜಿಲ್ಲೆಯ ಡೆಪ್ಯೂಟಿ ಕಮೀಷನರೂ ಇಂತಹ ಕಾಮನ್‌ವೆಲ್ ಮಾಡಿಲ್ಲ. ಯಾರು ಮಾಡಿದ್ದಾರೆ ಎಂಬುದನ್ನು ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವಾಗ ತಿಳಿಸಬೇಕು. ಇದರ ಬಗ್ಗೆ ಸರ್ಕಾರದವರು ಕೂಲಂಕಷವಾಗಿ ತಿಳಿದು ಯೋಚನೆ ಮಾಡಬೇಕು. ಡೆಪ್ಯೂಟಿ ಕಮೀಷನರು ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಏನು ಮಾಡುತ್ತಾರೋ ಗೊತ್ತಿಲ್ಲ. ಇದನ್ನು ಸರಿಪಡಿಸಬೇಕು.

ಇನ್ನು ಫ್ಯಾಮಿನ್ ರಿಲೀಫ್ ಫಂಡ್‌ನಿಂದ ಯಾರಿಗೆ ಪ್ರಯೋಜನ ದೊರಕಬೇಕೋ ಅವರಿಗೆ ಸರಿಯಾಗಿ ದೊರಕುತ್ತಾ ಇಲ್ಲ. ಆದುದರಿಂದ ಕ್ಯಾಂಪ್ಸ್‌ಗಳನ್ನು ಸ್ಥಾಪನೆ ಮಾಡಬೇಕು. ಸ್ಕೇರ್ಸಿಟಿ ವರ್ಕ್ಸ್ ಇರುವ ಕಡೆ ದುಡ್ಡು ಕೊಡುವ ಬದಲು ದವಸವನ್ನು ಹಂಚಬೇಕು. ಜನರ ಪ್ರತಿನಿಧಿಗಳಾದ ನಾವೂ ಕೂಡ ಅದನ್ನು ಮಾಡಿ ತೋರಿಸಬೇಕು ಎಂದು ಹೇಳುತ್ತೇನೆ.

ಇನ್ನು ಕೂಲಿಗಾರರಿಗೆ ದುಡ್ಡು ಕೊಡುವ ಬದಲು ಧಾನ್ಯ ಕೊಡಿ. ಸರ್ಕಾರದವರು ಗಂಜಿ ಕೇಂದ್ರಗಳನ್ನು ತೆರೆದಿದ್ದೇವೆ ಎಂದು ಹೇಳಿದ್ದಾರೆ. ಇದರ ವಿಚಾರವಾಗಿ ಅನೇಕ ಸದಸ್ಯರೂ ಕೂಡ ಮಾತನಾಡಿದ್ದಾರೆ. ಇದರಲ್ಲಿ ಹರಿಜನರಿಗೆ ಇದರ ಸೌಲಭ್ಯ ಸರಿಯಾಗಿ ದೊರೆಯುತ್ತದೆಯೋ, ಕೇಂದ್ರ ಸರ್ಕಾರದಿಂದ ಬಂದಂಥ ಸಹಾಯದಲ್ಲಿ ಅವರಿಗೆ ಎಷ್ಟು ಸಿಕ್ಕಿದೆ ಮತ್ತು ಇದು ಸರಿಯಾಗಿ ವಿತರಣೆ ಆಗಿದೆಯೋ ಎಂದು ಹೇಳಬೇಕು. ಹಾಗೇನಾದರೂ ಸರಿಯಾಗಿ ವಿತರಣೆ ಆಗದಿದ್ದ ಪಕ್ಷದಲ್ಲಿ ಅವನ್ನು ಸರ್ಕಾರದವರು ಸರಿಪಡಿಸಬೇಕು ಎಂದು ಹೇಳುತ್ತೇನೆ.

ಇನ್ನೊಂದು ಸಂಗತಿ ಏನೆಂದರೆ ಆಂಟಿ ಕರಪ್ಷನ್ ಏನು ಇದೆ ಅದು, ಪ್ರತಿ ಜಿಲ್ಲೆಯಲ್ಲೂ ಎಷ್ಟು ಜನ ಕರಪ್ಟ್ ಅಧಿಕಾರಿಗಳು ಇದ್ದಾರೆ ಅಂತಹವರ ಒಂದು ಲಿಸ್ಟ್ ಮಾಡಿ ಅವರಿಗೆ ಸರಿಯಾದ ಒಂದು ಶಿಕ್ಷೆ ಕೊಡಬೇಕು. ದೇವರು ಮೆಚ್ಚುವ ಹಾಗೆ ಅಧಿಕಾರಿಗಳು ಕೆಲಸ ಮಾಡಬೇಕು. ಕರಪ್ಟ್ ಅಧಿಕಾರಿಗಳ ವಿಷಯದಲ್ಲಿ ಸರಿಯಾದ ಒಂದು ತನಿಖೆ ನಡೆಸಿ, ಅವರಿಗೆ ಸರಿಯಾದ ಶಿಕ್ಷೆ ಕೊಡಬೇಕು. ಅವರಿಗೆ ಸರಿಯಾದ ಶಿಕ್ಷೆ ಕೊಟ್ಟು ಅದನ್ನು ಬರಗಾಲದ ಶಿಕ್ಷೆ ಎಂದು ಹೇಳಬೇಕು. ಹೀಗೆ ಮಾಡಿ ಸರ್ಕಾರ ಕೀರ್ತಿ ಪಡೆಯಬೇಕೆಂದು ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಸ್ವಾಮಿ, ನಮ್ಮ ಮುಖ್ಯ ಮಂತ್ರಿಗಳ ಹೇಳಿಕೆಯನ್ನು ಒಂದು ಕಡೆಯಿಂದ ಇನ್ನೊಂದು ಕಡೆಯವರೆಗೂ ಸೂಕ್ಷ್ಮವಾಗಿ ಪರಿಶೀಲಿಸುವುದಾದರೆ, ನಾವು ಹೆಚ್ಚು ಆತಂಕಪಡಬೇಕಾದ ಅಗತ್ಯ ಇಲ್ಲ ಎನ್ನುವುದು ನನ್ನ ಮನಸ್ಸಿಗೆ ಕಾಣುತ್ತದೆ. ಆದರೆ ಇದು ಕಾರ್ಯತಃ ನಡೆಯುತ್ತದೆಯೇ ಅಥವಾ ಏನಾದರೂ ಅಡ್ಡಿ ಆತಂಕಗಳು ಇವೆಯೇ ಎನ್ನುವುದನ್ನು ಮುಖ್ಯವಾಗಿ ತಿಳಿಯಬೇಕು. 1965ನೇ ಇಸವಿಯಲ್ಲಿ ಇದೇ ಪರಿಸ್ಥಿತಿ

ಬಂದಾಗ ಆತುರಾತುರವಾಗಿ ಹೆಚ್ಚು ಪಂಪುಸೆಟ್ಟುಗಳನ್ನು ಕೊಳ್ಳಲು ಸಹಾಯ ಮಾಡಿದರು. ಅವರೆ ಇವೊತ್ತಿನ ದಿವಸ ನೋಡುವುದಾದರೆ ಅಂಥ ಪಂಪುಸೆಟ್ಟುಗಳನ್ನು ಕೊಡುತ್ತಾ ಇರುವಂತೆ ಕಾಣುತ್ತಾ ಇಲ್ಲ. ಖಾಯಂ ಪರಿಹಾರದ ಕಡೆಗೆ ಹೆಚ್ಚು ಗಮನಕೊಡಬೇಕೆಂದು ಅವರ ಹೇಳಿಕೆಯಲ್ಲಿ ಹೇಳಿದ್ದಾರೆ. 8-10 ದಿನಗಳಿಂದಲೂ ಇದರ ವಿಷಯವಾಗಿ ಚರ್ಚೆ ನಡೆಯುತ್ತಾ ಇದೆ. ನಾವೂ ಸಹ ನೋಡುತ್ತಾ ಇದ್ದೇವೆ. ಈ ಕ್ಷಾಮ ಮತ್ತು ಅಭಾವ ಪರಿಸ್ಥಿತಿ ಎನ್ನುವುದು ನಮ್ಮ ರಾಜ್ಯಕ್ಕೆ ಹೊಸದೇನೂ ಅಲ್ಲ. ಆಗಾಗ್ಗೆ ಈ ಅಭಾವ ಪರಿಸ್ಥಿತಿ ಬಂದೇ ಬರುತ್ತದೆ. ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ಬಂಗಾಳದಲ್ಲಿ ಇಂಗ್ಲೀಷರ ಆಳ್ವಿಕೆ ಇದ್ದಾಗ ಲಕ್ಷಾಂತರ ಜನ ಸತ್ತು ಹೋದರು. ಕಾಂಗ್ರೆಸ್ಸಿನವರು ದೇಶದ ಆಡಳಿತ ವಹಿಸಿಕೊಂಡಮೇಲೆ ಕ್ಷಾಮ ಹೋಗುವ ಹಾಗೆ ಏರ್ಪಾಡು ಮಾಡುತ್ತೇವೆ ಎಂದು ಜಂಬ ಕೊಚ್ಚಿಕೊಳ್ಳುತ್ತಿದ್ದಾರೆ. ಈ ರೀತಿ ಸರ್ಕಾರದವರೇ ಆಗಲಿ, ಆಡಳಿತ ಪಕ್ಷದ ಸದಸ್ಯರೇ ಆಗಲಿ ಅಭಾವ ಪ್ರದೇಶಗಳಿಗೆ ಒಂದು ಖಾಯಂ ಪರಿಹಾರ ಕಾರ್ಯಗಳನ್ನು ಮಾಡಬೇಕೆಂದು ಹೇಳುತ್ತಾ ಬಂದಿದ್ದಾರೆಯೇ ವಿನಃ ಯಾರೂ ಅಭಾವ ಪ್ರದೇಶಕ್ಕೆ ಹೋಗಲಿಲ್ಲ, ಮತ್ತು ಖಾಯಂ ಪರಿಹಾರ ಮಾಡಲಿಲ್ಲ. 20 ವರ್ಷಗಳಿಂದಲೂ ಅಭಾವ ಪರಿಸ್ಥಿತಿಯನ್ನು ನೀಗಿಸಲು ಖಾಯಂ ಪರಿಹಾರ ಕಾರ್ಯಗಳನ್ನು ಮಾಡಬೇಕೆಂದು ಹೇಳುತ್ತಿದ್ದಾರೆಯೇ ವಿನಾ ಯಾವ ಖಾಯಂ ಪರಿಹಾರವೂ ಆಗಲಿಲ್ಲ. ಆದುದರಿಂದ ಈ ಅಭಾವ ಪ್ರದೇಶದಲ್ಲಿ ಅಭಾವವನ್ನು ಪೂರ್ಣವಾಗಿ ಹೋಗಲಾಡಿಸಬೇಕಾದರೆ ಒಂದು ಸಮಗ್ರವಾದ ಯೋಜನೆ ಮಾಡಿಲ್ಲ ಎನ್ನುವುದು ಸ್ಪಷ್ಟವಾಗಿ ಹೇಳಬೇಕಾಗಿದೆ. ಈ ತರಹ ಒಂದು ಸಮಗ್ರವಾದ ಯೋಜನೆ ತಯಾರು ಮಾಡಿ ಹಣದ ಕೊರತೆ ಮಾತ್ರ ತೋರಿಸಿದ್ದರೆ ಕೇಂದ್ರ ಸರ್ಕಾರದವರಾಗಲಿ ರಾಜ್ಯ ಸರ್ಕಾರದವರಾಗಲಿ ಈ ಸಾಲಿಗೆ ಹಣವನ್ನು ಒದಗಿಸಬಹುದಾಗಿತ್ತು. ಇಂತಹ ಸಮಗ್ರವಾದ ಯೋಜನೆಯನ್ನು ನಮ್ಮ ಸರ್ಕಾರದವರು ಮೊದಲು ತಯಾರು ಮಾಡಬೇಕಾಗಿತ್ತು.

7-30 P.M.

ಈಗ 174 ತಾಲ್ಲೂಕುಗಳಲ್ಲಿ ಒಟ್ಟು 100 ತಾಲ್ಲೂಕುಗಳಲ್ಲಿ ಅಭಾವ ಇದೆ ಎಂದು ಹೇಳುತ್ತಾರೆ. ಮೈಸೂರು ರಾಜ್ಯದ ಅರ್ಧದಷ್ಟು ಭಾಗದಲ್ಲಿ ಅಭಾವ ಇದೆ ಎಂದು ಮಾನ್ಯ ಮುಖ್ಯಮಂತ್ರಿಯವರು ಒಪ್ಪಿದ್ದಾರೆ. ಯಾವ್ಯಾವ ಪ್ರದೇಶಗಳಲ್ಲಿ ಯಾವ್ಯಾವ ಕೆಲಸಗಳನ್ನು ಮಾಡಿದರೆ, ಮೊದಲು ಅಭಾವ ಹೋಗುತ್ತದೆ ಎಂದು ನೋಡಬೇಕು. ಅದಕ್ಕೆ ಎಷ್ಟು ಹಣ ಬೇಕು ಎಂದು ಗೊತ್ತುಮಾಡಬೇಕು. ಅದಕ್ಕೆ ಆಯೋಗದವರ ಮುಂದೆ 8-10 ಕೋಟಿ ರೂಪಾಯಿ ಸಾಕು ಎಂದು ಹೇಳಿದರೆ ಅದು ಪೂರ್ಣ ಯೋಜನೆಯಾಗಲಿಲ್ಲ. ಮುಖ್ಯವಾಗಿ ಅವರ ಮುಂದೆ ಪೂರ್ಣವಾದಂತಹ ಚಿತ್ರವನ್ನು ಇಡಬೇಕು ಮತ್ತು ಅದನ್ನು ಇಡುತ್ತಾರೆಂದು ನಾನು ಭಾವಿಸುತ್ತೇನೆ. ನಾವು ಕೊಟ್ಟ ಸಾಲುಗಳನ್ನು ಸರಿಯಾಗಿ ಕಾರ್ಯರೂಪದಲ್ಲಿ ತರಲಿಲ್ಲ. ಹಾಗೆ ತರುವಂತಹ ಶಕ್ತಿ ಸಾಮರ್ಥ್ಯ, ಅದಕ್ಕೆ ಬೇಕಾದಂತಹ ಬುದ್ಧಿವಂತಿಕೆ, ಹಣ ಒದಗಿಸಿಕೊಡತಕ್ಕ ಸಾಮರ್ಥ್ಯ ಇಲ್ಲವೆಂಬುದೇ ನಮ್ಮ ವಾದ. ಈಗ ಕೊಟ್ಟಿರತಕ್ಕಂಥಹ ಹಣ, ಅದರಲ್ಲಿ ಉಪಯೋಗಿಸಿರತಕ್ಕರತದ್ದು ಎಷ್ಟುಮಟ್ಟಿಗೆ ಫಲದಾಯಕವಾಗಿದೆಯೆಂದು ನೋಡಿದರೆ ಗೊತ್ತಾಗುತ್ತದೆ. ಎಲ್ಲೂ ರಾಜಕೀಯ ತರುವುದಿಲ್ಲವೆಂದು ಹೇಳುತ್ತಾರೆ. ಮಾನ್ಯ ಪ್ರಭಾಕರ್‌ರವರು ಹೇಳಿದರು—ಯಾವುದಾದರೂ ಅಧಿಕಾರಿಯಮೇಲೆ ದೂರು ಹೇಳಿದರೆ, ಮೊದಲು ಇದನ್ನು ಯಾರು ಹೇಳಿದರು ಎಂದು ಗಮನ ಕೊಡುತ್ತಾರೆ. ಹೇಳುತ್ತಿರುವುದರಲ್ಲಿ ಸತ್ಯಾಂಶ ಇದೆಯೇ, ಇಲ್ಲವೇ ಎಂಬುದನ್ನು ನೋಡದೆ, ಇದನ್ನು ಯಾರು ಹೇಳಿದರು, ಸುಮ್ಮನೆ ಇವರು ಉತ್ಪ್ರೇಕ್ಷೆ ಮಾಡಿ ಅಧಿಕಾರಿಗಳಿಗೆ ಕೆಟ್ಟ ಹೆಸರು ತರುವುದಕ್ಕೆ ಮಾಡುತ್ತಾರೆ ಎಂದು ತಿಳಿಯುತ್ತಾರೆ. ಅಲ್ಲದೆ ನಿಜಾಂಶ ಏನಿದೆ ಎಂದು ನೋಡುತ್ತಾ ಇಲ್ಲ. ಇನ್ನು ಈ ಬರಗಾಲ ಪರಿಸ್ಥಿತಿಯನ್ನು ನೋಡಿದರೆ, ಇದರಲ್ಲಿ ರಾಜಕೀಯ ಉಪಯೋಗಿಸುತ್ತಿದ್ದುದನ್ನು ರುಜುವಾತು ಮಾಡಿ ಹೇಳಬಹುದು. ತುಮಕೂರು ಜಿಲ್ಲೆಯವರು ಒಬ್ಬರು ಮಂತ್ರಿ ಮಂಡಲದಲ್ಲಿದ್ದಾರೆ. ಅವರು ಅಲ್ಲಿ ಎಷ್ಟು ದಿವಸ ಟೂರ್ ಮಾಡಿದ್ದಾರೆಂದರೆ, 30-40 ದಿವಸ ಅಲ್ಲಿಗೆ ಓಡಾಡಿದ್ದಾರೆ. ಓಡಾಡಿದ ಕೆಲಸವೇನೆಂದರೆ, ಮುಂದೆ ಬರತಕ್ಕಂತಹ ತಾಲ್ಲೂಕು ಬೋರ್ಡು ಚುನಾವಣೆಗೆ ಯಾರು ಯಾರನ್ನು ಅಲ್ಲಿ ಉಮೇದುವಾರರಾಗಿ ನಿಲ್ಲಿಸಬೇಕು ಮತ್ತು ಕಾಂಗ್ರೆಸ್ ವಿರೋಧಿಗಳನ್ನು ಹೇಗೆ ಒಲಿಸಿಕೊಳ್ಳಬೇಕು ಎಂಬುದು. ಇದು ಮಾತ್ರ ಅವರ ಕಾರ್ಯಕ್ರಮದಿಂದ ಗೊತ್ತಾಗುತ್ತದೆಯೇ ಹೊರತು ಅಭಾವ ಪ್ರದೇಶದಲ್ಲಿ ಯಾವ ಕೆಲಸ ಮಾಡಿಸಬೇಕು, ಯಾರ ಸಹಾಯ ಅದಕ್ಕೋಸ್ಕರ ತೆಗೆದುಕೊಳ್ಳಬೇಕೆಂಬ ಒಂದು ಉದ್ದೇಶದಿಂದ ಅವರು ಪ್ರವಾಸ ಮಾಡಿಲ್ಲ. ಕಂದಾಯ ವಸೂಲು ಮಾಡಲು ಬಹಳ ತೊಂದರೆಯಾಗುತ್ತದೆಂದು ಹೇಳುತ್ತಿದ್ದಾರೆ. ಅವರೆ ಮೊನ್ನೆ ತಾನೆ ಜಿಲ್ಲಾಧಿಕಾರಿಗಳ ಸಭೆ ಸೇರಿದಾಗ, 27 ಕೋಟಿ ರೂಪಾಯಿ ಕಂದಾಯ ಬಾಕಿ ಇದೆ, ಅದನ್ನೆಲ್ಲಾ ವಸೂಲು ಮಾಡಿ ಎಂದು ಜಿಲ್ಲಾಧಿಕಾರಿಗಳಿಗೆ ತಿಳಿಸಿದರು. ವಸೂಲು ಮಾಡುವುದಕ್ಕೆ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಸಾಧ್ಯವೇ ಇಲ್ಲವೇ ಎಂಬುದನ್ನು ನೋಡಿಲ್ಲ. ನಾನು ಸಲಹೆ ಮಾಡುವುದೇನೆಂದರೆ, ನಾಲ್ಕು ವರ್ಷದಿಂದ ಬಾಕಿ ಇರತಕ್ಕಂತಹ ಕಂದಾಯವನ್ನು ವಜಾ ಮಾಡಬೇಕು. ರೈತನ ಹತ್ತಿರ ಅಷ್ಟು ಕಂದಾಯವನ್ನು ಕೇಳಿದರೆ, ಅವನ ಎದೆ ಒಡೆದು ಹೋಗುತ್ತದೆ. ಅಂಥಾ ಪ್ರದೇಶಗಳಲ್ಲಿ ಕಂದಾಯವನ್ನು ಪೂರ್ಣ ವಜಾ ಮಾಡಬೇಕು. ಎಲ್ಲೆಲ್ಲಿ ಸೊಸೈಟಿಗಳಲ್ಲಿ ಬಾಕಿ ಕೊಡಬೇಕಾಗಿದೆಯೋ, ಅದನ್ನು ಸಸ್ಪೆಂಡ್ ಮಾಡಿ ಮುಂದೆ ಒಳ್ಳೆಯ ಕಾಲ ಬಂದಾಗ ವಸೂಲು ಮಾಡತಕ್ಕ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಇನ್ನು ತಕಾವಿ ಸಾಲ ಎಂದು ಹೇಳುತ್ತಾರೆ. ಆದರೆ ಅವರು ಕಂದಾಯ ಬಾಕಿ ಇದೆ, ಅದನ್ನು ಕೊಟ್ಟರೆ ಸಾಲ ದೊರೆಯುತ್ತದೆ ಎಂದು ಹೇಳುತ್ತಾರೆ. ಇನ್ನು ಆಹಾರಧಾನ್ಯಗಳನ್ನು ಒದಗಿಸುವಾಗಲಾಗಲಿ, ಕೆಲಸವನ್ನು ಒದಗಿಸುವಾಗಲಾಗಲಿ, ಈ ಕಾರ್ಯವನ್ನು ಹೇಗೆ ಮಾಡುತ್ತಾರೆಂದು ಒಂದೆರಡು ಮಾತುಗಳಲ್ಲಿ ಹೇಳುತ್ತೇನೆ. ಈ ಕೆಲಸಗಳನ್ನು ಕೊಡುವಾಗ ಒಂದೊಂದು ರಿಲೀಫ್ ಸಮಿತಿ ಎಂದು ಒಂದೊಂದು ತಾಲ್ಲೂಕಿನಲ್ಲಿ ಮಾಡಿದ್ದಾರೆ. ಈ ರಿಲೀಫ್ ಸಮಿತಿಯ ಸದಸ್ಯರು ಎಲ್ಲೆಲ್ಲಿ ಕೆಲಸ ಮಾಡಿದ್ದಾರೆ ಎಲ್ಲಾ ನೋಡಿಕೊಂಡು ಅದನ್ನು ಮಾಡಬೇಕಾದುದು. ಮೊನ್ನೆ ತಾನೆ ರಿಲೀಫ್ ಕಮಿಟಿಯ ಮೀಟಿಂಗಿನ ಹಿಂದಿನ ದಿವಸ ಸಬ್ ಡಿವಿಜನ್ ಆಫೀಸರ್ಸ್, ತಹಸೀಲ್ದಾರರು ಎಲ್ಲಾ ಪರಿಶೀಲನೆಗೆ ಹೋದಾಗ ನೋಡಿದ್ದೇವೆ, ಏನೆಂದರೆ, ಅಲ್ಲಿ ಕೇವಲ 22 ಜನರು ಕೆಲಸ ಮಾಡುತ್ತಿದ್ದಾರೆ. ಮಾರನೆಯ ದಿನ ಕಮಿಟಿ ರಿಪೋರ್ಟಿನಲ್ಲಿ 59 ಜನ ಕೆಲಸ ಮಾಡುತ್ತಿದ್ದರೆಂದು ಬರೆದಿತ್ತು. 59 ಜನರು ಹೇಗೆ ಬಂದರು ಎಂದು ಹೇಳಿದೆ. ಅವಕ್ಕೆ ಹೇಳಿದರು—ಒಂದೊಂದು ಗಂಡು ಆಳಿಗೆ ಒಂದು ರೂಪಾಯಿ, ಹೆಣ್ಣಾಳಿಗೆ 12 ಆಣೆ ಕೊಡುತ್ತೇವೆ, ಮೇಲಧಿಕಾರಿಗಳು ಒಂದು ಮೀಟರಿಗೆ ಇಷ್ಟು ಕೂಲಿ ಎಂದು ಕೊಡುವುದಕ್ಕೆ ಏರ್ಪಾಡು ಮಾಡಿದ್ದಾರೆ ಎಂದು ಹೇಳಿದರು. ಆದ್ದರಿಂದ ಅಲ್ಲಿ ನಡೆಯುವ ವಿಧಾನ ತದ್ವಿರುದ್ಧವಾಗಿ ನಡೆಯುತ್ತದೆ. ಅಲ್ಲಿ ಕೆಲಸ ಮಾಡುವವರೆಲ್ಲಾ ಕೆಲಸ ಮಾಡುತ್ತಿದ್ದಾರೆ, ಕಂಟ್ರಾಕ್ಟರು ಸೂಪರ್‌ವೈಸ್ ಮಾಡುತ್ತಿದ್ದಾನೆ. ಸೂಪರ್‌ವೈಸ್ ಮಾಡಿದವನಿಗೆ ಏನೂ ಲಾಭವಿಲ್ಲವೇ, ಲಾಭವಿಲ್ಲದೆ ಏಕೆ ಕೆಲಸ ಮಾಡುತ್ತಾನೆ ಎಂದು ಕೇಳಿದರೆ, ಏನೂ ಲಾಭ ಅವನಿಗೆ ಇಲ್ಲವೆಂದು ಹೇಳಿದರು. ಬೇಕಾದರೆ ಒಬ್ಬ ಮೇಸ್ತ್ರಿಯನ್ನಾದರೂ ಮಾಡಿಕೊಳ್ಳಲಿ. ಈಗ ಎಷ್ಟೋ ಜನ ಪದವೀಧರ ಇಂಜನಿಯರುಗಳು ಕೆಲಸವಿಲ್ಲದೆ ಇದ್ದಾರೆ. ಅವರನ್ನು ಅಂಥ ಕಡೆಗಳಲ್ಲಿ ನೇಮಿಸಿಕೊಳ್ಳಬಹುದು. ಅವರಿಗೆ ಬೇಕಾದರೆ ದಿನಕೂಲಿಯಾದರೂ ಕೊಡಲಿ. ಇಂಥ ಕಷ್ಟಕಾಲದಲ್ಲಿ ಆ ರೀತಿಯ ಒಂದು ಏರ್ಪಾಡನ್ನು ಮಾಡಿದರೆ ಎಷ್ಟೋ ಒಳ್ಳೆಯದು. ಇನ್ನು ಆಹಾರ ಹಂಚಿಕೆಯ ವಿಚಾರದಲ್ಲಿ, ಅದನ್ನು ಯಾರು ಒದಗಿಸುತ್ತಾರೆ, ರೆವೆನ್ಯೂನವರು ಒದಗಿಸುತ್ತಾರೋ, ಯಾರು ಒದಗಿಸುತ್ತಾರೆಂಬುದು ಕ್ರಮ ಸರಿಯಾಗಿಲ್ಲ. ಕೇರ್ ಸಂಸ್ಥೆಯವರು ಸ್ವಲ್ಪ ಕೊಡುತ್ತಾರೆ, ಅದನ್ನು ಹಂಚುವುದು ಸರಿಯಾಗಿಲ್ಲ. ವೃದ್ಧರಿಗೆ, ಅನಾಥರಿಗೆ ಆಹಾರಧಾನ್ಯ ಕೊಡುತ್ತಾರೆಂದು ಹೇಳುತ್ತಾರೆ. ಅದನ್ನು ಪಟ್ಟಿ ಮಾಡುವವರು ರೆವೆನ್ಯೂ ಇನ್‌ಸ್ಪೆಕ್ಟರು. ಅವರ ಸಿಬ್ಬಂದಿ ಮೇಲೆ ನಮ್ಮ ಆಹಾರ ಮಂತ್ರಿಯವರಿಗೆ ಹತೋಟಿ ಇಲ್ಲ. ನನಗೆ ಒಂದು ಆಶ್ಚರ್ಯದ ವಿಚಾರವೇನೆಂದರೆ, ತಾಲ್ಲೂಕು ಬೋರ್ಡು ಇದನ್ನೆಲ್ಲಾ ಕೊಟ್ಟು ಹಂಚುತ್ತಿದ್ದಾರೆ. ಅವನು ಒಳ್ಳೆಯ ಸಮಯದಲ್ಲಿ ಅವನಿಗೆ ಓಟು ಸಿಗಬೇಕೆಂದು ಹಂಚುತ್ತಾನೆ. ಇದರಲ್ಲಿ ರಾಜಕೀಯ ತರಬಾರದು ಎಂದು ಹೇಳುತ್ತಾರೆ. ಆಹಾರದ ಹಂಚಿಕೆಯ ವಿಷಯದಲ್ಲಿ ಆಹಾರದ ಮಂತ್ರಿಗೆ ಸಂಪೂರ್ಣವಾದ ಹತೋಟಿ ಇಲ್ಲ. ಅನಾಥರಿಗೆ, ವೃದ್ಧರಿಗೆ ಕೊಡತಕ್ಕ ಆಹಾರದ ವಿಷಯದಲ್ಲಾಗಲಿ, ಸೊಸೈಟಿಯ ಮುಖಾಂತರ ಕೊಡತಕ್ಕ ವಿಷಯದಲ್ಲಾಗಲಿ, ಒಬ್ಬ ಆಹಾರ ಮಂತ್ರಿಗೆ ಹತೋಟಿ ಇರಬೇಕೇ ಹೊರತು ಮನಸ್ಸಿಗೆ ಬಂದ ಹಾಗೆ ಹತೋಟಿಯನ್ನು ಕೊಡಬಾರದು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

[MR. DEPUTY SPEAKER in the Chair]

ಕೆಲವು ಮಂಜೂರಾದ ನೀರಾವರಿ ಕಾಮಗಾರಿಗಳನ್ನು ಈ ವರ್ಷವೇ ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳು ಆಲೋಚನೆ ಮಾಡುತ್ತಿದ್ದಾರೆಂದು ಹೇಳಿದರು. ಈ ವರ್ಷಕ್ಕೆ ಎಷ್ಟೆಷ್ಟು ಕೆಲಸಗಳು ಆಗಬೇಕೆಂಬ ಬಗ್ಗೆ 3—4 ತಿಂಗಳುಗಳ ಕೆಳಗೆ ನಮ್ಮ ಸದಸ್ಯರು ಒಂದು ಪಟ್ಟಿಯನ್ನು ಒದಗಿಸಿಕೊಟ್ಟಿದ್ದಾರೆ. ಆ ಪಟ್ಟಿ ಪ್ರಕಾರ ಸಣ್ಣ ನೀರಾವರಿ ಕಾಮಗಾರಿಗಳ ಕೆಲಸಗಳನ್ನು ಸರ್ಕಾರದವರು ಕೂಡಲೇ ತೆಗೆದುಕೊಳ್ಳಬೇಕು. ಅದರ ಜೊತೆಗೆ ಇನ್ನೂ ಕೆಲವು ಸಣ್ಣ ಸಣ್ಣ ನೀರಾವರಿ ಕಾಮಗಾರಿಗಳನ್ನು ಮಂಜೂರು ಮಾಡಿ ತೆಗೆದುಕೊಳ್ಳಬೇಕು. ಏಕೆಂದರೆ ಈ ಸಮಯದಲ್ಲಿ ಖರ್ಚು ಮಾಡತಕ್ಕ ಹಣ ಅಪವ್ಯಯವಾಗಬಾರದು, ಖಾಯಂ ಆಗಿ ಆಗತಕ್ಕ ಕೆಲಸಗಳಿಗೆ ಹಣ ಸದ್ವಿನಿಯೋಗವಾಗಬೇಕು. ಇನ್ನೂ ಉಳಿದಿರತಕ್ಕ ರಸ್ತೆ ಕಾಮಗಾರಿಗಳಿಗೂ ಹೆಚ್ಚು ಹಣ ಖರ್ಚು

ಮಾಡಬೇಕು. ಸಣ್ಣ ಸಣ್ಣ ಗೋಕಟ್ಟೆಗಳಿಗೆ ಹಣ ಖರ್ಚುಮಾಡುವುದನ್ನು ಕೂಡಲೇ ನಿಲ್ಲಿಸಬೇಕು. ಏಕೆಂದರೆ ಇದರಿಂದ ಒಂದು ಕಾಸೂ ಪ್ರಯೋಜನವಾಗುವುದಿಲ್ಲ. ಒಂದು ಎಕರೆಯಾಗಲಿ ಅಥವಾ ಎಷ್ಟೇ ಜಮೀನಾಗಲೀ ನೀರಾವರಿಯಾಗುತ್ತದೆಂದು ಹೇಳಿದರೆ, ಅಂತಹ ಕೆಲಸಗಳಿಗೆ ಹಣವನ್ನು ಖರ್ಚುಮಾಡಬೇಕು. ಆದರೆ ಗೋಕಟ್ಟೆಗಳಿಗೆ ಮತ್ತು ಅನುಪಯೋಗವಾಗತಕ್ಕ ರಸ್ತೆಗಳಿಗೆ ಹಣವನ್ನು ಖರ್ಚುಮಾಡಬಾರದು.

ಇನ್ನು ಲಿಫ್ಟ್ ಇರಿಗೇಷನ್ ಸಲುವಾಗಿ 1965ರಲ್ಲಿ ಅಭಾವ ಪರಿಸ್ಥಿತಿ ಬಂದಾಗ ಕುಣಿಗಲ್ ತಾಲ್ಲೂಕಿನಲ್ಲಿ ತೊರೆಬೊಮ್ಮನಹಳ್ಳಿಯಲ್ಲಿ ಒಂದು ಯೋಜನೆಯನ್ನು ಮಾಡಿ 14 ಸಾವಿರ ರೂಪಾಯಿಗಳನ್ನು ಅದಕ್ಕೆ ಖರ್ಚುಮಾಡಿದ್ದರೂ ಕಾರ್ಯಗತವಾಗುವುದರೊಳಗೆ ಅಭಾವ ಪರಿಸ್ಥಿತಿ ಸ್ವಲ್ಪ ಕಡಿಮೆಯಾಯಿತು. ಆ ಯೋಜನೆಯನ್ನು ಪೂರ್ಣವಾಗಿ ಕಾರ್ಯಗತಮಾಡಲಿಲ್ಲ. ಈಗ ಆ 14 ಸಾವಿರ ರೂಪಾಯಿಗಳನ್ನು ಖರ್ಚುಮಾಡಿದ್ದು ವ್ಯರ್ಥವಾಗುವ ಪರಿಸ್ಥಿತಿ ಇದೆ. ಷಿಂಷಾ ನದಿ ಪಕ್ಕದಲ್ಲಿರುವ ನಾಗಮಂಗಲ ತಾಲ್ಲೂಕಿನಲ್ಲಿ ವರ್ಷಕ್ಕೆ ಮೂರು ಎಕರೆಯೊಳಗೆ ಎರಡು ಬೆಳೆ ಬೆಳೆಯುವ ಪರಿಸ್ಥಿತಿ ಇದೆ. ಷಿಂಷಾ ನದಿಯ ಎರಡು ಕಡೆಗಳಲ್ಲಿಯೂ ಲಿಫ್ಟ್ ಇರಿಗೇಷನ್ ಸ್ಕೀಮುಗಳನ್ನು ಹಾಕಬಹುದು. ಕುಣಿಗಲ್ ತಾಲ್ಲೂಕಿನ ಬೈರನಾಗರಹಳ್ಳಿ, ಮತ್ತು ಚಿಕ್ಕಬೊಮ್ಮನಹಳ್ಳಿ—ಈ ಪ್ರದೇಶಗಳ ಕಡೆಗಳಲ್ಲಿ ಅಂತಹ ಯೋಜನೆಗಳನ್ನು ಮಾಡಿ ಖಾಯಂ ವ್ಯವಸ್ಥೆ ಮೂಲಕ ನೂರಾರು ಕೋಟಿ ರೂಪಾಯಿಗಳ ಆದಾಯವನ್ನು ಪಡೆಯಬಹುದೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವ ಬಗ್ಗೆ ಹೇಳುವುದಾದರೆ, ಒಂದೊಂದು ತಾಲ್ಲೂಕಿಗೆ ಇಷ್ಟೇ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತೇವೆಂಬುದಾಗಿ ಈಗಾಗಲೇ ತಿಳಿಸಿದ್ದಾರೆ. ಆದರೆ ನಾವು ಎಷ್ಟೋ ಬಾವಿಗಳನ್ನು ತೆಗೆದಿದ್ದರೂ ಅವಕ್ಕೆ ಕಾಲಕ್ಕೆ ಸರಿಯಾಗಿ ಪಂಪುಸೆಟ್ಟುಗಳನ್ನೂ ಹಾಗೂ ವಿದ್ಯುಚ್ಛಕ್ತಿಯನ್ನೂ ಒದಗಿಸದೇ ಇದ್ದರೆ, ಅದರಿಂದ ಏನೂ ಪ್ರಯೋಜನವನ್ನು ಪಡೆಯುವುದಕ್ಕೆ ಆಗುವುದಿಲ್ಲ. ಯಾವ್ಯಾವ ಬಾವಿಗಳಿಗೆ ಪಂಪುಸೆಟ್ಟುಗಳನ್ನು ಒದಗಿಸಿದ್ದೀರೋ ಆ ಎಲ್ಲಾ ಬಾವಿಗಳಿಗೂ ವಿದ್ಯುಚ್ಛಕ್ತಿಯನ್ನು ಕೂಡಲೇ ಒದಗಿಸಬೇಕು. ಬಾವಿಗಳು ತಯಾರಾಗಿರುವ ಕಡೆಗಳಲ್ಲಿ ಕೂಡಲೇ ಪಂಪುಸೆಟ್ಟುಗಳನ್ನು ಕೊಡಿಸಬೇಕು. ಖಾಯಂ ಪರಿಹಾರದ ಕಡೆ ಕೂಡಲೇ ಗಮನವನ್ನು ಕೊಡಬೇಕು.

ನಮ್ಮ ಅಧಿಕಾರಿಗಳು ನಾವು ಎಷ್ಟೇ ಹೇಳಲಿ, ಮುಖ್ಯ ಮಂತ್ರಿಗಳು ಏನಾದರೂ ಒಬ್ಬರ ಮೇಲೆ ದೂರು ಬಂದರೆ ಉಗ್ರ ಶಿಕ್ಷೆಗೆ ಗುರಿಮಾಡುತ್ತಾರೆಂದು ಹೇಳಿದ್ದರೂ, ಅದರಲ್ಲಿ ನನಗೆ ಈ ಸಭೆಗೆ ವಿಶ್ವಾಸವಿಲ್ಲ. ಇವರಿಗೆ ಅಧಿಕಾರಿಗಳ ಹೇಳಿಕೆಯಲ್ಲಿ ವಿಶ್ವಾಸ ಜಾಸ್ತಿ ಇದೆಯೇ ಹೊರತು ಖಾಸಗೀ ಮನುಷ್ಯರು, ಶಾಸನಸಭಾ ಸದಸ್ಯರು, ತಾಲ್ಲೂಕ್ ಬೋರ್ಡ್ ಸದಸ್ಯರು ಹೇಳುವುದರಲ್ಲಿ ಹೆಚ್ಚಿಗೆ ವಿಶ್ವಾಸವಿಲ್ಲವೆಂದು ನನ್ನ ಅನುಭವದಿಂದ ಹೇಳುತ್ತೇನೆ. ಯಾವ ಅಧಿಕಾರಿಯ ಮೇಲೆ ದೂರು ಬಂದರೆ ವಿಜಿಲೆನ್ಸ್ ಕಮಿಷನ್ ಎಂದು ಏನಿದೆಯೋ ಅದು ಹೆಚ್ಚು ವಿಜಿಲೆಂಟಾಗಿ ಇರುವುದಕ್ಕೆ ಹೇಳಿ. ಇಂತಹ ಅಧಿಕಾರಿಗಳ ಮೇಲೆ ದೂರು ಬಂದಿದೆ ಅಂದರೆ ಅವರು ಹಗಲುರಾತ್ರಿ ಓಡಾಡಿ ಅಧಿಕಾರಿಗಳನ್ನು ಶಿಕ್ಷೆ ಮಾಡಬೇಕು. ಒಂದೊಂದು ತಾಲ್ಲೂಕಿನಲ್ಲ ಅಥವಾ ಜಿಲ್ಲೆಯಲ್ಲಿ ಅಧಿಕಾರಿಗಳನ್ನು ಶಿಕ್ಷೆಮಾಡುವಂಥ ಸಾಮರ್ಥ್ಯ ಈ ಸರ್ಕಾರಕ್ಕೆ ಇದ್ದರೆ, ಕೆಲಸಗಳು ಚೆನ್ನಾಗಿ ನಡೆಯುತ್ತವೆ. ಮುಖ್ಯ ಮಂತ್ರಿಗಳು ಕಟ್ಟಳೆ ಅಥವಾ ಸಮಿತಿಗಳ ತೀರ್ಮಾನದ ಮೇಲೆ ಹಣವನ್ನು ಒದಗಿಸಲಿ, ಸ್ಥಳದಲ್ಲಿರತಕ್ಕ ಅಧಿಕಾರಿಗಳಿಗೆ ನಾವು ಎಲ್ಲಿ ತಪ್ಪು ಮಾಡಿದರೆ ಶಿಕ್ಷೆಗೊಳಗಾಗುತ್ತೇವೋ ಎಂಬ ಭಯ ಇಲ್ಲದೇ ಹೋದರೆ ಕೆಲಸಗಳು ಚೆನ್ನಾಗಿ ನಡೆಯುವುದಿಲ್ಲ. ಕೆಲವು ಕಡೆಗಳಲ್ಲಿ ಕೆಲವು ಕೆಲಸಗಳನ್ನು ತಾಲ್ಲೂಕುಬೋರ್ಡ್‌ಗಳಿಗೇ ವಹಿಸುತ್ತಾರೆ. ಇನ್ನು ಕೆಲವು ಕಡೆಗಳಲ್ಲಿ ರೆವಿನ್ಯೂ ಇಲಾಖೆಗೆ ವಹಿಸುತ್ತಾರೆ. ಮತ್ತು ರೆವಿನ್ಯೂ ಅಧಿಕಾರಿಗಳು ಮಾಡುವ ಕೆಲಸಗಳನ್ನು ಇಂಜನಿಯರಿಂಗ್ ಅಧಿಕಾರಿಗಳಿಗೆ ವಹಿಸುತ್ತಾರೆ. ಇದು ಸರಿಯಲ್ಲ. ಈ ಕೆಲಸಗಳನ್ನು ಮೂರು ಎಜೆನ್ಸಿಗಳಿಗೂ ಒದಗಿಸಬೇಕು. ಇಂಜನಿಯರುಗಳಿಗೆ ಹೆಚ್ಚು ಕೆಲಸಗಳನ್ನು ಒದಗಿಸಬೇಕು. ಏಕೆಂದರೆ ಅಳತೆ ಮಾಡುವುದಾಗಲೀ, ಇಷ್ಟೇ ಕೆಲಸವಾಯಿತು ಎಂದು ಹೇಳುವುದಕ್ಕಾಗಲೀ ಅವರಿಗೆ ಸಾಧ್ಯ. ಅದು ರೆವಿನ್ಯೂ ಅಧಿಕಾರಿಗಳಿಗೆ ಸಾಧ್ಯವಿಲ್ಲ. ತಾಲ್ಲೂಕುಬೋರ್ಡ್‌ನಲ್ಲಿ ಒಬ್ಬ ಸೂಪರ್‌ವೈಜರ್ ಇರುತ್ತಾರೆ. ಅವರ ಕೈಕೆಳಗೆ ಇರತಕ್ಕವರಿಂದ ಏನು ಕೆಲಸಮಾಡುವುದಕ್ಕೂ ಸಾಧ್ಯವಿಲ್ಲ. ಇಂಜನಿಯರಿಂಗ್ ಅಧಿಕಾರಿಗಳು ಅಭಾವ ಪರಿಸ್ಥಿತಿ ಇರುವ ಕಡೆಗಳಲ್ಲಿ ಶಾಶ್ವತವಾದಂಥ ಕೆಲಸಗಳನ್ನು ಮಾಡಲು ಗಮನಕೊಡಬೇಕು. ತಪ್ಪುಮಾಡಿದಂಥ ಅಧಿಕಾರಿಗಳ ಮೇಲೆ ಉಗ್ರವಾದ ಶಿಕ್ಷೆಯನ್ನು ಮಾಡುವುದಕ್ಕೆ ವಿಜಿಲೆನ್ಸ್ ಕಮಿಷನ್ನಿಗೆ ಹೇಳುವುದಲ್ಲದೆ ವಿಶೇಷವಾದಂಥ ಕ್ರಮವನ್ನು ಅವರು ತೆಗೆದುಕೊಳ್ಳುವುದಕ್ಕೆ ಹಾಗೂ ಬಹಳ ಜಾಗ್ರತರಾಗಿ ಕೆಲಸಮಾಡುವುದಕ್ಕೆ ತಕ್ಕ ಏರ್ಪಾಡುಮಾಡಬೇಕೆಂದು ನಾನು ಹೇಳುತ್ತೇನೆ.

(ಶ್ರೀ ಎನ್. ಹುಚ್ಚಮಾಸ್ತಿ ಗೌಡ)

ಕೊನೆಯದಾಗಿ, ನಮ್ಮ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಕೊಟ್ಟಿರತಕ್ಕ ಹೇಳಿಕೆ ಕಾರ್ಯಗತವಾಗುವಂಥಾದ್ದನ್ನು ನೋಡುವಂಥ ಅವಕಾಶ ನಮಗೆ ಒದಗಲಿ ಎಂಬುದಾಗಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ ಎನ್. ದೇಸಾಯಿ (ಹಾನಗಲ್).—ಸನ್ಮಾನ್ಯ ಅಧ್ಯಕ್ಷರೇ, ಮುಖ್ಯ ಮಂತ್ರಿಗಳು ಬರಗಾಲದ ಬಗ್ಗೆ ಕೊಟ್ಟಂಥ ಹೇಳಿಕೆ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ಸಲದ ಬರಗಾಲ ಅಂದರೆ, 100 ವರ್ಷಗಳ ಹಿಂದೆ ಇಡೀ ರಾಜ್ಯಕ್ಕೆ ವ್ಯಾಪಿಸಿಕೊಂಡಿದ್ದ ಬರಗಾಲ ಪುನಃ ಇವತ್ತು ಬಂದಿದೆ. ಈ ವರ್ಷದ್ದು ಕೀಲಕನಾಮ ಸಂವತ್ಸರದ ಬರಗಾಲವಾಗಿದೆ ಅಷ್ಟೆ. ನಮ್ಮ ರಾಜ್ಯದಲ್ಲಿ ಮೇಲಿಂದಮೇಲೆ ಹಿಂದೆ ಬರಗಾಲ ಬರುತ್ತಾ ಇತ್ತು. ಆದರೆ ಇಷ್ಟು ವ್ಯಾಪಕವಾಗಿರಲಿಲ್ಲ ಎಲ್ಲೋ ನಾಲ್ಕಾರು ಜಿಲ್ಲೆಗಳಿಗೆ ಬರುತಿತ್ತು. ಉಳಿದ ಜಿಲ್ಲೆಗಳಲ್ಲಿ ಬೆಳೆ ಚೆನ್ನಾಗಿದ್ದು ಒಂದು ಕಡೆಯಿಂದ ಇನ್ನೊಂದು ಕಡೆಗೆ ಕಾಳು ಕಡ್ಡಿ ಕಳುಹಿಸುವುದಕ್ಕೆ ಸಾಧ್ಯವಾಗುತಿತ್ತು. ಇಷ್ಟು ತೀಕ್ಷ್ಣವಿರಲಿಲ್ಲ. ಈ ಸಾರಿ ಇಡಿ ರಾಜ್ಯಕ್ಕೆ ಈ ಬರಗಾಲ ವ್ಯಾಪಿಸಿಕೊಂಡಿದೆ. ಮುಖ್ಯಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಕೊಟ್ಟಂತೆ ಒಂದೆರಡು ಜಿಲ್ಲೆಗಳನ್ನು ಬಿಟ್ಟು ಉಳಿದ ಎಲ್ಲಾ ಜಿಲ್ಲೆಗಳಲ್ಲಿ ಅಂದರೆ ಇಡೀ ರಾಜ್ಯಕ್ಕೆ ಈ ಬರಗಾಲ ಬಂದಿದೆ. ಅವರು ತಮ್ಮ ಹೇಳಿಕೆಯಲ್ಲಿ ಇನ್ನೊಂದು ಮಾತನ್ನು ಹೇಳಿದ್ದಾರೆ. 174 ತಾಲ್ಲೂಕುಗಳಲ್ಲಿ 100 ತಾಲ್ಲೂಕುಗಳಿಗೆ ಬರಗಾಲ ಇದೆ 74 ತಾಲ್ಲೂಕುಗಳಲ್ಲಿ ಇಲ್ಲವೆಂದು ಹೇಳಿದ್ದಾರೆ. ಈ ಅಂಕಿ ಅಂಶಗಳನ್ನು ಸಂಗ್ರಹಿಸಿದ್ದು ಸ್ವಲ್ಪ ದಿವಸಗಳ ಹಿಂದೆ ಎಂದು ನನಗೆ ಕಾಣುತ್ತದೆ. ಆಗಸ್ಟ ತಿಂಗಳಲ್ಲಿ ಮಳೆಯ ಅಭಾವದಿಂದ 74 ತಾಲ್ಲೂಕುಗಳ ಪೈಕಿ ಅರ್ಧದಷ್ಟು ಅಂದರೆ ಸುಮಾರು 37 ತಾಲ್ಲೂಕುಗಳಲ್ಲಿಯೂ ಬರಗಾಲ ಬಂದಿದೆಯೆಂದು ನನಗನ್ನಿಸುತ್ತದೆ. ಈ ಸಲದ ಬರಗಾದ ವಿಶೇಷವೇನೆಂದರೆ, ಈ ಬರಗಾಲ ಮಲೆನಾಡಿಗೂ ಕೂಡ ವ್ಯಾಪಿಸಿದೆ ಸಾಮಾನ್ಯವಾಗಿ ಮಲೆನಾಡಿನಲ್ಲಿ ಬರಗಾಲ ಬರುವುದಿಲ್ಲವೆಂಬುದು ಜನರ ಭಾವನೆ. ಅದು ಈ ಸಾರಿ ಸುಳ್ಳಾಗಿ ಮಲೆನಾಡಿನಲ್ಲಿಯು ಕೂಡ ಬರಗಾಲ ವ್ಯಾಪಿಸಿದೆ. ಮಲೆನಾಡಿನಲ್ಲಿ ಮುಖ್ಯ ಬೆಳೆ ಅಂದರೆ ಬತ್ತ. ಈ ಬತ್ತಕ್ಕೆ ಬಹಳವಾಗಿ ನೀರು ಬೇಕು. ಅದು ವೇಳೆವೇಳೆಗೆ ಬೇಕು. ಯಾವ ವೇಳೆಗೆ ನೀರು ಬೇಕೋ ಆಗ ಕೊಡದೆ ಆ ವೇಳೆ ಬಿಟ್ಟು ಮೊದಲು ನೀರು ಕೊಟ್ಟರೂ ಆ ಬೆಳೆ ಬರುವುದಿಲ್ಲ ಆಮೇಲೆ ನೀರು ಕೊಟ್ಟರೂ ಆ ಬೆಳೆ ಬರುವುದಿಲ್ಲ. ಬತ್ತ ನಾಟಿ ಹಾಕಿ ಒಂದೂವರೆ ತಿಂಗಳಾದಮೇಲೆ ಬತ್ತದ ಗದ್ದೆಗೆ ನೀರು ಕಟ್ಟಬೇಕು. ಒಂದು ವೇಳೆ ಆಗ ನೀರು ಇರಲಿಲ್ಲವೆಂದರೆ ಬತ್ತದ ಬೆಳೆ ಮುಂದೆ ಚೆನ್ನಾಗಿ ಬರುವುದಿಲ್ಲ. ಸರ್ವೇ ಸಾಧಾರಣವಾಗಿ ಜುಲೈ ತಿಂಗಳು ನೀರು ಕಟ್ಟಿ ಹೊಡೆತ ಮಾಡತಕ್ಕ ಕಾಲ. ನಮ್ಮ ಧಾರವಾಡ ಜಿಲ್ಲೆಯಲ್ಲಿರುವ ನಾಲ್ಕೈದು ಮಲೆನಾಡು ತಾಲ್ಲೂಕುಗಳ ವಿಷಯವನ್ನು ಹೇಳಬೇಕಾದರೆ. ಜೂನ್‌ನಲ್ಲಿ ನಮ್ಮಲ್ಲಿ ಬತ್ತ ಬಿತ್ತಿದ್ದು ಜುಲೈ 15ರ ನಂತರ ಅದಕ್ಕೆ ನೀರು ಕಟ್ಟಿ ಹೊಡೆತ ಮಾಡಬೇಕು. ಆದರೆ ಜುಲೈ 15ರಿಂದ ಇದುವರೆಗೂ ಮಳೆಯಾಗಲಿಲ್ಲ. ಅದಕ್ಕೆ ಮೊದಲು ತುಂತುರು ತುಂತುರು ಹನಿ ಮಳೆಯಾಗಿದ್ದರೂ ಕೆರೆಕಟ್ಟೆಗಳಲ್ಲಿ ನೀರು ಬರಲಿಲ್ಲ. ಈ ತಿಂಗಳ ಅವಧಿಯಲ್ಲಿ ಎಷ್ಟು ಇಂಚು ಮಳೆಯಾಗಿದೆಯೆಂದು ಲೆಕ್ಕಹಾಕಿದರೆ ಮಳೆ ಏನೋ ಆಗಿದೆ. ಒಂದು ಸೆಂಟ್ ಎರಡು ಸೆಂಟ್ ಈ ಪ್ರಕಾರ ಆಗಿದೆ. ಈ ತಿಂಗಳಲ್ಲಿ 4–5 ಇಂಚು ಮಳೆಯಾದಂಥ ಲೆಕ್ಕ ಇದೆ. ಇದರಿಂದೇನೂ ಉಪಯೋಗವಾಗಲಿಲ್ಲ. ಕೆರೆಕಟ್ಟೆಗಳೂ ಕೂಡ ತುಂಬಲಿಲ್ಲ.

ನಮ್ಮಲ್ಲಿ ತಾಲ್ಲೂಕಿನಲ್ಲಿ ಸಾಗುವಳಿ ಭೂಮಿಯ ಕ್ಷೇತ್ರ ಒಟ್ಟು 1, 20,000 ಎಕರೆ ಇದೆ. ಇದರಲ್ಲಿ 85 ಸಾವಿರ ಎಕರೆಯಲ್ಲಿ ಬತ್ತದ ಬೆಳೆಯನ್ನು ಬೆಳೆಯುತ್ತಾರೆ. ಉಳಿದದ್ದು ಖುಷ್ಕಿ ಬೆಳೆಯನ್ನು ಬೆಳೆಯುತಕ್ಕ ಭೂಮಿ. ಭತ್ತದ ಒಟ್ಟು ಕ್ಷೇತ್ರದಲ್ಲಿ 69 ಸಾವಿರ ಎಕರೆ ಬತ್ತ ಬೆಳೆಯುತಕ್ಕ ಪ್ರದೇಶ ಏನಿದೆ ಇದು ಮಳೆಯಮೇಲೆ ಮತ್ತು ಸಣ್ಣ ಸಣ್ಣ ಕೆರೆಗಳ ಮೇಲೆ ಅವಲಂಬಿಸಿದೆ. ಈಗ ಕೆರೆಯಲ್ಲಿ ನೀರು ಬತ್ತಿಗುವುದರಿಂದ, ಮತ್ತು ಮಳೆಬಾರದೆ ಇರುವುದರಿಂದ ಬತ್ತದ ಬೆಳೆ ಕೆಟ್ಟುಹೋಯಿತು. ಬರೀ ಮಳೆಯ ನೀರಿನಿಂದ ಬೆಳೆಯುವ ಪ್ರದೇಶದಲ್ಲಿ ನಮ್ಮ ಹಾನಗಲ್ ತಾಲ್ಲೂಕಿನಲ್ಲಿ 69 ಸಾವಿರ ಎಕರೆಯಲ್ಲಿ ಬತ್ತದ ಬೆಳೆ ಕೆಟ್ಟು ಹೋಯಿತು. ಧರ್ಮ ಕೆನಾಲ್ ಕೆಳಗಡೆ 15 ಸಾವಿರ ಎಕರೆ ಪ್ರದೇಶದಲ್ಲಿ ಮಾತ್ರ ಬತ್ತದ ಬೆಳೆ ಚೆನ್ನಾಗಿದೆ. ರಾಗಿ, ಹುರುಳಿ, ಜೋಳ ಇತ್ಯಾದಿಗಳನ್ನು ಬೆಳೆಯತಕ್ಕ ಖುಷ್ಕಿ ಜಮೀನಿನ ಬೆಳೆಯೆಲ್ಲವೂ ಕೆಟ್ಟುಹೋಗಿದೆ. ಒಣಗಿ ಹೋಗಿದೆ. ನಮ್ಮ ಮಲೆನಾಡಿನಲ್ಲಿ ಎಂದೆಂದೂ ಬಾರದೇ ಇದ್ದಂತಹ ಬರಗಾಲ ಬಂದಿದೆ. ಇನ್ನೂ ಮೇಲಾದರೂ ಸ್ವಲ್ಪ ಮಳೆ ಬಂದರೆ ಧರ್ಮಾ ಕೆನಾಲ್ ಕೆಳಗಡೆ ಇರತಕ್ಕ 15 ಸಾವಿರ ಎಕರೆಗಳಲ್ಲಿ ಬಿತ್ತಿರತಕ್ಕಂಥ ಬತ್ತದ ಬೆಳೆಯನ್ನು ಬೆಳೆದುಕೊಳ್ಳಬಹುದು. ಉಳಿದ ಖುಷ್ಕಿ ತರೀ ಬೆಳೆಯೆಲ್ಲವೂ ಲುಕ್ಸಾನಾಗಿದೆ. ಇದರ ಪರಿಣಾಮದಿಂದ ಏನಾಗಿದೆ ಎಂದರೆ ಕೂಲಿಗಾರರನ್ನು ರೈತರು ಯಾರೂ ಹೆಚ್ಚು ಕೂಲಿ ಕೆಲಸಕ್ಕೆ ಕರೆಯುವುದಿಲ್ಲ. ಆದ್ದರಿಂದ ಈ ಬರಗಾಲ ಪೀಡಿತ ಪ್ರದೇಶಗಳಲ್ಲಿ ಜನಗಳಿಗೆ ಕೂಲಿಯನ್ನು ಒದಗಿಸುವುದು ಮತ್ತು

ಕಾಳನ್ನು ಒದಗಿಸುವುದು ಅವಶ್ಯ ಇದೆ. ಇಂಥಾ ಬರಗಾಲವನ್ನು ತಡೆಗಟ್ಟಬೇಕಾದರೆ ತಾತ್ಪೂರ್ತಿಕವಾಗಿ ಮತ್ತು ಶಾಶ್ವತವಾದ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳುವುದು ಅವಶ್ಯ ಇದೆ. ಎಲ್ಲೆಲ್ಲಿ ಮಳೆಬಾರದೆ ಬೆಳೆ ಆಗಿಲ್ಲವೋ ಅಂಥಾ ಪ್ರದೇಶದಲ್ಲಿ ಸ್ಕೇರ್ಸಿಟಿ ವರ್ಕ್ಸ್ ಪ್ರಾರಂಭಮಾಡಬೇಕು. ಅದರಿಂದ ಬಡಜನಗಳಿಗೆ ಕೂಲಿಕೊಡುವಂತಾಗುತ್ತದೆ. ಅದರ ಜೊತೆಗೆ ಅವರಿಗೆ ಕಾಳನ್ನೂ ಒದಗಿಸಬೇಕು. ಈ ಸ್ಕೇರ್ಸಿಟಿ ಕೆಲಸಗಳನ್ನು ನಮ್ಮ ತಾಲ್ಲೂಕಿನಲ್ಲಿ ತೆಗೆದುಕೊಳ್ಳಬೇಕೆಂದು ಡೆಪ್ಯುಟಿ ಕಮೀಷನರನ್ನು ಕೇಳಿದರೆ ಹೋದ ಸಲ ಎಲ್ಲಿ ಸ್ಕೇರ್ಸಿಟಿ ಬಂದಿತ್ತೋ ಅಂಥಾ ಕಡೆಗಳಲ್ಲಿ ಮಾತ್ರ ಈ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆ, ನಿಮ್ಮ ತಾಲ್ಲೂಕಿನಲ್ಲಿ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ. ಈ ರೀತಿಯಾದಂತಹ ಕೆಲವು ತಾಂತ್ರಿಕ ತೊಂದರೆಗಳು ಇರುತ್ತವೆ. ಇಂಥದ್ದನ್ನು ಸರ್ಕಾರ ದೂರ ಮಾಡಬೇಕು. ಹಿಂದಿನ ವರ್ಷ ಸ್ಕೇರ್ಸಿಟಿ ಇರಬೇಕೆಂಬ ನಿರ್ಬಂಧವನ್ನು ಹಾಕಬಾರದು. ಈಗ ಅಭಾವ ಅಲ್ಲಿ ಉಂಟಾಗಿದೆಯೋ ಇಲ್ಲವೋ ಅದನ್ನು ನೋಡಬೇಕು. ಅಭಾವ ಇದೆಯೆಂದರೆ ಸ್ಕೇರ್ಸಿಟಿ ವರ್ಕ್ಸ್ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಕೆರೆ ಕಟ್ಟೆ ಕಾಮಗಾರಿಗಳು, ರಸ್ತೆ ಕಾಮಗಾರಿಗಳು ಈ ಕೆಲಸಗಳನ್ನು ತೆಗೆದುಕೊಂಡರೆ ಶಾಶ್ವತವಾದ ಪರಿಹಾರ ಕಾಮಗಾರಿಗಳನ್ನು ಮಾಡಿದ ಹಾಗಾಗುತ್ತದೆ. ಇದರಿಂದ ಕೂಲಿಗಾರರಿಗೆ ಕೂಲಿ ಸಿಕ್ಕಿದಂತಾಗುತ್ತದೆಯಲ್ಲದೆ ಬರಗಾಲವನ್ನು ತಡೆಗಟ್ಟುವುದಕ್ಕೆ ಅನುಕೂಲವಾಗುತ್ತದೆ. ಕೆರೆ ಕಾಮಗಾರಿಮಾಡುವುದರಿಂದ ಕೆರೆಯಲ್ಲಿ ನೀರು ನಿಂತು ಇಂಥಾ ಅಭಾವ ಪರಿಸ್ಥಿತಿ ಬಾರದಹಾಗಾಗುತ್ತದೆ. ಧಾರವಾಡ ಜಿಲ್ಲೆಯಲ್ಲಿ 3 ಸಾವಿರ ಕೆರೆಗಳು ಇವೆ. ಇದರಲ್ಲಿ ಅರ್ಧ ಭಾಗ ಕೆರೆಗಳು ನಾದುರಸ್ತಾಗಿವೆ. ಏರಿಗಳು ಒಡೆದಿವೆ. ಫೀಡರ್ ಚಾನಲ್ ದುರಸ್ತು ಮಾಡಿಲ್ಲ. ಇವುಗಳನ್ನು ದುರಸ್ತು ಮಾಡುವುದು ಅವಶ್ಯ ಇದೆ. ಕೆರೆಗಳಿಗೆ ಸರಿಯಾಗಿ ನೀರು ಪೂರೈಸಬೇಕಾದರೆ ಫೀಡರ್ ಚಾನಲ್ ದುರಸ್ತು ಆದರೆ ಅನುಕೂಲವಾಗುತ್ತದೆ. ಈ ಬರಗಾಲಕ್ಕೆ ಶಾಶ್ವತವಾದ ಪರಿಹಾರವನ್ನು ಒದಗಿಸುವ ದೃಷ್ಟಿಯಿಂದ ದೊಡ್ಡ ದೊಡ್ಡ ನೀರಾವರಿ ಕೆಲಸಗಳು ಎಲ್ಲೆಲ್ಲಿ ಅವಶ್ಯಕವೋ ಅಲ್ಲೆಲ್ಲಾ ತೆಗೆದುಕೊಳ್ಳಬೇಕು. ತೀವ್ರವಾಗಿ ಫಲ ಕೊಡತಕ್ಕಂಥ ಸಣ್ಣ ಸಣ್ಣ ಕೆರೆಗಳ ಕೆಲಸಗಳನ್ನೂ ತೆಗೆದುಕೊಳ್ಳಬೇಕು. ನಮ್ಮ ಮಲೆನಾಡಿನಲ್ಲಿ ಫೀಡರ್ ಚಾನಲ್‌ಗಳನ್ನು ಹೆಚ್ಚಾಗಿ ಮಾಡಿಸಬೇಕು. ನೀರಾವರಿ ಬಾವಿಗಳನ್ನು ತೋಡಿಸಬೇಕು. ಇದಕ್ಕೆ ಯಾವ ರೀತಿಯ ಸಹಾಯವನ್ನು ಮಾಡಬೇಕೋ ಅದನ್ನು ಸರ್ಕಾರದವರು ಮಾಡುವುದು ಅವಶ್ಯ ಇದೆ. ಇದರ ಜೊತೆಗೆ ನೀರಾವರಿ ಬಾವಿಗಳಿಗೆ ಪಂಪುಸೆಟ್ಟುಗಳನ್ನು ಒದಗಿಸಿಕೊಡಬೇಕು. ಮತ್ತು ಅವುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡಬೇಕು. ನದಿಯ ದಂಡಿಯಲ್ಲಿ ಹೊಳೆಯ ದಂಡೆಯಲ್ಲಿ ಎಲ್ಲೆಲ್ಲಿ ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ಸಾಧ್ಯವಿದೆಯೋ ಅಂಥಾಕಡೆ ಲಿಫ್ಟ್ ಇರಿಗೇಷನ್ ನೀರಾವರಿ ಸೌಲಭ್ಯವನ್ನು ರೈತರಿಗೆ ಒದಗಿಸಿಕೊಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ನದಿಗಳು ಎಲ್ಲೆಲ್ಲಿ ಇದೆಯೋ ಆ ಪ್ರದೇಶಗಳಿಗೆ ವಿದ್ಯುಚ್ಛಕ್ತಿ ಲೈನನ್ನು ನದಿದಂಡೆಗುಂಟೆ ಎಳೆಯಬೇಕು. ಹಾಗೆ ಮಾಡುವುದಾದರೆ ಆ ಪ್ರದೇಶಗಳಲ್ಲಿ ರೈತರಿಗೆ ಬೇಕಾದಷ್ಟು ಪಂಪು ಸೆಟ್ಟುಗಳನ್ನು ಕೊಡಿಸಿ ಅವರಿಗೆ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡುವುದಕ್ಕೆ ಅನುಕೂಲವಾಗುತ್ತದೆ. ಈಗ ಇನ್ನೊಂದು ಏನಾಗಿದೆ ಎಂದರೆ ಜನರು ಮುಂದೆ ಬಂದರೆ ಎಲೆಕ್ಟ್ರಿಸಿಟಿ ಲೈನನ್ನು ಒಯ್ಯುತ್ತೇವೆಂದು ಎಲೆಕ್ಟ್ರಿಸಿಟಿ ಬೋರ್ಡಿನವರು ಹೇಳುತ್ತಾರೆ. ಎಲೆಕ್ಟ್ರಿಸಿಟಿ ಬೋರ್ಡಿನವರು ಲೈನು ಎಳೆದರೆ ನಾವು ಕರೆಂಟ್ ತೆಗೆದುಕೊಳ್ಳುತ್ತೇವೆಂದು ರೈತರು ಹೇಳುತ್ತಾರೆ. ಇದು ಏನಾಗಿದೆ ಎಂದರೆ ಮದುವೆ ಆದ ಹೊರತು ಹುಚ್ಚು ಬಿಡುವುದಿಲ್ಲ. ಹುಚ್ಚು ಬಿಡದ ಹೊರತು ಮದುವೆಯಾಗುವುದಿಲ್ಲ ಎನ್ನುವ ಹಾಗೆ ಇದು ಆಗಿದೆ. ಎಂ. ಎಸ್. ಇ. ಬಿ. ಯವರು ಲೈನು ಎಳೆದರೆ ನಾವು ವಿದ್ಯುಚ್ಛಕ್ತಿಯನ್ನು ತೆಗೆದುಕೊಳ್ಳುತ್ತೇವೆಂದು ರೈತರು ಹೇಳುತ್ತಾರೆ ಅದರ ಸಲುವಾಗಿ ಎಲ್ಲೆಲ್ಲಿ ವಿದ್ಯುಚ್ಛಕ್ತಿ ಲೈನನ್ನು ಎಳೆಯುವ ಅವಶ್ಯಕತೆ ಇದೆಯೋ ಅಂಥಾ ಕಡೆಗಳಿಗೆಲ್ಲಾ ವಿದ್ಯುಚ್ಛಕ್ತಿ ಲೈನನ್ನು ಒಯ್ಯಬೇಕೆಂದು ನಾನು ಹೇಳುತ್ತೇನೆ. ಎಲೆಕ್ಟ್ರಿಸಿಟಿ ಪಂಪು ಸೆಟ್ಟುಗಳನ್ನು ಕೊಡುವುದರಲ್ಲಿ ಎಂ. ಎಸ್. ಇ. ಬಿ. ಅದರು ಏನು ಒಂದು ಕಾನೂನನ್ನು ಅನುಸರಿಸುತ್ತಿದ್ದಾರೆಯೋ ಅದನ್ನು ರಿಲ್ಯಾಕ್ಸ್ ಮಾಡಿ ನೀರಾವರಿ, ಬಾವಿಗಳಿಗೆ ಟಾಪ್‌ಪ್ರಿಯಾರಿಟಿಕೊಟ್ಟು ರೈತರು ಆಹಾರ ಧಾನ್ಯವನ್ನು ಬೆಳೆಸುವುದಕ್ಕೆ ಏನು ಸಹಾಯ ಬೇಕೋ ಅದನ್ನು ಒದಗಿಸಿಕೊಡಬೇಕು. ಸರ್ಕಾರದವರು ಲಿಫ್ಟ್ ಇರಿಗೇಷನ್ ಮಾಡಿಸಿಕೊಡುವುದಕ್ಕೆ ಹೆಚ್ಚು ಗಮನ ಕೊಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್ (ಗದಗ್).—ಮಾನ್ಯ ಸಭಾಪತಿಗಳೇ, ಸಮಯ ಬಹಳ ಆಗಿದೆ. ಮಾತನಾಡತಕ್ಕದ್ದು ವಿಪರೀತವಾಗಿದೆ. ಆದರೂ ಸಹ ಮೊಟ್ಟಮೊದಲನೆಯದಾಗಿ ಎಷ್ಟು ಸಾಧ್ಯವೋ ಅಷ್ಟು ಕಡಿಮೆ ಸಮಯ ತೆಗೆದುಕೊಳ್ಳುವುದಕ್ಕೆ ನಾನು ಅಪೇಕ್ಷೆ ಮಾಡುತ್ತೇನೆ. ಮೊದಲು ನನ್ನ ತಾಲ್ಲೂಕಿನಲ್ಲಿ ಆರಂಭ ಮಾಡಬೇಕಾಗಿದ್ದಂತಹ ಕೆಲಸಗಳ ಬಗ್ಗೆ ಕೆಲವು ಮಾತು

(ಶ್ರೀ ಕೆ. ಎಚ್. ಪಾಟೀಲ್)

ಗಳನ್ನು ನಾನು ಹೇಳುತ್ತೇನೆ. ಗದಗ್ ತಾಲ್ಲೂಕಿನಲ್ಲಿ ಹೊಸಳ್ಳಿ, ಮುದಗನೂರು, ದುಂದೂರು ವಯಾ ಚಿಕ್ಕ ಹಂದಿಗೋಳ (2) ಹಿರೇ ಹಂದಿಗೋಳ, ಬಿ ತವ ಕಟ್ಟೆ (3) ಗದಗ್, ಹಾತಲಗೇರಿ, ಕಣಗಿನಹಾಳ್, ಹರ್ತಾಪುರ್ (5) ಹುಲಿಕೋಟಿ, ಹೊಂಬಾಳ್, (5) ಬೆಳಹೋಡ, ಹುಬ್ಬಿ ರೋಡು. ಈ ರಸ್ತೆಗಳ ನಿರ್ಮಾಣ ಅತ್ಯಂತ ಅವಶ್ಯ ಇದೆ. ಸಾರ್ವಜನಿಕರ ಉಪಯೋಗ ದೃಷ್ಟಿ ಯಿಂದ ಇವು ಬಹಳ ಮಹತ್ವದ ರಸ್ತೆಗಳು. ಈಗ ಅಲ್ಲಿ ಬರಗಾಲ ಕಾಮಗಾರಿಗಳನ್ನು ತೆಗೆದು ಕೊಳ್ಳುವುದು ಹೆಚ್ಚು ಸೂಕ್ತವಾಗುತ್ತದೆ.

ವಿದ್ಯುಚ್ಛಕ್ತಿ ಸರಬರಾಜಿನ ಬಗ್ಗೆ ಹೇಳಬೇಕಾದರೆ ಅನೇಕ ಕಡೆ ತೋಟ ಮಾಡುವಂತಹ ಸೌಲಭ್ಯಗಳು ನಮ್ಮ ಗದಗ್ ತಾಲ್ಲೂಕಿನಲ್ಲಿ ಇವೆ. ಆದ್ದರಿಂದ ಸರ್ಕಾರದವರು ಬಾವಿಗಳಿಗೆ ಪಂಪು ಸೆಟ್ಟು ಹಾಕಿಸಲು ಅನುಕೂಲವಾಗುವಂತೆ ಕಿರಟಗಿ, ಸಂಬಾಪುರ, ಬೆಳಹೊಡ, ಮುದಗನೂರ್ ಈ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕು. ಎಲೆಕ್ಟ್ರಿಸಿಟಿಯನ್ನು ಆ ಪ್ರದೇಶಕ್ಕೆ ಒಯ್ಯುವುದಕ್ಕೆ ಆಡಳಿತ ಪಕ್ಷದವರು ವಿವೇಕತನದಿಂದಾಗಿ ಇದುವರೆಗೂ ಸಾಧ್ಯವಾಗಿಲ್ಲ. ಸರ್ಕಾರ ದವರು ಶ್ರೀಮಂತರಿಗೆ ದುಡ್ಡು ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಡಿ. ಅರೆಹೊಟ್ಟೆ ಇರುವವನು, ಹೊಟ್ಟೆ ತುಂಬಾ ತುಂಬಿಕೊಳ್ಳುವುದಕ್ಕೆ ಮಾಡತಕ್ಕ ಪ್ರಯತ್ನಗಳು ಬಹಳ ಪ್ರಮಾದ ವಾಗಿವೆ. ಸರ್ಕಾರದವರು ತಮ್ಮ ತಪ್ಪನ್ನು ತಿದ್ದಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. ಸಣ್ಣ ನೀರಾವರಿಯ ಯೋಜನೆಯ ಬಗ್ಗೆ ಹೇಳ ಬೇಕಾದರೆ ಮಾನ್ಯ ದೊಡ್ಡಮೇಟಿಯವರು ಈಗ ಇಲ್ಲಿ ಇದ್ದಿದ್ದರೆ ನೆಟ್ಟಗಾಗುತ್ತಿತ್ತು. ಆ ಮಂತ್ರಿ ಗಳು ಇಲ್ಲದಿದ್ದರೂ ಆ ಖಾತೆಯ ಉಪಮಂತ್ರಿಗಳು ಇಲ್ಲಿ ಇದ್ದಾರೆ. ಅವರೇ ಆಸ್ತೆವಹಿಸಿ ಕೆಲಸ ವನ್ನು ಮಾಡಲಿ. ಮಲ್ಲಸಮುದ್ರ, ನಗರಿ, ಹುಲಿಕಲ್, ಕಲ್ಲಂ, ಗವರವಾಡ್, ಕಿರಟಗಿ, ಈ ಸಣ್ಣ ನೀರಾವರಿ ಕೆಲಸಗಳನ್ನು ತೆಗೆದುಕೊಂಡು ಅವುಗಳನ್ನು ಪೂರ್ತಿ ಮಾಡಬೇಕೆಂದು ನಾನು ಈ ಸಮಯದಲ್ಲಿ ಸಲಹೆ ಮಾಡುತ್ತೇನೆ.

ಆಮೇಲೆ ಗದಗ್‌ಟೌನ್ ಬಹಳ ದೊಡ್ಡ ಟೌನ್. ಆದರೆ ಬೆಂಗಳೂರು ಸಿಟಿಯ ಹಾಗೆ ದೊಡ್ಡ ಕೈಗಾರಿಕಾ ಟೌನ್ ಅಲ್ಲ. ಮುನಿಸಿಪಲ್ ಷಹರಗಳಲ್ಲಿ ಜನಸಂಖ್ಯೆ ಬಹಳ ಇದೆ. ಅದು ತೀರಾ ನರಕಪ್ರದೇಶವೆಂದು ಹೇಳಬಹುದು. ಅಲ್ಲಿ ಕೂಲಿಗಾರರೂ ಇದ್ದಾರೆ. ಒಕ್ಕಲುತನಕ್ಕೆ ಅದು ಹೆಚ್ಚು ಪ್ರಾಧಾನ್ಯವಾಗಿದೆ. ಗದಗ್ ಮತ್ತು ಬೆಟಗೇರಿಯಲ್ಲಿ ಕುಡಿಯುವ ನೀರಿಗೆ ತುಂಬಾ ತೊಂದರೆಯಾಗಿದೆ. ಇದರ ಬಗ್ಗೆ ಸರ್ಕಾರದವರು ನಿಗಾ ಕೊಡಬೇಕು.

ಬೆಂಗಳೂರಿನಲ್ಲಿ ಸಕ್ಕರೆಯನ್ನು ಹೆಚ್ಚು ಕೊಡುತ್ತಾರೆ. ಬೆಂಗಳೂರಿನಿಂದ ಬೇರೆ ಕಡೆಗೂ ಸಕ್ಕರೆಯನ್ನು ಕಳುಹಿಸುತ್ತಾರೆ. ಹುಬ್ಬಳ್ಳಿಯಲ್ಲಿ ಹೆಚ್ಚು ಸಕ್ಕರೆಯನ್ನು ಕೊಡುತ್ತಾರೆ. ಆದರೆ ಗದಗ್‌ನಲ್ಲಿ ಸಕ್ಕರೆ ಇಲ್ಲ,

8-00 P.M.

ಸಾಧಾರಣವಾಗಿ ಇಂದು ದೇಶದಲ್ಲಿ ಯಾವ ರೀತಿಯಾಗಿ ಕೆಲಸ ನಡೆಯುತ್ತಿದೆ ಎನ್ನುವುದನ್ನು ಇಲ್ಲಿ ಹೇಳಬೇಕಾಗಿದೆ. ನಮ್ಮ ಗದಗ್‌ನಲ್ಲಿ ಯಾವ ರೀತಿಯಾಗಿ ಕೆಲಸಗಳೂ ಆಗುತ್ತಿಲ್ಲ. ಇಲ್ಲಿ ಜನ ಗಳಿಗೆ ಅನುಕೂಲವಾಗುವಂತಹ ಕೆಲಸಗಳನ್ನು ಆರಂಭ ಮಾಡಬೇಕು, ಇಲ್ಲದಿದ್ದರೆ ಜನರ ತಾಳ್ಮೆ ಕೆಡುತ್ತದೆ. ಇದಕ್ಕೆ ಸರಕಾರದವರೇ ಕಾರಣಭೂತರು ಎಂದು ಹೇಳಬೇಕಾಗಿ ಬರುತ್ತದೆ. ಇದರ ಬಗ್ಗೆ ಸರಕಾರ ಸ್ವಲ್ಪ ಎಚ್ಚರಿಕೆಯಿಂದ ಈ ಸಮಯದಲ್ಲಿ ಕೆಲಸ ಮಾಡಬೇಕೆಂದು ಹೇಳುತ್ತೇನೆ. ನಮ್ಮ ಭಾಗದಲ್ಲಿ ಕೆಲವು ಕಡೆ ಜನ ಒಂದು ನಾಲ್ಕಾರು ಎಕರೆಗಳಷ್ಟು ಭೂಮಿ ಬೇಸಾಯ ಮಾಡಲು ಬಾವಿಗಳನ್ನು ತೆಗೆಸಲು ಸುಮಾರು ಎರಡುಸಾವಿರದ ನೂರು ರೂಪಾಯಿಗಳಷ್ಟನ್ನು ಸಾಲವಾಗಿ ಪಡೆದುಕೊಂಡರೂ ಆ ಬಾವಿಯಲ್ಲಿ ನೀರು ಸರಿಯಾಗಿ ಬಂದಿಲ್ಲ. ಇಂತಹ ಬಾವಿಯನ್ನು ಇನ್ನೂ ಸ್ವಲ್ಪ ಆಳವಾಗಿ ಮಾಡಿಕೊಳ್ಳಲು ಸುಮಾರು ಇನ್ನೂ ಒಂದುಸಾವಿರ ಅಥವಾ ಒಂದು ಸಾವಿರದೈನೂರು ರೂಪಾಯಿಗಳಷ್ಟು ಹೆಚ್ಚು ಖರ್ಚು ಬರುತ್ತದೆ ಎಂದು ಹೇಳುತ್ತಿದ್ದಾರೆ. ಇಂತಹವರಿಗೆ ಸ್ವಲ್ಪ ರೊಕ್ಕ ಕೊಟ್ಟು ಸಹಾಯ ಮಾಡಿದರೆ ಅವರು ಅಲ್ಲಿ ಡೀಸಲು ಪಂಪು ಸೆಟ್ಟು ಗಳನ್ನೋ ಇಲ್ಲವೇ ಪಂಪುಸೆಟ್ಟುಗಳನ್ನೂ ಹಾಕಲು ಅನುಕೂಲವಾಗುತ್ತದೆ. ಆದರೆ ಈಗ ಪಂಪು ಸೆಟ್ಟುಗಳನ್ನು ಸಾಲವಾಗಿ ತೆಗೆದುಕೊಳ್ಳಬೇಕಾದರೆ ಹೆಚ್ಚು ಮೊತ್ತವುಳ್ಳ ಅವನ ಆಸ್ತಿ ಆಧಾರ ಕೊಟ್ಟರೂ ಅವರಿಗೆ ಸಕಾಲದಲ್ಲಿ ಸಿಗುತ್ತಿಲ್ಲ. ಇದಕ್ಕೆ ಕಾರಣ ಆಡಳಿತದವರು ಪಂಪುಸೆಟ್ಟುಗಳನ್ನು ಹಂಚುವುದಕ್ಕಾಗಿ ಮಾಡಿರುವ ನಿಯಮಗಳ ಗೊಂದಲದಿಂದ ಆಗುತ್ತಿದೆ. ಇವೊತ್ತು ಸರಕಾರ

ವನ್ನು ನಾನು ಕೇಳುತ್ತೇನೆ ನಿಯಮಗಳನ್ನು ಸರಕಾರದವರು ಮಾಡುತ್ತಿರುವುದು ಜನತೆಯ ಹಿತಕ್ಕೋ ಇಲ್ಲವೇ ಸರಕಾರದ ಉಪಯೋಗಕ್ಕೋ ಎಂದು ನಾನು ಇಲ್ಲಿ ಕೇಳಬೇಕಾಗಿದೆ. ಇವೊತ್ತಿನ ದಿವಸ ಸರಕಾರದ ಹಣೆಬರಹ ಯಾವ ರೀತಿಯಾಗಿದೆ ಎಂದರೆ ಒಬ್ಬ ಒಂದು ಅಂಗಿಯನ್ನು ಹೊಲಿಸು ವಾಗ ಅಳತೆ ಕೊಟ್ಟು ಹೊಲಿಸುತ್ತಾನೆ. ಆದರೆ ಇಲ್ಲಿ ಸರಕಾರದವರೇ ಯಾವುದೋ ಅಳತೆಯ ಒಂದು ಅಂಗಿ ತಂದು ಅದನ್ನು ಅಡಜಸ್ಟು ಮಾಡಿಕೊಂಡು ಹಾಕಿಕೊಳ್ಳಬೇಕು ಎಂದು ಹೇಳು. ವಂತಾಗಿದೆ. ಇದನ್ನು ನಿಜವಾಗಿಯೂ ನೋಡಿದರೆ ಸರಕಾರದವರು ಮಾಡಿರುವ ನಿಯಮಗಳು ಪರಿಸ್ಥಿತಿಗೆ ಅನುಗುಣವಾಗಿಲ್ಲ ಎನ್ನುವುದನ್ನು ಇಲ್ಲಿ ತಿಳಿಯುವುದು ಅವಶ್ಯ. ಕಾಲ ದೇಶ ವರ್ತ ಮಾನದ ಪರಿಸ್ಥಿತಿಗನುಗುಣವಾಗಿ ನಿಯಮಗಳನ್ನು ಸರಕಾರದವರು ಮಾಡುವುದು ಅತ್ಯಗತ್ಯ ಕಾನೂನುಗಳನ್ನು ಮಾಡುವುದರಲ್ಲಿ ನಿಮ್ಮಲ್ಲಿ ಒಳ್ಳೆಯ ವಕೀಲರುಗಳು ಹಾಗೂ ನಿಯಮಗಳನ್ನು ಅಭ್ಯಾಸಮಾಡಿದವರೂ, ಮಾಡಿರುವಂತಹ ನಿಮ್ಮ ರೆವಿನ್ಯೂಸೆಕ್ರಟರಿಗಳು ಇದ್ದಾರೆ. ಲಾ ಸೆಕ್ರಟರಿಗಳು ಇದ್ದಾರೆ. ಇವರೆಲ್ಲರೂ ಕೂಡಿಕೊಂಡು ನಾಳೆ ಸಂಜೆಯೊಳಗೇನೆ ಇರುವ ನಿಯಮಗಳನ್ನು ಸರಿ ಯಾಗಿ ಪರಿಶೀಲನೆ ಮಾಡಿ ತರಬೇಕೆಂದು ಅವರಿಗೆ ನಿರ್ದಿಷ್ಟ ಸೂಚನೆಗಳನ್ನು ಕೊಡಿ. ನಿಯಮ ಗಳನ್ನು ಮಾಡುವುದು ಜನತೆಯ ಅನುಕೂಲಕ್ಕಾಗಿ. ನಾವು ಜನತೆಯ ಆಳಾಗಿ ಇಲ್ಲಿ ಸೇವೆ ಮಾಡಲು ಬಂದಿದ್ದೇವೆ. ಜನರು ಮಾಲೀಕರು. ಇದೇ ಪ್ರಜಾಪ್ರಭುತ್ವದ ಯುಗ. ಇದರಲ್ಲಿ ಪ್ರಜೆಗಳ ಮಾತಿಗೆ ಹೆಚ್ಚು ಪ್ರಾಧಾನ್ಯತೆ ಕೊಡಬೇಕು. ಇಲ್ಲವೇ ಇವ್ವರೆ ಜನ ನಮ್ಮನ್ನು ನಾಲಾಯಕ್ಕು ಎಂದು ಹೇಳುತ್ತಾರೆ. ಜನತಾ ವಾದಿಗಳಾಗಿ ಜನತೆಯ ಆಳಾಗಿ ನಾವು ಇಲ್ಲಿ ಕೆಲಸಗಳನ್ನು ಮಾಡಲು ಬಂದಿದ್ದೇವೆ. ಆದುದರಿಂದ ಸಹಸ್ರಾರು ಮಂದಿಗೆ ಅನುಕೂಲವಾಗು ವಂತಹ ಒಂದು ಕಾಯಿದೆ ಮಾಡುವಾಗ ನಿಮ್ಮಲ್ಲಿರುವ ಕಾಯಿದೆ ತಜ್ಞರಾದ ಸೆಕ್ರಟರಿಗಳು ಜನಕ್ಕೆ ನೇರವಾಗಿ ಸೌಕರ್ಯಗಳು ಸಿಗುವಂತಹ ಕರಾರುವಾಕ್ಕಾದ ಕಾಯಿದೆಗಳನ್ನು ಮಾಡಬೇಕು. ವೈಯುಕ್ತಿಕವಾಗಿ ನಾನು ಯಾವ ಅಧಿಕಾರ ವರ್ಗದವರ ಬಗ್ಗೆ ಇಲ್ಲಿ ಹೇಳುತ್ತಿಲ್ಲ.

ನಾನು ಇಲ್ಲಿ ನನ್ನ ತಾಲ್ಲೂಕಿನ ಬಗ್ಗೆ ಜನರಲ್ ಆಗಿ ಕೆಲವು ಮುಖ್ಯವಾದ ಸೂಚನೆಗಳನ್ನು ಇಲ್ಲಿ ಹೇಳಲು ಇಚ್ಛಿಸುತ್ತೇನೆ. ಸರಕಾರದವರು ಇಲ್ಲಿ ನಮಗೆ ಕೊಟ್ಟಿರುವ ವರದಿಯನ್ನು ಬಹಳ ಸೂಕ್ಷ್ಮವಾಗಿ ಪರಿಶೀಲಿಸಿದರೆ ಒಮ್ಮೆ ಸಂತೋಷವಾಗುತ್ತದೆ. ಇನ್ನೊಮ್ಮೆ ಇದನ್ನು ನೋಡುವಾಗ ನನಗೆ ಬಹಳ ಆಶ್ಚರ್ಯವಾಯಿತು. ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀಮಾನ್ ವೀರೇಂದ್ರ ಪಾಟೀಲರವರು ತರುಣರು, ಹೊಸ ರಕ್ತದವರು, ಹೊಸ ಹೊಸ ವಿಚಾರಗಳನ್ನು ಅರಿತವರು, ಜನತೆಯ ಆಶೆಗಳನ್ನು ತಿಳಿದವರು, ಹಾಗೂ ವಿಚಾರಕ್ರಾಂತಿಯುಳ್ಳವರು ಎಂದು ನಾವೇನೋ ತಿಳಿದುಕೊಂಡಿದ್ದೇವೆ. ಇವರು ಮುಖ್ಯ ಮಂತ್ರಿಗಳಾಗಿ ಬಂದ ತರುಣದಲ್ಲೇ ಪತ್ರಿಕೆ ಗಳಲ್ಲಿ ಕೊಟ್ಟ ಹೇಳಿಕೆಯನ್ನು ನಾವು ನೋಡಿದ್ದೇವೆ. ಮತ್ತು ಇಲ್ಲಿ ಈಗ ಕೊಟ್ಟಿರುವ ಹೇಳಿಕೆಯನ್ನು ನೋಡಿದರೆ ಅವರ ಭಾಷಣದಲ್ಲೇ ಆಫೀಸರುಗಳು ಕರಪ್‌ಷನ್‌ಗೆ ಒಳಗಾಗಿರುತ್ತಾರೆ, ಹಾಗೂ ಆಫೀಸುಗಳಲ್ಲಿ ಸ್ವಲ್ಪಮಟ್ಟಿಗೆ ರೆಡ್ ಟೆಪಿಸಂ ಇದೆ ಎನ್ನುವುದನ್ನು ಅವರೂ ಒಪ್ಪಿದ್ದಾರೆ. ಇದನ್ನು ಹಿಂದೆ ಇದ್ದ ಯಾವ ಮಂತ್ರಿಗಳೂ ಇಷ್ಟು ಧೈರ್ಯವಾಗಿ ಹೇಳಿರಲಿಲ್ಲ. ಇದಕ್ಕಾಗಿ ನಾವು ಹೆಮ್ಮೆ ಪಡಬೇಕಾಗಿದೆ. ಈ ಸಂದರ್ಭದಲ್ಲಿ ನನಗೆ ಒಂದು ಗಾದೆ ನೆನಪಿಗೆ ಬರುತ್ತದೆ.

ಆಡದೆ ಮಾಡುವವನು ಉತ್ತಮ,
ಆಡಿ ಮಾಡುವವನು ಮಧ್ಯಮ,
ಆಡಿ ಮಾಡದೇ ಇರುವವನು ಅಧಮ ಎಂಬಂತೆ

ಹಿಂದೆ ಇದ್ದ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ನಿಜಲಿಂಗಪ್ಪನವರು ಈ ರಾಜ್ಯ ಆಡಳಿತವನ್ನು ಮಾಡಿ ಏನೂ ಅಂತಹ ಗೋಪುರವನ್ನು ಕಟ್ಟಿರಲಿಲ್ಲ. ಅವರೇನು ಹಿಂದೆ ಮಾಡುತ್ತಿದ್ದರೋ ಇಂದು ಮಾನ್ಯ ವೀರೇಂದ್ರ ಪಾಟೀಲರವರೂ ಅದನ್ನೇ ಅನುಕರಣ ಮಾಡದೆ ಇಲ್ಲಿ ಅವರು ಹೇಳಿರುವಂತೆ ಆಡಿರುವುದನ್ನು ಮಾಡುತ್ತಾರೆಯೇ ಎನ್ನುವುದನ್ನು ನಾವು ಇನ್ನೂ ಕಾದು ನೋಡಬೇಕಾಗಿದೆ. ನಿಜವಾಗಿಯೂ ನಮಗೆ ಒಂದು ಹೆಮ್ಮೆ ವಿಷಯ ಇಂದು ತರುಣರಾಗಿರುವವರು ನಮ್ಮ ಮುಖ್ಯ ಮಂತ್ರಿಗಳಾಗಿದ್ದಾರೆ. ಅವರೂ ಕೂಡ ಒಮ್ಮೆಲೆ ಎಲ್ಲವನ್ನೂ ಸರಿಪಡಿಸುತ್ತೇವೆ ಎಂದು ಹೇಳುವುದು ಕಷ್ಟ. ಇವೊತ್ತು ನಾವು ಈ ಭಾಗದವರೇ ಆಗಿರಲಿ ಅಥವಾ ಆಡಳಿತ ನಡೆಸುವ ಭಾಗದವರೇ ಆಗಿರಲಿ, ಸರಕಾರದ ಮೇಲೆ ಟೀಕೆಗಳನ್ನು ಮಾಡುವಾಗ ಅಧಿಕಾರ ವರ್ಗದವರ ಮೇಲೆ ಟೀಕೆ ಮಾಡುವುದನ್ನು ನಾನು ಒಪ್ಪುವುದಿಲ್ಲ. ಅಧಿಕಾರ ವರ್ಗ ಎನ್ನುವುದು ನಾನು ಕನ್ನಡಿಯಲ್ಲಿ ನಮ್ಮ ಪ್ರತಿಬಿಂಬವನ್ನು ಹೇಗೆ ನೋಡಿಕೊಳ್ಳುತ್ತೇವೋ ಹಾಗೆ ಇಂದು ಆಡಳಿತ ನಡೆಸುವ ಮುಖ್ಯಸ್ಥರು ಯಾವ ರೀತಿ ಇರುತ್ತಾರೋ ಅದರಂತೆ ಅಧಿಕಾರಿಗಳೂ ಕೂಡ ಇರುವುದು ಸ್ವಾಭಾವಿಕ. ಇವೊತ್ತಿನ

(ಶ್ರೀ ಕೆ ಎಚ್. ಪಾಟೀಲ್)

ದಿವಸ ಅಧಿಕಾರವರ್ಗದಲ್ಲಿರುವವರು ಒಂದು ಮನೆಯಲ್ಲಿರುವ ಗಂಡ ಹೆಂಡಿರಂತೆ ಇರುವವರು. ಮನೆಯೊಳಗೆ ಗಂಡ ಯಾವ ರೀತಿ ಇಡುತ್ತಾನೊ ಅವನನ್ನು ಅನುಸರಿಸಿಕೊಂಡು ಅವನ ಹೆಂಡತಿಯೂ ಇರುತ್ತಾಳೆ. ಹೀಗೆ ಆಳುವ ಪಕ್ಷದವರು ಟೂರು ಇತ್ಯಾದಿಗಳಿಗೆ ಹೋದಾಗ ಅಲ್ಲಿ ಜನರಿಂದ ಯಾವ ರೀತಿಯಾಗಿ ಹಾರಗಳನ್ನು ಪಡೆದುಕೊಂಡು ಅತಿಥ್ಯಗಳನ್ನು ಪಡೆಯುವುದು ಹಾಗೂ ಲಂಚವನ್ನು ಪಡೆಯುವುದು ಇತ್ಯಾದಿಗಳನ್ನು ಮಾಡಿದರೆ ಇವರ ಹಾವ ಭಾವಗಳನ್ನು ಅನುಸರಿಸಿಕೊಂಡೇ ಅಧಿಕಾರವರ್ಗದವರೂ ಹೋಗುತ್ತಾರೆ. ಇದರಲ್ಲಿ ಉತ್ಪ್ರೇಕ್ಷೆಯೇನಿಲ್ಲ. ಗಂಡ ಹೆಂಡರ ಮನಸ್ಸು ಹೇಗಿರುತ್ತದೋ ಅದರಂತೆ ಮಕ್ಕಳ ಸ್ವಭಾವವೂ ಹಾಗೇ ಇರುತ್ತದೆ. ಇವೊತ್ತು ಆಡಳಿತದಲ್ಲಿರುವ ಅಧಿಕಾರವರ್ಗದವರು ಗಂಡ ಹೆಂಡಿರಂತೆ ಅವರನ್ನೇ ಅನುಸರಿಸಿಕೊಂಡು ಹೋಗುತ್ತಾರೆಂದು ಹೇಳಿದರೆ ಅದು ತಪ್ಪಾಗುವುದಿಲ್ಲ. ಇಂತಹ ಸನ್ನಿವೇಶದಲ್ಲಿ ಜನತೆ ನಿರೀಕ್ಷೆ ಮಾಡುವುದು ನಮ್ಮ ದೇಶದ ಇಂದಿನ ಗಂಡಾಂತರ ಪರಿಸ್ಥಿತಿಯಲ್ಲಿ ನಮಗೆ ಈ ಪಕ್ಷ ಆ ಪಕ್ಷ ಎಂಬುದಿಲ್ಲ, ಈ ಜಾತಿ ಆ ಜಾತಿ ಇಲ್ಲ. ಇವೊತ್ತು ಕಾಂಗ್ರೆಸ್ಸಿನವರು ಆಡಳಿತದಲ್ಲಿ ಬಂದಿರುವುದರಿಂದ ಮಳೆ ಬರುತ್ತಿಲ್ಲ ಎಂದು ಹೇಳಿ ಎಲ್ಲರನ್ನೂ ಪರೀಕ್ಷೆ ಮಾಡಲು ಹೇಳುತ್ತಿಲ್ಲ. ಇದು ಪರೀಕ್ಷೆ ಮಾಡುವ ಕಾಲವಲ್ಲ. ನಮ್ಮ ದೇಶದ ಜನರು ಬರಗಾಲದಿಂದ ಕಂಗಾಲಾಗಿದ್ದಾರೆ. ಯಾರೇ ಆಡಳಿತದಲ್ಲಿ ಇರಲಿ, ಇಲ್ಲಿರುವ ಭಯಾನಕ ಪರಿಸ್ಥಿತಿಯನ್ನು ಖುದ್ದಾಗಿ ಹೋಗಿ ನೋಡಿದರೆ ಅವರಿಗೇ ಗೊತ್ತಾಗುತ್ತದೆ. ನಮ್ಮ ಕ್ಷೇತ್ರದಲ್ಲಿರುವ ಗದಗ್ ಬೆಟಗೇರಿ ಎಂಬಲ್ಲಿ ಸಹಸ್ರಾರು ಜನ ನೇಕಾರರು ಇರುತ್ತಾರೆ. ನಮ್ಮ ಸರಕಾರದವರು ನೇಕಾರರಿಗೆ ಬೇಕಾದ ಸಹಾಯಗಳನ್ನು ಒದಗಿಸಿಕೊಡುತ್ತೇವೆ ಎಂದು ಹೇಳುತ್ತಾರೆ. ಎಲ್ಲ ಕಡೆಯಲ್ಲಿರುವ ನೇಕಾರರುಗಳಿಗೆ ಸಹಾಯ ಕೊಟ್ಟಂತೆ ಇಲ್ಲಿನ ನೇಕಾರರಿಗೆ ಸಹಾಯ ಮಾಡಬೇಕೆಂದು ನಮ್ಮ ಮಾನ್ಯ ರೆವಿನ್ಯೂ ಮಂತ್ರಿಗಳ ಕಡೆಗೆ ಮೇಲಿಂದ ಮೇಲೆ ಒತ್ತಾಯ ತರುತ್ತಿದ್ದರೂ ಇನ್ನೂ ಇಲ್ಲಿನ ಜನಕ್ಕೆ ಪ್ರಯೋಜನವಾಗಲಿಲ್ಲ. ಅಲ್ಲದೆ ಈ ನೇಕಾರ ಜನಕ್ಕೆ ರೇಷನಿಂಗ್ ಧಾನ್ಯ ಕೊಡುತ್ತೇವೆ ಎಂದು ಹಿಂದೆ ಅನೇಕ ಸಲ ನಾವು ಆಗಿದ್ದ ಆಹಾರ ಮಂತ್ರಿಗಳಾದ ಶ್ರೀಮಾನ್ ಜತ್ತಿಯವರಿಗೆ ಮನವಿಮಾಡಿದ್ದೆವು. ಅವರೂ ಕಳುಹಿಸಿಕೊಡುತ್ತೇವೆಂದು ಒಪ್ಪಿಯೂ ಇದ್ದರು. ಆದರೆ ಇಂದು ಅವರು ಮಂತ್ರಿಮಂಡಲದಲ್ಲಿ ಇಲ್ಲ. ಇಂದು ಆಹಾರ ಮಂತ್ರಿಗಳಾಗಿ ಶ್ರೀಮಾನ್ ವಿಠಲದಾಸ ಶೆಟ್ಟಿಯವರು ಬಂದಿದ್ದಾರೆ. ಇವರಲ್ಲೂ ಕೂಡ ನಾನು ಒತ್ತಾಯದಿಂದ ಮನವಿ ಮಾಡುತ್ತಿದ್ದೇನೆ. ಇಲ್ಲಿರುವ ನೇಕಾರರುಗಳ ಪರಿಸ್ಥಿತಿ ಬಹಳ ಕೆಟ್ಟುಹೋಗಿದೆ, ಇಲ್ಲಿನ ಜನ ಬಹು ಕಂಗಾಲಾಗಿದ್ದಾರೆ. ಇಂತಹ ನೇಕಾರರುಗಳಿಗೆ ಬೇಗನೆ ಸಹಾಯ ಮಾಡಬೇಕು. ಇಂದು ಈ ಕ್ಷೇತ್ರದಲ್ಲಿ ವಿರೋಧ ಪಕ್ಷದವರು ಆರಿಸಿ ಬಂದಿದ್ದಾರೆ ಎಂದು ಸರಕಾರ ಭಾವನೆ ಮಾಡದೇ ಇದ್ದರೆ ನಾಳೆ ಸಂಜೆಯೊಳಗಾಗಿ ನಮ್ಮ ಆಹಾರ ಮಂತ್ರಿಗಳು ಇಲ್ಲಿರುವ ನೇಕಾರ ಜನಕ್ಕೆ ಜೋಳದ ಕಾಳನ್ನು ಪುರವಣೆ ಮಾಡುವ ವ್ಯವಸ್ಥೆ ಮಾಡಬೇಕು ಎಂದು ಇಲ್ಲಿ ಕೇಳಿಕೊಳ್ಳುತ್ತೇನೆ. ಇದನ್ನು ಒತ್ತಾಯದಿಂದ ಮಂತ್ರಿಮಂಡಲದ ಗಮನಕ್ಕೆ ತರುತ್ತಿದ್ದೇನೆ. ಇದು ಮುಖ್ಯಮಂತ್ರಿಗಳಿಗೇ ಆಗಲಿ ಅಥವಾ ಇತರ ಯಾವ ಮಂತ್ರಿಗಳಿಗೇ ಆಗಲಿ ಇದು ಗೌರವ ತರತಕ್ಕುದಲ್ಲ. ನಾನು ಇಲ್ಲಿ ಹೇಳುವಾಗ ಯಾವ ಮಂತ್ರಿಗಳೂ ಇಲ್ಲಿಲ್ಲ.

ಶ್ರೀ ಅಗ್ನಿಹೋತ್ರಿ.—ಇಲ್ಲಿ ಆರೋಗ್ಯ ಮಂತ್ರಿಗಳಿದ್ದಾರೆ.

ಶ್ರೀ ಕೆ. ಹೆಚ್. ಪಾಟೀಲ್.—ಆರೋಗ್ಯ ಸಚಿವರಿದ್ದಾರೆ ಸಂತೋಷ. ಜನರ ಆರೋಗ್ಯ ನೋಡುವಂತೆ ನಮ್ಮ ಅರಣ್ಯ ಖಾತೆಯ ಉಪ ಮಂತ್ರಿಗಳಿದ್ದರೆ ಅವರಿಗೆ ಒಂದು ಸೂಚನೆ ಕೊಡಬೇಕಾಗಿದೆ, ನಮ್ಮ ಗದಗಿನ ಭಾಗದಲ್ಲಿ ದನಕರುಗಳಿಗೆ ಮೇವೇ ಸಿಗುತ್ತಿಲ್ಲ. ದನಕರುಗಳ ಮೇವಿನ ಅಭಾವ ಎಲ್ಲೆಲ್ಲೂ ಬಹಳ ಹೆಚ್ಚಾಗಿದೆ. ಹಿಂದೆ ದನಕರುಗಳಿಗೆ ಬೇಕಾದ ಹುಲ್ಲು ಒಂದು ಚಕಡಿಗೆ 10-15 ರೂಪಾಯಿಗಳಷ್ಟು ಇದ್ದದ್ದು ಇಂದು 105 ರೂಪಾಯಿಗಳಷ್ಟು ಏರಿ ಹೋಗಿದೆ. ಹೀಗಾದರೆ ಬಡ ಜನರು ಕೊಂಡುಕೊಳ್ಳುವುದಾದರೂ ಹೇಗೆ. ಇವೊತ್ತು ನಮ್ಮ ಅರಣ್ಯದಲ್ಲಿ ಬೇಕಾದಷ್ಟು ಹುಲ್ಲು ಇರುವುದನ್ನು ನೋಡುತ್ತಿದ್ದೇವೆ ಮತ್ತು ಈಚೆಗೆ ದೆಹಲಿಯಲ್ಲಿ ಹಸೀ ಹುಲ್ಲನ್ನು ತಂದು ಒಣಗಿಸುವ ಒಂದು ರೀತಿಯಾದ ಯಂತ್ರೋಪಕರಣಗಳು ಬಂದಿವೆ ಎಂದು ಕೇಳುತ್ತೇವೆ. ನಮ್ಮ ಮಾನ್ಯ ಉಪಮಂತ್ರಿಗಳಾದ ಶ್ರೀಮಾನ್ ಶಂಕರರಾಯರು ಇದರ ಕಡೆಗೆ ಶ್ರದ್ಧೆ ವಹಿಸಿ ಇಂತಹ ಯಂತ್ರೋಪಕರಣಗಳನ್ನು ಪಡೆದುಕೊಳ್ಳಲು ಕೇಂದ್ರ ಸರಕಾರವನ್ನು ಒತ್ತಾಯ ಮಾಡಿ ಇಂದೆ ಇಂತಹ ಒಂದು ಸ್ಕೀಂ ಮಾಡಿ ಹಾಳಾಗಿ ಹೋಗುವ ಹುಲ್ಲನ್ನು ತಂದು ಸ್ಟೋರು ಮಾಡುವ ಏರ್ಪಾಡು ಮಾಡಬೇಕು ಎಂದು ಅವರಿಗೆ ಸಲಹೆಯನ್ನು ಒತ್ತಾಯದಿಂದ ಮಾಡುತ್ತಿದ್ದೇನೆ ಮತ್ತು ಇದರಿಂದ

ದನಕರುಗಳಿಗೆ ಮೇವೂ ಸಿಗುತ್ತದೆ, ಜನಕ್ಕೆ ಅನುಕೂಲವೂ ಆಗುತ್ತದೆ, ದನಕರುಗಳಿಗೆ ಒಳ್ಳೆಯ ಪುಷ್ಟಿಕರವಾದ ಆಹಾರ ಹಾಗೂ ಮೇವನ್ನು ಒದಗಿಸಿಕೊಟ್ಟರೆ ಅವು ಚೆನ್ನಾಗಿ ಬೆಳೆದು ನಮಗೆ ಒಳ್ಳೆಯ ಹಾಲನ್ನು ಕೊಡುತ್ತವೆ. ಇಂತಹ ಪುಣ್ಯವಾದ ಕಾರ್ಯವನ್ನು ಮಾನ್ಯ ಸ್ಪೀಕರು ಮಂತ್ರಿಗಳಾದ ಶ್ರೀಮಾನ್ ಶಂಕರರಾಯರು ಮಾಡುತ್ತಾರೆಂದು ನಾನು ನಂಬುತ್ತೇನೆ. ಇನ್ನು ಅಧಿಕಾರಿಗಳ ವಿಷಯದಲ್ಲಿ ಒಂದು ಮಾತನ್ನು ಹೇಳಲು ನನಗೆ ಬಹಳ ವ್ಯಥೆಯಾಗುತ್ತದೆ. ಅವರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಆದರೆ ಎಲ್ಲರನ್ನೂ ಹಾಗೆ ಒಟ್ಟಿಗೆ ಸೇರಿಸಿ ಹೇಳುವುದಕ್ಕೂ ಆಗುವುದಿಲ್ಲ. ಹಾಗೆ ಮಾಡುವುದರಿಂದ ಅವರಲ್ಲಿ ಒಂದು ಕೆಟ್ಟ ಭಾವನೆ ಬರಬಹುದು. ಆದರೆ ಅದರಲ್ಲಿ ಅನೇಕರು ಬಹಳ ತಾತ್ಸಾರ ಭಾವನೆಯಿಂದ ಕೆಲಸ ಮಾಡುತ್ತಿದ್ದಾರೆ. ಅವರು ಹಿಂದೆ ಇದ್ದ ಬ್ರಿಟಿಷರ ಕಾಲದಲ್ಲಿ ಆ ಕಂಪೆನಿ ಆಡಳಿತವಿದ್ದ ಕಾಲದಲ್ಲಿ ಕೆಲಸ ಮಾಡುತ್ತಿದ್ದಂಥ ಜನ. ಅಂಥವರ ಬಗ್ಗೆ ಸರ್ಕಾರದವರು ಸ್ವಲ್ಪ ಬಿಗಿಯಾಗಿ ಕಂಡೀಷನ್ ಹಾಕಿ ಕೆಲಸವನ್ನು ತೆಗೆದುಕೊಳ್ಳಬೇಕಾಗಿದೆ. ಆದರೆ ವಿನಾಕಾರಣ ಯಾರನ್ನೂ ಟೀಕೆ ಮಾಡಬೇಕು ಎಂಬ ಭಾವನೆ ನನಗಿಲ್ಲ. ಟೀಕಿಸ ಮಾಡತಕ್ಕ ಕಾಲ ಇದಲ್ಲ. ಅದಿನ್ನೂ ಮುಂದಿದೆ. ಈ ದಿವಸ ನಾವೆಲ್ಲರೂ ನಮ್ಮ ನಮ್ಮ ವೈಮನಸ್ಸುಗಳನ್ನು ಬದಿಗಿಟ್ಟು ಸಹಕಾರದಿಂದ ಬಂದಿರತಕ್ಕ ಬರಗಾಲವನ್ನು ನಿವಾರಣೆ ಮಾಡಿ ಜನರ ಮಾನ ಮರ್ಯಾದೆಗಳನ್ನು ಉಳಿಸುವುದಕ್ಕೆ, ನಾವು ವಿರೋಧ ಪಕ್ಷದವರು, ನಾವು ಆಡಳಿತ ಪಕ್ಷದವರು ಎಂಬ ಭೇದವನ್ನು ಮರೆತು ಎಲ್ಲರೂ ಸಹಕರಿಸಿ ದುಡಿಯೋಣ. ತಾವು ಈ ಸದನದ ಎಲ್ಲ ಸದಸ್ಯರನ್ನೂ ತಮ್ಮ ವಿಶ್ವಾಸಕ್ಕೆ ತೆಗೆದುಕೊಂಡು ಈಗಿರತಕ್ಕ ಮಂತ್ರಿಮಂಡಲವನ್ನು ವಿಸರ್ಜನೆ ಮಾಡಿ ಎಲ್ಲ ಪಕ್ಷಗಳಿಂದ ಕೂಡಿದ ಒಂದು ಮಿಶ್ರ ಮಂತ್ರಿಮಂಡಲವನ್ನು ರಚಿಸಿ ನಮ್ಮ ರಾಜ್ಯದ ಎರಡೂವರೆ ಕೋಟಿ ಜನರ ಕಲ್ಯಾಣ ಸಾಧನೆಯನ್ನು ಮಾಡಲು ನಮ್ಮ ಮುಖ್ಯ ಮಂತ್ರಿಗಳು ಮನಸ್ಸು ಮಾಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಎನ್. ರಾಮೇಗೌಡ (ಸಿರಾ).—ಈ ದಿವಸ, ಸ್ವಾಮಿ, ರಾಜ್ಯದಲ್ಲಿ ಉಂಟಾಗಿರತಕ್ಕ ಅಭಾವ ಪರಿಸ್ಥಿತಿಯನ್ನು ಹತೋಟಿಗೆ ತರತಕ್ಕ ಮಾರ್ಗದಲ್ಲಿ ಈ ಶಾಸನ ಸಭೆಗಳ ಸದಸ್ಯರ ಅಭಿಪ್ರಾಯವನ್ನು ನಮ್ಮ ಮುಖ್ಯಮಂತ್ರಿಗಳು ಕೇಳಿರುವುದು ಮತ್ತು ಈ ಬಗ್ಗೆ ಅವರು ಈಗಾಗಲೇ ಮುಂಜಾಗ್ರತೆಯ ಕಾರ್ಯಕ್ರಮಗಳನ್ನು ಕೈಗೊಂಡಿರತಕ್ಕದ್ದು ನಿಜವಾಗಿಯೂ ಒಂದು ಸ್ವಾಗತಾರ್ಹವಾದ ವಿಷಯ. ನನಗೆ ತಿಳಿದಿರುವಂತೆ ನಿಜವಾಗಿಯೂ ಹಿಂದೆ ಎಂದೂ ಇಂಥಾ ಒಂದು ಸನ್ನಿವೇಶ ಉಂಟಾಗಿರಲಿಲ್ಲ, ಇಂಥ ಅಭಾವ ಪರಿಸ್ಥಿತಿ ಉದ್ಭವಿಸಿರಲಿಲ್ಲ. ಇಂಥಾ ಒಂದು ಅಭಾವಕ್ಕೆ ಒಳಗಾಗಿರತಕ್ಕದ್ದು ಒಂದು ಜಿಲ್ಲೆಯಲ್ಲ. ದೇಶದ ಅರ್ಧಭಾಗ ಇದಕ್ಕೆ ತುತ್ತಾಗಿದೆ. ಅದರಲ್ಲಿಯೂ ಕೆಲ ಕೆಲವು ಜಿಲ್ಲೆಗಳಲ್ಲಿ ಅಭಾವ ಬಹಳ ತೀವ್ರ ಗತಿಯಲ್ಲಿದೆ. ಈ ರೀತಿಯಾಗಿ ನಮ್ಮ ತುಮಕೂರು ಜಿಲ್ಲೆಯಲ್ಲಿ ಸುಮಾರು 1965-66 ರಲ್ಲಿ ಉಂಟಾದ ಅಭಾವ ಇನ್ನೂ ತಪ್ಪಿಲ್ಲ. ಆದ್ದರಿಂದ ಅದನ್ನು 1968 ರಲ್ಲೂ ಇನ್ನೂ ಅಭಾವ ಎಂದು ಕರೆಯುತಕ್ಕದ್ದು ಸರಿಯಲ್ಲ. ಅದನ್ನು ಘೋರ ಕ್ಷಾಮ ಎಂದು ಕೂಡಲೆ ಸಾರಬೇಕು. ಹಾಗಿಲ್ಲದೆ ಸರ್ಕಾರದವರು ಇದನ್ನು ಇನ್ನೂ ಅಭಾವ ಅಂತ ಹೇಳಿದರೆ ಇದು ಜನರ ಕಣ್ಣನ್ನು ಒರೆಸತಕ್ಕ ಮಾತಾಗುವುದು. ಹೀಗೆ ಮಾಡುವುದು ನ್ಯಾಯವಲ್ಲ. ದೇಶಾದ್ಯಂತವೂ ಭೀಕರ ಕ್ಷಾಮ ಉಂಟಾಗಿದೆ ಎಂದು ಘೋಷಣೆ ಮಾಡಿದರೆ ನಮ್ಮ ಮುಖ್ಯಮಂತ್ರಿಗಳು ಕೇಳತಕ್ಕ ಹಣವು ಸುಲಭವಾಗಿ ಕೇಂದ್ರದಿಂದ ದೊರೆಯುತ್ತದೆ. ಹಾಗೆ ಕೂಡಲೆ ಸಾರಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ನಮ್ಮ ತುಮಕೂರು ಜಿಲ್ಲೆಯ ವಿಚಾರಕ್ಕೆ ಬಂದರೆ ಅಲ್ಲಿ ತೀವ್ರ ಬರವುಂಟಾಗಿದೆ. ಇಡೀ ಪ್ರಪಂಚದಲ್ಲೇ ಕ್ಷಾಮಕ್ಕೆ ಹೆಸರಾದಂಥ ಶಿರಾ, ಪಾವಗಡ, ಮಧುಗಿರಿ ಈ ತಾಲ್ಲೂಕುಗಳು ನಮ್ಮ ತುಮಕೂರು ಜಿಲ್ಲೆಯಲ್ಲಿವೆ. ಇವು ಆಂಧ್ರದ ರಾಯಲ್ ಸೀಮೆಯ ಶ್ರೇಣಿಗೆ ಸೇರಿಕೊಂಡು ಆ ತಾಲ್ಲೂಕುಗಳು ಅನೇಕ ವರ್ಷಗಳಿಂದಲೂ ಬರಗಾಲಕ್ಕೆ ಸಿಕ್ಕಿ ನರಳುತ್ತಿವೆ. ಆ ತಾಲ್ಲೂಕುಗಳಿಗೆ ಎಲ್ಲಕ್ಕಿಂತಲೂ ಹೆಚ್ಚಿನ ಹಣವನ್ನು ಸರ್ಕಾರದವರು ಒದಗಿಸಿ ಅಲ್ಲಿಯ ಜನರನ್ನು ರಕ್ಷಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲಿ ಇನ್ನಾದರೂ ಸರ್ಕಾರದವರು ಯಾವುದಾದರೂ ಶಾಶ್ವತವಾದ ಕೆಲಸಗಳನ್ನು ಕೈಗೊಂಡು ಅಲ್ಲಿ ಕ್ಷಾಮಬಾರದಂತೆ ಒಂದು ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಆ ಮೂರು ತಾಲ್ಲೂಕುಗಳಲ್ಲೂ ಕೆಲವು ಉತ್ತಮವಾದ ಯೋಜನೆಯನ್ನು ತಜ್ಞರು ತಯಾರಿಸಿದ್ದಾರೆ. ಆದರೆ ಅವು ಕೇವಲ ಕಾಗದದಲ್ಲಿ ಮಾತ್ರ ಹಾಗೇ ಉಳಿದಿವೆ. ಕಾರ್ಯರೂಪಕ್ಕೆ ಮಾತ್ರ ಇನ್ನೂ ಬಂದಿಲ್ಲ. ಆದ್ದರಿಂದ ಆ ಪ್ರದೇಶದಲ್ಲಿ ಕಳೆದ 10-20 ವರ್ಷಗಳಿಂದ ಕ್ಷಾಮ ಒಂದೇ ಸಮನಾಗಿ ಬರುತ್ತಿದ್ದರೂ ಸರ್ಕಾರದವರು ಇಲ್ಲಿಯತನಕ ಅಲ್ಲಿ ಯಾವ ತರಹೆಯ ಶಾಶ್ವತ ಪರಿಹಾರ ಕಾರ್ಯಗಳನ್ನು ನಡೆಸದೆ ಇರುವುದು ಬಹಳ ಶೋಚನೀಯ. ನಮ್ಮ ರಾಜ್ಯದಲ್ಲಿ ಯಾವ ಯಾವ ಪ್ರದೇಶದ ಲಕ್ಷಣಗಳು ಯಾವ ರೀತಿ ಇರುತ್ತವೆ ಎಂಬುದನ್ನು ನೋಡಿ ಆಯಾಯ ಪ್ರಾಂತ್ಯಕ್ಕೆ ತಕ್ಕ ಅನುಕೂಲತೆಗಳನ್ನು ಕಲ್ಪಿಸಿದರೆ ಪರಿಸ್ಥಿತಿ ಇಷ್ಟು ಬಿಗ

(ಶ್ರೀ ಬಿ. ಎನ್. ರಾಮೇಗೌಡ)

ಡಾಯಿಸದು ಎಂದು ನಾನು ಗಂಟಾಗೋಷವಾಗಿ ಹೇಳುತ್ತೇನೆ. ಅದಕ್ಕೆ ತಜ್ಞರ ಪರಿಶೀಲನೆ ಅಗತ್ಯ. ನಮ್ಮ ಜಿಲ್ಲೆಯಲ್ಲಿ ಯಾವ ದೊಡ್ಡ ನದಿಗಳೂ ಹರಿಯುವುದಿಲ್ಲ. ಹೀಗಾಗಿ ಅಲ್ಲಿ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಕಟ್ಟತಕ್ಕ ಪ್ರಶ್ನೆಯಿಲ್ಲ. ಆದ್ದರಿಂದ ತುಮಕೂರು ಇಡೀ ಜಿಲ್ಲೆ ನೀರಾವರಿ ಬಾವಿಗಳಿಂದಲೇ ಅನುಕೂಲ ಪಡೆಯಬೇಕು. ಆದರೆ ಇಲ್ಲಿಯವರೆಗೂ ನಮ್ಮ ಸರ್ಕಾರದವರು ಭೂ ಅಭಿವೃದ್ಧಿ ಬ್ಯಾಂಕುಗಳ ಮೂಲಕ ನಮ್ಮ ಜಿಲ್ಲೆಯಲ್ಲಿ ಹೊಸ ಹೊಸ ಬಾವಿಗಳನ್ನು ತೆಗೆಯುವುದಕ್ಕೆ ಹಣವನ್ನು ಒದಗಿಸಿದ್ದರು. ಆದರೆ ಇತ್ತೀಚೆಗೆ ನಾನಾ ರೀತಿಯಲ್ಲಿ ಇದಕ್ಕೆ ಅಡ್ಡಿಗಳನ್ನೊಡ್ಡಿದ್ದಾರೆ. ಹೀಗಾಗಿ ಅಲ್ಲಿ ಯಾರೂ ಹೊಸದಾಗಿ ಬಾವಿಗಳನ್ನು ತೆಗೆಯುವುದಕ್ಕೆ ಸಾಧ್ಯವಿಲ್ಲದಂತಾಗಿದೆ. ರೈತನಾದವನು ತಾನು ಪಡೆದಿದ್ದ ಸಾಲವನ್ನು ತಾಪತ್ರಯದಿಂದ ಕಂತುಗಳನ್ನು ಸರಿಯಾಗಿ ಕಟ್ಟದೆ ತಪ್ಪಿತಸ್ಥನಾಗಿದ್ದರೆ ಆತನಿಗೆ ಮತ್ತೆ ಸಾಲವನ್ನು ಕೊಡುವ ಹಾಗಿಲ್ಲ. ಈ ಹಿಂದೆ ರೈತರು ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ ಸಾಲ ಪಡೆದು ಅದನ್ನು ತೀರಿಸದೆ ಇದ್ದಾಗ್ಗೂ ಅಂಥವರಿಗೆ ಹೊಸದಾಗಿ ಬಾವಿಗಳನ್ನು ತೆಗೆಸುವುದಕ್ಕೆ ಸಾಲವನ್ನು ಮಂಜೂರು ಮಾಡುತ್ತಿದ್ದರು. ಆದರೆ ಅದೇನೋ ಇಲ್ಲದ ನಿರ್ಬಂಧಗಳನ್ನು ಹಾಕಿದ್ದಾರೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಕೇಂದ್ರ ಅಭಿವೃದ್ಧಿ ಬ್ಯಾಂಕಿನವರು ಪ್ರೈಮರಿ ಬ್ಯಾಂಕರಗಳವರು ಡಿಫಾಲ್ಟರಾಗಿದ್ದರೂ ಡಿಫಾಲ್ಟ್ ಅಲ್ಲದೆ ಸದಸ್ಯರು ಬಾವಿಗಳನ್ನು ತೆಗೆಸಲು ಸಾಲ ಕೇಳಿದರೆ ಅದನ್ನು ಕೊಡುವುದಕ್ಕೆ ಅವಕಾಶವಾಗುವಂತೆ ಒಂದು ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮಲ್ಲಿ ಈ ಬಾವಿಗಳನ್ನು ಕೈ ಬಿಟ್ಟರೆ ಇನ್ನು ಬೇರೆ ವ್ಯವಸಾಯಕ್ಕೆ ಅಲ್ಲಿ ಅವಕಾಶವೇ ಇಲ್ಲ. ಈ ದಿವಸ ನಮ್ಮ ಶಿರಾ, ಪಾವಗಡ ಮತ್ತು ಮಧುಗಿರಿ ತಾಲ್ಲೂಕುಗಳಲ್ಲಿ ಪ್ರತಿ ತಾಲ್ಲೂಕಿನಲ್ಲೂ ಸುಮಾರು 5 ಸಾವಿರ ಬಾವಿಗಳಿದ್ದು ಅಲ್ಲಿ ನೀರಾವರಿ ವ್ಯವಸಾಯ ನಡೆಯುತ್ತಿದೆ. ಆ ಒಂದು ಪದ್ಧತಿ ಕೈ ಬಿಟ್ಟರೆ ನಮಗೆ ಇನ್ನಾವ ಮಾರ್ಗವೂ ಇರುವುದಿಲ್ಲ.

ಈ ಸಾರಿ ನೂರಕ್ಕೆ 90ರಷ್ಟು ನೀರಾವರಿ ಬಾವಿಗಳು ಬತ್ತಿ ಹೋಗಿ ಕನಿಷ್ಟ ಪ್ರತಿಯೊಂದು ಬಾವಿಯಲ್ಲೂ ಕಾಲು ಎಕರೆ ಕೂಡ ಸಾಗುವಳಿ ಮಾಡುವುದಕ್ಕೆ ಅವಕಾಶವಿಲ್ಲದ ಹಾಗೆ ಆಗಿದೆ. ಈಗ ನಿಜವಾಗಿಯೂ ನಮ್ಮ ಜಿಲ್ಲೆಯಲ್ಲಿ ಬಾಯಂ ಪರಿಹಾರ ಕಾರ್ಯವನ್ನು ತೆಗೆದುಕೊಳ್ಳಬೇಕೆಂದು ಸರ್ಕಾರದವರಿಗೆ ಮನಸ್ಸು ಇದ್ದದ್ದೇ ಆದರೆ ಕನಿಷ್ಠ ಪಕ್ಷ ಪ್ರತಿಯೊಂದು ತಾಲ್ಲೂಕಿಗೂ ಎರಡೆರಡು ಹೈಪವರ್ ಬೋರ್ ವೆಲ್ ಮೆಷೀನ್‌ಗಳನ್ನು ಒದಗಿಸಬೇಕು. ಮತ್ತು ಇರತಕ್ಕ ಬಾವಿಗಳನ್ನು ಆಳ ಪಡಿಸಿ ನೀರನ್ನು ಹೆಚ್ಚು ಮಾಡಿದ್ದೇ ಆದರೆ ಕನಿಷ್ಟ ಪಕ್ಷ ಕಾಲು ಎಕರೆ ವ್ಯವಸಾಯ ಮಾಡತಕ್ಕವನು ಅರ್ಧ ಎಕರೆ, ಒಂದು ಎಕರೆ ನೀರಾವರಿ ವ್ಯವಸಾಯವನ್ನು ಮಾಡಿ ತನ್ನ ಜೀವನಕ್ಕೆ ಬೇಕಾದಷ್ಟು ಆಹಾರವನ್ನು ಬೆಳೆದುಕೊಳ್ಳಲು ಸಹಾಯವಾಗುತ್ತದೆ, ಆ ರೀತಿ ಮಾಡದಿದ್ದರೆ ಅವನು ಸಾಕಾದಷ್ಟು ಬೆಳೆಯದೆ ಆಹಾರ ಅಭಾವ ಜಾಸ್ತಿಯಾಗಿ ಆಹಾರ ಇಲ್ಲದೇ ಉಪವಾಸದಿಂದ ಈ ಪ್ರದೇಶದಲ್ಲಿ ಜನರು ಸತ್ತುಹೋದರು ಎಂಬ ಸುದ್ದಿಯನ್ನು ಕೇಳತಕ್ಕ ಪರಿಸ್ಥಿತಿ ಇದೆ, ಇಂತ ಪರಿಸ್ಥಿತಿಗೆ ಅವಕಾಶ ಕೊಡಬಾರದು. ಅಲ್ಲದೆ ಈಗ ನಮ್ಮ ಜಿಲ್ಲೆಗೆ ಕೊಡತಕ್ಕ ಆಹಾರ ಬಹಳ ಕಮ್ಮಿ, 1965—66ನೇ ಸಾಲಿನಲ್ಲಿ ಅಭಾವ ಪರಿಸ್ಥಿತಿ ಇತ್ತು, ಆಗ ಒಂದು ತಿಂಗಳಿಗೆ 50—60 ಸಾವಿರ ಕ್ವಿಂಟಾಲ್‌ವರೆಗೂ ಆಹಾರ ಪದಾರ್ಥಗಳನ್ನು ಒದಗಿಸಿದರು. ಕಷ್ಟಪರಿಸ್ಥಿತಿಯಲ್ಲಿ ಬಹಳ ಸಹಾಯ ಮಾಡಿ ಜನತೆಯ ಅಭಿನಂದನೆಗೆ ಪಾತ್ರರಾಗಿದ್ದಾರೆ. ಇವತ್ತು ಅಂದಿಗಿಂತ ಹೆಚ್ಚಿನ ಕಷ್ಟ ಪರಿಸ್ಥಿತಿಯಲ್ಲಿದ್ದೇವೆ. ಈಗ ಸಪ್ಲೈ ಆಗುತ್ತಾ ಇರತಕ್ಕ ಆಹಾರ ಪದಾರ್ಥ ಒಂದು ತಾಲ್ಲೂಕಿಗೆ ಒಂದು ತಿಂಗಳಿಗೆ 560 ರಿಂದ 575 ಕ್ವಿಂಟಾಲ್ ತಾವು ಯೋಚನೆ ಮಾಡಬಹುದು, ಆಗಿನ ಪರಿಸ್ಥಿತಿಗೂ ಈಗಿನ ಪರಿಸ್ಥಿತಿಗೂ ಬಹಳ ವ್ಯತ್ಯಾಸ ಇದೆ. ಅಭಾವ ಇದ್ದ ಸಂದರ್ಭದಲ್ಲಿ ಹೆಚ್ಚು ಆಹಾರವನ್ನು ಕೊಟ್ಟು ಬೇಕಾದಷ್ಟು ಸಹಾಯ ಮಾಡಿದ್ದೀರಿ, ಆದರೆ ಈಗ ಒದಗಿರತಕ್ಕ ಕಷ್ಟಪರಿಸ್ಥಿತಿಯಲ್ಲಿ 560—575 ಕ್ವಿಂಟಾಲ್ ಒಂದು ತಾಲ್ಲೂಕಿಗೆ ಕಳುಹಿಸುತ್ತಾ ಇರುವುದು ಎಂದರೆ ನಿಜವಾಗಿಯೂ ಸರ್ಕಾರದವರು ಅಲ್ಲಿನ ಪರಿಸ್ಥಿತಿಯನ್ನು ಸರಿಯಾದ ರೀತಿಯಲ್ಲಿ ತಿಳಿದುಕೊಂಡಿಲ್ಲ ಎಂಬುದನ್ನು ಬಹಳ ವಿಷಾದದಿಂದ ತಿಳಿಸಬೇಕಾಗುತ್ತದೆ. ಇನ್ನು 8 ದಿವಸ, ಒಂದು ವಾರ ಅಥವಾ 15 ದಿವಸದಲ್ಲಿ ಆಹಾರವನ್ನು ಒದಗಿಸದಿದ್ದರೆ ಅಲ್ಲಿ ಬಹಳ ಕೆಟ್ಟ ಪರಿಣಾಮವಾಗುತ್ತದೆ. ಅನೇಕ ಸಂದರ್ಭದಲ್ಲಿ ಸರ್ಕಾರದವರು ಪಟ್ಟಣದಲ್ಲಿರತಕ್ಕ ಜನರಿಗೆ ಅವರ ಹೊಟ್ಟೆ ತುಂಬ ಹಾಕತಕ್ಕ ಕೆಲಸವನ್ನು ಇಟ್ಟುಕೊಂಡಿದ್ದಾರೆ, ಅವರಿಗೂ ಕೊಡಬೇಡಿ ಎಂದು ಹೇಳುವುದಿಲ್ಲ. ಹಳ್ಳಿಗಾಡಿನಲ್ಲಿ ವಾಸಮಾಡತಕ್ಕ ರೈತ, ತಾನೇ ಬೆಳೆದು ತಾನೂ ತಿಂದು ಸಾವಿರಾರು ಜನರಿಗೂ ಕೊಡತಕ್ಕ ಪರಿಸ್ಥಿತಿಯಲ್ಲಿ ಇದ್ದಂಥವನು ಇವತ್ತಿನ ದಿವಸ 3–4 ವರ್ಷಗಳಿಂದಲೂ ಕೂಡ ಬೆಳೆ ಇಲ್ಲದೆ ಬಿಕ್ಷೆ ಮಾಡತಕ್ಕ ಪರಿಸ್ಥಿತಿಗೆ ಬಂದಿದ್ದರೂ ಕೂಡ ಆತನ ಮೇಲೆ ತಮಗೆ ಕರುಣೆ ಇಲ್ಲದಂತಹ ಪರಿಸ್ಥಿತಿ ಉಂಟಾಗಿದೆ, ರೈತರು ತಮ್ಮನ್ನು ಶಪಿಸುತ್ತಾರೆ,

ಅವರ ಶಾಪಕ್ಕೆ ಗುರಿಯಾಗಬೇಡಿ, ಅದರಿಂದ ಬಹಳ ಕೆಟ್ಟ ಪರಿಣಾಮವುಂಟಾದೀತು. ಇನ್ನೂ ಹೆಚ್ಚು ಹಣವನ್ನು ನಮ್ಮ ಜಿಲ್ಲೆಗೆ ಮತ್ತು ತಾಲ್ಲೂಕುಗಳಿಗೆ ಒದಗಿಸಿ ಕೊಟ್ಟು ಜನತೆಗೆ ಸಹಾಯ ಮಾಡಿ ಅವರನ್ನು ಈ ಕಷ್ಟ ಕಾಲದಲ್ಲಿ ಉಳಿಸುವುದಕ್ಕೆ ತಾವು ಪ್ರಯತ್ನ ಮಾಡಬೇಕು, ಆ ರೀತಿ ಮಾಡುತ್ತೀರಿ ಎಂದು ನಂಬಿ ನನಗೆ ಒಂದೆರಡು ಮಾತುಗಳನ್ನು ಆಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಫ್. ಎಸ್. ಪಾಟೀಲ್ (ಕಲಘಟಗಿ).—ಸನ್ಮಾನ್ಯ ಅಧ್ಯಕ್ಷರೇ, ಈಗ ರಾಜ್ಯದಲ್ಲಿ ಬಂದೊದಗಿರುವ ಆಹಾರ ಅಭಾವ ಪರಿಸ್ಥಿತಿಗೆ ಬಹಳಮಟ್ಟಿಗೆ ಈ ರಾಜ್ಯ ಸರ್ಕಾರದ ಧೋರಣೆ ಹಾಗೂ ಅಧಿಕಾರಿಗಳ ಅಧ್ಯಕ್ಷತೆಯೇ ಕಾರಣ ಎಂದರೆ ತಪ್ಪಾಗಲಿಕ್ಕಿಲ್ಲ. ಏಕೆಂದರೆ ನಮ್ಮ ರಾಜ್ಯ ಸರ್ಕಾರ ಕಳೆದ ಮೂರು ಪಂಚವಾರ್ಷಿಕ ಯೋಜನೆಗಳಲ್ಲೂ ನೀರಾವರಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡದೆ ಇರುವದೇ ಈ ಅಭಾವಕ್ಕೆ ಕಾರಣವಾಗಿದೆ. ಇನ್ನು ರಾಜ್ಯದಲ್ಲಿ ಈ ಬರಗಾಲವನ್ನು ತಡೆಗಟ್ಟಬೇಕಾದರೆ ನೀರಾವರಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡುವುದು ಬಹಳ ಮುಖ್ಯ ಮತ್ತು ಒಕ್ಕಲುತನಕ್ಕೆ ಸುಧಾರಿಸಿದ ಬೀಜ, ಮತ್ತು ವ್ಯವಸಾಯೋಪಕರಣಗಳ ಕಡೆಗೆ ಹೆಚ್ಚಿನ ಗಮನವನು ಕೊಡದ ವಿನಃ ಈ ಬರಗಾಲವನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗಲಿಕ್ಕಿಲ್ಲ. ಮಾನ್ಯ ಅಧ್ಯಕ್ಷರೇ, ಕಳೆದ ಮೂರು ಪಂಚವಾರ್ಷಿಕ ಯೋಜನೆಗಳಲ್ಲೂ ನೀರಾವರಿ ಯೋಜನೆ ಹೆಚ್ಚಿನ ಪ್ರಮಾಣದಲ್ಲಿ ಪ್ರಗತಿ ಯಾಗಿಲ್ಲ ಎಂದು ಹೇಳಬಹುದು. ಉದಾಹರಣಾರ್ಥವಾಗಿ ನನ್ನ ಕಾನ್‌ಸ್ಟಿಟ್ಯೂಯನ್ಸಿಯಾದ ಕಲಘಟಗಿ ತಾಲ್ಲೂಕಿನಲ್ಲಿ ಕೇವಲ 10—12 ಇಂಚು ಮಳೆಯಾಗಿದೆ. ನಮ್ಮ ತಾಲ್ಲೂಕು ಬತ್ತ ಬೆಳೆಯುವಂತಹ ಕ್ಷೇತ್ರ, 34 ಸಾವಿರ ಎಕರೆ ಪ್ರದೇಶ ಇದೆ. ಅಲ್ಲಿ ಈಗ ಬೆಳೆಗಳೆಲ್ಲಾ ಸಂಪೂರ್ಣ ವಾಗಿ ನಾಶವಾಗಿವೆ. ನಮ್ಮ ತಾಲ್ಲೂಕಿನಲ್ಲಿ ಮುಖ್ಯ ಬೆಳೆಯಾದ ಬತ್ತದ ಪೀಕು ಸಂಪೂರ್ಣವಾಗಿ ಒಣಗಿಹೋಗಿದೆ. ಈ ವರ್ಷ ಜೂನ್ ತಿಂಗಳ ಮಧ್ಯದಲ್ಲಿ ಒಮ್ಮೆ ಮೇ ತಿಂಗಳ ಮೊದಲ ವಾರದಲ್ಲಿ ಒಮ್ಮೆ ಅಲ್ಪ ಸ್ವಲ್ಪ ಮಳೆಯಾಗಿ ಅನಂತರ ಮಳೆ ಬರದೇ ಬೆಳೆಯೆಲ್ಲಾ ಸಂಪೂರ್ಣವಾಗಿ ಒಣಗಿದೆ. ಈ ಸಂದರ್ಭದಲ್ಲಿ ನಾನು ಅಧ್ಯಕ್ಷರ ಮೂಲಕ ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಮೇಜರ್ ಇರಿಗೇಷನ್ ಪ್ರಾಜೆಕ್ಟ್‌ಗಳು ಇಲ್ಲದ ನಮ್ಮ ಪ್ರದೇಶದಲ್ಲಿ ಮೀಡಿಯಂ ಮತ್ತು ಮೈನರ್ ಇರಿಗೇಷನ್ ಸೌಲಭ್ಯವನ್ನು ಒದಗಿಸಿ ಕೊಡಬೇಕು. ಇನ್ನು ನೀರಾವರಿ ಬಾವಿಗಳ ಬಗ್ಗೆ ಹೇಳುವು ದಾದರೆ ಎಲ್ಲಿ ಮೇಜರ್ ಮೀಡಿಯಂ, ಮತ್ತು ಮೈನರ್ ಇರಿಗೇಷನ್ ವ್ಯವಸ್ಥೆಯನ್ನು ಮಾಡಲಿಕ್ಕೆ ಸಾಧ್ಯವಿಲ್ಲವೋ ಅಂತಹ ಕಡೆ ಸರ್ಕಾರಿ ರೊಕ್ಕದಿಂದಲೇ ಬಾವಿಗಳನ್ನು ತೋಡಿಸಿಕೊಡುವಂತಹ ಯೋಜನೆಯನ್ನು ಮಾಡಬೇಕು. ಅದರಿಂದ ಇಂತಹ ತುರ್ತುಪರಿಸ್ಥಿತಿಯಲ್ಲಿ ರೈತನಿಗೆ ನೀರಾವರಿ ಮಾಡಿಕೊಳ್ಳಲು ಹೆಚ್ಚು ಅನುಕೂಲವಾಗುತ್ತದೆ. ನಮ್ಮ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿಯ ಬಗ್ಗೆ ಒಂದು ವಿಚಿತ್ರವಾಗಿದೆ. ಅಲ್ಲಿ ಅನೇಕ ಜನ ರೈತರು ಪಂಪ್‌ಸೆಟ್ಟುಗಳನ್ನು ಕೊಂಡುಕೊಂಡಿದ್ದಾರೆ. ಇದುವರೆಗೂ ಅವರಿಗೆ ವಿದ್ಯುಚ್ಛಕ್ತಿ ಸರಬರಾಯಾಗಿಲ್ಲ, ಅಲ್ಲಿನ ಅಧಿಕಾರಿಗಳನ್ನು ಕೇಳಿದರೆ ಅವರು ಏನೋ ಒಂದು ಹೇಳುತ್ತಾ ಇದ್ದಾರೆ, ರೈತ ಕಾನೂನು ಬದ್ಧವಾಗಿ ಕಟ್ಟಬೇಕಾದ ದುಡ್ಡು ಮತ್ತು ಇತರ ಕೆಲಸಕಾರ್ಯಗಳನ್ನು ಮಾಡಿದ್ದರೂ ಸಹ ಇನ್ನೂವರೆಗೂ ವಿದ್ಯುಚ್ಛಕ್ತಿಯ ಸರಬರಾಯಿ ಆಗಿಲ್ಲ. ತಮ್ಮ ಸಂಭಾವನೆ ಕೈ ಸೇರದ ಹೊರತು ಅಧಿಕಾರಿಗಳು ರೈತನಿಗೆ ವಿದ್ಯುಚ್ಛಕ್ತಿ ಪುರವಠೆ ಮಾಡುವುದಿಲ್ಲ. ಇದು ಎಷ್ಟರಮಟ್ಟಿಗೆ ಹೋಗಿದೆ ಎಂದರೆ ಇದನ್ನು ತಡೆಗಟ್ಟದೆ ಹೀಗೆಯೇ ಬಿಟ್ಟರೆ ಮಗನು ತಂದೆಗೆ ಅಪ್ಪ ಅಂತ ಕರೆಯಬೇಕಾದರೆ ತಂದೆಯೇ ಮಗನಿಗೆ ಸಂಭಾವನೆಯನ್ನು ಕೊಡ ಬೇಕಾದ ಕಾಲವೂ ಕೂಡ ಇನ್ನು ಸ್ವಲ್ಪ ದಿವಸದಲ್ಲೇ ಬರಬಹುದು. ಆದುದರಿಂದ ನಮ್ಮ ತಾಲ್ಲೂಕಿ ನಲ್ಲಿ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಪೂರ್ಣಮಾಡಲು ಏರ್ಪಾಡು ಮಾಡಿಕೊಡಬೇಕೆಂದು ಅಧ್ಯಕ್ಷರ ಮೂಲಕ ವಿನಂತಿ ಮಾಡುತ್ತೇನೆ. ನಮ್ಮಲ್ಲಿ 85 ಗ್ರಾಮಗಳಿವೆ, ಅವುಗಳ ಪೈಕಿ 50—60ಕ್ಕೆ ಮಿಕ್ಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಅನುಕೂಲವಿಲ್ಲ. ರಾತ್ರಿಯವೇಳೆ ಸಣ್ಣ ಮಕ್ಕಳು ಮತ್ತು ಮಹಿಳೆಯರು ಒಂದು ಕೊಡ ನೀರನ್ನು ತರಲು 3—4 ಮೈಲಿ ದೂರ ಹೋಗಿ ತರಬೇಕಾದ ಪ್ರಸಂಗ ಇದೆ. ಆದುದರಿಂದ ಪ್ರತಿಯೊಂದು ಗ್ರಾಮದಲ್ಲೂ ಕೂಡ ಜನರ ವಂತಿಗೆಯನ್ನು ತೆಗೆದುಕೊಳ್ಳದೆ ಸರಕಾರದಿಂದಲೇ ಒಂದೊಂದು ಕುಡಿಯುವ ನೀರಿನ ಬಾವಿ ಕಟ್ಟಿಸಿಕೊಡಬೇಕು ಎಂದು ವಿನಂತಿ ಮಾಡುತ್ತೇನೆ.

8-30 P.M.

ಕೊನೆಯದಾಗಿ ನಮ್ಮ ತಾಲ್ಲೂಕಿನ ಮುಖ್ಯವಾದ ಬೆಳೆಯಾದ ಬತ್ತದಬೆಳೆ ಪೂರ್ಣವಾಗಿ ಒಣಗಿ ಹೋಗಿದೆ. ಈ ಬಗ್ಗೆ ಕಂದಾಯ ಸಚಿವರು ಮತ್ತು ಜಿಲ್ಲಾಧಿಕಾರಿಗಳಲ್ಲಿ ಅನೇಕ ಸಲ ಮನವಿ ಮಾಡಿದರೂ, ಬಡವರಿಗೆ ಕೆಲಸವಿಲ್ಲ, ರೈತರಿಗೆ ಪೀಕು ಒಣಗಿಹೋಗಿರುವುದರಿಂದ ತೊಂದರೆಯಾಗಿದೆ,

(ಶ್ರೀ ಎಫ್. ಎಸ್. ಪಾಟೀಲ್)

ಅಗ್ರಿಕಲ್ಚರಲ್ ಲೇಬರ್ಸ್‌ಗೆ ಕೂಲಿ ದೊರೆಯುವಂತೆ ಮಾಡಿ, ಕಾಳು ಬಡವರಿಗೆ ಕೊಡಿ, ಕಷ್ಟವಿದೆ ಎಂದು ಹೇಳಿದರೂ ಏನೂ ಮಾಡಿಲ್ಲ. ಹೋದ ವರ್ಷ ಚೆನ್ನಾಗಿ ಮಳೆಯಾಗಿದೆ, ಆದುದರಿಂದ ರಿಲೀಫ್ ಕೆಲಸ ನಮ್ಮ ತಾಲ್ಲೂಕಿನಲ್ಲಿ ಮಾಡುವುದಕ್ಕಾಗುವುದಿಲ್ಲ ಈ ವರ್ಷ ಬೆಳೆಯಿಲ್ಲದಿದ್ದರೆ, ಮಳೆಯಿಲ್ಲದಿದ್ದರೆ ಸಾಯಿರಿ ಎಂದು ಹೇಳುತ್ತಾರೆ. ಆದುದರಿಂದ ಪ್ರತ್ಯಕ್ಷ ಪರಿಶೀಲಿಸಿ ಸರಕಾರ ಅಲ್ಲಿನ ಜನರ ಸಂಕಟವನ್ನು ದೂರಮಾಡಬೇಕು. ಈ ವರ್ಷ ಪೂರ್ಣವಾಗಿ ಬೆಳೆ ನಷ್ಟವಾಗಿದೆ. ಆದುದರಿಂದ ಭೂಕಂದಾಯ, ತಕಾವಿ ಸಾಲ ತಡೆ ಹಿಡಿಯಬೇಕು, ನೀರು ಕಂದಾಯ, ಲೆವಿ ಸಂಪೂರ್ಣವಾಗಿ ತೆಗೆದುಹಾಕಬೇಕು. ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ಕೊಟ್ಟು ಬಡವರ ಕಲ್ಯಾಣವಾಗುವಂತೆ ಕೂಲಿ ದೊರೆಯುವಂತೆ ರಿಲೀಫ್ ಕೆಲಸ ತೆಗೆದುಕೊಳ್ಳಬೇಕು, ಡೆಪ್ಯುಟಿ ಕಮಿಷನರು ಅಥವಾ ಸಂಬಂಧಪಟ್ಟ ಅಧಿಕಾರಿಗಳಿಗೆ ತೀವ್ರವಾಗಿ ಆದೇಶ ಕೊಡಬೇಕು ಎಂದು ಸರಕಾರದಲ್ಲಿ ವಿನಂತಿ ಮಾಡಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಪೂರೈಸುತ್ತೇನೆ.

Mr. DEPUTY SPEAKER.—The House will now rise and meet tomorrow at 12 noon.

The House adjourned at Thirty-four Minutes past Eight of the Clock to re assemble at Twelve of the Clock on Tuesday the 10th September 1968.

WD 11316—GPB—600 11-11-1968